6.	ಯಾದಗೀರ	08
7.	ಶಾಹಪುರ	09
8.	ಸುರಪುರ	09
9.	ಜೇವರ್ಗಿ	02
10.	ಸೇಡಂ	08
	ಒಟ್ಟು	**187**

ಆ) ಕೊಳವೆ ನೀರು ಸರಬರಾಜು ಯೋಜನೆಗಳು ಮತ್ತು ಹಲವಾರು ಕಾರಣಗಳಿಂದಾಗಿ ಅಪೂರ್ಣವಿರುತ್ತವೆ. ಅವುಗಳು:

1) ಜಲಮೂಲಗಳನ್ನು ಸ್ಥಾಪಿಸುವುದರಲ್ಲಿ ವಿಳಂಬ,

2) ಟ್ಯಾಂಕ್ ಕಟ್ಟಲು ಸ್ಥಳ ಸಿಗದೇ ಇರುವುದು.

3) ಯೋಜನೆಗಳಿಗೆ ವಿದ್ಯುತ್ ಪೂರೈಸುವಲ್ಲಿ ವಿಳಂಬ, ಮತ್ತು

4) ಆಯವ್ಯಯದಲ್ಲಿ ಸಾಕಷ್ಟು ಅನುದಾನ ಇಲ್ಲದೆ ಇರುವುದು.

ಇ) ಮೇಲ್ಕಂಡ ಅಪೂರ್ಣವಿರುವ ಯೋಜನೆಗಳನ್ನು 1997-98 : 1998-99ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಅಧ್ಯಕ್ಷರು : ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ವಿ.ಎಸ್. ಕೌಜಲಗಿ (ಅರೆಬಾವಿ ಕ್ಷೇತ್ರ) : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷನಾದ ನಾನು ಕರ್ನಾಟಕ ಅಭಿವೃದ್ಧಿ ನಿಗಮ (ನಿಯಮಿತ)ದ ಅವ್ಯವಹಾರಗಳಿಗೆ ಸಂಬಧಪಟ್ಟಹಾಗೆ ಸಮಿತಿಯು 30ನೇ ವರದಿಯನ್ನು ಈ ದಿನ ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

ಅಧ್ಯಕ್ಷರು : ಡಿ.ಆರ್. ಪಾಟೀಲ್‌ರವರೇ, ತಮ್ಮ ಅಂದಿನ ಭಾಷಣವನ್ನು ಮುಂದುವರೆಸಿ.

ಶ್ರೀ ಜಿ. ಬಿ. ಶಿವಕುಮಾರ್ : ಅಧ್ಯಕ್ಷರೇ, ನನ್ನದೊಂದು ವಿಚಾರ ಕೊಟ್ಟಿದ್ದೆ.

ಅಧ್ಯಕ್ಷರು : ಈಗ ಅದಕ್ಕೆ ಅವಕಾಶವಿಲ್ಲ.

ಶ್ರೀ ಜಿ. ಬಿ. ಶಿವಕುಮಾರ್ : ಅವಕಾಶ ಕೊಡಬೇಕು ಅಧ್ಯಕ್ಷರೇ, ನಮ್ಮ ರಾಜ್ಯದ ಪೋಲೀಸ್ ಅಧಿಕಾರಿಗಳ ಬಗ್ಗೆ ಈ ರೀತಿ ಒಬ್ಬ ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತಾರೆಂದರೆ ಹೇಗೆ?

ಅಧ್ಯಕ್ಷರು : ನಾನು ಅದರ ಬಗ್ಗೆ ಅನಂತರ ತೆಗೆದುಕೊಳ್ಳುತ್ತೇನೆ ಈಗ ಬೇಡಿಕೆಗಳ ಮೇಲೆ ಚರ್ಚೆ ಮುಂದುವರೆಯಲಿ. ತಾವು ದಯಮಾಡಿ ನನ್ನ ಛೇಂಬರ್ಸ್‌ಗೆ ಬನ್ನಿ ಅಲ್ಲಿ ಮಾತನಾಡೋಣ. ಇದರ ಜೊತೆಗೆ ಇನ್ನು ಏನೋ ಬೇರೆ ವಿಚಾರವಿದೆ ಎಂದು ಹೇಳಿದ್ದಿರಲ್ಲ ಅದರ ಜೊತೆಗೆ ಇದರ ಬಗ್ಗೆಯೂ ಮಾತನಾಡೋಣ, ತಾವು ನನ್ನ ಛೇಂಬರ್ಸ್‌ಗೆ ಬನ್ನಿ.

ಶ್ರೀ ಡಿ. ಆರ್. ಪಾಟೀಲ್ : ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಎದ್ದುಹೋದರು. ಹೀಗಿರುವಾಗ ನಾನು ಹೇಗೆ ಚರ್ಚೆ ಪ್ರಾರಂಭ ಮಾಡಲಿ?

ಅಧ್ಯಕ್ಷರು : ನಾನು ಕರೆಯಿಸುತ್ತೇನೆ, ತಾವು ಮುಂದುವರೆಸಿ. ಅಲ್ಲಿಯವರೆವಿಗೂ ಎಸ್.ಎಸ್. ಪಾಟೀಲ್ ರವರು ನೋಟ್ ಮಾಡಿಕೊಳ್ಳುತ್ತಾರೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ...

ಶ್ರೀ ಜಿ. ಬಿ. ಶಿವಕುಮಾರ್ : ಅಧ್ಯಕ್ಷರೇ, ಎರಡು ನಿಮಿಷ ನನಗೆ ಅವಕಾಶ ಮಾಡಿಕೊಡಿ. ಏಕೆಂದರೆ ಇದು ನಮ್ಮ ರಾಜ್ಯದ ಪೋಲೀಸ್‌ರ ಗೌರವದ ವಿಚಾರ. ಇಡೀ ನಮ್ಮ ರಾಜ್ಯದ ಪೋಲೀಸ್ ಅಧಿಕಾರಿಗಳಿಗೆ ಬಹಳ ಅವಮಾನವಾಗಿದೆ ಮತ್ತು ನಮಗೂ ಅವಮಾನವಾಗಿದೆ.

ಅಧ್ಯಕ್ಷರು : ಶಿವಕುಮಾರ್‌ರವರೇ, ದಯಮಾಡಿ ಕೇಳಿ ಈ ದಿವಸ ಮೊದಲೇ ಎಲ್ಲರೂ ನಿಶ್ಚಯ ಮಾಡಿದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಗಮನ ಸೆಳೆಯುವ ಸೂಚನೆಗಳಾಗಲಿ, ನಿಯಮ 69ರ ಚರ್ಚೆಯಾಗಲಿ, ಶೂನ್ಯ ವೇಳೆಯಾಗಲಿ ಯಾವ ಪ್ರಸ್ತಾಪವೂ ಇರುವುದಿಲ್ಲ. ಪ್ರಶ್ನೋತ್ತರವಾದ ಕೂಡಲೇ ನೇರವಾಗಿ ಬೇಡಿಕೆಗಳ ಮೇಲೆ ಚರ್ಚೆಯಾಗಬೇಕು ಎಂದು ನಿರ್ಣಯ ಮಾಡಿದ್ದೇವೆ. ತಾವು ದಯಮಾಡಿ ನನ್ನನ್ನು ಛೇಂಬರ್‌ನಲ್ಲಿ ಬಂದು ನೋಡಿ, ನಾನು ಯಾವಾಗ ಅವಕಾಶ ಮಾಡಿಕೊಡುತ್ತೇನೆ ಎಂಬುದನ್ನು ನೋಡಿ ಹೇಳುತ್ತೇನೆ.

ಶ್ರೀ ಜಿ. ಬಿ. ಶಿವಕುಮಾರ್ : ಆಯಿತು.

+ ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಅಧ್ಯಕ್ಷರೇ, ಮೊನ್ನೆ ಗುರುವಾರದ ದಿವಸ ಗ್ರಾಮೀಣಾಭಿವೃದ್ಧಿ ಮೇಲೆ ನಾನು ಮಾತನಾಡುತ್ತಿದ್ದೆ, ಆಗ 7 ಗಂಟೆಯಾಗಿತ್ತು, ಸಭೆ ಅಂದು ಮುಕ್ತಾಯವಾಯಿತು. ಈಗ ಮತ್ತೆ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ಅಭಿನಂದನೆಯನ್ನು ಅರ್ಪಿಸುತ್ತೇನೆ. 1981 ರಿಂದ 1991ರ ದಶಕವನ್ನು ಇಂಟರ್‌ನ್ಯಾಶನಲ್ ಡ್ರಿಂಕಿಂಗ್ ಸಪ್ಲೈ ಅಂಡ್ ಸ್ಯಾನಿಟೇಶನ್ ಡಿಕೇಡ್ ಎಂದು ಹೇಳಿ ನಿರ್ಣಯ ಆಗಿದ್ದರ ಹಿನ್ನೆಲೆಯಲ್ಲಿ ನಮ್ಮ ರಾಷ್ಟ್ರದಲ್ಲಿ ಮತ್ತು ಎಲ್ಲಾ ರಾಜ್ಯಗಳಲ್ಲಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರನ್ನು ಒದಗಿಸುವುದರ ಸಲುವಾಗಿ ಸಾಕಷ್ಟು ಪ್ರಯತ್ನಗಳು ನಡೆದವು. ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ನಜೀರ್‌ಸಾಬ್‌ರವರು ಇದರ ಬಗ್ಗೆ ಹೆಚ್ಚು ಒತ್ತನ್ನು ಕೊಟ್ಟು ಈ ಕೆಲಸವನ್ನು ಮಾಡಿದ್ದರಿಂದ ಅವರಿಗೆ

'ನೀರ್‌ಸಾಬ್' ಎನ್ನುವಂಥ ಹೆಸರೇ ಬಂತು. ಬಹುತೇಕ ಜನರ ಭಾವನೆಗಳಿಗೆ ಸ್ಪಂದಿಸಿ ಜನರ ಸಮಸ್ಯೆಗಳಿಗೆ ಸ್ಪಂಧಿಸಿ ಪರಿಹಾರವನ್ನು ಕಂಡುಕೊಳ್ಳುವಂಥ ಸಂಸ್ಕೃತಿಯನ್ನು ಕಾಂಗ್ರೆಸ್ ಪಕ್ಷದಿಂದ ಏನು ಬಳುವಳಿಯಾಗಿ ಪಡೆದುಕೊಂಡಿದ್ದರು ಅದನ್ನು ಕಾರ್ಯಗತ ಮಾಡುವುದನ್ನು ತಮಗೆ ಅವಕಾಶ ಸಿಕ್ಕಿದಾಗ ಮಾಡಿದರು. ನಿಜವಾಗಿಯೂ ಇದರಿಂದ ನಮಗೆ ಬಹಳ ಸಂತೋಷವಾಗಿದೆ. ಅವರೆಷ್ಟು ನಜೀರ್‌ಸಾಬ್‌ರವರ ಬಗ್ಗೆ ಹೆಮ್ಮೆ ಪಡುತ್ತಾರೋ ಅದಕ್ಕಿಂತ ಹೆಚ್ಚು ಹೆಮ್ಮೆಯನ್ನು ನಾವು ಪಡುತ್ತೇವೆ.

ಮಾನ್ಯ ಸದಸ್ಯರು : ಕಾಂಗ್ರೆಸ್‌ನಿಂದ ಬಂದಮೇಲೆ ಬದಲಾದರು ಎಂದು ಹೇಳುತ್ತಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ವೀರೇಂದ್ರಪಾಟೀಲರು ಮಾಡಿದ್ದಕ್ಕೆಲ್ಲಾ ನೀವು ಅಭಾರಿಗಳಾಗಿಬಿಡಿರಿ. ಅವರು ಜನತಾ ದಳದಿಂದ ಆ ಕಡೆಗೆ ಹೋದರಲ್ಲ, ಮಾನ್ಯ ವೀರೇಂದ್ರಪಾಟೀಲರು ಏನೇನು ಮಾಡಿಧರು ಅದಕ್ಕೆಲ್ಲಾ ಜನತಾ ಪಕ್ಷದವರು ಸಂತೋಷಪಡಬೇಕು. ಅವರು ಇತ್ತ ಕಡೆಯಿಂದ ಆ ಕಡೆಗೆ ಹೋಗಿದ್ದರಲ್ಲ.

ಶ್ರೀ ಡಿ. ಆರ್. ಪಾಟೀಲ್ : ಅವರು ಜನತಾ ದಳಕ್ಕೆ ಹೋದಮೇಲೆ ಬದಲಾದರೋ, ಮೊದಲೇ ಆಗಿದ್ದರೋ, ಹೇಗೆ ಇದ್ದರು ಎನ್ನುವುದು ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ. ನಿಮಗೆ ಗೊತ್ತಿಲ್ಲ. ಮಾನ್ಯ ನಜೀರ್ ಸಾಹೇಬರ ವಹಿವಾಟು ಅಷ್ಟು ಇರಲಿಲ್ಲ. ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೆ ಎಂದರೆ ಮಾರ್ಚ್ 31ರವರೆಗೆ ನಮ್ಮ ರಾಜ್ಯದಲ್ಲಿ ಪೈಪ್ ವಾಟರ್ ಸಪ್ಲೈ 10,807 ಆಗಿದೆ, ಮಿನಿ ವಾಟರ್ ಸಪ್ಲೈ 11,273 ಇದೆ. 1 ಲಕ್ಷ 51 ಸಾವಿರಕ್ಕೂ ಹೆಚ್ಚು ಬೋರ್‌ವೆಲ್‌ಗಳನ್ನು ನಾವು ಡಿಗ್ ಮಾಡಿದ್ದೇವೆ. ಈಗ ಸುಮಾರು 12 ಲಕ್ಷ ಐಪಿ ಸೆಟ್ಸ್ ಇದೆ. ಇಷ್ಟೆಲ್ಲಾ ಬೋರ್‌ವೆಲ್ ಮುಖಾಂತರ, ಐಪಿ ಸೆಟ್ ಮುಖಾಂತರ ನಾವು ಅಂತರ್ಜಲವನ್ನು ಉಪಯೋಗ ಮಾಡುತ್ತಿರುವುದರಿಂದ ನೀರಿನ ಮಟ್ಟ ಬಹಳಷ್ಟು ಕಡಿಮೆ ಆಗುತ್ತಿರುವುದರಿಂದ ತೊಂದರೆ ಏನಾಗುತ್ತಿದೆ ಎಂದರೆ, ನೀರಿನೊಳಗೆ ಡೆಪಾಸಿಟ್ ಇರುತ್ತದೆಯಲ್ಲ, ಟೋಟಲ್ ಡಿಸಾಲ್ವ್‌ಡ್ ಸಾಲಿಡ್ಸ್ ಪರ್ಸೆಂಟೇಜ್ ಜಾಸ್ತಿಯಾಗುತ್ತಿದೆ. ಹಾಗಾಗಿ ನೀರು ಕುಡಿಯುವುದಕ್ಕೆ ಅಶುದ್ಧ, ಇದು ಜನರಿಗೆ ಕುಡಿಯುವುದಕ್ಕೆ ಉಪಯೋಗ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಹೀಗಾಗಿ 1985ರಲ್ಲಿ ಮಾನ್ಯ ಪ್ರಧಾನಮಂತ್ರಿ ರಾಜೀವ್ ಗಾಂಧಿಯವರು, ರಾಷ್ಟ್ರದ ಪ್ರಧಾನಿಯಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಸಮಸ್ಯಾತ್ಮಕ ಗ್ರಾಮಗಳು ಯಾವ್ಯಾವುದು ಇದೆ, ಎಲ್ಲಿ ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ ಅಂತಹ ಹಳ್ಳಿಗಳನ್ನು ಗುರುತಿಸಿ ಅವುಗಳಿಗೆ ವಿಶೇಷವಾಗಿ ಹಣ ಬಿಡುಗಡೆ ಮಾಡಿ ವಿಶೇಷ ಕಾರ್ಯಕ್ರಮವನ್ನು ಯೋಜಿಸಿ ಶುದ್ಧ ಕುಡಿಯುವ ನೀರು ಕೊಡುವಂತಹ ವ್ಯವಸ್ಥೆಯನ್ನು ರೂಪಿಸುವುದಕ್ಕೆ ವಾಟರ್ ಟೆಕ್ನಾಲಜಿ ಮಿಷನ್ ಮಾಡಿದರು. ಆ ಸಬ್‌ಮಿಷನ್ ಒಳಗೆ ಕ್ಲೋರೈಡ್, ಬ್ಲಾಕಿಶ್‌ವಾಟರ್, ಅರ್ಸೆನಿಕ್ ವಾಟರ್ ಆಗಲಿ, ಮೈಕ್ರೋ ಕಂಟಾಮಿನೇಷನ್ ಇದ್ದರೂ ಸಹ, ನೈಟ್ರೇಟ್ ಕಂಟಾಮಿನೇಷನ್ ಇದ್ದರೂ ಸಹ ಅವೆಲ್ಲವುಗಳನ್ನು ಹುಡುಕಿ ತೆಗೆದು ಆಲ್ಟರ್‌ನೇಟ್ ಸೋರ್ಸ್ ತಾವು ಕೊಡಬೇಕು. ಅಲ್ಟರ್ನೇಟೀವ್ ಸೋರ್ಸ್ ಅಕೆಡೆಮಿಕ್ ರೇಡಿಯಸ್ ಒಳಗೆ ಇರಲಿಲ್ಲ, ಅದನ್ನು ಟ್ರೀಟ್‌ಮೆಂಟ್ ಆಗಿ ಮಾಡಿಕೊಡಬೇಕು ಎನ್ನುವ ಕಾರ್ಯಕ್ರಮವನ್ನು ತಮ್ಮ ಮುಖಾಂತರ ಈ ಕಾರ್ಯಕ್ರಮದ ಅಡಿಯಲ್ಲಿ ತಮಗೆ ಗೊತ್ತಿದ್ದ

ಹಾಗೆ ಕೇಂದ್ರ ಸರ್ಕಾರಕ್ಕೆ ನೀವು ಪ್ರಪೋಸಲ್ ಕಳುಹಿಸಬೇಕಾಗುತ್ತದೆ. ಹೋದವರ್ಷ, ಅದರ ಹಿಂದಿನ ವರ್ಷ ಪಿ.ವಿ. ನರಸಿಂಹರಾವ್ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಆಂಧ್ರ ಪ್ರದೇಶದಿಂದ 148 ಕೋಟಿ ರೂಪಾಯಿಗಳ ಯೋಜನೆಗಳನ್ನು ಕಳುಹಿಸಿ ಮಂಜೂರು ಮಾಡಿ ಹಣ ಪಡೆದುಕೊಂಡು ಕೆಲಸ ಮಾಡಿದರು. ನಾವು ಹೋದವರ್ಷ ಫ್ಲೋರೋಸಿಸ್ ಸಬ್‌ಮಿಷನ್ ಒಳಗೆ ಕೇವಲ ಆರು ಕೋಟಿ ರೂಪಾಯಿಗಳಷ್ಟು ಮಾಡಿಸುವುದಕ್ಕೆ ಸಾಧ್ಯವಾಯಿತು. ಅದು ಮಾನ್ಯ ಶಿವಾನಂದ ಕೌಜಲಗಿಯವರು ಬಹಳ ಕಳಕಳಿಯಿಂದ ಕೆಲಸ ಮಾಡಿದ್ದಕ್ಕೆ ತಮ್ಮ ಕ್ಷೇತ್ರವಾದ ಸವದತ್ತಿಯಲ್ಲಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಯಿತು. ಅವತ್ತು ನಾನು ಒಂದು ಸೂಚನೆಯನ್ನು ಇಟ್ಟೆ. ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಿಂದ ಸಿಗತಕ್ಕಂಥ ಹಣವನ್ನು ನೀವು ಯೋಜನೆಗಳನ್ನು ಅವರಿಗೆ ಬೇಗ ಕಳುಹಿಸಿ ಹಣ ತೆಗೆದುಕೊಳ್ಳುವಂತಹ ಕೆಲಸ ಮಾಡಿಸಿ, ಒಂದು ವಿಶೇಷವಾದ ಸೆಲ್ ಡೆಲ್ಲಿ ಮಟ್ಟದಲ್ಲಿ ಇದ್ದರೂ ಅಥವಾ ರಾಜ್ಯಮಟ್ಟದಲ್ಲಿ ಇದ್ದರೂ ಪರವಾಗಿಲ್ಲ. ಕೊನೆಗೆ ಗ್ರಾಮೀಣಾಭಿವೃದ್ಧಿ ಮಟ್ಟದಲ್ಲಿ ಇಟ್ಟರೂ ಪರವಾಗಿಲ್ಲ. ಏಕೆಂದರೆ ನಮಗೆ ಸಾಕಷ್ಟು ಎಂಪ್ಲಾಯ್‌ಮೆಂಟ್ ಅಶ್ಯೂರೆನ್ಸ್ ಸ್ಕೀಮ್‌ನಲ್ಲಿ ನೀವು ಬೇರೆ ಬೇರೆ ಯೋಜನೆಗಳನ್ನು ಕಳುಹಿಸಿಕೊಟ್ಟರೆ ಸಾಕಷ್ಟು ಹಣ ಜನರಿಗೆ ಉದ್ಯೋಗ ಕೊಡಿಸುವ ಸಲುವಾಗಿ ಸಿಗುತ್ತದೆ. ಕುಡಿಯುವ ನೀರಿನ ಸಲುವಾಗಿ ಸಾಕಷ್ಟು ಹಣ ಸಿಗುತ್ತದೆ. ಜೆ.ಆರ್.ವೈ - 3 ಸ್ಟೇಜ್ ಇಲ್ಲ ಎಂದು ಹೇಳುತ್ತಾರೆ. ಅದರ ಬದಲು ಬೇರೆ ರೀತಿಯ ಪ್ರಸ್ತಾವನೆಯನ್ನು ಕಳುಹಿಸಿದರೆ ಹಣ ಬಿಡುಗಡೆ ಮಾಡುತ್ತಾರೆಂದು ಹೇಳುತ್ತಾರೆ. ಹೀಗೆ ನಾವು ಕೇಂದ್ರ ಸರ್ಕಾರದಿಂದ ಹಣವನ್ನು ಪಡೆದುಕೊಳ್ಳುವುದಕ್ಕೆ ಯೋಜನೆಗಳನ್ನು ಆದಷ್ಟು ತ್ವರಿತವಾಗಿ ಕಳುಹಿಸಬೇಕು. ನಮ್ಮ ರಾಜ್ಯದಲ್ಲಿ ಏನು ಹವ್ಯಾಸ ಇದೆ ಎಂದರೆ ಏನೇ ಕಳುಹಿಸಿದರೂ ಕೂಡ ಡಿಸೆಂಬರ್, ಜನವರಿ ಅಥವಾ ಫೆಬ್ರವರಿಯಲ್ಲಿ ಕಳುಹಿಸುತ್ತಾರೆ. ಅಷ್ಟರಲ್ಲಿ ಡೆಲ್ಲಿ ಸುತ್ತಮುತ್ತಲೂ ಇದ್ದಂತಹ ರಾಜ್ಯಗಳವರು ಮಹಾರಾಷ್ಟ್ರ ಗುಜರಾತ್, ಇವರು ಬಹಳ ಕಳಕಳಿಯಿಂದ ಕೆಲಸ ಮಾಡಿಸಿ ಮನಸ್ಸು ಮಾಡುತ್ತಾರೋ ಅವರು ಯೋಜನೆಗಳನ್ನು ಕಳುಹಿಸಿ, ಇದ್ದಂತಹ ಹಣವನ್ನು ತೆಗೆದುಕೊಂಡು ಬಿಟ್ಟಿರುತ್ತಾರೆ. ನಮ್ಮ ಸರ್ಕಾರದವರು ಕೊನೆಗೆ ಕಳುಹಿಸಿ, ಅದು ಹೋಗುತ್ತದೆ, ಹಣ ಸಿಗಲಾರದಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದನ್ನು ಗಮನಿಸಿ ದಯವಿಟ್ಟು ವಿಶೇಷವಾದ ಲಕ್ಷ್ಯ ವಹಿಸಿ ಈ ಕೆಲಸವನ್ನು ಮಾಡಬೇಕೆಂದು ನಾನು ಅವರಿಗೆ ಹೇಳುತ್ತಿದ್ದೇನೆ. ನಾವು ಇಲ್ಲಿಯವರೆಗೆ ಕುಡಿಯುವ ನೀರು ಕೊಡಬೇಕೆನ್ನುವುದೆ ಒಂದು ಸಮಸ್ಯೆಯಾಗಿತ್ತು. ಆದರೆ ಈಗ ಗ್ರಾಮಾಂತರ ಪ್ರದೇಶಗಳಿಗೆ ಮತ್ತು ನಗರ ಪ್ರದೇಶಗಳಿಗೆ ನೀರು ಸರಬರಾಜು ವ್ಯವಸ್ಥೆ ಮಾಡುವಾಗ ನಗರ ಪ್ರದೇಶಗಳಿಗೆ ಹೇಗೆ ಶುದ್ಧೀಕರಿಸಿದ ನೀರನ್ನು ಕೊಡಬೇಕೆಂದು ಹೇಳುತ್ತೇವೆ. ಆದರೆ ಗ್ರಾಮೀಣ ಪ್ರದೇಶಕ್ಕೆ ಶುದ್ಧೀಕರಿಸಿದ ನೀರು ಕೊಡಬೇಕು ಎನ್ನುವ ಮನೋಭಾವನೆ ಬರುವುದಿಲ್ಲ. ಏಕೆ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಜನರು ಜನರಲ್ಲ ಎಂದು ಕಾಣುತ್ತದೆ. ಅವರು ಪಶು ಸಮಾನ ಎಂದು ಸರ್ಕಾರದವರು ತಿಳಿದುಕೊಂಡಿದ್ದಾರೆ. ಅದು ಯಾವುದೇ ಸರ್ಕಾರವಿರಲಿ ನಾವು ನಗರ ಪ್ರದೇಶಕ್ಕೆ ಎಷ್ಟು ಆದ್ಯತೆ ಮೇಲೆ ಶುದ್ಧವಾದ ಕುಡಿಯುವ ನೀರನ್ನು ಕೊಡುವುದಕ್ಕೆ ಮನಸ್ಸು ಮಾಡುತ್ತೇವೋ ಅದೇರೀತಿ ಆ ಒಂದು ಆದ್ಯತೆ ಮೇಲೆ ಶುದ್ಧವಾದ ಕುಡಿಯುವ ನೀರನ್ನು ಕೊಡುವಂತಹ ವ್ಯವಸ್ಥೆ ಗ್ರಾಮೀಣ ಪ್ರದೇಶಗಳಿಗೆ ಮಾಡಬೇಕು.

ಇವತ್ತು 1992ರಲ್ಲಿ ಯುನೈಟೆಡ್ ನೇಷನ್ಸ್‌ನಲ್ಲಿ ಒಂದು ಕಾನ್‌ಫರೆನ್ಸ್ ಆಯಿತು. United Nations Conference on Environment and Development ಅದರಲ್ಲಿ ಒಂದು ರಿಪೋರ್ಟ್‌ನಲ್ಲಿ ಹೇಳುತ್ತಾರೆ.

``80 % of the diseases and one-third of deaths in developing countries are caused by consumption of contaminated water"

ಮೂರನೇ ಒಂದು ಭಾಗದಷ್ಟು ಸಾವು ಈ ಅಶುದ್ಧ ನೀರು ಕುಡಿಯುವುದರಿಂದ ನಮಗೆ ಬರುತ್ತದೆಂದು ಹೇಳಿದ್ದಾರೆ. ಮೊದಲು ನಮ್ಮ ಈ ಬೋರ್‌ವೆಲ್ ಸಂಸ್ಕೃತಿ ಬೆಳೆಯುವುದಕ್ಕಿಂತ ಪೂರ್ವದಲ್ಲಿ ಸರ್‌ಫೇಸ್ ವಾಟರ್‌ನಿಂದ ನಾವು ನೀರು ತರುತ್ತಿದ್ದೆವು.

(ಈ ಹಂತದಲ್ಲಿ ಮಾನ್ಯ ಚಂದ್ರಕಾಂತ್‌ಬೆಲ್ಲದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಆರ್. ಪಾಟೀಲ್ : ಆಗ ಓಪನ್ ವೆಲ್‌ನಿಂದಲೂ ನೀರು ತರುತ್ತಿದ್ದರು. ಆಗ ನೀರು ಅಷ್ಟು ಕೆಟ್ಟಿರಲಿಲ್ಲ. ಇಷ್ಟು ಜನಸಂಖ್ಯೆ ಆಗಿರಲಿಲ್ಲ. ಹೀಗಾಗಿ ಈ ಟೋಟಲ್ ಡಿಸಾಲ್ವ್‌ಡ್ ಸಾಲಿಡ್ಸ್ ಬಹಳಷ್ಟು ಇರುತ್ತಿರಲಿಲ್ಲ. ನೀರೂ ಕೆಟ್ಟಿರಲಿಲ್ಲ. ಹಾಗಾಗಿ ಅಷ್ಟು ತಾಪತ್ರಯ ಇರುತ್ತಿರಲಿಲ್ಲ. ಇತ್ತಿತ್ತಲಾಗಿ ಬಹಳಷ್ಟು ಒತ್ತಡ ಅಂಡರ್‌ಗ್ರೌಂಡ್ ನೀರು ಮೇಲೆ ಬಿದ್ದಿದ್ದರಿಂದ ಕುಡಿಯುವ ನೀರು ಅಷ್ಟು ಶುದ್ಧವಾಗಿಲ್ಲ ಎನ್ನುವುದನ್ನು ನಾವು ತಿಳಿದುಕೊಂಡಿದ್ದೇವೆ. ಅದಕ್ಕೋಸ್ಕರ ಈ ಅಶುದ್ಧವಾದಂತಹ ನೀರನ್ನು ನಾವು ಶುದ್ಧೀಕರಿಸುವ ವ್ಯವಸ್ಥೆ ಇವತ್ತು ಆಗಬೇಕು. ನೀವು ನೀರನ್ನು ಟ್ರೀಟ್‌ಮೆಂಟ್ ಮಾಡಬೇಕು. ವಾಟರ್ ಟ್ರೀಟ್‌ಮೆಂಟ್ ಮಾಡಿದಹಾಗೆ. ಗ್ರಾಮಮಟ್ಟದಲ್ಲಿ ಸರಬರಾಜು ಆಗುವುದಕ್ಕಿಂತ ಪೂರ್ವದಲ್ಲಿ ನೀರನ್ನು ಟ್ರೀಟ್‌ಮೆಂಟ್ ಮಾಡುವುದು. ಇನ್ನೊಂದು ವಾಟರ್ ಸೋರ್ಸ್ ಏನು ಇರುತ್ತದೆ, ಅದು ಕಂಟಾಮಿನೇಷನ್ ಆಗಲಾರದ ಹಾಗೆ ಈ ಸೋರ್ಸ್ ಎಲ್ಲೆಲ್ಲಿಂದ ರೀಚಾರ್ಜ್ ಆಗುತ್ತಿರುತ್ತದೆ, ಆ ಎಲ್ಲಾ ರೀಚಾರ್ಜ್ ಆಗುವಂತಹ ಜಾಗವನ್ನು ನಾವು ಪ್ರೊಟೆಕ್ಟ್ ಮಾಡಬೇಕು. ಈಗ ಮಾನ್ಯ ಎಸ್.ಎಸ್. ಪಾಟೀಲ್ ಹಾಗೂ ಮಾನ್ಯ ಜಿಗಜಿಣಗಿಯವರಿಗೆ ಗೊತ್ತಿರಬಹುದು. ಪ್ರಕಾಶ್ ಸಾಹೇಬರಿಗೆ ಗೊತ್ತಿರಬಹುದು. ಹಿಂದೆ ಕೆರೆಯನ್ನು ಕಾಯ್ದುಕೊಳ್ಳುತ್ತಿದ್ದರು. ಮತ್ತು ಕೆರೆ ಇರುವಂತಹ ಪ್ರದೇಶದಲ್ಲಿ ಹೊಲಸು ಮಾಡುವಂತಹ ವ್ಯವಸ್ಥೆ ಮಾಡುತ್ತಿರಲಿಲ್ಲ. ಅಲ್ಲಿ ದನ ಬಿಡುತ್ತಿರಲಿಲ್ಲ. ಅಲ್ಲಿ ಮನುಷ್ಯರು ಹೋಗುತ್ತಿರಲಿಲ್ಲ. ಕ್ಲೀನ್ ಇರುತ್ತಿತ್ತು. ಏನೆಂದರೆ ಗಿಡ ಗಂಟೆಗಳು ಬೆಳೆದಿರಬಹುದು ಅಷ್ಟೇ ಹೊರತಾಗಿ ನಾವು ಯಾರೂ ಆ ಕೆರೆಯ ಪ್ರದೇಶವನ್ನು ಕೆಡಿಸುತ್ತಾ ಇರಲಿಲ್ಲ. ಈಗ ಹಾಗೆ ಇಲ್ಲ. ನಮ್ಮಲ್ಲೂ ಆ ಮನೋಭಾವನೆ ಕೆಟ್ಟಿಬಿಟ್ಟಿದೆ. ಎಲ್ಲಿ ಚೆನ್ನಾಗಿ ಇದೆ ಅಲ್ಲಿ ಹೊಲಸು ಮಾಡುತ್ತಿದ್ದೇವೆ. ಎಲ್ಲಿ ಬೇಕೋ ಅಲ್ಲಿ ನಮ್ಮ ದನಗಳನ್ನು ಬಿಡುತ್ತೇವೆ. ಹಾಗಾಗಿ ಆ ಕೆರೆಗೆ ಹೋಗುವುದಾಗಲಿ, ಆ ಬಾವಿಗೆ ಬರುವುದಾಗಲಿ, ಬೋರ್‌ವೆಲ್ ರೀಚಾರ್ಜ್ ಆಗುವಂತಹ ಜೋನ್ಸ್ ಏನು ಇರುತ್ತದೆ ಆ ಜೋನ್ಸ್ ಒಳಗೂ ಸಹ ಹೊಲಸು ಮಾಡುವಂತಹ ಮನೋಭಾವನೆ ನಾವು ಬೆಳೆಸಿಕೊಂಡಿದ್ದೇವೆ. ಇದನ್ನು ನಾವು ಬದಲು ಮಾಡಬೇಕು. ನಮಗೆ ಕುಡಿಯುವ ನೀರಿನಿಂದ ನಮಗೆ ಏನೇನು ತಾಪತ್ರಯ ಆಗುತ್ತದೆ, ಆ ಕುಡಿಯುವ ನೀರು ಶುದ್ಧವಾಗಬೇಕಾದರೆ ನಮ್ಮ ಜವಾಬ್ದಾರಿ ಏನು? ಸರ್ಕಾರದ ಜವಾಬ್ದಾರಿ ಏನು?

ಪಂಚಾಯತ್ ಜವಾಬ್ದಾರಿ ಏನು? ಸಮಾಜದ ಜವಾಬ್ದಾರಿ ಏನು? ಕುಟುಂಬದ ಜವಾಬ್ದಾರಿ ಏನು? ಎಲ್ಲಾ ಜವಾಬ್ದಾರಿಗಳ ಬಗ್ಗೆ ಸರಿಯಾದಂತಹ ತಿಳುವಳಿಕೆಯನ್ನು ಕೊಡುವಂತಹ ಕೆಲಸವನ್ನು ನಾವು ಇಲ್ಲಿಯವರೆಗೆ ಅಷ್ಟು ಒತ್ತು ಕೊಟ್ಟು ಮಾಡಿಲ್ಲ. ಅದನ್ನು ನಾವು ಮಾಡಬೇಕು. ಈಗ ತಮಗೆ ಒಂದು ವಿಚಾರ ಹೇಳುವುದಾದರೆ ನಮ್ಮಲ್ಲಿ ರಾಯನೆಲ್ಲಿ ಎಂದು ಇರುತ್ತದೆ, ಅದನ್ನು ಮತ್ತು ನುಗ್ಗೇಕಾಯಿಯನ್ನು ಹಾಕಿದರೆ ಸಾಳು ಕಡಿಮೆಯಾಗುತ್ತದೆ ಎಂದು ಹೇಳುತ್ತಾರೆ. ನಾವು ಮನೆಯೊಳಗೆ ಮಾಡುವಂತಹ ಕೆಲಸ ಇದು. ಹಿಂದೆ ಹಿರಿಯರು ಇದ್ದಾಗ ಎಲ್ಲಾ ಆಗುತ್ತಿದ್ದವು. ಈಗ ಹೊಸ ಸಂಸ್ಕೃತಿ ಬಂದಮೇಲೆ ಇದನ್ನೆಲ್ಲಾ ಬಿಟ್ಟುಬಿಟ್ಟೆವು. ಫಿಲ್ಟರ್ ಬಂತು, ಅದನ್ನು ಮಾರ್ಕೆಟ್‌ಗೆ ಹೋಗಿ ತರಬೇಕು. ಇದ್ದಂತಹವರಿಗೆ ಇದನ್ನೆಲ್ಲಾ ತುರುವುದಕ್ಕೆ ಅಡ್ಡಿಯಿಲ್ಲ. ಬಡವರು ತಮ್ಮ ಅರಿವೆಯೊಳಗೆ ಒಗೆದು ಕ್ಲೀನ್ ಮಾಡಿಕೊಳ್ಳುತ್ತಿದ್ದರು. ಈ ರೀತಿ ಜ್ಞಾನ ಇರತಕ್ಕಂಥ ಪ್ರಯೋಗಗಳು ಹಿಂದಿನಿಂದ ಯಶಸ್ವಿಯಾಗಿ ಅವುಗಳನ್ನು ಅನುಷ್ಠಾನ ಮಾಡಿಕೊಂಡು ಬರುತ್ತಿದ್ದೇವೆ. ಅವೆಲ್ಲವುಗಳನ್ನು ಪ್ರತಿ ಕುಟುಂಬಕ್ಕೆ ಮಾಹಿತಿ ಸಿಗುವ ಹಾಗೆ ಇದನ್ನು ನೀವು ಉಪಯೋಗ ಮಾಡಿ. ನೀವು ಫಿಲ್ಟರ್ ತೆಗೆದುಕೊಳ್ಳಬೇಕೆಂದು ಏನೂ ಇಲ್ಲ. ಇದನ್ನು ನಮ್ಮ ಊರಿನಲ್ಲಿ ಮಾಡಿಕೊಳ್ಳಬಹುದು. ನಮ್ಮ ಗ್ರಾಮಗಳಲ್ಲಿ ಮಾಡಿಕೊಳ್ಳಬಹುದು. ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಇರುವಂತಹ ಒಂದು ಉಪಯುಕ್ತ ಸಸ್ಯಗಳನ್ನು, ಉತ್ತಮ ತಪ್ಪಲುಗಳನ್ನು ಉಪಯೋಗ ಮಾಡಿಕೊಂಡು ಶುದ್ಧವಾದ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುವುದಕ್ಕೆ ನಾವು ಬಹಳಷ್ಟು ಪ್ರಯತ್ನ ಮಾಡಬೇಕಾಗಿದೆ. ಮೈಲ್ಡ್ ವೇ ಆಫ್ ಕಂಟಾಮಿನೇಷನ್, ಅದು ಓಪನ್ ಸೋರ್ಸ್ ಆದರೂ ಆಗಬಹುದು. ಇಲ್ಲ ಎಂದರೆ ಡಿಸ್ಟ್ರಿಬ್ಯೂಷನ್ ಚಾನಲ್ ಒಳಗೂ ಆಗಬಹುದು ನಾವು ಪೈಪ್ ಹಾಕುವಂತಹ ಸಮಯದಲ್ಲೂ ಆಗಬಹುದು, ಇವುಗಳನ್ನು ನಿಲ್ಲಿಸುವುದಕ್ಕೆ ಈ ಡಿಸ್ಟ್ರಿಬ್ಯೂಷನ್ ಪೈಪ್‌ಲೈನ್ ಏನು ಇರುತ್ತದೆ ಅವುಗಳನ್ನು ಬಹಳ ಮೇಲೆ ಹಾಕುವಂತಹ ಪರಿಸ್ಥಿತಿ ಇರುತ್ತದೆ. ಮೇಲೆ ಹಾಕುವುದರಿಂದ ಅವು ಗಾಡಿ, ಟ್ರ್ಯಾಕ್ಟರ್ ಅಡ್ಡಾಡಿದರೆ ಮತ್ತೆ ಏನಾದರೂ ಸ್ವಲ್ಪ ಆದರೂ ಸಹ ಪೈಪ್ ಒಡೆದುಬಿಟ್ಟು ಲೀಕೇಜ್ ಆಗುತ್ತದೆ. ಅಲ್ಲಿ ಕಂಟಾಮಿನೇಷನ್ ಆಗುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೋಸ್ಕರ ಅದನ್ನು ಪ್ರಾಪರ್ ಡೆಪ್ತ್ ಹಾಕುವ ಹಾಗೆ ಅದನ್ನು ಹಾಕುವ ಮುಂಚೆ ಇದರ ಪರಿವೀಕ್ಷಣೆ ಸರಿಯಾಗಿ ಮಾಡುವಂತಹ ಒಂದು ವ್ಯವಸ್ಥೆಯನ್ನು ತಾವು ಮಾಡಿಸಬಹುದು. ಈಗ ಫ್ಲೋರೈಡ್ ಕಂಟಾಮಿನೇಷನ್‌ನಿಂದ ಇದು ನಮ್ಮ ರಾಜ್ಯದ ಧಾರವಾಡ ಜಿಲ್ಲೆಯಲ್ಲಿ ವಿಶೇಷವಾಗಿ ಇದೆ. ದೇಶದಲ್ಲಿ ಸುಮಾರು 150 ಜಿಲ್ಲೆಗಳಲ್ಲಿ ಈ ಫ್ಲೋರೈಡ್ ಕಂಟಾಮಿನೇಷನ್‌ನಿಂದ ಫ್ಲೋರೊಸಿಸ್‌ಗೆ ಸಂಬಂಧಿಸಿದಂಥ ಅನೇಕ ರೋಗಗಳು ಬರುತ್ತಿದೆ. ಎನ್ನುವುದನ್ನು ಸರ್ಕಾರ ಕಂಡುಹಿಡಿದಿದೆ. ಡೆಂಟಲ್ ಫ್ಲೋರೊಸಿಸ್ ಆಗಲಿ, ಸ್ಕೆಲಿಟಲ್ ಫ್ಲೋರೊಸಿಸ್ ಆಗಲಿ ನಾನ್‌ಸ್ಕೆಲಿಟಲ್ ಫ್ಲೋರೊಸಿಸ್‌ಆಗಲೀ ಇವೆಲ್ಲಾ ರೋಗಗಳಿಂದ ಸಾಕಷ್ಟು ತೊಂದರೆಯಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಮುಂಡರಗಿ ತಾಲ್ಲೂಕು, ಗದಗ್ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಸಾಕಷ್ಟು ಈ ಫ್ಲೋರೋಸಿಸ್‌ನಿಂದ ಅಫೆಕ್ಟ್ ಆಗಿದೆ. ಈ ಫ್ಲೋರೋಸಿಸ್‌ನಿಂದ ಅಫೆಕ್ಟ್ ಆದ ಹಳ್ಳಿಗಳಿಗೆ ಸಾಧ್ಯವಾದಷ್ಟು ನಾವು ಈ ಸರ್‌ಫೇಸ್ ಸೋರ್ಸ್‌ನಿಂದ ಸಿಗುವಂಥ ನೀರನ್ನೆ ಪ್ರೊವೈಡ್ ಮಾಡುವ ಹಾಗೆ ಆಗಬೇಕು. ಅದು ನದಿ ಇರಲಿ, ಹಳ್ಳದ ನೀರು ಇರಲಿ, ಅಲ್ಲಿಂದಲೇ ತೆಗೆದುಕೊಳ್ಳಬೇಕು ಎಂದು ಹೇಳಿ. ಏಕೆಂದರೆ, ಇದು ಏನಾಗಿದೆ ಎಂದರೆ ಅಪಟೈಟ್ ರಾಕ್ ಎಂದು

ಹೇಳಿ ಒಂದಿರುತ್ತದೆ. ಅಂಡರ್ ಗ್ರೌಂಡ್‌ನಲ್ಲಿ ಈ ಅಪಟೈಟ್‌ರಾಕ್ ಫಾರ್ಮೇಷನ್ ಎಲ್ಲಿರುತ್ತದೆ ಅದರ ಮುಖಾಂತರ ನೀರು ಬಂದರೆ ಫ್ಲೋರೈಡ್ ಕಂಟೆಂಟ್ಸ್ ಜಾಸ್ತಿಯಾಗುತ್ತದೆಂದು ಹೇಳಿ ತಿಳಿದುಬಂದಿದೆ. ಇದು ಜಿಯಾಲಾಜಿಕಲ್ ಪ್ರಾಬ್ಲಮ್ ಇರುವುದರಿಂದ ಬಹುತೇಕ ನಾವು ಬೋರ್‌ವೆಲ್ ಹೊಡೆಯುವುದರಿಂದ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಅಲ್ಲ. ಅದಕ್ಕೆ ಸರ್‌ಫೇಸ್ ವಾಟರ್ ಎಷ್ಟೇ ದುಬಾರಿಯಾಗಲಿ, ನಾವು ನದಿ ಮೂಲದಿಂದಾಗಲಿ, ನಿರಂತರವಾಗಿ ನೀರು ಹರಿಯುತ್ತಿದ್ದರೆ ಹಳ್ಳದ ಮೂಲದಿಂದಾಗಲಿ ಅದನ್ನು ಪಡೆದುಕೊಳ್ಳುವಂತಹ ವ್ಯವಸ್ಥೆ ನಾವು ಮಾಡಬೇಕಾಗಿದೆ. ಅದನ್ನು ತ್ವರಿತವಾಗಿ ಮಾಡಬೇಕು. ಇದಕ್ಕೆ ದುಡ್ಡಿನ ಲಿಮಿಟ್ ಏನೂ ಇಲ್ಲ. ನೀವು ಪ್ರೊಪೋಸಲ್ ಕಳುಹಿಸಿದರೆ ಸಾಕು ಕೇಂದ್ರ ಸರ್ಕಾರದಿಂದ ಸಾಕಷ್ಟು ಹಣ ಈ ವಾಟರ್ ಟೆಕ್ನಾಲಜಿ ಮಿಷನ್‌ನಿಂದ ಟ್ಯಾಪ್ ಆಗುತ್ತಿದೆ. ತಾವು ಬೇಗ ಈ ಪ್ರೊಪೋಸಲ್ಸ್‌ಗಳನ್ನು ಕಳುಹಿಸುವಹಾಗೆ ಮಾಡಿ ಈ ಜನಗಳ ಸಮಸ್ಯೆಯನ್ನು ಬಗೆಹರಿಸುವಂತೆ ಮಾಡಬೇಕು. ಈಗ ಮುಂಡರಗಿ ಒಳಗೆ, ಬಹುತೇಕ ಕಲ್ಕಿರಿಯೊಳಗೂ ಸಹ ಸಾಕಷ್ಟು ಇದೆ. ಹುಲಕೋಟಿ ಒಳಗೂ ಸಹ ಸಾಕಷ್ಟು ಇದೆ. ಎಸ್.ಎಸ್. ಪಾಟೀಲರ ಹಲ್ಲು ನೋಡಿದರೆ ಹಳದಿಯಾಗಿರುತ್ತದೆ. ಅವರೂ ಎಲೆ ಅಡಿಕೆ ಹಾಕುವುದಿಲ್ಲ, ನಾನೂ ಕೂಡ ಎಲೆ ಅಡಿಕೆ ಹಾಕುವುದಿಲ್ಲ. ನನ್ನದೂ ಹಲ್ಲು ಹಳದಿಯಾಗಿರುತ್ತದೆ. ಏನೋ ನಾವು ಪುಣ್ಯವಂತರು, ನಮ್ಮ ಎಲುಬಿಗೆ ಅದು ತಾಪತ್ರಯ ಕೊಡುತ್ತಾ ಇಲ್ಲ. ನನಗೆ ತಿಳಿದುಬಂದಿದೆ, ಬಹಳ ಜನರಿಗೆ ಈ ಸೂರ್ಯ ನಮಸ್ಕಾರ ಹಾಕುವುದಕ್ಕೆ ಬರುವುದಿಲ್ಲ. ಏ, ಏನು ಮಹಾ ನೀರು ಕುಡಿದಹಾಗೆ ಅನ್ನುತ್ತಾರೆ. ಆದರೆ ಸರಿಯಾಗಿ ಕೈಎತ್ತುವುದಕ್ಕೆ ಬರುವುದಿಲ್ಲ, ಬೆಂಡ್ ಮಾಡುವುದಕ್ಕೆ ಬರುವುದಿಲ್ಲ, ಇಂತಹ ಸಮಸ್ಯೆಗಳನ್ನು ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲಿ ಅನುಭವಿಸುತ್ತಾ ಇರುವುದರಿಂದ ಏನೋ ಬಹಳ ವರ್ಷಗಳಿಂದ ಇದಕ್ಕೆ ಪರಿಹಾರ ಕೊಡಬೇಕೆಂದು ಹೇಳಿ ಶ್ರೀ ರಾಜೀವ್‌ಗಾಂಧಿಯವರು ಏನೊಂದು ಪ್ರೋಗ್ರಾಮನ್ನು ಹಾಕಿದ್ದರೋ ಆ ಪ್ರೋಗ್ರಾಮ್‌ನ ಉಪಯೋಗ ನಮಗೆ ಆಗುವ ಹಾಗೆ ಬಹಳ ಪ್ರಯತ್ನಪಡಬೇಕು. ಅದಕ್ಕೆ ವಿಶೇಷವಾಗಿ ಒತ್ತುಕೊಟ್ಟು ಇಂಥ ಸಮಸ್ಯಾತ್ಮಕ ಹಳ್ಳಿಗಳು ಯಾವುವು ಇವೆ ಅವೆಲ್ಲವುಗಳಿಗೆ ಕುಡಿಯುವ ನೀರನ್ನು ಆದ್ಯತೆ ಮೇರೆಗೆ ಕೊಡುವಂಥ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳಿ ನಾನು ಸಲಹೆ ಮಾಡುತ್ತೇನೆ. ಇದು ಬರೀ ನಮ್ಮ ದೇಶಕ್ಕೆ ಮಾತ್ರ ಸೀಮಿತವಾದಂತಹ ಸಮಸ್ಯೆಯಲ್ಲ, ಇದು ಜಿಯಾಲಾಜಿಕಲ್ ಫಾರ್ಮೇಷನ್ ಮೇಲೆ ಇರುವುದರಿಂದ ನಮ್ಮ ನೆರೆಹೊರೆಯ ದೇಶಗಳಲ್ಲೂ ಸಹ ಇದೆ. ಪಾಕಿಸ್ಥಾನಕ್ಕೂ ಇದೆ, ಚೈನಾಕ್ಕೂ ಇದೆ, ಬಾಂಗ್ಲಾದೇಶಕ್ಕೂ ಇದೆ, ಬಹಳಷ್ಟು ಮುಂದುವರಿಯುವ ರಾಷ್ಟ್ರಗಳಲ್ಲಿ ಈ ಸಮಸ್ಯೆ ಇದೆ. ಇದು ಏಕೆ ಇದೆಯೋ ಗೊತ್ತಿಲ್ಲ. ಮುಂದುವರಿದ ರಾಷ್ಟ್ರಗಳಲ್ಲಿ ಈ ಸಮಸ್ಯೆ ಇರುವುದರಿಂದ ನಮಗೆ ಹಣಕಾಸಿನ ತೊಂದರೆಯೂ ಇದೆ. ಹಣಕಾಸಿನ ತೊಂದರೆ ಇದ್ದರೂ ಸಹ ಸುದೈವದಿಂದ ಹಿಂದೆ ನಿರ್ಣಯ ಆಗಿರುವುದರಿಂದ ಸಾಕಷ್ಟು ಅಂತರ್‌ರಾಷ್ಟ್ರೀಯ ಯೋಜನೆಗಳ ಮುಖಾಂತರ ಹಣಕಾಸಿನ ಸಹಾಯ ಸಿಗುವಂತಹ ಪರಿಸ್ಥಿತಿ ನಮ್ಮಲ್ಲಿ ಇರುವುದರಿಂದ ಸಾಕಷ್ಟು ಅನುಕೂಲವಾಗುತ್ತದೆ. ಇವತ್ತು ಬ್ರ್ಯಾಕಿಷ್‌ವಾಟರ್, ಸವಳು ನೀರು ನವಲಗುಂದ ಆಗಲಿ, ನರಗುಂದ ಆಗಲಿ, ರೋಣ್ ಆಗಲಿ, ಅಥವಾ ಬಿಜಾಪುರ ಜಿಲ್ಲೆಯ ಕೆಲವು ಹಳ್ಳಿಗಳಾಗಲಿ ಅಲ್ಲಿ ನೆದರ್‌ಲ್ಯಾಂಡ್ಸ್‌ನಿಂದ ತಮಗೆ ದುಡ್ಡು ಬರುತ್ತಾ ಇದೆ. ಆ ನೆದರ್‌ಲ್ಯಾಂಡ್

ಯೋಜನೆಯಿಂದ ಹಣವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ ಎಂದು ನಾನು ಕೇಳಿದ್ದೇನೆ. ನಾನು ಏನು ಸಮಸ್ಯೆ ಎಂದು ಕೇಳಿದೆ ಕಳೆದ ಎರಡೂವರೆ ವರ್ಷಗಳೊಳಗೆ ನಾಲ್ಕು ಮಂದಿ ಕಾರ್ಯಪಾಲಕ ಅಭಿಯಂತರರು ಬದಲಾಗಿದ್ದಾರೆ. ಯಾರು ನಿವೃತ್ತಿಯಾಗಿ ಹೋಗುತ್ತಾರೋ ಅಥವಾ ಯಾರಿಗೆ ಅಲ್ಲಿ ಕೆಲಸ ಮಾಡುವುದಕ್ಕೆ ಇಷ್ಟ ಇರುವುದಿಲ್ಲವೋ ಅಂತಹ ಆಫೀಸರ್ಸ್ ಇಲ್ಲಿಗೆ ಹಾಕಿದರೆ ಪರದೇಶದಿಂದ ಸಿಗುವಂತಹ ಹಣಕಾಸೇ ಆಗಲೀ, ನಮ್ಮ ಕೇಂದ್ರ ಸರ್ಕಾರದಿಂದ ಸಿಗುವಂತಹ ಹಣಕಾಸೇ ಆಗಲಿ, ಅದನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ದಯವಿಟ್ಟು ನೀವು ಇಂತಹ ಯೋಜನೆಗಳಿಗೆ ಖಾಯಂ ಆಗಿ ಒಬ್ಬ ಜನ ಪರವಾಗಿರುವ ಕಳಕಳಿಯಿರುವ ಒಬ್ಬ ಅಧಿಕಾರಿಯನ್ನು ನೀವು ಅಲ್ಲಿಗೆ ನೇಮಿಸಬೇಕು. ಅಂಥವರು ಇದ್ದೇ ಇರುತ್ತಾರೆ. ಜನರಿಗೆ ಏನಾದರೂ ಉಪಕಾರ ಮಾಡಬೇಕೆನ್ನುವವರು ಸಾಕಷ್ಟು ಜನ ಇರುತ್ತಾರೆ. ಯಾರು ಅಲ್ಲಿಗೆ ಹೋಗುತ್ತೇನೆ ಎಂದು ಹೇಳುತ್ತಾರೆ ಅವರನ್ನೇ ಕೇಳಿ ಈ ಸಮಸ್ಯೆಯನ್ನು ಚಾಲೆಂಜ್ ರೀತಿ ತೆಗೆದುಕೊಂಡು ಸಿಗತಕ್ಕಂತಹ ಹಣಕಾಸನ್ನು ಸದುಪಯೋಗ ಮಾಡಿಕೊಂಡು ಈ ಜನಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಕೊಡುವ ವ್ಯವಸ್ಥೆಯನ್ನು ಮಾಡಲಿಕ್ಕೆ ಯಾವನಿಗೆ ಇಚ್ಛೆ ಇದೆ. ಆ ಆಫೀಸರನ್ನು ತಾವು ದಯವಿಟ್ಟು ಹಾಕುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಪ್ರಕಾಶ್ ಸಾಹೇಬರಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ನಮಗೆ ನದಿ ಮೂಲ, ಹಳ್ಳ ಒಂದು ವೇಳೆ ಸಿಗಲಿಲ್ಲ ಅಂದರೆ ಇಡೀ ಫ್ಲೋರೋಡೈಸೇಷನ್ ಮಾಡುವುದಕ್ಕೆ ಸಾಕಷ್ಟು ಟೆಕ್ನಿಕ್ ಇದೆ. ಒಂದು ತಮಗೆ ಗೊತ್ತಿದ್ದ ಹಾಗೆ ನೀರಿ ಟೆಕ್ನಿಕ್ ಇದೆ. ಆಕ್ಟಿವೇಟೆಡ್ ಅಲ್ಯೂಮಿನಿಯಂ ಟೆಕ್ನಿಕ್ ಇದೆ. ನೀರಿ ಟೆಕ್ನಿಕ್ ಇದು ಹ್ಯಾಂಡ್‌ಪಂಪ್‌ಗೆ ಏನೋ ಸರಿಯಾಗಿ ಆಗುತ್ತಿಲ್ಲ, ಎಂದು ಹೇಳಿ ಆಂಧ್ರಪ್ರದೇಶದ ಅನುಭವದಿಂದ ನಮಗೆ ತಿಳಿದುಬಂದಿದೆ. ಈ ಒಂದು ಗ್ರಾಮಕ್ಕೆ ನಾವು ಸರಬರಾಜು ಮಾಡುವುದರಿಂದ ಹ್ಯಾಂಡ್‌ಪಂಪನ್ನು ಬಿಟ್ಟು ಬೇರೆ ಯಾವುದರಿಂದ ಸರಬರಾಜು ಸಾಕಷ್ಟು ಅನುಕೂಲವಾಗುತ್ತದೆ. This Technique is very competitive and useful also.

ಶ್ರೀ ಎಂ. ಪಿ. ಪ್ರಕಾಶ್ : ಬಹಳ ಉಪಯುಕ್ತವಾದ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ನಾವು ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲ್ಲೂಕಿನ ರಾರಾಹಿ ಎನ್ನುವ ಗ್ರಾಮದಲ್ಲಿ ಇದನ್ನು ಮಾಡಬೇಕೆಂದು ಪ್ರಯತ್ನ ಪಡುತ್ತಿದ್ದೆವು. ಆದರೆ ಬಳ್ಳಾರಿ ತಾಲ್ಲೂಕಿನ ಗ್ರಾಮದಲ್ಲಿ ಮಾಡಿದಂತಹ ಪ್ರಯೋಗ ನೀವು ಹೇಳಿದಂತೆ ಅದು ಅಷ್ಟು ಯಶಸ್ವಿಯಾಗಲಿಲ್ಲ. ಆ ಯಂತ್ರವನ್ನು ಕಿರುನಿರು ಸರಬರಾಜಿನ ಹೆಡ್ ಮೇಲೆ ಇಟ್ಟು ಮಾಡಿದ್ದೇವೆ ಅದು ಯಂತ್ರದ ದೋಷವಲ್ಲ. ಅದನ್ನು ಉಪಯೋಗ ಮಾಡುವವರು ಅದನ್ನು ಸರಿಯಾಗಿ ಮಾಡುತ್ತಿಲ್ಲ. ಅದನ್ನು ಕೆಡಿಸಿದ್ದಾರೆ ಎಂದು ಹೇಳುತ್ತಾರೆ. ಅದನ್ನು ಒಂದು ತಾಂಡಾದಲ್ಲಿ ಮಾಡಿದ್ದೆವು. ಆ ತಾಂಡದಿಂದ ಏನಾದರೂ ತೊಂದರೆ ಆಗಿದೆಯೇ ಅಥವಾ ಉಪಯುಕ್ತತೆ ಆಗಿದೆಯೋ ಎನ್ನುವ ಬಗ್ಗೆ ತಾವು ಸಲಹೆ ಕೊಟ್ಟರೆ ಅದು ಸೂಕ್ತ ಎಂದು ಹೇಳುತ್ತೇನೆ.

ಶ್ರೀ ಡಿ. ಆರ್. ಪಾಟೀಲ್ : ಸಾರ್, ನಾಲ್ಗೊಂಡ ಟೆಕ್ನಿಕ್ ಇದೆಯಲ್ಲಾ, ಅದು ಕಮ್ಯುನಿಟಿ ವಾಟರ್ ಸಪ್ಲೈಗೆ ಹೆಚ್ಚು ಅನುಕೂಲ. ಈ ಮಿನಿವಾಟರ್ ಸಪ್ಲೈಗೆ ಹ್ಯಾಂಡ್ ಪಂಪ್‌ಗೆ ಅಷ್ಟು ಉಪಯುಕ್ತವಾಗಿಲ್ಲ. ಕಮ್ಯುನಿಟಿ ವಾಟರ್ ಸಪ್ಲೈಗೆ ಪೈಪ್ಡ್ ವಾಟರ್ ಸಪ್ಲೈ ರೂರಲ್ ವಾಟರ್ ಸಪ್ಲೈಗೆ ಹೆಚ್ಚು ಅನುಕೂಲವಾಗುತ್ತದೆ. ಅದಕ್ಕೆ ಯಾವ ಟೆಕ್ನಾಲಜಿಯನ್ನು ನಾವು ಉಪಯೋಗ ಮಾಡಿಕೊಳ್ಳಬೇಕು

ಅದನ್ನು ನಾವು ಮೊದಲು ಸರಿಯಾಗಿ ಐಡೆಂಟಿಫೈ ಮಾಡಿಕೊಳ್ಳಬೇಕು. ಈಗ ಹೀರೆವಡ್ಡಹಟ್ಟಿಯೊಳಗೆ Activated aluminium technique ಉಪಯೋಗ ಮಾಡಿಕೊಳ್ಳಬೇಕು. ಈ ಫ್ಲೋರೋಸಿಸ್‌ನ್ನು ಕಡಿಮೆ ಮಾಡುವುದಕ್ಕೆ ಅಲ್ಲಿ ಉಪಯೋಗವಾಗುವುದಿಲ್ಲ. ಏಕೆಂದರೆ ಅಲ್ಲಿ ಆ ನೀರಿನಲ್ಲಿ ಅಲ್ಕಲಿನಿಟಿ ಜಾಸ್ತಿ ಇದೆ. ಅಲ್ಕಲಿನಿಟಿ ಜಾಸ್ತಿಯಿದ್ದಲ್ಲಿ ಈ ಟೆಕ್ನಾಲಜಿ ಉಪಯೋಗಕ್ಕೆ ಬರುವುದಿಲ್ಲ. This technology is good for reducing the flouride contents.ಆದರೆ ಅದಕ್ಕೆ ಸರಿಯಿಲ್ಲದ ಹಾಗೆ ಸೂಕ್ತವಾದ ತಂತ್ರಜ್ಞಾನವನ್ನು ಬಳಕೆ ಮಾಡಿಕೊಳ್ಳಬೇಕು. ದುಡ್ಡು ಸಿಗುತ್ತದೆ ಎಂದು ಹೇಳಿ ಅವರು ಹೇಳಿದ್ದನ್ನು ನಾವು ತಂದು ಹಾಕಿಕೊಂಡುಬಿಟ್ಟರೆ ನಾವು ಅದರೊಳಗೆ ಫೈಲ್ಯೂರ್ ಆಗುತ್ತೇವೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಪಾಟೀಲರೆ, ನಮಗೂ ಅನುಭವ ಇದೆ. ನಿಮಗೂ ಅನುಭವ ಇದೆ. ಇದು ನಮ್ಮಲ್ಲಿ ಪ್ಲಾಂಟ್ ಹಾಕಿದ್ದರೂ ಬಹಳ ಕಡೆ ಮಾಡಿದ್ದರು, ದಯವಿಟ್ಟು ಜನರು ಇದಕ್ಕೆ ಸಹಕಾರ ಮಾಡಬೇಕು. ಅದನ್ನು ಕೀಳುವುದು, ಕಿತ್ತೊಗೆಯುವುದು ಮಾಡುತ್ತಾರೆ. ಯಾವ ಕಾಲದಿಂದ ನಾವು ಕುಡಿಯುತ್ತಾ ಬಂದಿದ್ದೇವೆ ಏನಾಗುತ್ತದೆ ಎಂದು ಇರುತ್ತಾರೆ. ನಾವು ಇನ್ನೂ ಜನರಿಗೆ ತಿಳಿವಳಿಕೆ ಕೊಡಬೇಕಾಗಿದೆ. ಜನರಿಗೆ ಆ ಕಲ್ಪನೆ ಬರದ ಹೊರತು ನಾವು ಯಾವ ಪ್ಲಾಂಟ್ ಮಾಡಿದರೂ ಸಕ್ಸಸ್ ಆಗುವುದಿಲ್ಲ. ಇಷ್ಟೇ ಅಲ್ಲ ತಮ್ಮ ಮನೆಯೊಳಗೂ ಮಾಡಿಕೊಂಡು ನಾವು ಕುಡಿಯಬಹುದು. ಬಹಳ ಸರಳ ಸರ್ಕಾರ ಖರ್ಚು ಇಲ್ಲದ ಹಾಗೆ ಚೆನ್ನಾಗಿ ಮಾಡಬೇಕು ಅಂದರೆ ಪಟಕ ನೀರು ಹಾಕಿ ಮಾಡಬೇಕು ಎಂದು ಹೇಳಿದ್ದಾರೆ ಅಷ್ಟು ಮಾಡುವುದಕ್ಕೆ ಜನರು ತಯಾರಿಲ್ಲ. ನಾವು ಬೇರೆ ಕಡೆಯಿಂದ ನೀರು ಕೊಟ್ಟರೂ ಸಹಿತ ಆ ಹೊಲಸು ನೀರನ್ನೇ ಇವರು ಕುಡಿಯುತ್ತಾರೆ. ಅದನ್ನು ಮಾಡುವುದಿಲ್ಲ ಜನ ಆದ್ದರಿಂದ ಜನರಿಗೆ ಮೊದಲನೆಯದಾಗಿ ತಿಳುವಳಿಕೆಯನ್ನು ನೀಡಬೇಕು.

ಶ್ರೀ ಡಿ. ಆರ್. ಪಾಟೀಲ್ : ಗೌಡರು ಹೇಳಿದ ಹಾಗೆ ಜನರಲ್ಲಿ ಅವೇರ್‌ನೆಸ್ ಮೂಡಿಸುವುದು ಬಹಳ ಮುಖ್ಯ. ನಿಜವಾಗಿ ನನಗೆ ಆ ಹಳ್ಳಿಯ ಹೆಸರು ನೆನಪಾಗುತ್ತಿಲ್ಲ. ಆಂಧ್ರಪ್ರದೇಶದ ಒಳಗೆ ಒಬ್ಬ ಸರಪಂಚ ಎಷ್ಟು ಒಳ್ಳೆಯ ಕೆಲಸ ಮಾಡಿದ್ದ. ಆ ಹಳ್ಳಿ ಫ್ಲೂರೋಸಿಸ್ ಅಫೆಕ್ಟೆಡ್ ವಿಲೇಜ್, ಅಲ್ಲಿ ಅವರು ಪಟಗಾಸುಣ್ಣ ಹಾಕಿಕೊಂಡು ಗಡಿಗೆಯೊಳಗೆ ರಾತ್ರಿ ಇಟ್ಟುಬಿಟ್ಟರೆ ಮುಂಜಾನೆ ಕುಡಿಯುವುದಕ್ಕೆ ಉಪಯೋಗವಾಗುತ್ತದೆ. ಈ ಕೆಲಸವನ್ನು ಪ್ರತಿಮನೆ ಮನೆಯವರೂ ಕಾಳಜಿ ಇಟ್ಟುಕೊಂಡು ಮಾಡಿದ್ದರು. ನಾನು ಆ ಊರಿಗೆ ಹೋಗಿದ್ದೆ ಅದರ ಹೆಸರು ನೆನಪಿಗೆ ಬರುತ್ತಿಲ್ಲ. ಹಾಗೆ ಜನರ ಬಗ್ಗೆ ಕಳಕಳಿಯಿಂದ ಕೆಲಸ ಮಾಡುವಂತಹ ನಾನ್ ಅಫಿಷಿಯಲ್ಸ್ ಆಗಲಿ, ಅಧಿಕಾರಿಗಳೇ ಆಗಲಿ, ಯೋಜನೆಯನ್ನು ಕಾರ್ಯಗತ ಮಾಡುವಂತಹ ಮುಖ್ಯಸ್ಥರೇ ಆಗಲಿ, ಆ ಜನರ ಬಗ್ಗೆ ಕಾಳಜಿ ಮಾಡಬೇಕು, ಅವರಿಗೆ ಒಳ್ಳೆಯ ನೀರನ್ನು ಒದಗಿಸಬೇಕು, ಎನ್ನುವಂತಹ ಮನೋಭಾವನೆಯಿರುವಂತಹವರು ಬೇಕು, ದುಡ್ಡು ಸಾಕಷ್ಟು ಸಿಗುತ್ತದೆ. ಕೇಂದ್ರ ಸರ್ಕಾರದಿಂದ ಸಿಗುತ್ತದೆ, ರಾಜ್ಯ ಸರ್ಕಾರದ ಬಜೆಟ್‌ನಿಂದ ಸಿಗುತ್ತದೆ ಮತ್ತು ಪರದೇಶಗಳಿಂದಲೂ ಸಹ ದುಡ್ಡು ನಮಗೆ ಬರುತ್ತದೆ, ಶುದ್ಧನೀರು ಕೊಡುವುದಕ್ಕೆ ಕಳಕಳಿಯಿಂದ ಕೆಲಸ ಮಾಡುವಂತಹ ಒಂದು ವಾತಾವರಣ ನಿರ್ಮಾಣ ಮಾಡುವಂತಹದರಲ್ಲಿ ನಾವು ಇಲ್ಲಿಯವರೆಗೂ ಯಶಸ್ವಿಯಾಗಲಿಲ್ಲ ಎಂಬುದನ್ನು ನಾವು

ಒಪ್ಪಿಕೊಳ್ಳಲೇಬೇಕಾಗುತ್ತದೆ. ಇವತ್ತು ಸವಳು ನೀರಿನ ಸಲುವಾಗಿ ನಮ್ಮ ಈ ಮೂರು ತಾಲ್ಲೂಕಿಗೆ ಏನು ತೊಂದರೆಯಾಗಿದೆ, ಆ ನೆದರ್‌ಲ್ಯಾಂಡ್ಸ್ ಸ್ಕೀಮ್ ನಾಳೆ 98ಕ್ಕೆ ಮುಗಿಯುತ್ತದೆ. ಅಗ್ರಿಮೆಂಟ್ ಪ್ರಕಾರ, ಆ ಅಗ್ರಿಮೆಂಟ್ ಎಕ್ಸ್‌ಟೆಂಡ್ ಆಗದ ಹಾಗೆ ವಿಶೇಷ ಕಾಳಜಿ ವಹಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ರಾಜ್ಯದಲ್ಲಿ ಎಲ್ಲೆಲ್ಲಿ ಸವಳು ನೀರಿನ ಸ್ಥಿತಿ ಇದೆಯೋ ಅಲ್ಲೆಲ್ಲಾ ಮಾನ್ಯ ಸದಸ್ಯರು ಹೇಳುವಂತಹ ತಂತ್ರಜ್ಞಾನವನ್ನು ದೇಶಿಯ ತಂತ್ರಜ್ಞಾನ ಎಂದು ಹೇಳಿದ್ದಾರೆ ಅವರು ಗದಗ್‌ಗೆ ಹೋಗಿ ಬಿಡುತ್ತಾರೆ.

11.40 ಎ.ಎಂ.

ಶ್ರೀ ಡಿ. ಆರ್. ಪಾಟೀಲ್ : ಅದರಲ್ಲಿ ದೇಶೀಯ ತಂತ್ರಜ್ಞಾನ ಇದೆ, ಬೇರೆ ತಂತ್ರಜ್ಞಾನ ಇದೆ, ಈ ಬೇರೆ ತಂತ್ರಜ್ಞಾನ ಬಹಳ ಕಾಸ್ಟಲಿ ಆಗುತ್ತಿದೆ. ಈಗ ಸವಳು ನೀರಿನ ಸಲುವಾಗಿ ರಿವರ್ಸ್ ಹಾಸ್ಮಾಸಿಸ್ ಮೆತೆಡ್ ಉಪಯೋಗ ಮಾಡುತ್ತಾರೆ. ಅರಬ್ ಕಂಟ್ರೀಸ್‌ರವರೆಲ್ಲ ಸೀ ವಾಟರ್‌ನಿಂದಲೇ ಮಾಡುತ್ತಾರೆ. ಅವರಿಗೆ ದುಡ್ಡು ಎಂದರೆ ಪ್ರಶ್ನೆಯೇ ಇಲ್ಲ. ನಾವೆಲ್ಲ ದುಡ್ಡಿನ ತಾಪತ್ರಯ ಇದ್ದಂತಹವರು. ನಮ್ಮ ಇತಿಮಿತಿಯೊಳಗೆ ನಾವು ವಿಚಾರ ಮಾಡಬೇಕಾಗುತ್ತದೆ. ಪ್ರಕಾಶ್‌ರವರೆ ಒಂದು ಲಾಂಗ್ ಟರ್ಮ್ ಮೇಜರ್ ಇದೆ, ಏನೆಂದರೆ, ಈ ವಾಟರ್ ರೀಚಾರ್ಜ್ ಮಾಡುವುದು ಏನಿದೆಯಲ್ಲ ಈ ವಾಟರ್ ರೀಚಾರ್ಜ್ ಮಾಡುವುದಕ್ಕೆ ಈ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನವರಿಗೆ ಅಥವಾ ಡಿ.ಪಿ.ಎ.ಪಿ. ಪ್ರೋಗ್ರಾಂನೊಳಗೆ ಮಾಡಬೇಕೆಂದು ನಾವೇನು ಕೊಡುತ್ತಿದ್ದೇವೆ, ಅದು ಅಗ್ರಿಕಲ್ಚರ್‌ಗೂ ಬೇಕು ಹಾಗೂ ಬರಗಾಲ ಪರಿಹಾರಕ್ಕೂ ಅದು ಯೋಗ್ಯ. ಆದರೆ, ಅವೆರಡಕ್ಕಿಂತ ಹೆಚ್ಚಾಗಿ ಕುಡಿಯುವ ನೀರಿನ ಸಲುವಾಗಿ, ಈ ಅಂಡರ್‌ಗ್ರೌಂಡ್ ವಾಟರ್ ಈಗಿನದಕ್ಕಿಂತ ಹೆಚ್ಚು ಶುದ್ಧವಾಗಬೇಕಾದರೆ ವಾಟರ್ ರೀಚಾರ್ಜ್ ಮಾಡುವುದರ ಕಡೆ ನಾವು ಹೆಚ್ಚು ಗಮನ ಕೊಡಬೇಕು. ಈಗ ವಾಟರ್ ಸರ್ಫೇಸ್‌ನಿಂದ ಕೆಳಗೆ ಹೋಯಿತು ಎಂದರೆ ಅಲ್ಲೊಂದು ಸಾಯಿಲ್ ಕವರ್ ಸಿಕ್ಕಿದರೆ ಸಾಕು ಎಷ್ಟೋ ಅಶುದ್ಧತೆಯನ್ನು ಆ ಸಾಯಿಲ್ ಕವರ್ ತೆಗೆದುಹಾಕಿಬಿಡುತ್ತದೆ. ಹಾಗಾಗಿ ರೀಚಾರ್ಜ್ ಆಗುವಂಥ ಒಂದು ವ್ಯವಸ್ಥೆಯನ್ನು ನಾವು ಮಾಡಬೇಕು. ಈಗ ರೀಚಾರ್ಜ್ ಜೋನ್ಸ್ ಎಂದು ಇರುತ್ತವೆ. ಈ ಹುಲಕೋಟಿಯಲ್ಲಿ ಒಂದು ಬೋರ್ ವೆಲ್ ಇತ್ತು. ಈ ಬೋರ್‌ವೆಲ್‌ಗೆ ನೀರು ಎಲ್ಲೆಲ್ಲಿಂದ ಹೋಗುತ್ತದೆ ಅದಕ್ಕೆ, ಆ ಬೋರ್‌ವೆಲ್ ಲಿಫ್ಟ್ ಮಾಡುವಂಥ ವಾಟರ್ ಎಲ್ಲೆಲಿಂದ ರೀಚಾರ್ಜ್ ಆಗುತ್ತದೆ ಎನ್ನುವುದನ್ನು ಈ ನಮ್ಮ ಜಿಯಾಲಜಿಕಲ್ ಡಿಪಾರ್ಟ್‌ಮೆಂಟ್‌ನವರು ಐಡೆಂಟಿಫೈ ಮಾಡುತ್ತಾರೆ. ಆ ಜೋನ್ಸನ್ನು ನಾವು ಐಡೆಂಟಿಫೈ ಮಾಡಿಕೊಳ್ಳಬೇಕು. ಜೋನ್ಸ ನ್ನು ಐಡೆಂಟಿಫೈ ಮಾಡಿಕೊಂಡು ಅವನ್ನು ಪ್ರೊಟೆಕ್ಟ್ ಮಾಡುವಂತಾಗಬೇಕು. ಅಂದರೆ ಅಲ್ಲೇನು ಕಂಟಾಮಿನೇಷನ್ ಆಗಬಾರದು. ಸರ್ಫೇಸ್ ಕಂಟಾಮಿನೇಷನ್ ಏನು ಆಗಲಾರದ ಹಾಗೆ ನಾವು ಮಾಡಿದೆವು ಎಂದರೆ ಸಾಕಷ್ಟು ಅನುಕೂಲವಾಗುತ್ತದೆ. ಒಂದು ವೇಳೆ ಏನಾದರೂ ಕಣ್ತಪ್ಪಿ ಕಂಟಾಮಿನೇಷನ್ ಆದರೂ ಸಹಿತ ನೀರು ಅಲ್ಲಿ ಮಣ್ಣಿನ ಮುಖಾಂತರ ಕೆಳಗಿಳಿಯುವುದರಿಂದ ಸಾಕಷ್ಟು ಹೊಲಸು ದೂರ ಹೋಗಿ, ನಮಗೆ ಹೆಚ್ಚು ನೀರು ಸಿಗುವಂತಹದ್ದಕ್ಕೆ ಅನುಕೂಲವಾಗುತ್ತದೆ ಮತ್ತು ಶುದ್ಧವಾದ ನೀರನ್ನು

ಪಡೆದುಕೊಳ್ಳುವುದಕ್ಕೂ ಸಹ ಸಾಧ್ಯವಾಗುತ್ತದೆ. ಅದಕ್ಕೆ ಈ ಲಾಂಗ್ ಟರ್ಮ್ ಮೆಜರ್‌ಗೆ ನೀವು ಕುಡಿಯುವ ನೀರನ್ನು ಎತ್ತಲಿಕ್ಕೆ ಎಷ್ಟು ಮಹತ್ವವನ್ನು ಕೊಡುತ್ತಿದ್ದೀರೋ ರೀಚಾರ್ಜ್ ಮಾಡಲಿಕ್ಕೂ ಅಷ್ಟೇ ಮಹತ್ವವನ್ನು, ಅಷ್ಟೇ ಹಣವನ್ನು ನೀವು ಕೊಡುವಂತಹದಕ್ಕೆ ತಾವು ಮಹತ್ವವನ್ನು ಕೊಡಬೇಕು. ಇದರಿಂದ ಬರೀ ನಮ್ಮ ಕುಡಿಯುವ ನೀರಿನ ತಾಪತ್ರಯ ಅಷ್ಟೇ ಅಲ್ಲ ಅಗ್ರಿಕಲ್ಚರಲ್ ಪಂಪ್‌ಸೆಟ್‌ಗೂ ಅನುಕೂಲವಾಗುತ್ತದೆ ಮತ್ತು ನಮ್ಮ ಒಣಬೇಸಾಯ ಮಾಡುವವರಿಗೂ ಅನುಕೂಲವಾಗುತ್ತದೆ ಜೊತೆಗೆ ನಮ್ಮ ಬರಪೀಡಿತ ಪ್ರದೇಶಗಳಿಗೂ ಅನುಕೂಲವಾಗುತ್ತದೆ. ನೀವು ಮೂರು ಮಂದಿ ಸೇರಿ ಇದಕ್ಕಾಗಿಯೆ ಒಂದು ಕಾರ್ಯಕ್ರಮವನ್ನು ತಯಾರು ಮಾಡಿದಿರಿ ಎಂದರೆ ಈ ರೀಚಾರ್ಜ್ ಮಾಡುವುದರ ಕಡೆ ಸಾಕಷ್ಟು ಅನುಕೂಲವಾಗುತ್ತದೆ. ಮೊನ್ನೆ ಸುಮಾರು 3-4 ತಿಂಗಳ ಹಿಂದೆ 'ಇಂಡಿಯಾ ಟುಡೇ' ಎಂದು ಕಾಣುತ್ತದೆ, ಅದರಲ್ಲಿ ತಾವೂ ಸಹ ಓದಿರಬಹುದು, ಶ್ಯಾಮ್‌ಜಿ ಎನ್ನುವವರೊಬ್ಬರು, ಇವರು ಪ್ರೈವೇಟ್ ಕನ್ಸರ್ನ್‌ನೊಳಗೆ ಕೆಲಸ ಮಾಡುತ್ತಿದ್ದಾರೆ. ಅವರು ಆ ಸೌರಾಷ್ಟ್ರ ಭಾಗದವರಾಗಿದ್ದು ಆ ಸೌರಾಷ್ಟ್ರ ಭಾಗದಲ್ಲಿರುವಂಥ ಏಳು ಲಕ್ಷ ಓಪನ್ ವೆಲ್ಸ್‌ನ ರೀಚಾರ್ಜ್ ಮಾಡುವುದಕ್ಕೆ ಅವರು ಜನರ ಸಂಘಟನೆ ಮುಖಾಂತರ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅದರೊಳಗೆ ಈಗಾಗಲೇ ಎರಡೂವರೆ ಲಕ್ಷ ಬಾವಿಗಳನ್ನು ಮಾಡಿದ್ದಾರೆ. ಈ ಕೆಲಸವನ್ನು ಅವರು 1988ರಲ್ಲಿ ಪ್ರಾರಂಭ ಮಾಡಿದ್ದಾರೆ, ಈಗ 1997ನೇ ವರ್ಷ ನಡೆಯುತ್ತಾ ಇದೆ. 1988ರಲ್ಲಿ ಕೆಲಸ ಪ್ರಾರಂಭ ಮಾಡಿದಾಗ ಮೂರು ವರ್ಷಗಳು ಏನೇ ಮಾಡಿದರೂ ಅವರಿಗೆ ಜನರು ಸಹಕಾರ ಮಾಡುವುದಕ್ಕೆ ಮುಂದೆ ಬರಲಿಲ್ಲವಂತೆ. ಅಲ್ಲಿ ಸ್ವಾಮಿನಾರಾಯಣ ಎಂದು ಒಂದು ಸಂಸ್ಥೆ ಇದೆ, ಆ ಸ್ವಾಮಿ ನಾರಾಯಣ ಸಂಸ್ಥೆಯಲ್ಲಿ ಕೆಲಸ ಮಾಡುವಂಥ ಎಲ್ಲಾ ಸಾಧುಗಳನ್ನು ಹಿಡಿದುಕೊಂಡು ಮೊದಲು ಅವರಿಗೆ ಇದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು ನಾವು ಈ ಕೆಲಸ ಮಾಡಲಿಲ್ಲ ಎಂದರೆ ನಮ್ಮ ಭಾಗ ಇನ್ನೊಂದು ದಶಕದೊಳಗೆ ಬಹಳ ತಾಪತ್ರಯ ಪಡಬೇಕಾಗುತ್ತದೆ ಎಂದು ಅವರಿಗೆ ಮನವರಿಕೆ ಮಾಡಿದಮೇಲೆ ಅವರು ಎಲ್ಲಾ ಗ್ರಾಮದಲ್ಲಿ ಅವರು ಎಲ್ಲೆಲ್ಲಿ ಪ್ರವಚನ ಮಾಡುತ್ತಾರೆ ಅಲ್ಲಲ್ಲಿ ಇದಕ್ಕೆ ಆಧ್ಯತೆಯನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದರಿಂದ ಈ 3-4 ವರ್ಷದೊಳಗೆ ಸುಮಾರು ಎರಡೂವರೆ ಲಕ್ಷ ಬಾವಿಗಳನ್ನು ಈಗ ರೀಚಾರ್ಜ್ ಮಾಡಿದ್ದಾರೆ. ದುರ್ದೈವದಿಂದ ಈ ಮಹಾರಾಷ್ಟ್ರ ಆಗಲೀ ಅಥವಾ ಕರ್ನಾಟಕ ಆಗಲೀ ಇಲ್ಲಿ ವಾಲೆಂಟರಿ ಏಜೆನ್ಸಿ ಅಷ್ಟು ಎಫೆಕ್ಟೀವ್ ಆಗಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ವೀರೇಂದ್ರ ಹೆಗ್ಗಡೆಯವರು ಒಬ್ಬರು ಸಮಗ್ರ ಗ್ರಾಮೀಣ ಅಭಿವೃದ್ಧಿಯೊಳಗೆ ಮಾಡುತ್ತಿದ್ದಾರೆ. ತಾವು ಸ್ವಸ್ತಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದೀರಿ. ಶ್ರೀ ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನವನ್ನು ನಾವು ಪಡೆದುಕೊಂಡರೆ ಬಹಳ ಒಳ್ಳೆಯದು ಎಂದು ನನ್ನ ಭಾವನೆ. ಏಕೆಂದರೆ ಅವರಿಗೆ ಸಾಕಷ್ಟು ಅನುಭವ ಇದೆ ಮತ್ತು ಅವರು ಯಶಸ್ವಿಯೂ ಸಹ ಆಗಿದ್ದಾರೆ. ಅದಕ್ಕೆ ಕಾರಣವೂ ಇದೆ, ಬಹುತೇಕ ಧರ್ಮಸ್ಥಳದ ಮಂಜುನಾಥೇಶ್ವರನ ಮೇಲೆ ಇರುವಂಥ ಶ್ರದ್ಧೆ ಭಕ್ತಿಭಾವ ಅದೂ ಸಾಕಷ್ಟು ಜನರ ಮೇಲೆ ಪರಿಣಾಮವಾಗುತ್ತದೆ. ಅದನ್ನು ನಾನು ಮಾಡಲಿಕ್ಕೆ ನೀವು ಮಾಡಲಿಕ್ಕೆ ಹೋದರೆ ಅಷ್ಟು ಪರಿಣಾಮಕಾರಿಯಾಗಲಿಕ್ಕಿಲ್ಲ. ಆದರೆ, ಅವರನ್ನೂ ನೀವು ಕೈಗೂಡಿಸಿಕೊಂಡ ಏನಾದರೂ ಮಾಡಲಿಕ್ಕೆ

ಸಾಧ್ಯವಿದ್ದರೆ ಅನುಕೂಲವಾಗುತ್ತದೆ. ಈಗ ಹೇಗೆ ಮಹಾರಾಷ್ಟ್ರದೊಳಗೆ ಅಣ್ಣಾ ಹಜಾರೆಯವರನ್ನೇ ಮುಖ್ಯಸ್ಥರನ್ನಾಗಿ ಮಾಡಿ, ಸರ್ವಾಂಗೀಣ ಗ್ರಾಮೀಣ ಅಭಿವೃದ್ಧಿಗಾಗಿ ಜನರನ್ನು ಉಪಯೋಗ ಮಾಡಿಕೊಂಡು ಏನು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿದ್ದಾರೆ ಅಲ್ಲಿ ಆ ರೀತಿ ಬಂತು ಎಂದರೆ ನಮ್ಮಲ್ಲೂ ಸಹ ಬೇರೆ ಬೇರೆ ಭಾಗದಲ್ಲಿ ಆ ಮಂಜುನಾಥೇಶ್ವರನ ಮೇಲೆ ಇರುವಂಥ ಒಂದು ಶ್ರದ್ಧೆ ಭಕ್ತಿಭಾವವನ್ನು ನಾವು ಅಳವಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಅಂತಹವರಿಗೆ ತಾವು ಅವಕಾಶವನ್ನು ಮಾಡಿಕೊಟ್ಟು, ಅವರ ಮಾರ್ಗದರ್ಶನ ಪಡೆದುಕೊಂಡು ಈ ಸ್ವಸ್ತಿ ಅಥವಾ ಬೇರೆ ಬೇರೆ ಯೋಜನೆಯಡಿಯಲ್ಲಿ ನೀವು ಗ್ರಾಮೀಣಾಭಿವೃದ್ಧಿಗಾಗಿ ಏನು ಕೆಲಸ ಮಾಡುತ್ತಿದ್ದೀರಿ ಅದರ ಸದುಪಯೋಗ ಆಗುವ ಹಾಗೆ, ಅದರಲ್ಲಿ ಸಾಕಷ್ಟು ಜನ ಪಾಲ್ಗೊಳ್ಳುವ ಹಾಗೆ, ಜನರು ಪಾಲ್ಗೊಂಡರೆ ಈ ಸೋರುವಿಕೆ ಕಡಿಮೆಯಾಗುತ್ತದೆ. ಇಲ್ಲವೆಂದರೆ, ಜನರಿಗೆ ಗೊತ್ತೇ ಆಗಲಿಲ್ಲ ಎಂದರೆ, ಎಲ್ಲಾ ಸರ್ಕಾರವೇ ಮಾಡುತ್ತಾ ಹೋದರೆ ಈ ಸೋರುವಿಕೆಯಾಗುವಂಥದ್ದು ಸರ್ಕಾರಕ್ಕೂ ಗೊತ್ತಾಗುವುದಿಲ್ಲ, ಏಕೆಂದರೆ ನೀವು ಕೆಳಹಂತದ ಅಧಿಕಾರಿಗಳು ಕಳುಹಿಸುವಂಥ ಮಾಹಿತಿ ಮೇಲೆ ನಮಗೆ ಹೇಳಬೇಕಾಗುತ್ತದೆ. ಆ ಮಾಹಿತಿಯನ್ನೇ ನೋಡಿ ನೀವು ನಂಬಬೇಕಾಗುತ್ತದೆ, ಪ್ರತಿ ಊರಿಗೂ ಹೋಗಿ ಪರಿಶೀಲನೆ ಮಾಡುವಂಥ ಕೆಲಸ ಸರ್ಕಾರದಿಂದ ಆಗುವುದಿಲ್ಲ. ಆದರೆ ಅಲ್ಲಿರುವಂಥ ಜನಪ್ರತಿನಿಧಿಗಳು ಆ ಕೆಲಸವನ್ನು ಮಾಡುವಂಥ ಒಂದು ವ್ಯವಸ್ಥೆಯನ್ನು ನಾವು ಇವೊತ್ತು ರೂಪಿಸಬೇಕಾಗಿದೆ. ಇನ್ನು ಸರ್ಕಾರದವರು ನೈರ್ಮಲೀಕರಣದ ಬಗ್ಗೆ ವಿಶೇಷವಾದ ಒತ್ತನ್ನು ಕೊಡುತ್ತಿದ್ದೀರಿ, ನೀವು ಕೌಟುಂಬಿಕ ಶೌಚಾಲಯಕ್ಕೆ ಹೆಚ್ಚು ಒತ್ತನ್ನು ಕೊಟ್ಟಿದ್ದೀರಿ, ಒಳ್ಳೆಯದು. ಇದನ್ನು ನಮ್ಮ ಸರ್ಕಾರ ಪ್ರಾರಂಭ ಮಾಡಿದ್ದು ಪ್ರಾರಂಭ ಮಾಡಿದ್ದೆಲ್ಲ ನಾವೇ ಆದರೆ ಅವರು ವಿಶೇಷವಾದ ಒತ್ತನ್ನು ಕೊಟ್ಟಿದ್ದಾರೆ, ಅದಕ್ಕೆ ನಾವು ಮಾನ್ಯ ಪ್ರಕಾಶ್‌ರವರನ್ನು ಹೊಗಳಲೇ ಬೇಕಾಗುತ್ತದೆ. ಆದರೆ ಗ್ರಾಮೀಣ ಪ್ರದೇಶದ ಸಂಪೂರ್ಣ ಮಾಹಿತಿ ತಮಗೆ ಇರಬೇಕಾಗುತ್ತದೆ. ಹಿತ್ತಲ ಜಾಗ ಇರುವವರು ಎಷ್ಟು ಜನ? ಈಗ ನಮ್ಮಂಥವರು ಹಿತ್ತಲ ಜಾಗ ಇರುವವರಿಗೆ ಈ ಯೋಜನೆ ಅನುಕೂಲವಾಗುತ್ತದೆ. ಆ ಜಾಗವೇ ಇಲ್ಲದವರಿಗೆ ಏನು ಮಾಡಬೇಕು, ಅವರೂ ಆ ಕೆಲಸವನ್ನು ಮಾಡಬೇಕಲ್ಲ? ಅದಕ್ಕೆ ಈ ಗ್ರಾಮಠಾಣದೊಳಗೆ ಎಲ್ಲಿಯಾದರೂ ಜಾಗ ಸಿಕ್ಕಿದರೆ ಅಂದರೆ 4-5 ಕುಟುಂಬಕ್ಕೆ ಒಂದು ಶೌಚಾಲಯವನ್ನು ಮಾಡಿಕೊಟ್ಟರೆ, ಅಂದರೆ ಅವರು ಸ್ವಚ್ಛವಾಗಿ ಇಟ್ಟುಕೊಳ್ಳುತ್ತಾರೆ. ನಾವು ಸಾರ್ವಜನಿಕ ಶೌಚಾಲಯಗಳನ್ನು ಕಟ್ಟಿಸಿದರೂ ಸ್ವಚ್ಛ ಇಡಂಗಿಲ್ಲ. ಅಲ್ಲಿ ಸ್ವಲ್ಪ ನೀರಿನ ತಾಪತ್ರಯವೂ ಇರುತ್ತದೆ, ಆಮೇಲೆ ನಮಗೆ ಸ್ವಚ್ಛ ಮಾಡಿ ಬರಬೇಕೆನ್ನುವ ಸಂಸ್ಕೃತಿಯೂ ಇಲ್ಲ. ನೀರೂ ಇರುವುದಿಲ್ಲ. ನಾವು ಏನು ನೀರು ತೆಗೆದುಕೊಂಡು ಹೋಗಿರುತ್ತೇವೆ ಅದರಲ್ಲೇ ಎಲ್ಲಾ ಕೆಲಸ ಆಗಬೇಕು ಎನ್ನುವುದರಿಂದ ಇದು ಮತ್ತೆ ಉಪಯೋಗ ಆಗಲಿಕ್ಕೆ ಬಹಳಷ್ಟು ತಾಪತ್ರಯ ಬರುತ್ತದೆ. ಆದ್ದರಿಂದ ಅದರ ಬದಲಿಗೆ ನಾವು 3-4 ಕುಟುಂಬಗಳಿಗೆ ಒಂದು ಶೌಚಾಲಯವನ್ನು ಕಟ್ಟಿಕೊಟ್ಟರೆ ಹೆಚ್ಚು ಅನುಕೂಲವಾಗುತ್ತದೆ. ಆಮೇಲೆ ನಮ್ಮ ಗ್ರಾಮದೊಳಗೆ ನೀವು ಆ ಬಿಂಗದೊಟ್ಟಿಯಲ್ಲಿ ನೋಡಿದ್ದೀರೋ ಇಲ್ಲವೋ ಬರೀ ಕಾಂಪೌಂಡ್ ಕಟ್ಟಿಬಿಟ್ಟಿದ್ದಾರೆ. ಆಮೇಲೆ ಹರಿದುಒಡೆದಿದ್ದಾರೆ. ಅದು ಏನು ಇರದಿದ್ದರೂ, ಅದು ಸರಿಯಿಲ್ಲ ಎಂದು ಎನ್ನಬಹುದು ಏನಿರದಿದ್ದರೂ ಆರಾಮವಾಗಿ ಆ ಕೆಲಸ ಮಾಡಿಕೊಂಡು ಹೋಗಲಿಕ್ಕೆ ನಮ್ಮ ಸಹೋದರಿಯವರಿಗೆ, ತಾಯಂದಿರಿಗೆ ಸಾಕಷ್ಟು ಅನುಕೂಲವಾಗುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : ಸನ್ಮಾನ್ಯ ಪಾಟೀಲರೆ ಒಂದು ನಿಮಿಷ. ತಮಗೂ ಗೊತ್ತಿದೆ ಧಾರವಾಡ ಜಿಲ್ಲೆಯಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಪ್ರತಿ ಪಂಚಾಯಿತಿಯಲ್ಲೂ ಕೂಡ ಹೆಣ್ಣುಮಕ್ಕಳಿಗೆ ಊರಿನೊಳಗೆ ಶೌಚಾಲಯವನ್ನು ಕಟ್ಟಬೇಕೆಂದು ಮಾಡಿ, ಪಾಯಿಖಾನೆಗಳನ್ನು ಮಾಡಿದ್ದೇವೆ. ತಾವು ಸಹ ಹೋಗಿ ನೋಡಿರಬೇಕು. ಈಗಾಗಲೇ ಅದು ಪ್ರಾರಂಭವಾಗಿವೆ. ಆ ರೀತಿ ಮಾಡಿದರೆ ಆ ಗೊಬ್ಬರವನ್ನೂ ಕೂಡ ನಾವು ಉಪಯೋಗಿಸಬಹುದು ಮತ್ತು ಹೊಲಸಾಗುವುದಿಲ್ಲ ಬಹಳ ಚೆನ್ನಾಗಿ ನಡೆಯುತ್ತದೆ, ಅದೂ ಕೂಡ ನಮ್ಮ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೇವೆ, ತಮಗೂ ಗೊತ್ತಿದೆ.

ಶ್ರೀ ಜೆ. ಹೆಚ್. ಪಟೇಲ್ : ಒಂದು ಹಳೆಯ ಕಥೆ ಇದೆ, ಯಾರೂ ಅಶ್ಲೀಲ ಎಂದು ತಿಳಿದುಕೊಳ್ಳಬಾರದು. ಕ್ರಿಶ್ಚೇವ್ ಇಂಡಿಯಾ ದೇಶಕ್ಕೆ ಬಂದಾಗ ಬೆಂಗಳೂರಿನಿಂದ ಮೈಸೂರಿಗೆ ಕಾರಿನಲ್ಲಿ ಹೋಗೋಣ ಎಂದು ಹೇಳಿದರು ಏಕೆಂದರೆ ನಾನು ಆ ಪ್ರದೇಶ ನೋಡಬೇಕು, ಲ್ಯಾಂಡ್ ಸ್ಕೇಪ್ ಹೇಗಿದೆ ಎಂದು ನೋಡಬೇಕು ಎಂದು ಹೇಳಿದ್ದಕ್ಕೆ ನೆಹರೂರವರು ಅವರನ್ನು ಬೆಂಗಳೂರಿನಿಂದ ಮೈಸೂರಿಗೆ ಕರೆದುಕೊಂಡು ಹೋದರು. ಬೆಂಗಳೂರು ಆದ ತಕ್ಷಣ ಒಂದು ಹಳ್ಳಿ, ಅಲ್ಲಿ ಬೆಳಿಗ್ಗೆ ಮುಂಜಾನೆಯೆ ಹೊರಟಿದ್ದವರು ಆ ದೃಶ್ಯವನ್ನು ನೋಡಿದರು. ನೋಡಿ ಏನು ಇಷ್ಟು ವರ್ಷವಾಗಿದೆ, ಈ ಸಮಸ್ಯೆಯನ್ನು ನಿಮಗೆ ಬಗೆಹರಿಸುವುದಕ್ಕೆ ಆಗಿಲ್ಲವೆ ಎಂದರು. ಇಲ್ಲ ನಿಮ್ಮ ಸಿಸ್ಟಂ ಬೇರೆ, ನೀವು ಜನರನ್ನು ಹೆದರಿಸಬಲ್ಲಿರಿ, ಅಲ್ಲ ಹೆದರಿಸುವುದಲ್ಲ ಬೇರೆ ವ್ಯವಸ್ಥೆಯನ್ನಾದರೂ ಮಾಡಿಕೊಡಬೇಕಾಗಿತ್ತು, such a waste of energy and such an ugly habit ಎಂದು ಅವರು ಹೇಳಿದರು. ಅವರು ಆಯಿತು ನೋಡೋಣವೆಂದು ಹೇಳಿದರು. ಇವರು ರಷ್ಯಾಕ್ಕೆ ಹೋಗಿದ್ದರು. ಅಲ್ಲಿ ಟಾಸ್ಕೆಂಟ್‌ನಿಂದ ಸಮರ್‌ಖಂಡ್‌ಗೆ ಕಾರಿನಲ್ಲಿ ಹೋಗಬೇಕಾದರೆ ಅಲ್ಲಿ ಒಬ್ಬರು ಕುಳಿತಿದ್ದರು ಅದನ್ನು ನೆಹರೂರವರು ನೋಡಿ ನಿಮ್ಮ ದೇಶದಲ್ಲಿ ಏನು ನಡೆದಿದೆ ಎಂದು ಕೇಳಿದರು. ಆಗ ಅವರು shoot him down ಎಂದು ಹೇಳಿದರು. ಆನಂತರ ನಹರುರವರು ನಾನೇ ಒಬ್ಬನನ್ನು ಕೊಲ್ಲಿಸಿದ ಹಾಗೆ ಆಯಿತಲ್ಲಾ, ಎಂದು ನೊಂದರು, ಇವರು ಎಲ್ಲಾ ವಾಪಸ್ಸು ಬಂದರು. ಆನಂತರ ಅವ ಅಲ್ಲಿ ಒಬ್ಬ ಕುಳಿತಿದ್ದದ್ದು "Sir, he is an Indian" ಎಂದು ಹೇಳಿ ತಿಳಿಸಿದರು.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಮ್ಮ ತಾತ ಮತ್ತು ಮುತ್ತಾತಂದಿರ ಕಾಲದಿಂದಲೂ ಇದೇ ರೂಢಿಯಾಗಿದೆ. ನಮ್ಮ ಪುಣ್ಯಕ್ಕೆ ಪ್ರಕೃತಿ ಅನುಕೂಲಕರವಾಗಿದೆ. ಇಲ್ಲಿ ಬಿಸಿಲು ಇರುವುದರಿಂದ ನಾವು ಮಾಡುವಂತಹ ಅನಾಹುತಗಳು ಬಹಳಷ್ಟು ಕಡಿಮೆಯಾಗುತ್ತಾ ಇದೆ. ಈಗ ಎಲ್ಲರಲ್ಲೂ ಈ ಒಂದು ಅವೇರ್‌ನೆಸ್ ಬರುತ್ತಾ ಇದೆ. ನಾವು ಶೌಚಾಲಯಗಳನ್ನು ಮಾಡಿಕೊಳ್ಳಬೇಕೆನ್ನುವ ಅವೇರ್‌ನೆಸ್ ಬರುತ್ತಾ ಇದೆ. ಆದರೆ ಸಾರ್ವಜನಿಕ ಶೌಚಾಲಯಗಳನ್ನು ಕ್ಲೀನ್ ಆಗಿ ಇಟ್ಟುಕೊಳ್ಳ ಬೇಕೆನ್ನುವಂತಹ ಅವೇರ್‌ನೆಸ್ ಇನ್ನೂ ಬರುತ್ತಿಲ್ಲ. ಅದಕ್ಕೆ ಸಾರ್ವಜನಿಕ ಶೌಚಾಲಯವೆಂದು ಮಾಡುವುದಕ್ಕೆ ಬದಲಾಗಿ ನಾಲ್ಕೈದು ಕುಟುಂಬಗಳಿಗೆ ಒಂದು ಶೌಚಾಲಯವನ್ನು ಕೊಟ್ಟು, ಇದು ನಿಮ್ಮ ಕುಟುಂಬಗಳ ಜವಾಬ್ದಾರಿ, ನಿಮ್ಮ ಆಸ್ತಿ ಇದನ್ನು ನೀವು ಸರಿಯಾಗಿ ಇಟ್ಟುಕೊಳ್ಳಿ ಮತ್ತು ಬೆಳೆಸಿಕೊಳ್ಳಿ ಎನ್ನುವಂತಹ ಒಂದು ವ್ಯವಸ್ಥೆಯನ್ನು ಮಾಡಿದರೆ ಅನುಕೂಲವಾಗುತ್ತದೆನ್ನುವ ಮಾತನ್ನು ತಮಗೆ

ಹೇಳುತ್ತೇನೆ. ಇದರ ಜೊತೆಗೆ ಮಾನ್ಯ ಎಸ್. ಎಸ್. ಪಾಟೀಲ್‌ರವರು ಹಗೆ ಪೈಕಾನಿಯ ಬಗ್ಗೆ ಹೇಳಿದರು. ಆ ಹಗೆ ಪೈಕಾನಿಯನ್ನು ಸ್ವಚ್ಛವಾಗಿ ಇಡುವುದಕ್ಕೆ ಈ ವರ್ಮಿ ಕಲ್ಚರ್ ಟೆಕ್ನಿಕಲ್ ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ. ಈಗ ಎರೆ ಹುಳು ಬಿಟ್ಟು ಮಳೆಹುಳದಿಂದ ಇದನ್ನು ಕ್ಲೀನ್ ಮಾಡುವುದಕ್ಕೆ ಸಾಧ್ಯವಿದೆ. ಪುಣೆಯಲ್ಲಿ ದಿವಾಲ್‌ಕರ್‌ರವರು, ಪ್ರೊಫೆಸರ್ ಬಿಡೆಯವರು, ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿರುವಂತಹ ಶ್ರೀ ರಾಧಕಾಳೆಯವರು ಇದ್ದಾರೆ. ಅವರನ್ನು ಕೇಳಿದರೂ ಹೇಳುತ್ತಾರೆ. ಅದು ನಾಲ್ಕು ದಿವಸದೊಳಗೆ ವಾಸನೆಯೂ ಇರುವುದಿಲ್ಲ. ನಾಲ್ಕು ದಿವಸಗಳಲ್ಲಿ ಗೊಬ್ಬರವಾಗುತ್ತದೆ. ನಾವು ಇದರ ಉಪಯೋಗ ಮಾಡಿಕೊಂಡೆವೆಂದರೆ ಸಾಕಷ್ಟು ಸಮಸ್ಯೆಗಳು ಬಗೆಹರಿಯುತ್ತವೆ. ಆದುದರಿಂದ, ದಯಮಾಡಿ ಇದನ್ನು ಉಪಯೋಗ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಲು ಪ್ರತಿ ಗ್ರಾಮದಲ್ಲೂ ಡೆಮಾನ್‌ಸ್ಟ್ರೇಷನ್ ಮಾಡಿ ಈ ವರ್ಮಿ ಕಲ್ಚರ್ ಟೆಕ್ನಾಲಜಿ ಉಪಯೋಗ ಮಾಡುವಂತಹ ಒಂದು ಶೌಚಾಲಯವನ್ನು ಯಾವುದಾದರೂ ಮನೆಯಲ್ಲಿ ಅಥವಾ ಸ್ವಸ್ತಿ ಗ್ರಾಮದಲ್ಲೂ ತಂದರೂ ಪರವಾಗಿಲ್ಲ. ಒಟ್ಟಿನಲ್ಲಿ ಜನರಿಗೆ ನೋಡಿದ ತಕ್ಷಣ ಇದರಿಂದ ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ತಿಳಿದುಕೊಳ್ಳಬೇಕು. ನಾವು ಹೇಳುವುದು ನೀವು ಭಾಷಣ ಮಾಡುವುದು, ವೀಡಿಯೊ ತೋರಿಸುವುದು, ಅದು ಅಷ್ಟು ಪರಿಣಾಮಕಾರಿ ಎನಿಸುವುದಿಲ್ಲ. ಆದುದರಿಂದ, ತಾವು ಇದನ್ನು ಮಾಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ತಿಪ್ಪೆಗುಂಡಿ ಏನು ಇರುತ್ತದೆ, ಇದನ್ನು ಊರ ಹೊರಗೆ ಹಾಕುವಂತಹ ರೀತಿಯಲ್ಲಿ ಏನಾದರೂ ವ್ಯವಸ್ಥೆಯನ್ನು ಮಾಡಬೇಕು. ಇದನ್ನು ಕಾಂಪೋಸ್ಟ್ ಮಾಡುವಂಥಾದ್ದೊ ಅಥವಾ ಬಯೋ ಗ್ಯಾಸ್‌ಗೋ ಅದನ್ನು ಉಪಯೋಗ ಮಾಡಿಕೊಳ್ಳಬಹುದು ಇನ್ನು ತಿಪಟೂರು ಹತ್ತಿರ ಬಿ.ಐ.ಐ.ಎಫ್‌ನವರು ಒಂದು ಗ್ರಾಮದಲ್ಲಿ ಮಾಡಿದ್ದಾರೆ. ಲೈಟ್, ಕುಡಿಯುವ ನೀರು ಎತ್ತಲು, ಜನರೇಟ್ ಸೆಟ್‌ಗಳಿಗೆ ಅಳವಡಿಸಿದ್ದಾರೆ. ಅದಕ್ಕೆ ನಾವು ಕಮ್ಯುನಿಟಿ ಬಯೋ ಗ್ಯಾಸ್ ಆಗಬೇಕೆಂದರೆ ಆ ಗ್ರಾಮದ ಕಮ್ಯುನಿಟಿಯೊಳಗೆ ಒಂದು ಹೊಂದಾಣಿಕೆ ಮನೋಭಾವ ಇರಬೇಕು. ದುರ್ದೈವದಿಂದ ಬಹಳ ಹಿಂದಿನಿಂದಲೂ ಪ್ರತಿ ಗ್ರಾಮದಲ್ಲೂ ರಾಜಕೀಯವನ್ನು ತಂದು ಆ ಗ್ರಾಮಸ್ಥರನ್ನು ಹೊಡೆದು ಈಗ ಕಳೆದ 4-5 ವರ್ಷಗಳಿಂದ ಗ್ರಾಮ ಪಂಚಾಯತ್ ಚುನಾವಣೆಯನ್ನು ತಂದು ಈ ಪಕ್ಷಪಾತ ಚುನಾವಣೆಯಾಗದೇ ಇರುವುದರಿಂದ ವೈಷಮ್ಯ ಸ್ವಲ್ಪ ಕಡಿಮೆಯಾಗಿದೆ. ಅದಕ್ಕೆ ಬಹುತೇಕ ಗ್ರಾಮಪಂಚಾಯತ್‌ನಲ್ಲಿ ಪಕ್ಷಪಾತವೆಂಬುದನ್ನು ತೆಗೆದಿದ್ದೀರಿ, ಈ ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಪಕ್ಷ ತೆಗೆದುಬಿಟ್ಟರೆ ಬಹಳ ಅನುಕೂಲವಾಗುತ್ತದೆ. ಅಲ್ಲಿ ಪಾಲಿಸಿಯ ನಿಲುವು ತೆಗೆದುಕೊಳ್ಳುವಂಥಾದ್ದು ಏನೂ ಇಲ್ಲ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಯಾವ ಯಾವ ನೀತಿಯ ಮೇಲೆ ಯಾವ್ಯಾವ ನಿರ್ಧಾರವನ್ನು ಕೈಗೊಂಡು ಹಣಕಾಸಿನ ಲಭ್ಯ ಮಾಡುತ್ತಾರೊ, ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತಹ ಜವಾಬ್ದಾರಿ ಮಾತ್ರ ಪಂಚಾಯತ್‌ಗಳಿಗೆ ಇರುವುದರಿಂದ ಪಕ್ಷದ ಆಧಾರದ ಪಂಚಾಯತ್ ವ್ಯವಸ್ಥೆ ಸೂಕ್ತವೇ ? ಎನ್ನುವುದನ್ನು ನಾವು ವಿಚಾರ ಮಾಡಬೇಕು. ನಾವೆಲ್ಲರೂ ಅಸೆಂಬ್ಲಿ ಚುನಾವಣೆ ಮತ್ತು ಪಾರ್ಲಿಮೆಂಟ್ ಚುನಾವಣೆ ನಮಗೆ ಅನುಕೂಲವಾಗುತ್ತದೆಂದು ನಾವು ಬೇರೆ ಚುನಾವಣೆಗಳ ಅನುಕೂಲ ಅಷ್ಟಕ್ಕೆ ನಾವು ಇಟ್ಟುಕೊಂಡರೆ ಅದು ಕರ್ನಾಟಕ ರಾಜ್ಯಕ್ಕೆ ಅನುಕೂಲವಾಗುತ್ತದೆಯೋ ಹೇಗೆ ಎನ್ನುವುದನ್ನು ನಾವು

ವಿಚಾರ ಮಾಡುವುದಕ್ಕೆ ಮನಸ್ಸು ಮಾಡಬೇಕು. ಅದಕ್ಕೆ ಸ್ಥಳೀಯ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಮಟ್ಟಕ್ಕೂ ಸ್ಥಳೀಯ ಸಂಸ್ಥೆಯಲ್ಲಿ ರಾಜಕೀಯ ಪಕ್ಷಗಳು ಬರದ ಹಾಗೆ ಮಾಡಿದರೆ ಒಳ್ಳೆಯ ಜನರು ಬರುತ್ತಾರೆ. ನಾವು ರಾಜಕೀಯ ಪಕ್ಷಗಳು ಬಿಟ್ಟರೆ, ಸಮಾಜದಲ್ಲಿ ಬಹಳ ಜನರು ಪ್ರೋತ್ಸಾಹಿತರಾಗಿ ಅಧಿಕಾರ ಸ್ಥಾನಕ್ಕೆ ಬರುವಂಥಾದ್ದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅದು ಪಕ್ಷದ ಆಧಾರದ ಮೇಲೆ ನಡೆಯಬಾರದು ಎಂದು ನಾವು ಹೇಳಿದ್ದೇವೆ, ಎ.ಪಿ.ಎಂ.ಸಿಯನ್ನು ಸಹ ಪಕ್ಷದ ಆಧಾರದ ಮೇಲೆ ನಡೆಸಲಿಲ್ಲ. ಅಸೆಂಬ್ಲಿಯಲ್ಲಿ ನಮಗೆ ಇಷ್ಟು, ನಿಮ್ಮದು ಇಷ್ಟು ಬಂತು ಎಂದು ನಾವು ಲೆಕ್ಕ ಮಾಡಿಕೊಂಡೆವು. ಆದರೆ ಹಳ್ಳಿಯೊಳಗೆ ಹೇಳಿಕೊಳ್ಳುತ್ತಾರೆ, ಮತ್ತೆ ಪಕ್ಷದ ಆಧಾರದ ಮೇಲೆ ನಡೆಸಿ ಬಿಡುತ್ತಾರೆ. ಇಲ್ಲಿ ಪಕ್ಷದ ಟೀಕೆಗೆ ಅರ್ಥವಿರುವುದಿಲ್ಲ.

ಶ್ರೀ ಬಿ. ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಎಲ್ಲರೂ ನೀತಿ ಹೇಳುವುದು, ಸಹಕಾರ ಸಂಘಗಳಲ್ಲಿ ಎಲ್ಲರೂ ನಾಮಿನೇಟ್ ಮಾಡುತ್ತಾ ಹೋಗುತ್ತಾರೆ, ನೀತಿ ಮಾತ್ರ ಬಹಳ ಮಾತನಾಡುತ್ತಾರೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗ ಪಂಚಾಯತ್ ರಾಜ್ ಚುನಾವಣೆಯಾದಾಗ ಎಷ್ಟು ಗೊಂದಲವಾಗುತ್ತದೆ, ಗಲಾಟೆಯಾಗುತ್ತದೆ, ಎಷ್ಟು ಎ.ಪಿ.ಎಂ.ಸಿ. ಚುನಾವಣೆಯಲ್ಲಿ ಆಗುವುದಿಲ್ಲ, ಏಕೆಂದರೆ ಆ ತೀವ್ರತೆ ಇರುವುದಿಲ್ಲ. ಮೊದಲಿನಿಂದಲೂ ಯಾರೂ ಗುಂಪು ಕಟ್ಟಿಕೊಂಡು ಬಂದಿರುತ್ತಾರಲ್ಲಾ ಅಂಥವರು ಇದ್ದಲ್ಲಿ ಆ ಗುಂಪಿನ ಆಧಾರದಿಂದ ಆಗುತ್ತದೆ. ಇದು ಹೋಗಬೇಕಲ್ಲಾ, ಇದನ್ನು 10-15 ವರ್ಷಗಳ ಕಾಲ ಚಾಲ್ತಿಯಲ್ಲಿ ತಂದು ಬಿಟ್ಟರೆ ಈ ಸ್ಥಳೀಯ ಸಂಸ್ಥೆಗಳಲ್ಲಿ ಪಕ್ಷ ಎನ್ನುವುದು, ಗುಂಪು ಎನ್ನುವುದು ಹೋಗುತ್ತದೆ. ಯೋಗ್ಯರಾಗಿರುವಂಥವರು ಬರತಕ್ಕಂಥದ್ದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಿಮ್ಮ ಸರ್ಕಾರ ಅಧಿಕಾರದಲ್ಲಿದೆ ನೀವು ಮಾಡಬೇಕೆಂದಲ್ಲ. ನೀವು ಈಗ ಎಲ್ಲಾ ಪಕ್ಷಗಳವರನ್ನೂ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಒಂದು ಮೀಟಿಂಗ್ ಕರೆದು ಎಲ್ಲರ ಸಹಮತವನ್ನು ಪಡೆದುಕೊಂಡು ಜಾರಿಗೆ ತಂದರೆ ಮುಂದೆ ಯಾರೇ ಅಧಿಕಾರಕ್ಕೆ ಬೇರೆ ಪಕ್ಷದವರು ಬಂದರೂ ಸಹಿತ ಬದಲು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಸಮಾಜಕ್ಕೆ ಒಳ್ಳೆಯದಾಗುವಂಥಾದ್ದನ್ನು ನಾವು ಎಲ್ಲರೂ ಕೂಡಿ ಮನಸ್ಸು ಮಾಡೋಣ. ನಾವು ಎಲ್ಲವನ್ನೂ ರಾಜಕೀಯ ದೃಷ್ಟಿಯಿಂದ ಏಕೆ ನೋಡುವುದು ? ನಾವು ಈ ಸ್ಥಾನಮಾನಗಳು ಬೇಕೆಂದು ಹೇಳುತ್ತೇವೆ. ನಮ್ಮ ಕಣ್ಣ ಮುಂದೆ ಇರುವಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಈ ಸ್ಥಾನಮಾನಗಳು ಬೇಕೆಂದು ಹೇಳುತ್ತೇವೆ. ಇದು ಒಂದು ಸಾಧನಕ್ಕೆ ಪರಿವರ್ತನೆಯಾಗಬೇಕೇ ಹೊರತು ಅದೇ ಗುರಿಯಾಗಬಾರದು. ನಾವು ಈ ಕುರ್ಚಿಗೆ ಬರುವುದೇ ನಮ್ಮ ಗುರಿ, ಈ ಸಮಾಜ ಹಾಳಾದರೆ ಆಗಲಿ ಎನ್ನುವಂಥಾದ್ದು, ಈ ಕುರ್ಚಿ ಸಿಕ್ಕರೆ ಸಾಕು ಎನ್ನುವಂಥಾದ್ದು ಈ ಮನೋಭಾವ ಬೇಡ. ಅದು ಬಿಜೆಪಿ, ಕಮ್ಯುನಿಸ್ಟ್ ಯಾರಿಗೂ ಬೇಡ. ನಾವೆಲ್ಲರೂ ಕುಳಿತು ವಿಚಾರ ಮಾಡಿ ಕೆಲವು ಸಮಸ್ಯೆಗಳು ಯಾವು ಇವೆ. ಪರಿಹಾರವೇನು ಎನ್ನುವುದನ್ನು ನಾವು ಪಕ್ಷಾತೀತವಾಗಿ, ಪಕ್ಷದ ಪರಿದಿಯನ್ನು ಧಾಟಿ ನಿಂತು ನಾವು ನಿರ್ಣಯವನ್ನು ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆ ರೂಪಿತವಾದರೆ ಒಳ್ಳೆಯದೆಂದು ನಾನು

ಹೇಳುತ್ತೇನೆ. ಅದಕ್ಕೆ ದಯಮಾಡಿ ಸ್ಥಾನೀಯ ಸಂಸ್ಥೆಗಳಲ್ಲಿ ಇದನ್ನು ತಾವು ಮಾಡಿದರೆ ಅನುಕೂಲವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ಜವಾಹರ್ ರೋಜ್‌ಗಾರ್ ಯೋಜನೆ, ಎಂಪ್ಲಾಯ್‌ಮೆಂಟ್ ಅಶ್ಯೂರೆನ್ಸ್ ಸ್ಕೀಂ ಇದರ ಅಡಿಯಲ್ಲಿ ಪ್ರತಿ ಗ್ರಾಮಕ್ಕೂ ಸಾಕಷ್ಟು ಹಣವನ್ನು ಇವತ್ತು ಕೊಡುತ್ತಾ ಇದ್ದಾರೆ. ಆದರೆ ನಾವು ಗೈಡ್ ಲೈನ್ಸ್‌ನಲ್ಲಿ ಏನು ಹೇಳಿದ್ದೇವೆ. ಜವಾಹರ್ ರೋಜ್‌ಗಾರ್ ಯೋಜನೆ ಮತ್ತು ಎಂಪ್ಲಾಯ್‌ಮೆಂಟ್ ಅಶ್ಯೂರೆನ್ಸ್ ಸ್ಕೀಂನಲ್ಲಿ ಹಣವನ್ನು ಬಳಸಿಕೊಳ್ಳುವಾಗ ಗುತ್ತಿಗೆದಾರರನ್ನು ನೇಮಿಸಿಕೊಳ್ಳಬಾರದೆಂದು ಕೇಂದ್ರ ಸರ್ಕಾರದ ಗೈಡ್ ಲೈನ್ಸ್ ಇದೆ ಮತ್ತು ರಾಜ್ಯ ಸರ್ಕಾರದ್ದು ಗೈಡ್ ಲೈನ್ಸ್ ಇರಲೇ ಬೇಕಾಗುತ್ತದೆ. ಆದರೆ, ವಾಸ್ತವವಾಗಿ ಆಗುತ್ತಾ ಇರುವುದೇನು? ನಮಗೆ ಎಲ್ಲರಿಗೂ ಗೊತ್ತಿದೆ. ಜೆ.ಆರ್.ವೈ. ಮತ್ತು ಇ.ಎ.ಎಸ್ ಫಂಡ್ ಕೆಳಗಡೆ ನಾವು ಏನೇನು ಪ್ರೋಗ್ರಾಂ ತೆಗೆದುಕೊಂಡಿರುತ್ತೇವೆ. ಅದು ರಸ್ತೆ ಮಾಡುವುದರಿಂದ ಹಿಡಿದು ಶಾಲಾ ಕಟ್ಟಡಗಳು, ಅಂಗನವಾಡಿ ಕಟ್ಟುವುದು, ಮತ್ತೆ ಯಾವುದೇ ಇರಲಿ ಎಲ್ಲದರಲ್ಲೂ ಕಂಟ್ರಾಕ್ಟ್‌ದಾರರು ಇರುತ್ತಾರೆ. ಆದರೆ ಕಾಗದ ಪತ್ರದಲ್ಲಿ ಎಲ್ಲೂ ಇರುವ ಹಾಗೆ ಇಲ್ಲ. ಅವರು ಕೆಲಸ ಸರಿಯಾಗಿ ಮಾಡಿಲ್ಲವೆಂದರೆ ಅವರನ್ನು ಹೊಣೆಗಾರರನ್ನಾಗಿ ಮಾಡುವಂತಹ ಪರಿಸ್ಥಿತಿ ಇಲ್ಲವೇ ಇಲ್ಲ. ಅದಕ್ಕೆ ದಯಮಾಡಿ ನೀವು ಕೇಂದ್ರಸರ್ಕಾರಕ್ಕೆ ಮನವೊಲಿಸಬೇಕು. ಇವತ್ತು ಮಳೆಯು ಸರಿಯಾಗಿ ಬಂದಿತೆಂದರೆ ಯಾವ ಗ್ರಾಮೀಣ ಪ್ರದೇಶಗಳಿಗೂ ಕೆಲಸದ ಅವಶ್ಯಕತೆ ಇದೆ ಎಂದು ನಾನು ತಿಳಿದುಕೊಂಡಿಲ್ಲ. ಮಳೆ ಚೆನ್ನಾಗಿ ಆಯಿತೆಂದರೆ ನಾವು ಆಹಾರವನ್ನು ತರುತ್ತೇವೆ. ಮಳೆ ಇಲ್ಲದಾಗ ಜನರಿಗೆ ಉದ್ಯೋಗ ಕೊಡಬೇಕಾಗುತ್ತದೆ. ಆಗ ಅದನ್ನು ನಾನು ಒಪ್ಪುತ್ತೇನೆ. ಇಲ್ಲದಿದ್ದರೆ ಈ ಉದ್ಯೋಗ ಸೃಷ್ಟಿಯ ಸಲುವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸುವ ಸಲುವಾಗಿ ಎಂದು ಜೆ.ಆರ್.ವೈ ಮತ್ತು ಇ.ಎ.ಎಸ್. ಪ್ರೋಗ್ರಾಂ ಅನ್ನು ನಾವು ಏನು ಕನ್‌ಸೀವ್ ಮಾಡಿದ್ದೇವೆ. It is totally a wrong approach. ನಮಗೆ ಬೇಕಾದಂಥ ಅಸೆಟ್ಸ್ ಕ್ರಿಯೇಟ್ ಮಾಡುವುದಕ್ಕೆ ಅನುಕೂಲವಾಗುತ್ತಾ ಇದೆ. ನಮ್ಮ ಊರಿನಲ್ಲಿ ಅಸ್ಪತ್ರೆಯನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ, ನಮ್ಮ ಊರಿನಲ್ಲಿ ಶಾಲೆ, ಅಂಗನವಾಡಿ ಕಟ್ಟುವುದಕ್ಕೆ ರಸ್ತೆಗಳಿಗೆ ಅನುಕೂಲವಾಗುತ್ತದೆಂದು ಈ ಹಣವನ್ನು ಪೂರ್ಣ ಉಪಯೋಗ ಮಾಡಿಕೊಳ್ಳುವ ದೃಷ್ಟಿಯಿಂದ ಈ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇವೆ. ಇಷ್ಟು ಮಾನವ ದಿನಗಳನ್ನು ಸೃಷ್ಟಿ ಮಾಡಿದ್ದೇವೆ, ಇಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸಿದ್ದೇವೆ ಎಂದು ಗ್ರಾಮ ಪಂಚಾಯತ್, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ನವರು ವಿವರವನ್ನು ಸರ್ಕಾರಕ್ಕೆ ಕಳುಹಿಸುತ್ತದೆ. ಇದನ್ನು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತದೆ. ಅಲ್ಲಿ ಕೇಂದ್ರ ಸರ್ಕಾರದವರು ಬಹುತೇಕ ಈ ಉದ್ಯೋಗ ಅವಶ್ಯಕವಿದೆ ಎಂದು ಅವರು ತಿಳಿದುಕೊಳ್ಳುತ್ತಾರೆ. ಹೀಗೆ ಇಲ್ಲಿ ಒಂದು ವಿಷವೃತ್ತ ಪ್ರಾರಂಭವಾಗುತ್ತದೆ, ಹೀಗಾಗಿ ಇಲ್ಲಿ ಗೋಲ್‌ಮಾಲ್ ಆಗುತ್ತದೆ. ಇದಕ್ಕೆ ಯಾರನ್ನು ಜವಾಬ್ದಾರಿಯನ್ನಾಗಿ ಮಾಡುವಂತಹ ಪರಿಸ್ಥಿತಿಗೆ ನಾವು ಬಂದಿದ್ದೇವೆ. ನಮ್ಮ ಕಣ್ಣ ಎದುರು ಬಹಳಷ್ಟು ಹಣ ಸೋರಿ ಹೋಗುತ್ತಿದೆನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಆದರೆ ನಾವು ಯಾರು ಮಾತನಾಡಲಾರದಂತಹ ಪರಿಸ್ಥಿತಿ ಬಂದಿದೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಸಭಾಪತಿಯವರೆ, ನಮ್ಮಲ್ಲಿ ಇಷ್ಟು ವಾಸ್ತವಿಕವಾಗಿ ನಡೆಯುತ್ತದೆ ಅದು ಸಂಪೂರ್ಣವಾದ ಸತ್ಯ. ಇನ್ನು ಕೆಲವು ಕಡೆ, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ,

ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳಲ್ಲಿ 26 ರೂಪಾಯಿಗಳಿಗೆ ಯಾರೂ ಕೂಲಿಗಳು ಬರುವುದಿಲ್ಲ. ಅಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನಿಷ್ಠವೆಂದರೂ 80-100-120 ರೂಪಾಯಿಗಳು ನಡೆಯುತ್ತಿದೆ. ಆದುದರಿಂದ, ಈ ರೇಟಿನಲ್ಲಿ ಮಾನವ ಸಂಪನ್ಮೂಲ ಮಾಡಿದ್ದೇವೆ, ಮಿನಿಮಮ್ ವೇಜ್ ಎನ್.ಎಂ.ಆರ್ ಬರೆದರೂ ಕೂಡ ಇಬ್ಬಿಬ್ಬರೂ ಜನರನ್ನು ಬರೆಸಿ ಸುಳ್ಳು ಪತ್ರವನ್ನು ತಯಾರು ಮಾಡಿಸುತ್ತಾರೆ, ಅದು ತಪ್ಪು. ಅದನ್ನು ಬಿಟ್ಟವೆಂದರೆ ಅಲ್ಲಿ ಬರುವಂತಹ ಹಣವೂ ಸಿಕ್ಕುವುದಿಲ್ಲ. ಅದನ್ನು ಬರೆಸುವುದಕ್ಕೆ ಹೋದರೆ ನಾವೇ ಸುಳ್ಳು ಕಾಗದ ಪತ್ರವನ್ನು ಮಾಡಿಸಿದ ಹಾಗೆ ಆಗುತ್ತದೆ. ಆದುದರಿಂದ, ನಿಜವಾಗಿ ಇದನ್ನು ಮನವರಿಕೆ ಮಾಡಿಕೊಟ್ಟು ಬದಲಾವಣೆ ಮಾಡುವಂತಹ ವಿಷಯವಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಇನ್ನೊಂದು ತೊಂದರೆ ಏನಿದೆ ಎಂದರೆ, ಅದು ದಕ್ಷಿಣ ಕನ್ನಡ ಜಿಲ್ಲೆಯಾಗಬಹುದು ಅಥವಾ ಮಲೆನಾಡು ಜಿಲ್ಲೆಯಾಗಬಹುದು ಈ ವರ್ಷದ ಮುನ್ನೂರು ಅರವತ್ತೈತು ದಿವಸವು ಇನ್ನೂರ ಎಂಭತ್ತು, ತೊಂಭತ್ತು ರೂಪಾಯಿಗಳ ಕೂಲಿ ಸಿಗುವುದಿಲ್ಲ. ಏನಾಗುತ್ತದೆಂದರೆ ಪ್ರತಿ ಪ್ರದೇಶದಲ್ಲೂ ಒಂದೊಂದು ರೀತಿಯಲ್ಲಿ ನಿಮ್ಮ ಬಯಲುನಾಡಿನಲ್ಲಿ 12 ತಿಂಗಳು ಮಳೆಯಿರುವುದಿಲ್ಲ, ಬೇರೆ ಬೇರೆ ಕೃಷಿ ಕೆಲಸವನ್ನು ಇದರಲ್ಲಿ ಮಾಡುವುದಕ್ಕಾಗುವುದಿಲ್ಲ. ಮಲೆನಾಡು ಪ್ರದೇಶದಲ್ಲಿ ಮಳೆ ಬೀಳುವಂಥ ಸಮಯದಲ್ಲಿ ಯಾವ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಈ ಕೆಲಸ ಏನಾಗಿದೆ ಎಂದರೆ, ಉದಾಹರಣೆಗೆ, ಇಎಸ್ ಪ್ರೋಗ್ರಾಂ ಎಂದು ಇಟ್ಟುಕೊಳ್ಳಿ ಆಗಸ್ಟ್ ಕೊನೆಯಲ್ಲಿದ್ದೇವೆ ಇವತ್ತಿನವರೆವಿಗೂ ಕ್ರಿಯಾಯೋಜನೇ ಎಲ್ಲೂ ಮಂಜೂರಾಗಿಲ್ಲ, ಆ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೇವೆ? ಆದುದರಿಂದ, ವರ್ಷದ ಪ್ರಾರಂಭದಲ್ಲೇ ಆ ಕ್ರಿಯಾಯೋಜನೆಯನ್ನು ಮಂಜೂರು ಮಾಡಿಕೊಂಡು, ಪ್ರತಿ ಪಂಚಾಯಿತಿಯಾಗಬಹುದು, ತಾಲ್ಲೂಕು ಪಂಚಾಯಿತಿ ಯಾಗಬಹುದು, ಎಲ್ಲೆಲ್ಲಿ ಈ ಉದ್ಯೋಗದ ಅವಶ್ಯಕತೆ ಕಂಡುಬರುತ್ತದೆ, ತತ್‌ಕ್ಷಣ ಆ ಉದ್ಯೋಗವನ್ನು 15, 20 ಜನಕ್ಕೆ ಕೊಡುವಂಥ ಕೆಲಸವಾದರೆ ಇದರ ಪ್ರಯೋಜನ ಸಿಗುತ್ತದೆ. ಇಲ್ಲದೆ ಹೋದರೆ ತಾವು ಹೇಳಿದಂತೆ ವರ್ಷದ ಕೊನೆಯಲ್ಲಿ ನಾವು ಹಣವನ್ನು ಬಳಸಿಕೊಳ್ಳಲೇಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಕಾಗೋಡು ತಿಮ್ಮಪ್ಪನವರೆ, ಈಗ ತಾವು ಹೇಳಿದ್ದುದು ನಿಜವಾದದ್ದೆ. ಆದರೆ ಇಎಸ್ ಪ್ರೋಗ್ರಾಂನಲ್ಲಿ ಈ ಪ್ರಶ್ನೆ ಇಲ್ಲ. ನೀವು ಉದ್ಯೋಗ ಭರವಸೆ ಯೋಜನೆಯಲ್ಲಿ ಹತ್ತು ಜನಕ್ಕಿಂತ ಹೆಚ್ಚು ಜನ ನನಗೆ ಉದ್ಯೋಗ ಕೊಡಬೇಕೆಂದು ಕೇಳಿದ ಕೂಡಲೆ ಅಲ್ಲಿರುವಂಥ ಕ್ಷೇತ್ರಾಭಿವೃದ್ಧಿ ಅಧಿಕಾರಿ ತತ್‌ಕ್ಷಣದಲ್ಲಿ ಹತ್ತು ಕಿ.ಮೀ. ವ್ಯಾಪ್ತಿಯಲ್ಲಿ ಉದ್ಯೋಗ ಕೊಡಬೇಕೆಂದೆ ಇದೆ. ಅದಕ್ಕಾಗಿ ಹಣಕಾಸಿನ ಪ್ರಶ್ನೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದು ಇದೆ, ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿ ಇದೆ, ಅದು ಮಾಡಿ ಜಿಲ್ಲಾಮಟ್ಟದ ಸಮಿತಿಗೆ ಹೋಗಿ, ಜಿಲ್ಲಾ ಮಟ್ಟದ ಸಮಿತಿ ಆ ಕಾರ್ಯಕ್ರಮವನ್ನು ಒಪ್ಪಿದ ಮೇಲೆ ಅವನು ತೆಗೆದುಕೊಳ್ಳುತ್ತಾನೆ. ಬಿ.ಡಿ.ಓ. ಅಲ್ಲಿರುತ್ತಾನೆ, ಇವತ್ತು ಹತ್ತು ಜನಕ್ಕೆ ಮಳೆ ಇಲ್ಲದೆ ಕೆಲಸವಿಲ್ಲವೆಂದು ಕೆಲಸ ಪ್ರಾರಂಭ ಮಾಡೋಣವೆಂದರೆ, ಕೆಲಸ ಮಾಡಿದರೆ ಕೊಡಲು ಅವನ ಹತ್ತಿರ ಹಣವಿರಬೇಕಲ್ಲ?

ಶ್ರೀ ಎಂ. ಪಿ. ಪ್ರಕಾಶ್ : ಅದಕ್ಕಾಗಿಯೇ, ನಾವು ಸೆಲ್ಫ್ ಹೆಲ್ಪ್ ಪ್ರಾಜೆಕ್ಟ್ ಮಾಡಿಡಬೇಕೆಂದು ಹೇಳಿದ್ದೇವೆ. ಆ ಪ್ರಾಜೆಕ್ಟ್ ಇಟ್ಟುಕೊಂಡು ತತ್‌ಕ್ಷಣದಲ್ಲೇ ಕೆಲಸ ಮಾಡಿ ಅವರು ಆ ಉಪಯೋಗ ಪ್ರಮಾಣಪತ್ರವನ್ನು ಕಳುಹಿಸಿದರೆ ಪ್ರತಿಯೊಬ್ಬರು ಒಂದು ಕೋಟಿ ರೂಪಾಯಿಗಳನ್ನು ತರಿಸಬಹುದು. ಆದರೆ, ನಮ್ಮ ಅನುಭವದಲ್ಲಿ ಬಹುತೇಕವಾಗಿರುವ ತಾಲ್ಲೂಕುಗಳು ಐವತ್ತು ಲಕ್ಷಕ್ಕಿಂತ ಹೆಚ್ಚಿನ ಹಣವನ್ನು ತೆಗೆದುಕೊಂಡಿಲ್ಲ, ಎರಡು ಕಂತಿಗಿಂತ ಹೆಚ್ಚಿಗೆ ಹಣ ತೆಗೆದುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಹೇಳುವ ಪ್ರಕಾರ ಕೆಲಸ ಕೊಡಬೇಕೆನ್ನುವ ಕಾನ್ಸೆಪ್ಟ್ ಒಪ್ಪುತ್ತೇನೆ. 365 ದಿವಸಗಳಲ್ಲಿ ಕನಿಷ್ಟ ನೂರು ದಿವಸಗಳಾದರು ಕೆಲಸ ಕೊಡಬೇಕೆಂದು ಕಾನ್ಸೆಪ್ಟ್ ಇರತಕ್ಕಂಥದ್ದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇವತ್ತು ಅವನು ಕೆಲಸ ಕೊಡಬೇಕೆಂದು ಮನಸ್ಸು ಮಾಡಿದರೆ, ಅಲ್ಲಿ ಅಗತ್ಯ ಕಂಡುಬಂದರೆ, ಇವತ್ತು ಕೊಟ್ಟ ಎಂದು ತಿಳಿದುಕೊಳ್ಳಿ, ಅವನಿಗೆ ತಿಂಗಳವರೆಗೆ ಕಾಯಿಸುವುದಕ್ಕಾಗುವುದಿಲ್ಲ, ಒಂದು ವಾರದೊಳಗೆ ಅಕ್ಕಿ ಅಥವಾ ಹಣವನ್ನು ಕೊಡಬೇಕಾಗುತ್ತದೆ. ಅವನಿಗೆ ಕೊಡುವುದಕ್ಕೆ ಆ ವ್ಯವಸ್ಥೆ ಬೇಕಲ್ಲ, ಅಷ್ಟು ಹೊತ್ತಿಗೆ ಮುಂಗಡವಾಗಿ ಡ್ರಾ ಮಾಡಿ ಕೊಡುವ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗೊ ಅಥವಾ ಯಾರಿಗಾದರೂ ಜವಾಬ್ಧಾರಿಯನ್ನು ಕೊಟ್ಟು, ಇನ್ ಅಡ್ವಾನ್ಸ್ ಆಗಿ ಅವನಿಗೆ ವಾರಕ್ಕೆ ಬೇಕಾದಷ್ಟು ಹಣವನ್ನು ಡ್ರಾ ಮಾಡುವುದಕ್ಕೆ ಕೊಡಿ. ಅದಕೋಸ್ಕರ ವರ್ಷದ ಕಾರ್ಯಕ್ರಮ ಅಪ್ರೂವ್ ಆಗಬೇಕು, ಈ ಸೆಲ್ಫ್ ಹೆಲ್ಫ್ ಪ್ರಾಜೆಕ್ಟ್ ಇದೆಯಲ್ಲ, ಇದನ್ನು ಇನ್ ಅಡ್ವಾನ್ಸ್ ಆಗಿ ಮಾಡಿಟ್ಟುಕೊಳ್ಳಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು, ಒಂದೊಂದು ಕಡೆ ಒಂದೊಂದು ವ್ಯವಸ್ಥೆ ಇದ್ದರೂ ಕೂಡ ಒಬ್ಬ ಹಿರಿಯ ಅಧಿಕಾರಿ ಜವಾಬ್ದಾರಿ, ಆತನ ನಾಯಕತ್ವದ ಲಕ್ಷಣ ಮತ್ತು ಆತನ ಬುದ್ಧಿವಂತಿಕೆ, ನಮ್ಮಲ್ಲಿ ಜೆಆರ್‌ವೈನಲ್ಲಿ ಬರತಕ್ಕಂಥದ್ದಕ್ಕೆ ಶೇಕಡ 10 ಭಾಗವನ್ನು ಆಡಳಿತಾತ್ಮಕ ಖರ್ಚಿಗಾಗಿ ಇಟ್ಟುಕೊಳ್ಳಬಹುದು. ಬೇರೆ ಹಣವನ್ನು ಈ ರೀತಿಯಾಗಿ ಆಡಳಿತಾತ್ಮಕವಾಗಿ ಇಎಸ್ ನಲ್ಲಿರತಕ್ಕಂಥದ್ದನ್ನು ತೆಗೆದಿಡಬಹುದು. ನಮಗೆ ತಾಲ್ಲೂಕು ಪಂಚಾಯಿತಿಗಳಲ್ಲಿ ಸ್ಟ್ಯಾಂಪ್ ಡ್ಯೂಟಿಯ ಶುಲ್ಕವಾದರೆ ಹಣವಿರುತ್ತದೆ, ತತ್‌ಕ್ಷಣದಲ್ಲಿ ಅಲ್ಲಿ ಕೆಲಸ ಕೊಡಬೇಕೆಂದಾಗ ಈ ಸೆಲ್ಪ್ ಹೆಲ್ಪ್ ಪ್ರಾಜೆಕ್ಟ್‌ನಿಂದ ಒಂದನ್ನು ತೆಗೆದುಕೊಂಡು ಕೆಲಸ ಮಾಡಿ ಅದರಿಂದ ಹಣವನ್ನು ಕೊಡುವುದಕ್ಕೆ ಬರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಒಟ್ಟಿನಲ್ಲಿ ಜಿಲ್ಲಾಮಟ್ಟದ ಪಂಚಾಯಿತಿಯ ನಮ್ಮ ಕಾರ್ಯನಿರ್ವಹಣಾಧಿಕಾರಿಗಳದೋ ಅಥವಾ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಹಣಾಧಿಕಾರಿಗಳದೋ that type of leadership is totally absent. ಆ ಡೈನಾಮಿಸಂ ಇಲ್ಲದಿರುವುದರಿಂದಲೇ ಈ ಪರಿಸ್ಥಿತಿಗೆ ಬಂದುಬಿಟ್ಟಿದೆ. ಅವರಿಗೆ ಆ ಡೈನಾಮಿಸಂ ಬರುವುದಕ್ಕೆ, ಲೀಡರ್‌ಶಿಪ್ ಬರುವುದಕ್ಕೆ, you must give a new thrust for all these things.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಮಂತ್ರಿಗಳೆ, ಈ ಸೆಲ್ಫ್ ಹೆಲ್ಫ್ ಪ್ರಾಜೆಕ್ಟ್ ಬಗ್ಗೆ ಅಧಿಕಾರಿಗಳಲ್ಲಿ ಒಂದು ಕಲ್ಪನೆಯೇ ಇಲ್ಲ. ಉದಾಹರಣೆಗೆ, ಮೊನ್ನೆ ಶಿವಮೊಗ್ಗ ಜಿಲ್ಲೆಯದು ಈಗ ನೀವು ಕಾರ್ಯಕ್ರಮ

ಕೊಟ್ಟು ಎಷ್ಟು ದಿವಸವಾಯಿತು, ಇದುವರೆವಿಗೂ ನಮ್ಮ ಜಿಲ್ಲಾ ಮಟ್ಟದ ಕಮಿಟಿಯೇ ಸೇರಲಿಲ್ಲ. ಎಷ್ಟಕ್ಕೆ ಸೆಲ್ಪ್ ಹೆಲ್ಪ್ ಪ್ರಾಜೆಕ್ಟ್ ಮಾಡಬೇಕೆನ್ನುವುದರಲ್ಲೇ ಗೊಂದಲವಿದೆ. ಒಬ್ಬೊಬ್ಬ ಅಧಿಕಾರಿಯಿಂದ ಒಂದೊಂದು ರೀತಿಯಾಗಿ ಚರ್ಚೆಯಾಗುತ್ತಿದೆ. ದಯಮಾಡಿ ಅವರನ್ನು ಇನ್ನೊಂದು ಸಾರಿ ಕರೆದು ಸರಿಯಾದ ತರಬೇತಿ ಮತ್ತು ಮಾಹಿತಿಯನ್ನು ಕೊಡದ ಹೊರತು ಈ ಇಡೀ ಪ್ರಾಜೆಕ್ಟ್‌ನ ಹಣವನ್ನೇ ನಾವು ಬಳಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಶಿವಮೊಗ್ಗ ಜಿಲ್ಲೆಯದು ಇನ್ನು ಕೂಡ ಜಿಲ್ಲಾ ಮಟ್ಟದ ಸಭೆಯನ್ನು ಕರೆಯುವುದಕ್ಕಾಗದೆ ಇವತ್ತು ಗ್ರಾಮಪಂಚಾಯಿತಿಗಳು ಇವತ್ತು ಆ ಕಾರ್ಯಕ್ರಮವನ್ನೇ ಜಾರಿಗೆ ತರುವುದಕ್ಕಾಗುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ಅವರು ಹೇಳಿದಂತೆ ಸೆಲ್ಪ್ ಹೆಲ್ಪ್ ಪ್ರಾಜೆಕ್ಟ್‌ಗಳನ್ನು ಎಷ್ಟಾದರೂ ತಯಾರು ಮಾಡಬಹುದು. ಕೇರಳದಲ್ಲಿರುವಂಥ ಒಂದು ಸಂಪ್ರದಾಯವನ್ನು ಮತ್ತು ಅನುಕರಣೆಯನ್ನು ಇಲ್ಲಿ ತರಬೇಕೆನ್ನುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅಲ್ಲಿ ಗ್ರಾಮೀಣಮಟ್ಟದಲ್ಲಿ ಒಂದು ಯೋಜನೆಗಳ ಪಟ್ಟಿಯನ್ನು ತಯಾರುಮಾಡಿದ್ದಾರೆ. ಆಯಾ ಗ್ರಾಮಸಭೆಗಳೆ ಕರೆದು ಆ ಊರಿಗೆ ಮುಂದಿನ ಐದು ವರ್ಷಗಳ ಕಾಲ ಏನಾಗಬೇಕೆನ್ನುವುದನ್ನು ಯೋಚನೆ ಮಾಡಿ ಅವರು ಯೋಜನೆಯನ್ನು ತಯಾರು ಮಾಡಿದ್ದಾರೆ. ಅಂಥದ್ದೆ ಆದ ಒಂದು ದೊಡ್ಡ ಆಂದೋಲನವನ್ನು ಕರ್ನಾಟಕದಲ್ಲೂ ಕೂಡ ಮಾಡುವುದಕ್ಕೆ ಸಾಧ್ಯವೇನು ಎನ್ನುವ ವಿಚಾರದಲ್ಲೂ ಕೂಡ ನಾವು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಡಿ.ಆರ್. ಪಾಟೀಲರು ಅದರ ಬಗ್ಗೆಯೂ ಸಲಹೆಯನ್ನು ಕೊಟ್ಟರೆ ಉಪಯುಕ್ತವಾಗುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಅಧ್ಯಕ್ಷರೆ, ಗ್ರಾಮಪಂಚಾಯಿತ್ ಸದಸ್ಯರು, ನಾವು ತೋಟಕ್ಕೆ ಕೆಲಸಕ್ಕೆ ಹೋದರೆ ಐವತ್ತರಿಂದ ಎಪ್ಪತ್ತೈದು ರೂಪಾಯಿಗಳ ಸಂಬಳ ಬರುತ್ತದೆ ಎಂದು ಹೇಳುತ್ತಾರೆ. ಸಿಟಿಂಗ್ ಫೀ ಇಪ್ಪತ್ತೈದು ರೂಪಾಯಿಗಳನ್ನು ಕೊಟ್ಟರೆ ನಾವು ಬರುವುದಕ್ಕಾಗುವುದಿಲ್ಲವೆನ್ನುವ ಪ್ರಶ್ನೆಯನ್ನು ಕೇಳುತ್ತಾರೆ ದಯವಿಟ್ಟು ಗ್ರಾಮಪಂಚಾಯಿತಿಯ ಸದಸ್ಯರಿಗೂ ಜಿಲ್ಲಾ ಪಂಚಾಯಿತಿಯ ಮತ್ತು ತಾಲ್ಲೂಕು ಪಂಚಾಯಿತಿಗಳ ಸದಸ್ಯರ ಸಿಟಿಂಗ್ ಫೀ ಏನಿದೆ ಅದನ್ನು ಹೆಚ್ಚು ಮಾಡಬೇಕೆಂದು ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್: ಸನ್ಮಾನ್ಯ ಸಭಾಧ್ಯಕ್ಷರೆ, ಈ ಜೆಆರ್‌ವೈನಲ್ಲಿ ಅನಿವಾರ್ಯವಾಗಿ ಮ್ಯಾನುಪುಲೇಷನ್ ಮಾಡುವಂಥ, ಮ್ಯಾಂಡೆಡ್ ಮ್ಯಾನುಪುಲೇಷನ್ ಮಾಡುವಂಥ ಒಂದು ಪರಿಸ್ಥಿತಿ ಏನು ಇವತ್ತು ನಿರ್ಮಾಣವಾಗಿದೆ, ಈ ಅಂಕಿಸಂಖ್ಯೆಗಳನ್ನು ತಿದ್ದುವುದು ತಪ್ಪಲ್ಲವೆನ್ನುವ ಮನೋಭಾವನೆ ಎಲ್ಲರಲ್ಲೂ ಬರುತ್ತಿದೆ. ನಾವು ಕೇಂದ್ರ ಸರ್ಕಾರದಿಂದ ಹಣಪಡೆದುಕೊಳ್ಳಬೇಕೆನ್ನುವ ಸದುದ್ದೇಶಕ್ಕೋಸ್ಕರ ಆ ರೀತಿ ಮಾಡುತ್ತೇವೆ. ಆದರೆ ಒಟ್ಟು ತಪ್ಪು ಬರೆಯುವುದು, ತಪ್ಪು ಅಂಕಿಸಂಖ್ಯೆಗಳನ್ನು ಸೃಷ್ಟಿಸುವುದು ತಪ್ಪಲ್ಲವೆನ್ನುವ ಸಂಸ್ಕೃತಿ ಬೆಳೆಯುತ್ತಿರುವುದರಿಂದ ಬೇರೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಾಕಷ್ಟು ಅನಾಹುತವಾಗುತ್ತದೆನ್ನುವುದು ತಮ್ಮೆಲ್ಲರ ಗಮನಕ್ಕೆ ಬಂದಿರಬಹುದು. ಈಗ ನಾವೊಂದು ಕೆಲಸವನ್ನು ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ಜೆಆರ್‌ವೈನಲ್ಲಿ ಮತ್ತು ಎಂಪ್ಲಾಯಿಮೆಂಟ್ ಅಶ್ಯೂರೆನ್ಸ್ ಸ್ಕೀಂನಲ್ಲಿ, ಎಲ್ಲಿ ನಮಗೆ ಕಾಂಟ್ರಾಕ್ಟ್‌ರನ್ನು ಇಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೂ ಕೂಡ, ಕಾಂಟ್ರಾಕ್ಟರ್ ನಾವು ಇಡುತ್ತಿದ್ದೇವೆ, ಅಲ್ಲಿ ಸ್ಥಳೀಯರಿಂದ,

(ಈ ಸಂದರ್ಭದಲ್ಲಿ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಯಾರು ಆ ಕಾರ್ಯಕ್ರಮದಿಂದ, ಅನುಕೂಲ ಪಡೆದುಕೊಳ್ಳುತ್ತಾರೊ ಸೌಲಭ್ಯ ಪಡೆದುಕೊಳ್ಳುತ್ತಾರೊ, ಅವರಿಗೆ ಈ ಯೋಜನೆಗಾಗಿ ಎಷ್ಟು ಖರ್ಚು ಮಾಡುತ್ತೇವೆ, ಯಾವ ರೀತಿಯಾಗಿ ಖರ್ಚು ಮಾಡುತ್ತೇವೆ ಎನ್ನುವ ಸಂಪೂರ್ಣ ಮಾಹಿತಿ ಸಿಗುವ ಹಾಗೆ ಆಗಬೇಕು. ಅಲ್ಲಿ ಗ್ರಾಮಸ್ಥರು ಪರಿವೀಕ್ಷಣೆ ಮಾಡುವಂಥ ಒಂದು ವ್ಯವಸ್ಥೆಯನ್ನು ನಾವು ರೂಪಿಸಬೇಕು. ಇಲ್ಲವೆಂದರೆ ಸಾಕಷ್ಟು ಹಣ ಪೋಲಾಗುತ್ತದೆ, ಪೋಲು ಮಾಡಿದವರ ವಿರುದ್ಧ ನಾವು ನೀವು ಏನು ಕ್ರಮ ಕೈಗೊಳ್ಳಲಾಗದಿರುವ ಒಂದು ವಾತಾವರಣ, ನಿರ್ಮಾಣವಾಗುತ್ತಿದೆ. ಆದುದರಿಂದ, ದಯವಿಟ್ಟು ಈ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಎಲ್ಲಾ ಕೆಲಸಗಳ ಬಗ್ಗೆ ಯೋಜನಾ ವೆಚ್ಚವೇನು, ಆ ವೆಚ್ಚವನ್ನು ಹೇಗೆ ಮಾಡುತ್ತೇವೆ ಎನ್ನುವುದನ್ನು ನಾವು ಸುಮೋಟೊ ಆ ಮಾಹಿತಿ ಸಿಗುವ ವ್ಯವಸ್ಥೆಯನ್ನು ಮಾಡಬೇಕು. ಮೊದಲು ಪಂಚಾಯತಿ ಮಟ್ಟದಲ್ಲಿ ಸಿಗಲಿ, ಆಮೇಲೆ ಆ ಗ್ರಾಮೀಣದೊಳಗೆ ಒಂದು ಯುವ ಕೇಂದ್ರವಿರುತ್ತದೆ ಅಥವಾ ಮತ್ತೊಂದು ಸ್ವಯಂಸೇವಾ ಸಂಸ್ಥೆಯಿರುತ್ತದೆ ಅಂಥವರಿಗೆ ಆ ಮಾಹಿತಿ ಸಿಗುವಂತೆ ಮಾಡಿದರೆ ಒಳ್ಳೆಯದಾಗುತ್ತದೆ. ಮಾಡುವ ಕಾಂಟ್ರಾಕ್ಟರ್ ಹತ್ತಿರ ಏಕಪ್ಪ ಹೀಗೆ ಮಾಡಿಲ್ಲವೆಂದು ಅವರು ಕೇಳುತ್ತಾರೆ, ಒಂದು ಹೆದರಿಕೆ ಅವನಿಗೆ ಹುಟ್ಟುತ್ತದೆ. ಇಲ್ಲವೆಂದರೆ, ಕೆಲಸವಾದ ಮೇಲೆ ಅವನು ಎಲ್ಲೂ ಸಿಗುವುದಿಲ್ಲ, ಅವನಿಗೆ ನಾವು ಲೀಗಲಿ ಕಾಂಟ್ರಾಕ್ಟ್ ಕೊಟ್ಟಿರುವುದಿಲ್ಲ ಅವನಿಗೆ ಹಣ ಮುಟ್ಟಿರುತ್ತದೆ, ಅವನನ್ನು ಜವಾಬ್ದಾರನನ್ನಾಗಿ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಈ ಮಾಹಿತಿ ಪಂಚಾಯಿತಿ ಮಟ್ಟದಲ್ಲಿ ಈ ಮಾಹಿತಿ ಅಲ್ಲಿಯ ಸ್ಥಳೀಯ ಸಂಘಟನೆಯ ಮಟ್ಟದಲ್ಲಿ ಸಿಗುವ ಹಾಗೆ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ತಾಲ್ಲೂಕು ಪಂಚಾಯಿತಿಯಲ್ಲಿ ಈಗ ಇಂಜಿನಿಯರ್ಸ್ ಕೊರತೆ ಸಾಕಷ್ಟು ಇದೆ. ಹಾಗಾಗಿ ಅನೇಕ ಗ್ರಾಮಪಂಚಾಯಿತಿಗಳಲ್ಲಿ ಈ ಜೆಆರ್‌ವೈ ಪ್ರೋಗ್ರಾಂ ಅನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ.

12.10 ಪಿ. ಎಂ.

ನೀವ್ಯಾಕೆ ಮಾಡುತ್ತಿಲ್ಲ ಅಂದರೆ ನಮ್ಮ ಪ್ಲಾನ್ ಎಸ್ಟಿಮೇಟ್ ಇನ್ನೂ ಆಗಿಲ್ಲ, ಆಗುವ ಸಂಭವವೂ ಇಲ್ಲ ಎಂದು ಹೇಳುತ್ತಾರೆ. ಒಂದು ಗ್ರಾಮ ಪಂಚಾಯಿತಿಯೊಳಗೆ ವರ್ಷಾನುಗಟ್ಟಲೇ ಪ್ಲಾನ್ ಎಸ್ಟಿಮೇಟ್ ಬಾಕಿ ಉಳಿದಿರುವುದು ನಮ್ಮ ಗಮನಕ್ಕೆ ಬಂದಿದೆ, ಬಹುಶಃ ತಮ್ಮ ಗಮನಕ್ಕೂ ಬಂದಿರಬಹುದು. ಜೆ.ಆರ್.ವೈ. ಗೈಡ್‌ಲೈನ್ಸ್‌ನಲ್ಲಿ ಪ್ರೈವೇಟ್ ಇಂಜಿನಿಯರ್‌ಗಳನ್ನು ಬೇಕಾದರೆ ಉಪಯೋಗ ಮಾಡಿಕೊಳ್ಳಬಹುದು ಎಂದು ಇದೆ. ಬಹಳಷ್ಟು ಗ್ರಾಮಗಳಲ್ಲಿ ಸಿವಿಲ್ ಇಂಜಿನಿಯರ್ಸ್ ತಮಗೆ ಸಿಗುತ್ತಾರೆ. ಅವರನ್ನು ಉಪಯೋಗ ಮಾಡಿಕೊಂಡು ಪ್ಲಾನ್ ಎಸ್ಟಿಮೇಟ್ ತಯಾರು ಮಾಡಿಸಿ, ತಾಲ್ಲೂಕು ಪಂಚಾಯಿತಿ:ಜಿಲ್ಲಾ ಪಂಚಾಯಿತಿ ವ್ಯವಸ್ಥೆಯೊಳಗೆ ಅಪ್ರೂವಲ್ ತೆಗೆದುಕೊಳ್ಳಬಹುದು. ಪ್ಲಾನ್ ಎಸ್ಟಿಮೇಟ್ ತಯಾರು ಮಾಡಿಸಿಕೊಳ್ಳಲಿಕ್ಕಾದರೂ ಅವರನ್ನು ಉಪಯೋಗ ಮಾಡಿಕೊಳ್ಳುವಂತೆ ಹಾಗೂ ಅದನ್ನು ಸೂಪರ್‌ವಿಷನ್ ಮಾಡುವ ಸಲುವಾಗಿಯೂ ಸಹ ಅವರ ಸರ್ವೀಸ್ ಅನ್ನು ಉಪಯೋಗ ಮಾಡಿಕೊಳ್ಳುವಂತೆ ಮಾಡಬಹುದಾಗಿದೆ. ಅವರನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಅಥವಾ ಇಂತಿಷ್ಟು ಪರ್ಸೆಂಟೇಜ್ ಹಣ ಕೊಡುತ್ತೇವೆ ಎಂದು

ಪರ್ಸೆಂಟೇಜ್ ಬೇಸಿಸ್ ಮೇಲೆ ಉಪಯೋಗ ಮಾಡಿಕೊಳ್ಳಬಹುದಾಗಿದೆ. ಹೀಗೆ ಉಪಯೋಗ ಮಾಡಿಕೊಳ್ಳಲಿಕ್ಕೆ ನೀವು ಪಂಚಾಯಿತಿ ಸಂಸ್ಥೆಗಳಿಗೆ ಅನುಕೂಲತೆಯನ್ನು ಕಲ್ಪಿಸಿಕೊಡಬೇಕೆಂದು ಹೇಳಿ ನಾನು ಸಲಹೆ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 70ಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳಿವೆ. ಹಾಗೆಯೇ ಸಾಕಷ್ಟು ಪಾಲಿಟೆಕ್ನಿಕ್‌ಗಳಿವೆ. ಈ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸಾಕಷ್ಟು ಇಂಜಿನಿಯರಿಂಗ್ ಪದವಿ ಪಡೆದಂತಹ ಅನೇಕ ಜನ ಲೆಕ್ಚರರ್ಸ್, ಪ್ರೊಫೆಸರ್ಸ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್ಸ್ ಸಿಗುತ್ತಾರೆ. ಆ ಸೌಲಭ್ಯವನ್ನು ಬಹುತೇಕ ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯವಿದೆಯೋ ಏನೋ ಎಂಬುದನ್ನು ತಾವು ನೋಡಬೇಕು. ಕಡೆಗೆ ನಿಮ್ಮ ಸ್ವಸ್ತಿ ಗ್ರಾಮದೊಳಗಾದರೂ ಉಪಯೋಗ ಮಾಡಿಕೊಳ್ಳಬಹುದು. ಯಾವುದಾದರೂ ಗ್ರಾಮದೊಳಗೆ ಈ ಸಂಸ್ಥೆಗಳಿಗೆ ಕೇಳಿಕೊಳ್ಳಿ. ನೀವು ಒಂದು ಹೋಬಳಿಯಲ್ಲಾಗಲೀ, ಒಂದು ತಾಲ್ಲೂಕಿನಲ್ಲಾಗಲೀ ಒಂದು ಗ್ರಾಮದಲ್ಲಾಗಲೀ, ಅಲ್ಲಿ ಬರುವಂತಹ ಎಲ್ಲಾ ಕೆಲಸಗಳನ್ನು ಅನುಷ್ಠಾನಗೊಳಿಸುತ್ತೇವೆ, ನಾವು ಪರಿವೀಕ್ಷಣೆ ಮಾಡುತ್ತೇವೆ, ಜನರನ್ನು ಇನ್‌ವಾಲ್ವ್ ಮಾಡುವಂತಹ ಒಂದು ವಾತಾವರಣ ನಿರ್ಮಾಣ ಮಾಡುತ್ತೇವೆ ಎನ್ನುವಂತಹ ಜವಾಬ್ದಾರಿಯನ್ನು ನೀವು ಏಕೆ ಅವರಿಗೆ ಕೊಡಬಾರದು? ಇದನ್ನು ಏಕೆ ನಾವು ಉಪಯೋಗ ಮಾಡಿಕೊಳ್ಳಬಾರದು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಸದಸ್ಯರು ಬಹಳ ಉಪಯುಕ್ತವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಈಗಾಗಲೇ ನಾವು ಒಂದು 'ಸ್ವಾವಲಂಬನ' ಎಂಬ ಕಾರ್ಯಕ್ರಮ ಮಾಡಿದ್ದೇವೆ. ಈ ಸ್ವಾವಲಂಬನ ಕಾರ್ಯಕ್ರಮಕ್ಕೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ 50 ಜನ ಈ ರೀತಿಯಾಗಿರತಕ್ಕ ಯುವಕರನ್ನು ತರಬೇತಿಗೊಳಿಸುತ್ತಿದ್ದೇವೆ. ಡೈರಿ ಹೈನುಗಾರಿಕೆ ವಿಚಾರದಲ್ಲಿ ಅವರಿಗೆ ತರಬೇತಿ ಕೊಟ್ಟು ತಿಂಗಳಿಗೆ 600 ರೂಪಾಯಿಗಳ ಭತ್ಯೆಯನ್ನೂ ಸಹ ನಾವು ಕೊಡುತ್ತಿದ್ದೇವೆ. ಈ ವರ್ಷದಲ್ಲಿ ನಾವು ಸುಮಾರು ಎರಡು ಸಾವಿರ ಇಂತಹ ಗ್ರಾಮಾಂತರ ಪ್ರದೇಶದ ಯುವಕರನ್ನು ಆಯ್ಕೆ ಮಾಡಬೇಕೆಂದು ಮಾಡಿದ್ದೇವೆ. ಬೇರೆ ಬೇರೆ ಕಾಲೇಜುಗಳಿಗೂ ಸಹಾ ನಾವು ಕೆಲವೆಡೆ ಪತ್ರ ಬರೆದಿದ್ದೇವೆ. ತಾವು ಹುಲುಕೋಟಿ ಸಂಸ್ಥೆಯಿಂದ ಕೊಡುವುದಾದರೆ ಅವರಿಗೆ ಉಪಯುಕ್ತವಾದಂತಹ ರೀವೈಂಡಿಂಗ್ ಮಾಡುವುದು ಅಥವಾ ಎಲೆಕ್ಟ್ರಿಕಲ್ ಗೂಡ್ಸ್ ರಿಪೇರಿ ಮಾಡುವುದು ಇಂತಹದ್ದು ಏನಾದರೂ ಆರು ತಿಂಗಳು ಕಲಿಸುವುದಾದರೆ ಅವರಿಗೂ ಕೂಡ ಒಂದು ಬ್ಯಾಚ್ ಕೊಡುತ್ತೇವೆ. ಅವರನ್ನು ತರಬೇತಿ ಮಾಡಬೇಕಾದಂತಹ ಸಂಸ್ಥೆಗೆ ನಾವು ಇಲಾಖೆಯಿಂದ ಹಣವನ್ನೂ ಕೂಡ ಕೊಡುತ್ತೇವೆ. ಈ ಸ್ವಾವಲಂಬನ ಕಾರ್ಯಕ್ರಮದ ಜೊತೆಗೆ ತಾವು ಹೇಳಿದಂತೆ ಈ ಕಾರ್ಯಕ್ರಮದ ಬಗ್ಗೆ ಕೂಡ ಕ್ರಮ ಕೈಗೊಳ್ಳಬಹುದು. ಪ್ರತಿ ವರ್ಷ ಎರಡು ಸಾವಿರದಂತೆ ಟಾರ್ಗೆಟ್ ಇಟ್ಟುಕೊಂಡಿರುತ್ತೇವೆ. ಇದೊಂದು ರೀತಿ ಹಿಡನ್ ಡೆಬ್ಟ್ ತರಹ. ಏಕೆಂದರೆ ಬೇರೆ ಬೇರೆ ಇಲಾಖೆಗಳೂ ಸಹಾ ಇಂತಹ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಆದರೆ ಇದನ್ನು ನಾವು ಪ್ರತ್ಯೇಕವಾಗಿ 600 ರೂಪಾಯಿಗಳು ಅವರಿಗೆ ಭತ್ಯೆ ಕೊಟ್ಟು ಇವತ್ತು ತಯಾರು ಮಾಡುತ್ತಿದ್ದೇವೆ.

ಶ್ರೀ ಡಿ. ಆರ್. ಪಾಟೀಲ್ : ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಪ್ಲಾನ್ ಎಸ್ಟಿಮೇಟ್ ಮಾಡಲಿಕ್ಕೆ ಸಾಕಷ್ಟು ಲೇಟಾಗುತ್ತಿದೆ. ಈ ಗ್ರಾಮ ಪಂಚಾಯಿತಿಗೆ ಇರುವಂತಹ ಶೇಕಡ 65ರಷ್ಟು

ಜೆ.ಆರ್.ವೈ.ಫಂಡ್ಸ್ ಏನಿದೆ, ಅದನ್ನು ಉಪಯೋಗ ಮಾಡಿಕೊಳ್ಳಬೇಕಾದರೆ ಪ್ಲಾನ್ ಎಸ್ಟಿಮೇಟ್ ತಯಾರು ಮಾಡುವವರು ತಾಲ್ಲೂಕು ಪಂಚಾಯಿತಿಯೊಳಗೆ ಇರುವಂತಹ ಇಂಜಿನಿಯರ್‌ಗಳೆ ಆಗಿದ್ದಾರೆ. ಅವರು ಬೇಗ ಮಾಡುತ್ತಿಲ್ಲ. ಅಲ್ಲಿ ಸಾಕಷ್ಟು ಜನರ ಕೊರತೆ ಕೂಡ ಇದೆ. ನಮ್ಮ ಗದಗ್ ತಾಲ್ಲೂಕು ಪಂಚಾಯಿತಿಯೊಳಗಂತೂ ಒಬ್ಬನೇ ಇಂಜಿನಿಯರ್ ಇದ್ದಾನೆ. ಆತ ಸಿವಿಲ್ ಇಂಜಿನಿಯರ್ ಅಲ್ಲ, ಆತ ಮೆಕ್ಯಾನಿಕಲ್ ಇಂಜಿನಿಯರ್ ಆಗಿದ್ದಾನೆ. ಆತ ಮೆಕ್ಯಾನಿಕಲ್ ಇಂಜಿನಿಯರ್ ಆಗಿದ್ದರೂ ಆತನಿಗೆ ಅನುಭವ ಇರುತ್ತದೆ, ಆತನೇ ಪ್ಲಾನ್ ಎಸ್ಟಿಮೇಟ್ ಮಾಡುವುದಕ್ಕೆ ಏನೂ ತೊಂದರೆಯಾಗುವುದಿಲ್ಲ. ಅದಕ್ಕೆ ಜೆ.ಆರ್.ವೈ. ಗೈಡ್‌ಲೈನ್ಸ್‌ನೊಳಗೆ ಅವಕಾಶ ಇದೆ. ಅಂದರೆ ನಾವು ಪ್ರೈವೇಟ್ ಇಂಜಿನಿಯರ್‌ಗಳನ್ನೂ ಸಹಾ ತೆಗೆದುಕೊಳ್ಳಬಹುದು. ನಾವು ಇಂಜಿನಿಯರಿಂಗ್ ಕಾಲೇಜಿನಿಂದಾಗಲೀ ಅಥವಾ ಇತರೆಡೆಯಿಂದ ಆಗಲೀ ಇಂಜಿನಿಯರ್‌ಗಳನ್ನು ತೆಗೆದುಕೊಳ್ಳಬಹುದು. ಅಲ್ಲದೇ ಈಗ ಬಹಳಷ್ಟು ಗ್ರಾಮದೊಳಗೂ ಸಹಿತಿ ಇಂಜಿನಿಯರ್‌ಗಳು ನಮಗೆ ಸಿಗುತ್ತಾರೆ. ನಮ್ಮ ಹುಲುಕೋಟಿಯಂತಹ ಗ್ರಾಮದೊಳಗೆ ಹುಲುಕೋಟಿಯವರೇ ಸಾಕಷ್ಟು ಸಿವಿಲ್ ಇಂಜಿನಿಯರ್ಸ್ ಸಿಗುತ್ತಾರೆ. ಅಂತಹವರಿಗೆ ನಾವು ಏನು ಹಣಕಾಸಿನ ಸಹಾಯ ಮಾಡದಿದ್ದರೂ ಸಹಿತ, ನಮ್ಮ ಊರು ಎಂಬ ಒಂದು ಅಭಿಮಾನದಿಂದ ಕೂಡ ಅವರು ಮಾಡುತ್ತಾರೆ. ಕೆಲವರು ಬೇರೆ ಊರಿನವರು ಬಂದರೆ ಸ್ವಲ್ಪ ಪರ್ಸಂಟೇಜ್ ಬೇಸಿಸ್ ಮೇಲೆ ಎಂಗೇಜ್ ಮಾಡಿಕೊಂಡು ಪ್ಲಾನ್ ಎಸ್ಟಿಮೇಟ್ ತಯಾರು ಮಾಡಲಿಕ್ಕೆ, ಅದನ್ನು ಅನುಷ್ಠಾನಗೊಳಿಸುವಂತಾದ್ದನ್ನು ಸೂಪರ್‌ವಿಷನ್ ಮಾಡಲಿಕ್ಕೆ ನೇಮಿಸಬಹುದು. ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿಯಲ್ಲೇ ಮಂಜೂರಾತಿ ಮಾಡುವುದು ಇರುತ್ತದೆ. ಆದರೆ ಅನುಷ್ಠಾನದ ಸೂಪರ್‌ವಿಷನ್ ಮಾಡಲಿಕ್ಕೆ, ಪ್ಲಾನ್ ಎಸ್ಟಿಮೇಟ್ ತಯಾರು ಮಾಡಲಿಕ್ಕೆ ಇಂತಹ ಜನರನ್ನು ಉಪಯೋಗ ಮಾಡಿಕೊಳ್ಳುವಂತಹ ಒಂದು ಆದೇಶ ತಮ್ಮಿಂದ ಹೋಗಬೇಕು. ಈಗಾಗಲೇ ಅಂತಹ ಒಂದು ಆದೇಶ ಇದೆ. ಆದರೂ ಕೂಡ ಅದನ್ನು ಪಂಚಾಯಿತಿಯವರು ಉಪಯೋಗ ಮಾಡುವುದಿಲ್ಲ. ಅವರಿಗೆ ಏನು ಹೆದರಿಕೆ ಇದೆಯೋ ಅಥವಾ ಮತ್ತೇನಿದೆಯೋ ನನಗೆ ಗೊತ್ತಿಲ್ಲ. ಅವರು ಮತ್ತೆ ತಾಲ್ಲೂಕು ಪಂಚಾಯಿತಿಗೆ ಕಳುಹಿಸುತ್ತಾರೆ. ತಾಲ್ಲೂಕು ಪಂಚಾಯಿತಿಗಳಲ್ಲಿ ಅವು ವರ್ಷಾನುಗಟ್ಟಲೇ ಎಸ್ಟಿಮೇಟ್ ಆಗದೇ ಉಳಿಯುತ್ತವೆ. ಅದಕ್ಕಾಗಿ ದಯವಿಟ್ಟು ತಾವು ಈ ಕೆಲಸ ಮಾಡಿಸಬೇಕು ಎನ್ನುವಂತಹ ಮಾತನ್ನು ತಮಗೆ ಹೇಳಬಯಸುತ್ತೇನೆ. ಕಳೆದ 1995-96, 1996-97 ಮತ್ತು 1997-98 ಈ ಮೂರು ವರ್ಷದ ಜೆ.ಆರ್.ವೈ. ಫಂಡ್ಸ್ ಫ್ಲೋ ಆಗಿದ್ದನ್ನು ನೋಡಿದರೆ ಪ್ರತಿ ವರ್ಷ ನಮಗೆ ಕಡಿಮೆಯಾಗುತ್ತಿದೆ. ಮೊದಲು 1995-96ರಲ್ಲಿ ಜೆ.ಆರ್.ವೈ. ಮಿಲಿಯನ್ ವೆಲ್ಸ್, ಇಂದಿರಾ ಆವಾಸ್ ಈ ಮೂರೂ ಯೋಜನೆಗಳು ಕೂಡಿಯೇ ಇತ್ತು. ಅನಂತರ 1996ರ ಜನವರಿಯಿಂದ ಮಿಲಿಯನ್ ವೆಲ್ಸ್ ಬೇರೆ ಮಾಡಿದರು, ಇಂದಿರಾ ಆವಾಸ್ ಬೇರೆ ಮಾಡಿದರು ಮತ್ತು ಜೆ.ಆರ್.ವೈ. ಕೂಡ ಕಡಿಮೆಯಾಯಿತು. ಹೀಗಾಗಿ ಮೊದಲು 1995-96ರೊಳಗೆ 310 ಕೋಟಿ ರೂಪಾಯಿಗಳು ಬಂತು. 1996-97ರಲ್ಲಿ ಅದು 230 ಕೋಟಿ ರೂಪಾಯಿಗಳಾಯಿತು. ಈ ವರ್ಷ ಅಂದರೆ 1997-98ರಲ್ಲಿ ಅದು 229 ಕೋಟಿ ರೂಪಾಯಿಗಳಾಗಿದೆ. ಅಂದರೆ ಆಲ್‌ಮೋಸ್ಟ್ 1996-97ರಲ್ಲಿ ಇದ್ದಷ್ಟೇ 1997-98ರಲ್ಲಿ ಪ್ರಾವಿಷನ್ ಮಾಡಿದ್ದೀರಿ. ಈಗಂತೂ ಎಲ್ಲಾ ಮೆಟೀರಿಯಲ್ ಕಾಸ್ಟ್ ಹೆಚ್ಚಾಗಿದೆ ಎಂಬುದು

ತಮಗೆ ಗೊತ್ತಿದೆ. ಹೀಗಿರುವಾಗ ಇದು ಪ್ರತಿ ವರ್ಷ ಹೆಚ್ಚಾಗುವುದರ ಬದಲು ಕಡಿಮೆಯಾಗುತ್ತಿದ್ದರೆ ತಾವು ಈ ಕಾರ್ಯಕ್ರಮಕ್ಕೆ ಒತ್ತು ಕಡಿಮೆ ಮಾಡುತ್ತಿದ್ದೀರೇನೋ ಎಂದು ನನಗನಿಸುತ್ತಿದೆ. ಮೊದಲು ಗ್ರಾಮ ಪಂಚಾಯಿತಿಗೆ ಜೆ.ಆರ್.ವೈ. ಫಂಡ್ಸ್‌ನೊಳಗೆ ಶೇಕಡ 65ರಷ್ಟು ಇರುತ್ತಿತ್ತು. ನೀವು ಅದರಲ್ಲಿ ಶೇಕಡ 15ರಷ್ಟು ತಾಲ್ಲೂಕು ಪಂಚಾಯಿತಿಗೆ ಕೊಟ್ಟಿರಿ. ಪರವಾಗಿಲ್ಲ, ಈ ತಾಲ್ಲೂಕು ಪಂಚಾಯಿತಿಯವರು ನಮಗೆ ರೀಫ್ಲೋ ಮಾಡುತ್ತಾರೆ ಎಂದು ನೀವು ಆ ರೀತಿ ಮಾಡಿದಿರಿ. ಅದಕ್ಕೇನೋ ಅಡ್ಡಿ ಇಲ್ಲ. ಆದರೆ, ನಿಮ್ಮ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜೆ.ಆರ್.ವೈ. ಹಣ ಶೇಕಡ 65ರಷ್ಟು ಆಯಿತು. ಅವರಿಗೆ ಮೊದಲು ಸ್ಟ್ಯಾಂಪ್ ಡ್ಯೂಟಿನಲ್ಲಿ ಶೇಕಡ 30ರಷ್ಟು ಏನು ಸಿಗುತ್ತಿತ್ತು, ಅದು ಈಗ ಅವರಿಗೆ ಸಿಗುತ್ತಿಲ್ಲ. ಆಗ ಇದ್ದ 1 ಲಕ್ಷ ರೂಪಾಯಿಗಳ ಅನುದಾನವನ್ನು ನೀವು ಈಗ 1¼ ಲಕ್ಷ ರೂಪಾಯಿ ಮಾಡಿದಿರಿ. ಆಮೇಲೆ ಈ ಕುಡಿಯುವ ನೀರಿನ ವ್ಯವಸ್ಥೆ ರಿಪೇರಿ ಸಲುವಾಗಿ ಆ ಜಿಲ್ಲಾ ಪಂಚಾಯಿತಿಗೆ ಜವಾಬ್ದಾರಿ ವಹಿಸಿದ್ದಕ್ಕೆ ಬಹುತೇಕ ಆ 25 ಸಾವಿರ ರೂಪಾಯಿಗಳು ನೀವು ಅವರಿಗೆ ಕೊಡುತ್ತಿದ್ದೀರಿ ಎಂದು ಕಾಣಿಸುತ್ತದೆ. ಇವರಿಗೆ ಅದು ಒಂದೇ ಲಕ್ಷರೂಪಾಯಿಗಳು ಉಳಿಯಿತು. ಅಂದರೆ ಪಂಚಾಯಿತಿ ಫಂಡ್‌ನೊಳಗೆ ಇರುವಂತಹ ಹಣ ವರ್ಷೇವರ್ಷೇ ಕಡಿಮೆಯಾಗುತ್ತಿದೆ. ಆದರೆ ಅವರ ಖರ್ಚು ಹೆಚ್ಚಾಗುತ್ತಿದೆ. ಸಂಬಳ ಕೂಡ ಹೆಚ್ಚು ಆಗುತ್ತಿದೆ. ಸ್ಟ್ರೀಟ್‌ಲೈಟ್ಸ್ ಇರಬಹುದು ಅಥವಾ ವಾಟರ್ ಸಪ್ಲೈ ಇರಬಹುದು, ಕೆ.ಇ.ಬಿ. ಬಿಲ್ ಕೂಡ ಹೆಚ್ಚಾಗಿದೆ, ಮೆಟೀರಿಯಲ್ ಕಾಸ್ಟ್ ಕೂಡ ಹೆಚ್ಚಾಗಿದೆ. ಹೀಗಾಗಿ ಗ್ರಾಮಾಂತರ ಮಟ್ಟದಲ್ಲಿ ಪ್ರತಿ ವರ್ಷ ಕೆಲಸ ಕಡಿಮೆಯಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಅಧ್ಯಕ್ಷರು : ನಾನು ಈಗ ಮುಖ್ಯ ಸಚೇತಕರಿಗೆ ಒಂದು ಸೂಚನೆ ಕೊಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಕುಳಿತಾಗ ದಯಮಾಡಿ ನಿಮ್ಮ ಶಾಸಕರಿಗೆ ಅವರ ಹತ್ತಿರ ಬಂದು ನಿಂತುಕೊಂಡು ಏನೇನೋ ಹೇಳಿ ಅವರ ಸಮಯ ತೆಗೆದುಕೊಳ್ಳಬಾರದು ಎಂದು ಹೇಳಿ. ನಾನು ಅಧಿಕಾರ ವಹಿಸಿಕೊಂಡ ದಿವಸವೇ ಈ ಮಾತನ್ನು ಹೇಳಿದ್ದೆ. ನಾನು ಇದನ್ನೆಲ್ಲಾ ಸಹಿಸಿಕೊಳ್ಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಹೊರಗಡೆ ಇರುವ ಒತ್ತಡವನ್ನೆಲ್ಲಾ ಮುಗಿಸಿಕೊಂಡು ಇಲ್ಲಿಗೆ ಬಂದಾಗ, ಅವರು ಯಾರು ಏನು ಹೇಳುತ್ತಾರೆ, ಅದಕ್ಕೆ ನಾನು ಏನು ಹೇಳಬೇಕು ಎಂದು ಪ್ರತಿಕ್ರಿಯಿಸುವುದಕ್ಕೆ ಅವರಿಗೆ ಅವಕಾಶ ಇಲ್ಲದೇ, ಅವರ ಹತ್ತಿರ ಬಂದು ಅವರ ಕಿವಿ, ಕಣ್ಣು ತಿಂದೇ ಬಿಡುತ್ತಾರೆ ಅನ್ನುವ ರೀತಿಯಲ್ಲಿ ಅವರ ಪಕ್ಕದಲ್ಲಿ ಶಾಸಕರು ನಿಂತಿರುತ್ತಾರೆ. ಇನ್ನು ಮುಂದೆ ಈ ರೀತಿ ಆದರೆ ನಾನು ಮುಖ್ಯ ಸಚೇತಕರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾವ ಶಾಸಕರೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಕುಳಿತಿದ್ದಾಗ ಇಲ್ಲಿ ಬಂದು ನಿಂತು ಅವರಿಗೆ ತೊಂದರೆ ಕೊಡಬಾರದು. ಏನಾದರೂ ಅಗತ್ಯ ಕೆಲಸ ಇದ್ದರೆ ಹೊರಗಡೆ ಆರಾಮ ಶಾಲೆ ಇದೆ, ಅಲ್ಲಿಗೆ ಅವರನ್ನು ಕರೆದುಕೊಂಡು ಹೋಗಿ ನಿಮ್ಮ ಕೆಲಸ ಏನಿದೆ ಅದನ್ನು ಮಾಡಿಸಿಕೊಳ್ಳಿ. ಅಥವಾ ಅವರ ಕಛೇರಿಗೆ ಹೋಗಿ ಭೇಟಿ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳಿದಂತೆ ಶಾಸಕರಿಗೆ ಹೇಳುವುದಕ್ಕಾಗುವುದಿಲ್ಲ. ಅವರಿಗೆ ಇದು ಬಹಳ ಸೂಕ್ಷ್ಮವಾದ ವಿಚಾರ. ಆದರೆ ಇದನ್ನೆಲ್ಲಾ ನೋಡಿ ನನಗೆ ಸಹಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ವಸಂತ ಬಂಗೇರಾ : ಆಗಬಹುದು.

ಅಧ್ಯಕ್ಷರು : ಮುಖ್ಯ ಸಚೇತಕರು ಎಲ್ಲಾ ಶಾಸಕರನ್ನೂ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಹೋಗದಂತೆ ನೋಡಿಕೊಳ್ಳಬೇಕು. ಅವರು ಸರ್ಕಾರಿ ಮುಖ್ಯ ಸಚೇತಕರು, ಕೇವಲ ಆಡಳಿತ ಪಕ್ಷದ ಸಚಿತಕರಲ್ಲ.

ಶ್ರೀ ಡಿ. ಆರ್. ಪಾಟೀಲ್ : ಗ್ರಾಮ ಪಂಚಾಯಿತಿಗೆ ಹೆಚ್ಚಿನ ಹಣಕಾಸಿನ ಸಹಾಯ ಹೋಗುವ ಹಾಗೆ ಏನಾದರೂ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಜೆ.ಆರ್.ವೈ. ಫಂಡ್ಸ್ ಆದರೂ ಜಾಸ್ತಿ ಮಾಡಿ, ಇ.ಎ.ಎಸ್. ಫಂಡ್ಸ್ ಆದರೂ ಜಾಸ್ತಿ ಮಾಡಿ ಅಥವಾ ಸರ್ಕಾರದಿಂದ ಕೊಡುವಂತಹ ಅನುದಾನವನ್ನಾದರೂ ಜಾಸ್ತಿ ಮಾಡಿ ಅನುಕೂಲತೆಯನ್ನು ತಾವು ಕಲ್ಪಿಸಿಕೊಡಬೇಕು. ಹಣ್ಣುಮಕ್ಕಳಿಗಾಗಿ ನಾವು "ದ್ವಾಕ್ರಾ" ಎಂಬ ಪ್ರೋಗ್ರಾಮ್ ಅನ್ನು ಮಾಡುತ್ತಿದ್ದೇವೆ. ಐ.ಆರ್.ಡಿ.ಪಿ. ಮತ್ತು "ದ್ವಾಕ್ರಾ" ಕಂಪೇರ್ ಮಾಡಿದಾಗ, "ದ್ವಾಕ್ರಾ" ಕಾರ್ಯಕ್ರಮದಲ್ಲಿ ರಿಕವರಿ ಉತ್ತಮವಾಗಿದೆ. ಆದರೆ ಏಕೋ ಆ ಪ್ರೋಗ್ರಾಮ್‌ಗೆ ಅಷ್ಟು ಒತ್ತು ಸಿಗುತ್ತಿಲ್ಲ. ಹೆಣ್ಣುಮಕ್ಕಳ ಗುಂಪು ಹೆಚ್ಚು ಸೈಜಿಸುವ ಹಾಗೆ, ನಾವು ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳಿಗೆ ದುಡ್ಡು ಕೊಟ್ಟರೆ, ಹೆಣ್ಣುಮಕ್ಕಳು ಅದನ್ನು ಉಪಯೋಗ ಮಾಡುವಲ್ಲಿ ಹೆಚ್ಚು ಕಾಳಜಿ ವಹಿಸುವುದು ಸ್ವಾಭಾವಿಕ, ನಮ್ಮ ಗಂಡು ಮಕ್ಕಳಿಗೆ ಅಷ್ಟು ಕಾಳಜಿ ಇಲ್ಲ. ನಮಗೆ ಬೇರೆ ಬೇರೆ ನೂರೆಂಟು ಹವ್ಯಾಸಗಳಿರುತ್ತವೆ. ದುಡ್ಡು ಖರ್ಚು ಮಾಡುವುದರಲ್ಲಿ ಗಂಡು ಮಕ್ಕಳು ಹೆಣ್ಣುಮಕ್ಕಳಿಗಿಂತ ಮುಂದೆ ಇರುತ್ತಾರೆ. ಆದುದರಿಂದ ತಾವು ದಯವಿಟ್ಟು "ದ್ವಾಕ್ರಾ" ಗುಂಪುಗಳು ಜಾಸ್ತಿಯಾಗುವಂತೆ ಮಾಡಬೇಕು. ಐ.ಆರ್.ಡಿ.ಪಿ.ಗೆ ಹೋದ ವರ್ಷ ನೀವು 1 ಲಕ್ಷ ಗುರಿ ಇಟ್ಟಿದ್ದಿರಿ. 1 ಲಕ್ಷ 16 ಸಾವಿರ ಸಾಧನೆಯಾಯಿತು. ಆದರೆ ಈ ವರ್ಷ ಅದನ್ನು 70 ಸಾವಿರಕ್ಕೆ ತಂದಿದ್ದೀರಿ. ಏಕೆ ಗುರಿ ಕಡಿಮೆ ಮಾಡಿದ್ದೀರಿ? ಐ.ಆರ್.ಡಿ.ಪಿ. ಬೆನಿಫಿಷರೀಸ್ ಕಡಿಮೆ ಮಾಡಿದಾಗ ಕನಿಷ್ಟ ದ್ವಾಕ್ರಾದಲ್ಲಾದರೂ ತಾವು ಫಲಾನುಭವಿಗಳ ಸಂಖ್ಯೆ ಹೆಚ್ಚು ಮಾಡಿದ್ದರೆ ಪರವಾಗಿರಲಿಲ್ಲ. ಆ ಹೆಣ್ಣುಮಕ್ಕಳ ಗುಂಪು ಯೋಜನೆಯಾದರೂ ಹೆಚ್ಚಾಯಿತು ಅಂದರೆ ಕುಟುಂಬಕ್ಕೆ ಉದ್ಯೋಗ ಸಿಗುತ್ತಾ ಹೋಗುತ್ತದೆ, ಮತ್ತು ಅನುಕೂಲವಾಗುತ್ತದೆ. ಅದಕ್ಕೆ ಹೆಚ್ಚು ಒತ್ತು ತಾವು ಕೊಡುವ ಹಾಗೆ ಮಾಡಬೇಕು. ತಾವು ಬೆಳ್ತಂಗಡಿ ತಾಲ್ಲೂಕಿನ ಧರ್ಮಸ್ಥಳದಲ್ಲಿ ಮಾನ್ಯ ವೀರೇಂದ್ರ ಹೆಗ್ಗಡೆಯವರು ಹಾಕಿಕೊಂಡಿರುವಂತಹ 'ಪ್ರಗತಿ ಬಂಧು' ಅನ್ನುವ ಕಾರ್ಯಕ್ರಮ ಏನಿದೆ, ಅದನ್ನು ನೋಡಬೇಕು. ಅಲ್ಲಿ ಸೇವಿಂಗ್ಸ್ ಹ್ಯಾಬಿಟ್ ಡೆವಲಪ್ ಮಾಡುತ್ತಾರೆ ಮತ್ತು ಇವರು ಎಷ್ಟು ಸೇವೆ ಮಾಡುತ್ತಾರೋ ಅದರ 4-6 ಪಟ್ಟು ಹಣ ಸೆಲ್ಫ್ ಹೆಲ್ಪ್ ಗ್ರೂಪ್ ಯೋಜನೆ ಅಡಿಯಲ್ಲಿ ನಬಾರ್ಡ್‌ನಿಂದ, ಕಮರ್ಷಿಯಲ್ ಬ್ಯಾಂಕಿನಿಂದ ಅವರಿಗೆ ಹಣ ಸಿಗುತ್ತದೆ. ಈ ರೀತಿಯ ಒಂದು ಸ್ವಭಾವವನ್ನು ನಾವು ಹೆಣ್ಣುಮಕ್ಕಳಲ್ಲಿ ಹೆಚ್ಚು ಬೆಳೆಸಿದ್ದೀವಿ ಅಂದರೆ ಸೆಲ್ಫ್ ಹೆಲ್ಪ್ ಗ್ರೂಪ್‌ಗಳು ಜಾಸ್ತಿ ನಾವು ಈ ದ್ವಾಕ್ರಾ ಯೋಜನೆ ಅಡಿಯಲ್ಲಿ ತಂದಿರಿ ಅಂದರೆ ಸಾಕಷ್ಟು ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇನ್ನು ಕಾಟೇಜ್ ಇಂಡಸ್ಟ್ರಿಗಳಲ್ಲಿ ಹಪ್ಪಳ ಮಾಡುವುದಾಗಲಿ, ಉಪ್ಪಿನಕಾಯಿ ಮಾಡುವುದಾಗಲಿ, ಕೊನೆಗೆ ಅವರ ಮನೆಯೊಳಗೆ ಕುಳಿತು ಚರಕದ ಮೂಲಕ ನೇಯುವುದಾಗಲಿ, ಹೀಗೆ ಬೇರೆ ಬೇರೆ ಉದ್ಯೋಗಗಳನ್ನು ನಾವು ಕಲ್ಪಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ ಹೆಣ್ಣುಮಕ್ಕಳಿಗೆ ಸ್ವಲ್ಪ ಹಣ ಸಂಪಾದನೆಯಾಗುತ್ತದೆ. ಇದರಿಂದ ಕುಟುಂಬಕ್ಕೂ ಪ್ರಯೋಜನವಾಗುತ್ತದೆ ಮತ್ತು ತಮ್ಮ ಸ್ವಂತ ಖರ್ಚಿಗೂ ಉಪಯೋಗವಾಗುತ್ತದೆ.

ಇದರಿಂದ ಗಂಡುಗಳ ಮೇಲೆ ಸ್ವಲ್ಪ ಜವಾಬ್ದಾರಿ ಕಡಿಮೆಯಾಗುತ್ತದೆ. ಸರ್ಕಾರ ಸೆರೆ ಅಂಗಡಿ, ಶೇಂದಿ ಅಂಗಡಿ ತೆಗೆಯುವುದಕ್ಕೆ ಅವಕಾಶ ಕಲ್ಪಿಸಿರುವುದರಿಂದ ಗಂಡಸರು ದುಡಿದು ಸಂಪಾದಿಸಿದ ಹಣವನ್ನು ಹಾಳುಮಾಡಿಕೊಳ್ಳುವುದಕ್ಕೆ ಅವಕಾಶವಾಗಿದೆ, ಅವನು ಹಾಳಾದರೂ ಪರವಾಗಿಲ್ಲ ಕುಟುಂಬ ಸರಿಯಾಗಿ ನಡೆಯುತ್ತದೆ ಎನ್ನುವ ಭಾವನೆ ಇರುತ್ತದೆ. ಆದ್ದರಿಂದ ದಯಮಾಡಿ ಡ್ವಾಕ್ರಾ ಗ್ರೂಪ್ಸ್‌ನ್ನು ಜಾಸ್ತಿ ಮಾಡಬೇಕು. ಆ ಮೇಲೆ ಸೆಲ್ಫ್ ಹೆಲ್ಪ್ ಗ್ರೂಪ್‌ನ ಅಡಿಯಲ್ಲಿ ಹಣಕಾಸಿನ ಸಹಾಯ ಹೆಚ್ಚು ಸಿಗುವ ಹಾಗೆ ಮಾಡಬೇಕು. ಹಾಗೆಯೇ ಮಾನ್ಯ ವೀರೇಂದ್ರ ಹೆಗಡೆಯವರು ಮಾಡಿದಂಥ ಕಾರ್ಯಕ್ರಮವನ್ನು ನಾವು ಪ್ರತಿ ತಾಲ್ಲೂಕು ಮಟ್ಟದಲ್ಲಿ ಹೇಗೆ ಅದನ್ನು ತರಬೇಕು ಎನ್ನುವುದರ ಬಗ್ಗೆ ಹೆಚ್ಚು ಕಳಕಳಿಯಿಂದ ಕೆಲಸ ಮಾಡುವ ಹಾಗೆ ನಾವು ಮಾಡಬೇಕು. ಇನ್ನು ನಮ್ಮ ಬಯೋಗ್ಯಾಸ್ ಪರ್‌ಫಾರ್ಮೆನ್ಸ್‌ನ್ನು ನೋಡಿದಾಗ, ಬೆಳಗಾಂ ಜಿಲ್ಲೆಯಲ್ಲಿ ಈ ಯೋಜನೆಯಲ್ಲಿ ಸಾಕಷ್ಟು ಕೆಲಸ ಆಗಿದೆ. ಬೆಳಗಾಂ ಜಿಲ್ಲೆಯಲ್ಲಿ ಬಯೋಗ್ಯಾಸ್‌ಗೆ ಸಂಬಂಧಪಟ್ಟ ಹಾಗೆ ಚೆನ್ನಾಗಿ ಕೆಲಸ ಆಗುತ್ತಿದೆ ಆದರೆ ನಮ್ಮಲ್ಲಿ ಏಕೆ ಆಗುತ್ತಿಲ್ಲ ಎಂದು ನಾನು ಅವರನ್ನು ಕೇಳಿದೆ ಬಯೋಗ್ಯಾಸ್ ಪ್ಲಾಂಟನ್ನು ನಮ್ಮಲ್ಲಿ ಸ್ಥಳೀಯರು ಕಟ್ಟುತ್ತಾರೆ. ಇವರು ಸರಿಯಾಗಿ ಕಟ್ಟದೆ ಬಯೋಗ್ಯಾಸ್ ಪ್ಲಾಂಟ್‌ನಲ್ಲಿ ಸರಿಯಾಗಿ ಗ್ಯಾಸ್ ಬರದೆ ಫೇಲ್ಯೂರ್ ಬಹಳಷ್ಟು ಆಗುತ್ತಿದೆ. ಮಹರಾಷ್ಟ್ರದ ಗಡಿ ಭಾಗದಲ್ಲಿ ಬರುವಂಥ mason, they are very expert in that. ಅವರನ್ನು ಕರೆದುಕೊಂಡು ಬಂದು ಗದಗ್ ತಾಲ್ಲೂಕಿನಲ್ಲಿ 2 ವರ್ಷ ಬಯೋಗ್ಯಾಸ್ ಪ್ಲಾಂಟ್ ಕೆಲಸವನ್ನು ಮಾಡಿಸಿದೆವು. ಅವರು ಮಾಡಿದ್ದೆಲ್ಲ ಬಯೋಗ್ಯಾಸ್ ಪ್ಲಾಂಟ್‌ಗಳು ಸಕ್ಸಸ್ ಆಗಿವೆ. ಅದಕ್ಕೆ ಅವರ ಸಹಾಯ ಸಹಕಾರ ಈ ದಿಶೆಯಲ್ಲಿ ಪಡೆದುಕೊಳ್ಳುವ ಹಾಗೆ ಆಗಬೇಕು. ಅವರಿಗೆ ಹೆಚ್ಚಿನ ಸಂಬಳ ಕೊಟ್ಟು, ಅವರ ಮನೊವೊಲಿಸಿ ಅವರ ನೇತೃತ್ವದಲ್ಲಿ ಏನಾದರೂ ಪ್ರೋಗ್ರಾಂ ಟ್ರೈನಿಂಗ್ ಮಾಡಲಿಕ್ಕೆ ಸಾಧ್ಯವಾಗುತ್ತದೋ ಏನೋ ಎಂಬುದನ್ನು ನೋಡಬೇಕು. ಏಕೆಂದರೆ ಇದರಲ್ಲಿ ಅವರಿಗೆ ಸಾಕಷ್ಟು ಲಾಭ ಇದೆ. ಆ ಮಹಾರಾಷ್ಟ್ರದಿಂದ ಏನು ಮೇಸನ್ ಬರುತ್ತಾರೆ ಅವರಿಗೆ ಬಯೋಗ್ಯಾಸ್ ಪ್ಲಾಂಟ್ ಕಟ್ಟುವುದರಿಂದ ಸಾಕಷ್ಟು ಲಾಭ ಇದೆ. 2 ದಿವಸದೊಳಗೆ ಅವನು ಒಂದು ಬಯೋಗ್ಯಾಸ್ ಪ್ಲಾಂಟ್‌ನ್ನು ಕಟ್ಟಿ ಹೋಗಿಬಿಡುತ್ತಾನೆ. ಆ ಒಂದು ಟೀಮ್‌ಗೆ ಅವರಿಗೆ 5 ರಿಂದ 6 ಸಾವಿರ ರೂಪಾಯಿಗಳು ಸಿಗುತ್ತದೆ. ಇದರಿಂದ ಅವರಿಗೂ ಉಳಿತಾಯ, ನಮಗೂ ಅನುಕೂಲವಾಗುತ್ತದೆ. ಈ ರೀತಿ ಅವರು ಏನು ಕಟ್ಟುತ್ತಾರೆ ಅದನ್ನು ನಮ್ಮಲ್ಲಿ ಟ್ರೈನಿಂಗ್ ಕೊಡುವ ಹಾಗೆ ಮಾಡಬೇಕು. ಅವರಿಗೆ ಹೆಚ್ಚು ಹಾಗೂ ಆಕರ್ಷಣೀಯವಾದಂಥ ಸಂಬಳ ಕೊಡಬೇಕು, ಏಕೆಂದರೆ, ಮುಂದೆ ಇವರು ನಮಗೆ ಕಾಂಪಿಟೀಟರ್ ಆಗುತ್ತಾರೆ ನಮಗೆ ಕೆಲಸ ಸಿಗುವುದಿಲ್ಲ ಎನ್ನುವಂಥ ಒಂದು ಭಾವನೆ ಅವರಿಗೆ ಬರಬಹುದು. ಆದರೆ, ಸಾಕಷ್ಟು ಕೆಲಸ ಅವರಿಗೆ ಸಿಗುತ್ತದೆ. ಹಾಗೆ ಆ ಟ್ರೈನಿಂಗ್ ಸಿಗುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಿದರೆ ಬಯೋಗ್ಯಾಸ್ ಮಾತ್ರ ಬಹಳ ಸಕ್ಸಸ್‌ಫುಲ್ ಪ್ರೋಗ್ರಾಮ್ ಆಗಿ ಉಳಿದ ಜಿಲ್ಲೆಯಲ್ಲೂ ಸಹ ಇಂಪ್ರೂವ್ ಆಗುತ್ತದೆ. ಬೆಳಗಾಂ ಜಿಲ್ಲೆಯವರು ಏನು ಆ ಪ್ರೋಗ್ರಾಂನ್ನು ಮಾಡಿದ್ದಾರೆ ಆ ಸಾಧನೆಯನ್ನು ಉಳಿದ ಜಿಲ್ಲೆಗಳಲ್ಲೂ ಸಹ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ಕಲಸವನ್ನು ದಯಮಾಡಿ ಸರ್ಕಾರ ಮಾಡಬೇಕು. ಇನ್ನು, ಈ 'ಚೂಲಾಸ್'ಗೆ ನಾವು ಎಷ್ಟು ಒತ್ತು ಕೊಡಬೇಕಾಗಿತ್ತೋ ಅಷ್ಟನ್ನು ನಾವು ಕೊಡುತ್ತಿಲ್ಲವೆಂದು ತೋರುತ್ತದೆ. ಅದರ ಬಗ್ಗೆ ಜನರಿಂದಲೂ

ಅಷ್ಟು ಬೇಡಿಕೆ ಬರುತ್ತಿಲ್ಲ. ಅದರ ಅವೇರ್‌ನೆಸ್ ಜಾಸ್ತಿ ಮಾಡಬೇಕು, ಅದರ ಬಗ್ಗೆ ಜನರಿಗೆ ಮೋಟಿವೇಟ್ ಮಾಡಬೇಕು, ಜನರಿಂದ ಬೇಡಿಕೆ ಬರುವ ಹಾಗೆ ಮಾಡಬೇಕು ಅದಕ್ಕೆ ತಕ್ಕಂತೆ ನಾವು ಕೊಡುವ ಹಾಗೆ ಆಗಬೇಕು. ಇದರಿಂದ ನಾವು ಕಟ್ಟಿಗೆ ಕಡೆಯುವುದು ಸಾಕಷ್ಟು ಉಳಿತಾಯವಾಗುತ್ತದೆ. ಈ 'ಚೂಲಾ'ದಿಂದ ಕೇವಲ ಅವರ ಕುಟುಂಬಕ್ಕೆ ಅಷ್ಟೇ ಅನುಕೂಲ ಅಲ್ಲ ನಮಗೆ ಸಾಮಾಜಿಕವಾಗಿ ಪರಿಸರವನ್ನು ಕಾಪಾಡುವುದರಲ್ಲಿ ಸಾಕಷ್ಟು ಅನುಕೂಲವಾಗುತ್ತದೆ. ಅದಕ್ಕೆ ಈ ಚೂಲಾಸ್ ಮತ್ತು ಬಯೋಗ್ಯಾಸ್ ಈ ಎರಡು ಯೋಜನೆಗಳಿಗೆ ಬಹಳ ಒತ್ತುಕೊಡಬೇಕು. ಇದಕ್ಕೆ ಲಿಮಿಟ್ ಇಲ್ಲ, ನೀವು ಬೇಕಾದಷ್ಟು ಕೇಳಿದರೂ ನಾವು ಕೊಡುತ್ತೇವೆ ಎನ್ನುವ ಹಾಗೆ ಇದಕ್ಕೆ ಓಪನ್ ಲಿಮಿಟ್ ಇಟ್ಟುಬಿಟ್ಟರೆ ಸಾಕು. ಗುರಿ ನಿಗದಿ ಮಾಡಲೇಬಾರದು. ಯಾರು ಎಷ್ಟು ಕೇಳುತ್ತಾರೋ ಅಷ್ಟು ಸರ್ಕಾರ ಕೊಡಬೇಕು. ಅಂದರೆ ಫ್ರೀಹ್ಯಾಂಡ್ ತಾವು ಕೊಡಿ. ಬಯೋಗ್ಯಾಸ್ ಪ್ಲಾಂಟನ್ನು ಕಟ್ಟಿಸತಕ್ಕಂಥವರಿಗೆ ಟ್ರೈನಿಂಗ್ ಆಗುವ ಹಾಗೆ ಮಾಡಬೇಕು. ಫ್ಯಾಮಿಲಿ ಪ್ಲಾನಿಂಗ್ ಮೋಟಿವೇಷನ್ ಸಲುವಾಗಿ ಅವರಿಗೆ ಹೇಗೆ ಸಹಾಯ ಮಾಡುತ್ತೀರೋ ಹಾಗೆ ಇದರ ಬಗ್ಗೆ ಮೋಟಿವೇಷನ್ ಮಾಡುವವರಿಗೆ ನೀವು ಏನಾದರೂ ಸ್ವಲ್ಪ ಸಹಾಯ ಮಾಡಿ. ಇದು ಲಾಂಗ್‌ರೇಂಜ್‌ನೊಳಗೆ ನಮಗೆ ಬಹಳಷ್ಟು ಅನುಕೂಲವಾಗುವಂಥ ಪ್ರೋಗ್ರಾಂ ಇವು ಎನ್ನುವ ಮಾತನ್ನು ತಮಗೆ ಹೇಳುತ್ತಿದ್ದೇನೆ. ಇನ್ನು ಗ್ರಾಮೀಣಾಭಿವೃದ್ಧಿ ಸಲುವಾಗಿ ಬಹಳಷ್ಟು ಹಣಕಾಸನ್ನು ಬೇರೆ ಬೇರೆ ಯೋಜನೆಗಳ ಮುಖಾಂತರ ಪಂಚಾಯತ್ ವ್ಯವಸ್ಥೆಯಲ್ಲಿ ಕೊಡುತ್ತಿದ್ದರೂ ಸಹಿತ ದುರ್ದೈವದಿಂದ ಆ ಎಲ್ಲಾ ಹಣಕಾಸಿನ ಉಪಯೋಗ ಆಗಲಾರದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರತಿ ವರ್ಷದಲ್ಲಿ ಎಷ್ಟೆಷ್ಟು ಯಾವಯಾವುದರಲ್ಲಿ ಖರ್ಚಾಗಿದೆ ಎಂಬುದನ್ನು ತಾವು ನೋಡಬಹುದು. ಪ್ರಜಾವಾಣಿ ಪತ್ರಿಕೆಯಲ್ಲಿ ಮಾನ್ಯ ಬಣಕಾರ್ ಒಂದು ಆರ್ಟಿಕಲ್ ಬರೆದಿದ್ದಾರೆ. 1996-97ರಲ್ಲಿ ರಾಜ್ಯದ ಜಿಲ್ಲಾ ಪಂಚಾಯತ್‌ಗಳಿಗಾಗಿ 1,272 ಕೋಟಿ 85 ಲಕ್ಷ ರೂಪಾಯಿಗಳ ಯೋಜನಾ ಮೊತ್ತವನ್ನು 1,628.55 ಕೋಟಿ ಯೋಜನೇತರ ಮೊತ್ತವನ್ನು ಅಧಿಕೃತವಾಗಿ ನಿಗದಿಪಡಿಸಲಾಗಿತ್ತು. ಸರ್ಕಾರದ ಇತ್ತೀಚಿನ ಅಧಿಕೃತ ಮಾಹಿತಿ ಪ್ರಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ 1995-96ರ ಕೊನೆಗೆ ಅಂದರೆ 31-3-1996ಕ್ಕೆ ವೆಚ್ಚ ಮಾಡದೇ ಉಳಿಸಿದ ಶಿಲ್ಕು ಹಣ 176.26 ಕೋಟಿ ರೂಪಾಯಿಗಳು. 1996-97ನೇ ಸಾಲಿಗೆ ಗೊತ್ತುಮಾಡಿದ ಹಣ 1007.95 ಕೋಟಿ ರೂಪಾಯಿಗಳು 1996-97ಕ್ಕೆ ಲಭ್ಯವಿರುವ ಹಣ 1184.20 ಕೋಟಿ ರೂಪಾಯಿಗಳು. ಇದರಲ್ಲಿ 867.97 ಕೋಟಿ ರೂಪಾಯಿಗಳನ್ನು ಮಾತ್ರ ನಾವು ಖರ್ಚು ಮಾಡಿದ್ದೇವೆ. ಜಿಲ್ಲಾಪಂಚಾಯತಿನಲ್ಲಿ 31-3-1997ಕ್ಕೆ 316.24 ಕೋಟಿ ರೂಪಾಯಿಗಳು ಉಳಿತಾಯವಾಗಿದೆ. ಇದರ ಜೊತೆಗೆ ಕೋಲಾರ ಜಿಲ್ಲಾಪಂಚಾಯತಿನಲ್ಲಿ 20.21 ಕೋಟಿ ರೂಪಾಯಿಗಳು ಗುಲ್ಬರ್ಗಾದಲ್ಲಿ 25.16 ಕೋಟಿ ರೂಪಾಯಿಗಳು, ಧಾರವಾಡ ಜಿಲ್ಲಾ ಪಂಚಾಯತಿನಲ್ಲಿ 19.98 ಕೋಟಿ ರೂಪಾಯಿಗಳು, ಚಿಕ್ಕಮಗಳೂರಿನಲ್ಲಿ 16.56 ಕೋಟಿ ರೂಪಾಯಿಗಳು, ಮೈಸೂರಿನಲ್ಲಿ 16.9 ಕೋಟಿ ರೂಪಾಯಿಗಳು, ಬಿಜಾಪುರದಲ್ಲಿ 14.86 ಕೋಟಿ ರೂಪಾಯಿಗಳು, ಬೆಂಗಳೂರು ಗ್ರಾಮಾಂತರದಲ್ಲಿ 14.47 ಕೋಟಿ ರೂಪಾಯಿಗಳು, ತುಮಕೂರಿನಲ್ಲಿ 13.19 ಕೋಟಿ ರೂಪಾಯಿಗಳು, ಶಿವಮೊಗ್ಗದಲ್ಲಿ 12.75 ಕೋಟಿ ರೂಪಾಯಿಗಳು, ಬೆಳಗಾವಿಯಲ್ಲಿ 6.50 ಕೋಟಿ ರೂಪಾಯಿಗಳು, ಬಳ್ಳಾರಿಯಲ್ಲಿ 8 ಕೋಟಿ

ರೂಪಾಯಿಗಳು, ಹೀಗೆ ಎಲ್ಲಾ ಜಿಲ್ಲಾಪಂಚಾಯತಿಗಳಿಗೆ ಕೊಟ್ಟಿರುವ ಹಣ ಉಳಿತಾಯವಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡು ತಾವು ವಿಶೇಷ ಆಸಕ್ತಿವಹಿಸಿ ಅನುಷ್ಠಾನಗೊಳಿಸಿದರೂ ಸಹಿತ 8 ಕೋಟಿ ರೂಪಾಯಿಗಳನ್ನು ಇನ್ನೂ ಖರ್ಚು ಮಾಡಲಿಕ್ಕೆ ಆಗಲಿಲ್ಲವೆಂದರೆ, ಆಯಾಯ ಜಿಲ್ಲಾಪಂಚಾಯತಿಗಳಿಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕೊಟ್ಟಂಥ ಹಣವನ್ನು ಖರ್ಚುಮಾಡುವ ಹಾಗೆ ಒಂದು ಅನುಕೂಲತೆಯನ್ನು ಮಾಡಬೇಕು. ನಾನು ಮಾನ್ಯ ಸಭಾಧ್ಯಕ್ಷರಿಗೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಮಾನ್ಯ ಬಣಕಾರ್‌ರವರು ಸಭಾಧ್ಯಕ್ಷರು ಆಗಿದ್ದಾಗ ನಾನು ಜಿಲ್ಲಾಪಂಚಾಯತಿ ಸದಸ್ಯನಾಗಿ ಕೆಲಸ ಮಾಡವಂಥ ಅವಕಾಶ ದೊರಕಿತ್ತು. ಅವರು ಬಜೆಟ್ ಅಧಿವೇಶನ ಆದಕೂಡಲೆ ಪ್ರತಿಯೊಬ್ಬ ಜಿಲ್ಲಾಪಂಚಾಯತಿ ಸದಸ್ಯರಿಗೂ ಅವರವರ ಕ್ಷೇತ್ರದಲ್ಲಿ ಇಂಥ ಯೋಜನೆಗೆ ಇಷ್ಟು ಹಣ ಇಟ್ಟಿದ್ದೇವೆ ಎನ್ನುವಂಥ ಮಾಹಿತಿ ಸಭಾಧ್ಯಕ್ಷರಿಂದಲೇ ನಮಗೆ ಬರುತ್ತಿತ್ತು. ಆದ್ದರಿಂದ, ದಯಮಾಡಿ ಮಾನ್ಯ ಸಭಾಧ್ಯಕ್ಷರಿಂದಲೇ ನಮ್ಮ ಶಾಸಕರಿಗೆ, ಸಭಾಧ್ಯಕ್ಷರಿಂದಲೇ ಜಿಲ್ಲಾಪಂಚಾಯತಿ ಸದಸ್ಯರಿಗೆ, ಸಾಧ್ಯವಾದರೆ ತಾಲ್ಲೂಕು ಪಂಚಾಯತಿ ಸದಸ್ಯರ ಮಟ್ಟಕ್ಕೂ ಈ ಮಾಹಿತಿ ಹೋಗುವಂತೆ ಮಾಡಬೇಕು. ಅಷ್ಟೇ ಅಲ್ಲ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ, ಈಗ ಮಿಡ್‌ಟರ್ಮ್ ಅಪ್ರೈಸಲ್ ಎಂದು ತಾವು ಹೇಗೆ ಮಾಡುತ್ತೀರಿ ಹಾಗೆಯೇ ಏಪ್ರಿಲ್ ತಿಂಗಳಿನಿಂದ ಇಲ್ಲಿಯವರೆಗೆ ಏನೇನು ಖರ್ಚು ಮಾಡಿದ್ದೇವೆ, ಯಾವ ಯಾವುದಕ್ಕೆ ಖರ್ಚು ಆಗಿಲ್ಲ ಏತಕ್ಕಾಗಿ ಖರ್ಚು ಆಗಿಲ್ಲ? ಮುಂದೆ 3-4 ತಿಂಗಳು ಆದಮೇಲೆ ನೀವು ಖರ್ಚು ಹೇಗೆ ಮಾಡಬೇಕು? ಎನ್ನುವುದರ ಬಗ್ಗೆ ಒಂದು ಪರಾಮರ್ಶಿಕೆ ಈ ಸದನದಲ್ಲಿ ಆಗುವ ಹಾಗೆ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ಮಾನ್ಯ ಸಭಾಧ್ಯಕ್ಷರ ಸಮ್ಮುಖಕ್ಕೆ ಅದು ಬಂತು ಅಂದರೆ ಅದಕ್ಕೆ ಹೆಚ್ಚು ಒತ್ತು ಸಿಕ್ಕಿದ ಹಾಗೆ ಆಗುತ್ತದೆ. ಇನ್ನು ಈ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮೊದಲಿನಿಂದಲೂ ಪ್ರತಿವರ್ಷದ ಕೊನೆಯಲ್ಲಿ ಅಂದರೆ ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ಹಣವನ್ನು ಬಿಡುಗಡೆ ಮಾಡುವಂತ ಪ್ರವೃತ್ತಿಯನ್ನು ನಾವು ಏನು ಬೆಳೆಸಿಕೊಂಡು ಬಂದಿದ್ದೇವೆ ಅದನ್ನು ಅಂದರೆ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡುವಂಥ ಹಣವನ್ನು ಪ್ರತಿ ತಿಂಗಳು ಬಿಡುಗಡೆ ಮಾಡುವ ಹಾಗೆ ಆಗಬೇಕು. ಇದು ರೊಟೀನ್‌ನಲ್ಲಿ ಆಗಬೇಕು. ಈಗ ಸಂಬಳವನ್ನು ಸರ್ಕಾರಿ ನೌಕರರಿಗೆ ಪ್ರತಿ ತಿಂಗಳು ಕೊಡುತ್ತೇವೆ. ಈ ಸಂಬಳಕ್ಕೆ ಶೇಕಡ 67ರಷ್ಟು ಹಣ ಖರ್ಚಾಗುತ್ತದೆಂದು ನಾವು ಹೇಳುತ್ತೇವೆ. ಈ ಹಣವನ್ನು ಪ್ರತಿ ತಿಂಗಳು ಬಿಡುಗಡೆ ಮಾಡಲಾಗುತ್ತಿದೆ. ಅದೇ ರೀತಿ ಅಭಿವೃದ್ಧಿ ಕಾರ್ಯಗಳಿಗೆ ಉಳಿದ ಶೇಕಡ33 ರಷ್ಟು ಹಣವನ್ನು ಪ್ರತಿ ತಿಂಗಳು ಬಿಡುಗಡೆ ಮಾಡುವುದಕ್ಕಾಗುವುದಿಲ್ಲವೇ? ಮತ್ತು ಅದನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲವೇ? ಅಭಿವೃದ್ಧಿಗಾಗಿ ಖರ್ಚು ಆಗುವಂಥ ಹಣವನ್ನು ಪ್ರತಿ ತಿಂಗಳು ರೋಟೀನ್ ಆಗಿ ಬಿಡುಗಡೆ ಆಗುವ ಹಾಗೆ ಮಾಡಬೇಕು. It should be the responsibility of the Finance Secretary. He must also see that plan funds should go to the concerned Panchayat Raj Institutions every month, ಅಂದರೆ ಪ್ರತಿ ತಿಂಗಳು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಖರ್ಚು ಮಾಡಲಿಕ್ಕೆ ಅನುಕೂಲವಾಗುತ್ತದೆ. ಈ ಜೆ.ಆರ್.ವೈ, ಇ.ಎಸ್.ಐ. ಯೋಜನೆಗಳ ಹಣ ನಮ್ಮ ಜಿಲ್ಲೆಗೆ ಇನ್ನೂ ಕೂಡ ಬಿಡುಗಡೆ ಆಗಿಲ್ಲ. ಎಂದರೆ ಈ ಅಧಿವೇಶನ

ಪ್ರಾರಂಭವಾಗುವುದಕ್ಕೆ ಮುಂಚೆ ನಾವು ಅದರ ಬಗ್ಗೆ ವಿಚಾರ ಮಾಡಿದಾಗ ಹಣ ಬಿಡುಗಡೆ ಆಗಿರಲಿಲ್ಲ. ನಮ್ಮ ಜಿಲ್ಲೆಯಲ್ಲಿ ಮುಂಗಾರು ಮಳೆ ಆಗಿಲ್ಲ. ಅಲ್ಲಿ ನಮ್ಮ ಜನರು ಕೆಲಸ ಬೇಕು ಎಂದು ಕೇಳುತ್ತಾರೆ. ನೀವು ನಿಮ್ಮ ಪಂಚಾಯತಿಯಲ್ಲಿರುವ ಹಣವನ್ನು ಉಪಯೋಗ ಮಾಡಿಕೊಳ್ಳಿ, ಜೆ.ಆರ್.ವೈ. ಫಂಡ್. ಇರುತ್ತದೆ, ಇ.ಎಸ್.ಐ. ಫಂಡ್ ಇರುತ್ತದೆ ಎಂದು ಹೇಳಿದರೆ, ಆ ಹಣ ನಮಗೆ ಬಂದಿಲ್ಲವೆಂದು ಅವರು ಹೇಳುತ್ತಾರೆ. ಈಗ ಏಪ್ರಿಲ್ ಮೇ ತಿಂಗಳಿನಲ್ಲಿ ಈ ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡುವುದು ಎಷ್ಟು ಅವಶ್ಯವಿದೆಯೇ ಅದು ಜೂನ್, ಜುಲೈ, ಆಗಸ್ಟ್, ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಅಷ್ಟು ಅವಶ್ಯವಿರುವುದಿಲ್ಲ. ಈ ತಿಂಗಳುಗಳಲ್ಲಿ ಮಳೆ ಬರದೆ 'ಬರ' ಪರಿಸ್ಥಿತಿ ಇದ್ದರೆ ಅಲ್ಲಿಯ ಕೃಷಿ ಕಾರ್ಮಿಕರಿಗೆ ಉದ್ಯೋಗ ಅವಶ್ಯಕತೆ ಇರುತ್ತದೆ ಇಲ್ಲವೆಂದರೆ ಅದರ ಅವಶ್ಯಕತೆ ಇರುವುದಿಲ್ಲ. ಅದಕ್ಕೋಸ್ಕರ ಈ ಜೆ.ಆರ್.ವೈ. ಫಂಡ್ಸ್ ಆಗಲಿ, ಇ.ಎಸ್.ಐ. ಫಂಡ್ಸ್ ಆಗಲೀ, ಜನರಿಗೆ ಉದ್ಯೋಗ ಒದಗಿಸುವಂಥ ಫಂಡ್ಸ್ ಏನು ಇರುತ್ತದೆ ಅದು ಮಾತ್ರ ಏಪ್ರಿಲ್ ತಿಂಗಳ ಒಂದನೇ ತಾರೀಖಿಗೆ ಸಂಬಂಧಪಟ್ಟ ಜಿಲ್ಲಾಪಂಚಾಯತಿಗಳಿಗೆ ಬಿಡುಗಡೆ ಆಗುವಂಥ ವ್ಯವಸ್ಥೆಯನ್ನು ಮಾಡಬೇಕು. ಮೊದಲು ಹಣಕಾಸನ್ನು ಸಂಗ್ರಹ ಮಾಡುವಾಗ ಸ್ವಲ್ಪ ತಾಪತ್ರಯ ಎಂದು ಅನ್ನಿಸಬಹುದು, ಮುಂದೆ ಈ ಕೆಲಸ ರೊಟೀನ್ ಆಗಿ ಆಗುತ್ತದೆ. ಈ ಕೆಲಸವನ್ನು ಸರ್ಕಾರ ದಯಮಾಡಿ ಮಾಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ. ಕಳೆದ ಸಲ ಗ್ರಾಮಸಭೆಯಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳನ್ನು 'ವೀಡಿಯೋ ರಿಕಾರ್ಡಿಂಗ್' ಮಾಡಬೇಕೆಂದು ತಮಗೆ ಒಂದು ಸಲಹೆಯನ್ನು ಕೊಟ್ಟಿದ್ದೆ. ಅದು ಗದಗ್ ತಾಲ್ಲೂಕಿನಲ್ಲಿಯೇ ಅನುಷ್ಠಾನಗೊಳ್ಳಲಿ ಎಂದು ಹೇಳಿ, ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಅನುಷ್ಠಾನಗೊಳ್ಳಲಿಕ್ಕೆ ಎಲ್ಲಾ ಅವಕಾಶಗಳನ್ನು ಕಲ್ಪಿಸಿ ಕೊಟ್ಟಿದ್ದೀರಿ. ಅವರೆಲ್ಲ ಗ್ರಾಮಸಭೆಯ ವೀಡಿಯೋ ರಿಕಾರ್ಡಿಂಗ್ ಮಾಡುತ್ತಿದ್ದಾರೆ. ನಾನು ಗ್ರಾಮ ಸಭೆಗೆ ಹೋಗಿರಲಿಲ್ಲ. ಆ ಸಂಬಂಧಪಟ್ಟ ಎಕ್ಸಿಕ್ಯುಟೀವ್ ಆಫೀಸರನ್ನು ನಾನು ಕೇಳಿದೆ. ನಾನು ಪ್ರತಿ ಗ್ರಾಮಸಭೆಗೆ ಅಟೆಂಡ್ ಆಗುವಂಥ ಪದ್ಧತಿಯನ್ನು ಬೆಳೆಸಿಕೊಂಡು ಬಂದಿದ್ದೆ. ಎರಡು ವರ್ಷಗಳ ಹಿಂದೆ ನಾನು ಒಂದು ಗ್ರಾಮಸಭೆಗೆ ಹೋದಾಗ - 'ನಿಮಗೆ ಈ ಗ್ರಾಮಸಭೆಯಲ್ಲಿ ಇರಲಿಕ್ಕೆ ಏನು ಹಕ್ಕು ಇದೆ?' ಎಂದು ನನಗೆ ಪ್ರಶ್ನೆಯನ್ನು ಅಲ್ಲಿಯ ಪಂಚಾಯತಿ ಅಧ್ಯಕ್ಷರು ಕೇಳಿದರು. ಅಲ್ಲಿಯ ಪಂಚಾಯತಿ ಅಧ್ಯಕ್ಷರು ನಮ್ಮ ವಿರೋಧವಾಗಿ ಇದ್ದರು. ದುರ್ದೈವದಿಂದ ಅಲ್ಲಿ ರಾಜಕೀಯ ಬಂದುಬಿಟ್ಟಿತು. 'ನನಗೆ ಹಕ್ಕು ಇಲ್ಲಪ್ಪ, ನಾನು ಇನ್ನು ಮೇಲೆ ಯಾವ ಗ್ರಾಮಸಭೆಗೂ ಹೋಗುವುದಿಲ್ಲ, ಬಹಳ ಎಂದರೆ ಹುಲುಕೋಟಿ ಗ್ರಾಮಸಭೆಯೊಳಗೆ ಅಷ್ಟೇ ಕುಳಿತು ಕೊಳ್ಳಲಿಕ್ಕೆ ನನಗೆ ಕಾನೂನು ಬದ್ಧ ಹಕ್ಕು, ನೀನು ಕೇಳುವುದು ಯೋಗ್ಯ, ನಾನು ಇಲ್ಲಿಗೆ ಬಂದಿದ್ದು ತಪ್ಪು' ಎಂದು ಹೇಳಿ ಆವತ್ತಿನಿಂದ ನಾನು ಗ್ರಾಮಸಭೆಗೆ ಹೋಗುವುದನ್ನು ಬಿಟ್ಟಿದ್ದೇವೆ. ನಾವು ಹೋಗಬೇಕೆಂದು ಅಪೇಕ್ಷೆಪಡುವುದಿಲ್ಲ. ಕಾನೂನುಬದ್ಧವಾಗಿ ನಾವು ಹೋಗುವುದಕ್ಕೆ ಆಗುವುದಿಲ್ಲ. ಅಲ್ಲಿ ಸ್ಥಳೀಯ ರಾಜಕೀಯ ಬರುತ್ತದೆ, ಅಸಹ್ಯ ಅನ್ನಿಸುತ್ತದೆ. ನೀನು ಏತಕ್ಕೆ ಬಂದೆ ನಮ್ಮ ಮನೆಗೆ ಅಂದರೆ ನಾವು ಹೋಗುವುದು ಹೇಗೆ? ಅದಕ್ಕೋಸ್ಕರ ನಾನು ಗ್ರಾಮಸಭೆಗಳಿಗೆ ಹೋಗುವುದನ್ನು ಬಿಟ್ಟಿದ್ದೇವೆ. ನಾನು ಎಕ್ಸಿಕ್ಯುಟೀವ್ ಆಫೀಸರನ್ನು ಕೇಳಿದೆ, ವಿಡಿಯೋ ಕಾರ್ಯಕ್ರಮ ಪ್ರಾರಂಭವಾದಮೇಲೆ, ಗ್ರಾಮಸಭೆಯ ಕಾರ್ಯಕ್ರಮವನ್ನು ವಿಡಿಯೋ ರೆಕಾರ್ಡಿಂಗ್ ಮಾಡುವುದಕ್ಕೆ ಹತ್ತಿದ ಮೇಲೆ ನಿಮಗೆ ಏನು ಅನ್ನಿಸುತ್ತದೆ ಅಂದೆ. ಅದಕ್ಕೆ ಅವರು

ಹೇಳಿದರು, ಜನರು ಹೆಚ್ಚು ಬರುವುದಕ್ಕೆ ಹತ್ತಿದ್ದಾರೆ, ಜನರಿಗಿಂತ ಹೆಚ್ಚಾಗಿ ಎಲ್ಲಾ ಅಧಿಕಾರಿಗಳು ಬರುವುದಕ್ಕೆ ಹತ್ತಿದ್ದಾರೆ. ನಮ್ಮ ಫೋಟೋ ತೆಗೆಯುತ್ತಾರೆಂದು ಎಲ್ಲಾ ಅಧಿಕಾರಿಗಳು ಗ್ರಾಮಸಭೆಯಲ್ಲಿ ಹಾಜರಿರುತ್ತಾರೆ. ಅಲ್ಲಿ ಎಲ್ಲಾ ಕಾರ್ಯಕ್ರಮಗಳ ವಿವರಣೆ ಪಡೆದುಕೊಂಡು ಸಾಕಷ್ಟು ಪ್ರಶ್ನೋತ್ತರಗಳು ಆಗುತ್ತವೆ. ನಾನು ಒಂದು ಊರಿನ ಹೆಸರು ಹೇಳುವುದಿಲ್ಲ. ಆ ಊರಿನಲ್ಲಿ8 ಸಾವಿರ ರೂಪಾಯಿಗಳನ್ನು ಶಾಲೆ ರಿಪೇರಿ ಸಲುವಾಗಿ ಖರ್ಚು ಹಾಕಿದ್ದರು. ಆದರೆ ಅಲ್ಲಿ ಏನೂ ಕೆಲಸ ಮಾಡಿರಲಿಲ್ಲ. ಏತಕ್ಕೆ 8 ಸಾವಿರ ರೂಪಾಯಿಗಳನ್ನು ಖರ್ಚು ಹಾಕಿದ್ದೀರಿ, ಕೆಲಸ ಏಕೆ ಮಾಡಿಲ್ಲವೆಂದು ಪ್ರಶ್ನೆ ಕೇಳಿದರು. ಮೊನ್ನೆ ಒಂದು ಸಮಾರಂಭ ಆಯಿತಲ್ಲ, ಆ ಸಮಾರಂಭಕ್ಕೆ ಖರ್ಚು ಮಾಡಿದ್ದೇವೆ ಮತ್ತು ಅದನ್ನು ಎಲ್ಲರಿಗೆ ತಿಳಿಸಿದ್ದೇವೆಂದು ಹೇಳಿದರು. ಅಂದಾಗ ಜನರಿಗೆ ಹಣ ದುರುಪಯೋಗವಾದರೂ ಏತಕ್ಕೆ ದುರುಪಯೋಗವಾಗಿದೆ ಎಂದು ಗೊತ್ತಾಗುತ್ತದೆ. ಅದಕ್ಕೆ ದಯವಿಟ್ಟು ವಿಡಿಯೋ ರೆಕಾರ್ಡಿಂಗ್ ಮಾಡತಕ್ಕ ವ್ಯವಸ್ಥೆ ಮಾಡಿ. ಅದಕ್ಕೆ ಬಹಳ ಖರ್ಚು ಬರುವುದಿಲ್ಲ. ನಮ್ಮಲ್ಲಿ ಕೇಳಿದೆ, ನೀವು ಖಾಸಗಿಯವರು ಯಾರನ್ನಾದರೂ ಈ ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ಎಂದು. ಇಲ್ಲ, ನಮಗೆ ಜಿಲ್ಲಾ ಪಂಚಾಯಿತಿಯಿಂದ ಕ್ಯಾಮರಾ ಕೊಡಿಸಿದ್ದಾರೆ. ಆ ಕ್ಯಾಮರಾದಲ್ಲಿ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್‌ಗೆ ಟ್ರೈನಿಂಗ್ ಕೊಟ್ಟಿದ್ದೇವೆ, ನಮಗೆ ಕ್ಯಾಸೆಟ್ ಖರ್ಚು ಅಷ್ಟೇ ಬರುತ್ತದೆ ಅಂದರು. ಅವರು ಎಲ್ಲಾ ಗ್ರಾಮಸಭೆಯನ್ನು ಒಂದೊಂದು ಕ್ಯಾಸೆಟ್‌ನಲ್ಲಿ ರಿಕಾರ್ಡಿಂಗ್ ಮಾಡಿಕೊಂಡು ಬರುತ್ತಿದ್ದಾರೆ. ನೀವು ಹಾಗೆ ಮಾಡಬೇಡಿ, ಗ್ರಾಮ ಪಂಚಾಯಿತಿಗೆ ಒಂದೊಂದು ಕ್ಯಾಸೆಟ್ ಇಡಿ. ಆ ಗ್ರಾಮಸಭೆ ಮುಗಿಯಿತು, ಮುಂದಿನ ಗ್ರಾಮ ಸಭೆ ಅದೇ ಕ್ಯಾಸೆಟ್‌ನಲ್ಲಿ ಆಗಲಿ, ಅಂದರೆ ಮ್ಯಾನುಪ್ಯುಲೇಷನ್‌ಗೆ ಅವಕಾಶ ಇರುವುದಿಲ್ಲ. ಇದು ಬಹಳಷ್ಟು ಅನುಕೂಲವಾಗುತ್ತದೆ, ಅಧಿಕಾರಿಗಳು ಬರುತ್ತಾರೆ. ದಯವಿಟ್ಟು ಈ ಡಾಕ್ಯುಮೆಂಟ್ ಇರಲಿ.

ಶ್ರೀ ಎಂ. ಪಿ. ಪ್ರಕಾಶ್ : ಗ್ರಾಮಸಭೆಗಳು ಬಹಳ ಕಡೆ ನಡೆಯುವುದಿಲ್ಲ ಅಂದಮೇಲೆ ನಾವು ಏನು ಮಾಡಿದೆವು ಅಂದರೆ ಫೋಟೋಗ್ರಾಫ್ ಮಾಡುವುದನ್ನು ಎಲ್ಲಾ 175 ತಾಲ್ಲೂಕುಗಳಲ್ಲೂ ಕಡ್ಡಾಯ ಮಾಡಬೇಕೆಂದು ಮಾಡಿದೆವು. ಅದನ್ನು ಗ್ರಾಮಸಭೆಗಳಿಗೆ ಎಂದು ಮಾಡಿದೆವು. ಅದು ಬರುಬರುತ್ತಾ ಯಾವುದೋ ಮಂತ್ರಿಗಳ ಸಭೆ, ಇನ್ನು ಯಾವುದೋ ಸಭೆಗೆ ಹೋಗಿ ಗ್ರಾಮಸಭೆ ಎಂದು ತೋರಿಸುವ ಪರಿಪಾಠ ನಡೆಯಿತೆಂದು ದೂರು ಬಂತು. ಇದಾದ ಮೇಲೆ ಮಾನ್ಯ ಡಿ.ಆರ್. ಪಾಟೀಲರು ವಿಡಿಯೋ ಗ್ರಾಫ್ ಮಾಡಿ ಅದರ ಧ್ವನಿ ಕೂಡ ರೆಕಾರ್ಡಿಂಗ್ ಆಗಬೇಕೆಂದು ಮಾಡಿದರು. ನಾವು ಪ್ರಾಯೋಗಿಕವಾಗಿ ಗದಗ್ ತಾಲ್ಲೂಕಿನಲ್ಲಿ ಮಾಡಿದ್ದೇವೆ. ಇಡೀ ಎಲ್ಲಾ ಗ್ರಾಮಸಭೆಗಳಿಗೆ ಮಾಡುವುದಕ್ಕೆ ಒಟ್ಟು ಎಷ್ಟು ಖರ್ಚು ಬರುತ್ತದೆಂದು ಗೊತ್ತಾದ ಮೇಲೆ ಇದನ್ನು ಬೇರೆ ಬೇರೆ ತಾಲ್ಲೂಕುಗಳಲ್ಲಿ ಮಾಡಬೇಕೆಂಬ ಉದ್ದೇಶ ಇದೆ. ಅದನ್ನು ಸರ್ಕಾರ ಪರಿಶೀಲಿಸುತ್ತದೆ.

MR. SPEAKER : It is a very good suggestion. ಮಾನ್ಯ ಡಿ.ಆರ್. ಪಾಟೀಲ್ ಅವರು ಹೇಳಿದ ಹಾಗೆ ನಮ್ಮ ಹಳ್ಳಿಯಲ್ಲಿ feudal attitude ಇರುತ್ತದಲ್ಲ it gets reflected in different angles. ಅವರು, ನೀವು ಏತಕ್ಕೆ ಬಂದಿರಿ, ನಿಮಗೆ ಏನು ಹಕ್ಕು ಇದೆ ಇಲ್ಲಿ ಬರಲಿಕ್ಕೆ ಎಂದು

ಕೇಳುತ್ತಾರೆ. ಇನ್ನೊಂದು ಊರಿನಲ್ಲಿ ನಿವೇಶನ ಕೊಡುತ್ತೇವೆಂದರೆ, ನೀವು ಯಾರು ಕೊಡುವುದಕ್ಕೆ, ನಮ್ಮ ಊರಿಗೆ ನಿವೇಶನ ಬೇಡ ಅನ್ನುತ್ತಾರೆ. ಸರ್ಕಾರಿ ಜಾಗ ಇದೆ, ಯಾರದ್ದೂ ಜಾಗ ಅಕ್ವೈರ್ ಮಾಡುವ ಹಾಗೆ ಇಲ್ಲ. ನಿವೇಶನ ಇಲ್ಲದೆ ಇರುವವರು ಊರಿನಲ್ಲಿದ್ದಾರೆ, ಆದರೆ ಅವರು ಬಂದು ಕೇಳುವ ಹಾಗೆ ಇಲ್ಲ. ಅವರು ಬಂದು ಈ ರೀತಿ ಹೇಳುತ್ತಾರೆ. ಈ ರೀತಿ ಜನ ವಿಕಾರ ವಿಕಾರವಾಗಿ ಎಲ್ಲ ಕಡೆ ಇರುವುದರಿಂದ I think some such thing will have to be done. It is a good suggestion.

ಶ್ರೀ ಎಂ. ಪಿ. ಪ್ರಕಾಶ್ : ನಾವು ರಾಜಕೀಯದಲ್ಲಿರುವುದರಿಂದ ತಮಗೆ ಇದೇನು ಹೊಸದಲ್ಲ. ಯಾರಾದರೂ ಒಬ್ಬರು ಗ್ರಾಸಭೆಯಲ್ಲಿ ಇಂಥ ಪ್ರಶ್ನೆ ಕೇಳಿರಬಹುದು. ಅದರೆ ನೀವೆಲ್ಲರೂ ಗ್ರಾಮಸಭೆಗೆ ಹೋಗುವುದರಿಂದ ಅದಕ್ಕೆ ಮಹತ್ವ ಬರುತ್ತದೆ ಮತ್ತು ಒಳ್ಳೆಯ ಮಾರ್ಗದರ್ಶನ ಸಿಗುತ್ತದೆ. ಯಾರೋ ಒಬ್ಬರು ಈ ತರಹ ಪ್ರಶ್ನೆ ಮಾಡಿದರು ಎಂದು ನೀವು ನೊಂದುಕೊಂಡು ಹೋಗುವುದಿಲ್ಲ ಎಂಬುದಕ್ಕಿಂತ ತಾವು ಸಾಧ್ಯವಾದಷ್ಟು ಗ್ರಾಮಸಭೆಗಳಿಗೆ ಹೋಗಿ.

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ಅವರು ಹೇಳುತ್ತಿರುವುದು, ಅದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ ಎಂದು.

ಶ್ರೀ ಎಂ. ಪಿ. ಪ್ರಕಾಶ್ : ಕಾನೂನಿನಲ್ಲಿ ಅವಕಾಶ ಇದೆ. ಗ್ರಾಮ ಸಭೆಗೆ ಎಲ್ಲ ಶಾಸಕರು ಹೋಗಬಹುದು ಎಲ್ಲ ಅಧಿಕಾರಿಗಳು ಹೋಗಬಹುದು. ಆದರೆ ಅಲ್ಲಿ ಪ್ರಾಯಶಃ ಏನಾದರೂ ಮಾರ್ಪಾಡುಗಳು ಅವರ ಕಡೆಯಿಂದ ನಡೆಯುವುದಿಲ್ಲವೆಂದು ತೊಂದರೆ ಕೊಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಅದು ನಿಮ್ಮ ಕಾನೂನಿನಲ್ಲಿ ಇದೆ. ಆದರೆ ಕೆಲವು ಸಂದರ್ಭದಲ್ಲಿ ಏನಾಗುತ್ತದೆಂದರೆ ಅಲ್ಲಿ ಯಾರೂ ಮಾತನಾಡದೆ ಇದ್ದರೆ ಹೆಚ್ಚಿನ ಸಂದರ್ಭಗಳಲ್ಲಿ ಯಾರೂ ಮಾತನಾಡುವುದಿಲ್ಲವೆಂದು ಹೇಳುವುದಿಲ್ಲ. ಈ ತರಹ ಕೆಲವು ಪ್ರಸಂಗಗಳು ಆಕಸ್ಮಿಕವಾಗಿ ಬರತಕ್ಕ ಸಾಧ್ಯತೆ ಇದೆ.

ಅಧ್ಯಕ್ಷರು : ಮಾನ್ಯ ರೆಡ್ಡಿಯವರೆ, ಇದು ಕಾನೂನು ಪ್ರಶ್ನೆಗಿಂತ ಹೆಚ್ಚಾಗಿ ವಾಸ್ತವಾಂಶದಲ್ಲಿ ಏನೇನು ನ್ಯೂನ್ಯತೆ ಇದೆ ಎಂಬುದನ್ನು ಶ್ರೀ ಡಿ.ಆರ್. ಪಾಟೀಲರು ಪ್ರಸ್ತಾಪ ಮಾಡಿದರು. ಹಳ್ಳಿಯಲ್ಲಿ ರಾಜಕೀಯ ಬಿಕ್ಕಟ್ಟು ಎಷ್ಟು ತೀವ್ರವಾಗಿದೆ ಎಂದರೆ, ಯಾರೋ ಒಬ್ಬರು ನಮ್ಮ ಊರಿಗೆ ಅವರು ಏನು ಬರುವುದು ಎಂದು ಹೇಳುವುದು. ಅವರು ಬರಬೇಡಿ ಅಂದರೆ ನೀವು ಬರಲೇಬೇಕೆಂದು ಹೇಳುವುದು. ಹೀಗಾಗಿ ಇವರು ಹೋಗುವುದೇ ಒಂದು ದೊಡ್ಡ ವಿಷಯವಾಗುತ್ತದೆ. ಗ್ರಾಮಸಭೆ ಒಂದು ವಿಷಯವಾಗುವುದಿಲ್ಲ. ಇದಕ್ಕೆ ಒಂದು ಮೆರವಣಿಗೆ, ತಮಟೆ, ಬ್ಯಾಂಡ್‌ಸೆಟ್ ಮಾಡಿ ಎಲ್ಲೋ ಊಟ. ಈ ಕ್ಷುಲ್ಲಕವಾದ ವಿಚಾರಗಳು ಪ್ರಧಾನವಾಗುತ್ತವೆ, ನಿಜವಾದ ವಿಚಾರ ಏನಿದೆ ಅದು ಅಪ್ರಮುಖವಾಗುತ್ತದೆ. ಅದು ಹಾಗೆ ಆಗಬಾರದು. ವೈಯಕ್ತಿಕವಾಗಿ ನನಗೆ ಪ್ರತಿಷ್ಠೆ ಇಲ್ಲ, ನೀವು ಒಳ್ಳೆಯ ಕೆಲಸ ಮಾಡಿ ಎಂದು ಹೇಳಿದೆ. ಹಳ್ಳಿಯ ವಾತಾವರಣ ಹೇಗಿದೆ ಎಂದು ಉದಾಹರಣೆಯ ಮುಖಾಂತರ ಹೇಳಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ಇನ್ನೂ ಬಹಳ ಮುಖ್ಯವಾಗಿರತಕ್ಕದ್ದು ಎಂದರೆ, ಅಲ್ಲ ಐ.ಆರ್.ಡಿ.ಪಿ.ಗೆ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಇರುತ್ತದೆ. ಅಲ್ಲಿ ಐಆರ್‌ಡಿ.ಪಿ.ಗೆ ಅರ್ಹರಾಗಿರತಕ್ಕ 100 ಜನಗಳ ಯಾದಿ ಇರುತ್ತದೆ. ಅದರಲ್ಲಿ ಯಾರನ್ನು ಆಯ್ಕೆ ಮಾಡಬೇಕು, ಯಾರನ್ನು ಬಿಡಬೇಕು ಅಂದಾಗ ಅನೇಕ ಸಂದರ್ಭಗಳಲ್ಲಿ ಅಪ್ರಿಯವಾದ ಘಟನೆಗಳು ನಡೆಯುತ್ತವೆ. ಹೊಡೆದಾಟಗಳು ಆಗುತ್ತವೆ. ಸದಸ್ಯರ ಮೇಲೆ ಆಪಾದನೆಗಳನ್ನು ಮಾಡುತ್ತಾರೆ.

ಅಧ್ಯಕ್ಷರು : ಪಂಚಾಯಿತಿಗೆ ಹಣ ಹೋಗುತ್ತದಲ್ಲ, ಸದಸ್ಯರೆಲ್ಲ ಸೇರಿ ಸಭೆ ಮಾಡುತ್ತಾರಲ್ಲ. ಅವರು ಕಾರ್ಯಕ್ರಮದ ಪ್ರಕಾರ ಚರ್ಚೆ ಮಾಡುವುದಿಲ್ಲ. ನನ್ನದು ನನಗೆ ಕೊಟ್ಟುಬಿಡು ಅನ್ನುತ್ತಾರೆ. ಅವರಿಗೆಲ್ಲ ಎಂ.ಓ. ಕಳುಹಿಸಬೇಕು, ಹೌದಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನೀವು ಹೇಳುತ್ತಿರುವುದು ಸತ್ಯ ಇದೆ. ಆಕ್ಷನ್ ಪ್ಲಾನ್ ಮಾಡತಕ್ಕ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಹೋಗಿ ಕುಳಿತರೆ ಗೊತ್ತಾಗುತ್ತದೆ. ತಾಲ್ಲೂಕು ಪಂಚಾಯಿತಿ ಬಗ್ಗೆ ನಮಗೆ ಅನುಭವ ಇದೆ. ನಾವು ಆಕ್ಷನ್ ಪ್ಲಾನ್ ಮಾಡುವಾಗ ಹೋಗಿ ಕುಳಿತುಕೊಳ್ಳುತ್ತೇವೆ. ಆಗ ಅಲ್ಲಿ ಏನು ಸಮಸ್ಯೆ ಬರುತ್ತದೆಂದರೆ ಇ.ಎ.ಎಸ್. ನಾರ್ಮ್ಸ್ ಪ್ರಕಾರ 50 ಪರ್ಸೆಂಟ್ ವಾಟರ್‌ಷೆಡ್‌ಗೆ ಹೋಗಬೇಕು, 50 ಪರ್ಸೆಂಟ್ ಬೇರೆಯದಕ್ಕೆ ಹೋಗಬೇಕು. ವಾಟರ್‌ಷೆಡ್ ಪ್ರೋಗ್ರಾಂ ಇ.ಎ.ಎಸ್.ನಲ್ಲಿ ಸೇರ್ಪಡೆಯಾಗಿದೆ ಅಂದಾಗ ಅಲ್ಲಿ ಏನಾಗುತ್ತದೆಂದರೆ ಆಕ್ಷನ್ ಪ್ಲಾನ್ ಏನಿದೆ ಆ ಪ್ರಕಾರ ಹಣವನ್ನು ಪ್ರತಿಯೊಂದಕ್ಕೂ ಇಟ್ಟು ಆ್ಯಕ್ಷನ್ ಪ್ಲಾನ್ ಅಪ್ರೂವ್ ಮಾಡಬೇಕೆಂದು ಇಲ್ಲ. ಅಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯರು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು, ಉಪಾಧ್ಯಕ್ಷರು, ಶಾಸಕರು ನಮಗೆ ಏನೇನು ಖೋಟಾ ಬರುತ್ತದೋ ಕೊಡಿ ಎಂದು ಕೇಳುತ್ತಾರೆ. ಒಂದು ಕೋಟಿ 20 ಲಕ್ಷ ರೂಪಾಯಿಗಳು ಒಂದು ತಾಲ್ಲೂಕಿಗೆ ಬಂದಿದೆ. ನಮಗೆ ಏನೇನು ಕೊಡುತ್ತಾರೋ, ಒಬ್ಬೊಬ್ಬರಿಗೆ ಇಷ್ಟು ಭಾಗ ಮಾಡಿ ಎಂದು ಹೇಳತಕ್ಕ ಪ್ರವೃತ್ತಿ ಬೆಳೆಯುತ್ತಿದೆ.

ಶ್ರೀ ಜೆ. ಹೆಚ್. ಪಟೇಲ್ : ಐಆರ್‌ಡಿಪಿ ಯಲ್ಲಿ ಸಾಲ ಕೊಟ್ಟಿರುವುದು ಬಹಳ ಉಪಯುಕ್ತವಾದುದು. ಗದಗ್ ತಾಲ್ಲೂಕಿನಲ್ಲಿ ಯಾವ ರೀತಿ ನಡೆಯುತ್ತಿದೆ ಅದೇ ರೀತಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ನಡೆದು ಎಲ್ಲಾ ಶಾಸಕರು ಗ್ರಾಮಸಭೆಗೆ ಹಾಜರಾದರೆ ಈ ನಮ್ಮ ಡೀಸೆಂಟ್ರಲೈಸೇಷನ್ ಕಾನ್ಸೆಪ್ಟ್ ಏನಿದೆ ಅದು ಭದ್ರವಾಗುತ್ತದೆ. ಗ್ರಾಮಸಭೆ ಒಂದು ವೀಕ್ ಆದರೆ ಆ ಒಂದು ವೀಕ್‌ನೆಸ್‌ನಲ್ಲಿ ಇಡೀ ಕಾನ್ಸೆಪ್ಟ್ ಹಾಳಾಗಿ ಹೋಗುತ್ತಿದೆ. ಇದನ್ನು ಮಾನ್ಯ ನಜೀರ್ ಇದ್ದಾಗ ಬಹಳ ಕಳಕಳಿಯಿಂದ ಗ್ರಾಮಸಭೆ ಆಗಬೇಕು ಎಂದು ಹೇಳುತ್ತಿದ್ದರು. Whatever we have experimented in Gadag Taluka, we will extend the same thing to other talukas even if there some expenditure to be incurred.

ಶ್ರೀ ಡಿ. ಆರ್. ಪಾಟೀಲ್ : ಕ್ಯಾಮರಾ ಏನಿದೆ ಅದಕ್ಕೆ ಒಂದು ಸಾರಿ ಇನ್‌ವೆಸ್ಟ್‌ಮೆಂಟ್ ಮಾಡುವುದು ಅಷ್ಟೆ. ಕ್ಯಾಮರಕ್ಕೆ 60 ರಿಂದ 70 ಸಾವಿರ ರೂಪಾಯಿಗಳು ಹಾಕಬೇಕಾಗಿತ್ತು. ಈ ಕ್ಯಾಮರ ರೇಟ್ ಕಡಿಮೆ ಆಗಿದ್ದರೂ ಆಗಿರಬಹುದು. ಒಮ್ಮೆ ಕ್ಯಾಮರಾ ತೆಗೆದುಕೊಂಡರೆ ಯಾರು

ಬೇಕಾದರೂ ಅದನ್ನು ಆಪರೇಟ್ ಮಾಡಬಹುದು. ಕ್ಯಾಮರಾ ಆಪರೇಷನ್‌ನಲ್ಲಿ ಇಷ್ಟು ಫುಲ್‌ಪ್ರೂಫ್ ಆಪರೇಷನ್ ಬಂದಿದೆ. ಮುಂದೆ ಕ್ಯಾಸೆಟ್ ಅಷ್ಟೇ ಖರ್ಚು. ಕ್ಯಾಸೆಟ್ ಖರ್ಚನ್ನು ಗ್ರಾಮ ಪಂಚಾಯಿತಿ ಭರಿಸುತ್ತದೆ. ಇದನ್ನು ದಯಮಾಡಿ ಮಾಡಿದರೆ ಪ್ರತಿಯೊಂದನ್ನು ಡಾಕ್ಯುಮೆಂಟ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಕಾನೂನಿನಲ್ಲಿ ಎಲ್ಲಾ ಫಲಾನುಭವಿಗಳ ಆಯ್ಕೆ ಗ್ರಾಮಸಭೆಯಲ್ಲಿ ಆಗಬೇಕೆಂದು ಇದೆ. ಅದು ಇವತ್ತು ಆಗುತ್ತಿಲ್ಲ. ಹೀಗಾದರೆ ಆಗಲೇಬೇಕಾಗುತ್ತದೆ. ಆಗ ಅವರಿಗೆ ಒಂದು ಧೈರ್ಯ ಬರುತ್ತದೆ, ನಾವು ಮಾತನಾಡಿದ್ದು ಶ್ರೀ ಜಿ.ಹೆಚ್. ಪಟೇಲರ ನಜರಿಗೆ ಹೋಗುತ್ತದೆಂದು ಧೈರ್ಯ ಬರುತ್ತದೆ. ಹೀಗಾಗಿ ಅವನು ಧೈರ್ಯದಿಂದ ಮಾತನಾಡುತ್ತಾನೆ. ಈಗ ಸಾಹೇಬರು ಹೇಳಿದರಲ್ಲ, ನಾನು ಸೈಟು ಕೊಡಬೇಕೆಂದರೆ ಬೇಡ ಅಂದರು ಎಂದು. ಬೇಡ ಅಂದರೆ ಏತಕ್ಕೆ ಎಂದು ಕೇಳುತ್ತಾನೆ ಅವನು. ಏಕೆಂದರೆ, ಅಲ್ಲಿಗೆ ಮಾಹಿತಿ ಹೋಗುತ್ತದೆಂದು ಗೊತ್ತಾದರೆ ಆ ಧೈರ್ಯ ಅವನಿಗೆ ಬರುತ್ತದೆ, ಆ ಒಂದು ಮನೋಬಲ ಅವನಿಗೆ ಬರುತ್ತದೆ. ಸಭೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾತನಾಡುತ್ತಾನೆ. ಆಗ ಅವರಿಗೆ ಸಿಗುವ ಸೌಲಭ್ಯಗಳನ್ನು ಹಕ್ಕಿನಿಂದ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ದಯಮಾಡಿ ಈ ಕೆಲಸ ಮಾಡಿ. ಇಲ್ಲದಿದ್ದರೆ, ನಾವು ಬಹಳ ಕಡೆ ನೋಡಿದ್ದೇವೆ, ತಾಲ್ಲೂಕು ಪಂಚಾಯ್ತಿಯ ಸದಸ್ಯರಿದ್ದಾರಲ್ಲ ಅವರೇ ಎಲ್ಲವನ್ನು ಹಂಚಿಕೊಳ್ಳುತ್ತಾರೆ. ಐಆರ್‌ಡಿಪಿ.ಗೆ ಇಷ್ಟು, ಆಶ್ರಯಕ್ಕೆ ಇಷ್ಟು, ಇಂದಿರಾ ಅವಾಸ್‌ಗೆ ಇಷ್ಟು, ತಮ್ಮ ಕ್ಷೇತ್ರದಲ್ಲಿ ಇಷ್ಟು ಕೊಡಬೇಕೆಂದು ಅವರೇ ಹಂಚಿಕೊಳ್ಳುತ್ತಾರೆ. ಅವರೇ ಫಲಾನುಭವಿಗಳನ್ನು ಆಯ್ಕೆ ಮಾಡುವವರು. ಉಳಿದವರು ಯಾರೂ ಇಲ್ಲ.

12.40 ಪಿ.ಎಂ.

ಇದು ವಾಸ್ತವಿಕವಾದ ಪರಿಸ್ಥಿತಿ ಇದು ಹೋಗಬೇಕು ನಾವು ಯಾವ ಮಟ್ಟಕ್ಕೆ ಅಧಿಕಾರ ಕೊಟ್ಟಿರುತ್ತೇವೆ ಅದು ಅಲ್ಲಿ ಆಗಬೇಕು, ಡಿ.ಆರ್. ಪಾಟೀಲ್‌ರವರಿಗೆ ಆಯ್ಕೆ ಮಾಡಿ ಎಂದರೆ ನನಗೆ ಕೂಡ ನಮ್ಮವರಿಂದ ನೂರೆಂಟು ಒತ್ತಾಯಗಳು ಇವೆ. ನನಗೆ ಪ್ರಾಮಾಣಿಕವಾಗಿ ಯೋಗ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಕ್ಕೆ ಆಗುತ್ತಿದೆ ಎಂದು ಹೇಳುವಂತಹ ಧೈರ್ಯ ಇರುವುದಿಲ್ಲ. ಇದನ್ನು ಒಂದು ಗ್ರಾಮದ ಡೈವ್ ಆಯ್ಕೆ ಮಾಡುತ್ತಿದೆ ಎಂದರೆ ಅವರು ನಿರ್ಭೀತಿಯಿಂದ ಯೋಗ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದಕ್ಕೆ ಅಲ್ಲಿ ಒಂದು ವಾತಾವರಣ ನಿರ್ಮಾಣವಾಗಿರುತ್ತದೆ. ಅನ್ಯಾಯ ಬಹಳ ಕಡಿಮೆಯಾಗುತ್ತಿವೆ. ಅಲ್ಲಿ ಬಹಳ ಬಲಿಷ್ಠವಾದ ಒತ್ತಾಯ ಇದ್ದರೆ ಬಹಳ ವಜೆಯಾಗುತ್ತಿದೆ. ಆದ್ದರಿಂದ ಗ್ರಾಮ ಸಭೆಗಳನ್ನು ಯಶಸ್ವಿಯಾಗಿ ನಡೆಯುವ ಒಂದು ವಾತಾವರಣವನ್ನು ನಿರ್ಮಾಣ ಮಾಡುವ ಜವಾಬ್ದಾರಿ ಸರ್ಕಾರ ಹಾಗೂ ನಮ್ಮಮೇಲೂ ಇದೆ. ನಾವು ಎಲ್ಲಾ ಕಡೆ ಭಾಗವಹಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಇಚ್ಛೆಯಿದ್ದರೆ ಕಾನೂನಿಗೆ ಒಂದು ದಯಮಾಡಿ ತಿದ್ದುಪಡಿ ತಂದು ನಾವು ಗ್ರಾಮಸಭೆಯಲ್ಲಿ ನಮ್ಮ ಕ್ಷೇತ್ರದಲ್ಲಿ ಭಾಗವಹಿಸಬಹುದು ಎಂದು ಮಾಡಿದರೆ ಒಳ್ಳೆಯದಾಗುತ್ತದೆ. ಇಲ್ಲವಾದರೆ ಏನಾಗುತ್ತದೆಂದರೆ, ಕಾನೂನಿನಲ್ಲಿ ಅವಕಾಶವಿಲ್ಲ. ನಾನು ಹುಲುಕೋಟಿಯಲ್ಲಿ ಭಾಗವಹಿಸಬಹುದು, ನಾನು ಬೇರೆ ಗ್ರಾಮದಲ್ಲಿ ಹೋಗಿ ಭಾಗವಹಿಸುವುದಕ್ಕೆ ಕಾನೂನಿನ ರೀತಿಯಲ್ಲಿ ಅವಕಾಶವಿಲ್ಲ. ಅಲ್ಲಿ ಗ್ರಾಮಪಂಚಾಯಿತಿಯಲ್ಲಿರತಕ್ಕಂಥ ಛೇರ್ಮನ್ ನಮ್ಮ ವಿರುದ್ಧ ಇದ್ದರೆ ರಾಜಕೀಯವಾಗಿ he can question me. You are not invited.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಕಾನೂನಿನಲ್ಲಿ ಅವಕಾಶವಿಲ್ಲ, ಶಾಸಕರು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಹಾಗೂ ಗ್ರಾಮ ಸಭೆಗಳಲ್ಲಿ ಅಡ್ಡಿ ಯಾರು ಬರುತ್ತಾರೆ, ಬರುವುದಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಕೆಲವು ಕಡೆ ರಾಜಕೀಯ ಕಾರಣಕ್ಕೋಸ್ಕರ ಪ್ರಶ್ನೆ ಮಾಡುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ : ನಾವು ಅದನ್ನು ಕಂಪಲ್‌ಸರಿ ಎಂದು ಮಾಡಿದರೆ ಸಭೆ ಆಗುವುದಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅದನ್ನು ಕಂಪಲ್‌ಸರಿ ಎಂದು ಮಾಡಬೇಡಿ, ಶಾಸಕರು ಇಲ್ಲದೆ ಗ್ರಾಮಸಭೆಗಳು ನಡೆಯಬಾರದು ಎಂದು ಕಂಪಲ್‌ಸರಿ ಮಾಡಬೇಡಿ, ಅದು ತೊಂದರೆಯಾಗುತ್ತದೆ, ಇದಕ್ಕೆ ತಾವು ಏನು ಮಾಡಬಹುದು ಎಂದರೆ ಶಾಸಕರು ಕೂಡ ಗ್ರಾಮ ಸಭೆಗಳಲ್ಲಿ ಹಾಜರಾಗುವುದಕ್ಕೆ ಅವಕಾಶವಿರಬೇಕು ಅಷ್ಟನ್ನು ಮಾತ್ರ ಮಾಡಿ.

ಶ್ರೀ ಜೆ. ಹೆಚ್. ಪಟೇಲ್ : ಅದಕ್ಕೆ ಕಾನೂನು ಬೇಕಿಲ್ಲ ಬೇಕಾದರೆ ಸರ್ಕಾರದ ಆದೇಶವನ್ನು ಕಳಿಸೋಣ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆರ್ಡರ್ ಆದರೂ ಮಾಡಿ, ಒಂದು ಸುತ್ತೋಲೆಯಾದರೂ ಹೊರಡಿಸಿ.

ಶ್ರೀ ಡಿ.ಆರ್. ಪಾಟೀಲ್ : ತಾಲ್ಲೂಕು ಪಂಚಾಯಿತಿಯಲ್ಲಿ ಎಂಪ್ಲಾಯಿಮೆಂಟ್ ಅಶ್ಯೂರೆನ್ಸ್ ಸ್ಕೀಮ್‌ನಲ್ಲಿ ಫಂಡ್ಸ್ ಉಪಯೋಗ ಮಾಡಿಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ಸಜೆಸ್ಟ್ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಕೆಲವು ಸಾರಿ ಏನಾಗುತ್ತದೆ ಎಂದರೆ ಆದಷ್ಟು ಮಟ್ಟಿಗೆ ಶಾಸಕರು ಈ ಸಭೆಗಳಿಗೆ ಹೋಗದೇ ಇರುವುದು ಒಳ್ಳೆಯದು. ಶಾಸಕರು ಹೋಗುವುದರಿಂದ ಅಲ್ಲಿ ಶಾಸಕರ ಪ್ರಾಬಲ್ಯ ಬೆಳೆಯುತ್ತಿದೆ, ಅಲ್ಲಿ ಫಲಾನುಭವಿಗಳ ಆಯ್ಕೆ ಕೂಡ ಶಾಸಕರು ಹೇಳಿದಾಗೆ ಆಗುತ್ತದೆ. ಕ್ಷಮಿಸಿ, ಅಲ್ಲಿ ಅದು ಸಾಧಾರಣವಾಗಿ ನಡೆಯುತ್ತಿದೆ. ಶಾಸಕರು ಭಾಗವಹಿಸಬಹುದು ಎಂದು ಹೇಳಿದ ಕೂಡಲೇ ಅಧಿಕಾರಿಗಳಿಗೆ ಏನು ಸಂದೇಶ ಹೋಗುತ್ತದೆಂದರೆ ಶಾಸಕರು ಇಲ್ಲದೆ ಮಾಡುವುದು ಬೇಡ ಎಂದಾಗುತ್ತದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಆ ರೀತಿ ಆಗುವುದು ಬೇಡ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಡೆಫನೇಷನ್ ಕಾಲಂನಲ್ಲಿ ಗ್ರಾಮ ಸಭೆ ಅಂದರೆ ಏನು ಹೇಳುತ್ತೇವೆಂದರೆ : "Grama Sabha means a body consisting of persons registered in the electoral rolls relating to a village comprised within the area of a Gram Panchayat" 18 ವರ್ಷಕ್ಕಿಂತ ಮೇಲ್ಪಟ್ಟವರು ಎಲ್ಲರೂ ಕೂಡ ಭಾಗವಹಿಸಬಹುದು. ಆದರೆ ಇದರಲ್ಲಿ ಎಂಎಲ್ಎ, ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರುಗಳು ಇವರೆಲ್ಲರೂ ಕೂಡ ಹೋಗಬಹುದು.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ವೀರಪ್ಪ-ಮೊಯಿಲಿಯವರು ಹೇಳಿದ ಹಾಗೆ ಒಬ್ಬ ಎಂಎಲ್ಎ ಗ್ರಾಮಸಭೆಗೆ ಹೋಗಿ ಭಾಗವಹಿಸಿದರು ಎಂದಾಗ ಆತ ತನ್ನದೇ ಆದ ಶಿಫಾರಸ್ಸು ಮಾಡುವುದಕ್ಕೆ ಹೋಗುವುದಕ್ಕೆ ಸಾಧ್ಯ ಇದೆ. ಆತ ಪ್ರೆಸೆಂಟ್ ಇದ್ದರೆ ಗ್ರಾಮ ಸಭೆಗಳಲ್ಲಿ ಆಗಬೇಕಾದ ಫಲಾನುಭವಿಗಳನ್ನು ಗುರುತಿಸುವುದು, ಹಣ ಎಲ್ಲಿ ಖರ್ಚು ಆಗಿದೆ, ಎಷ್ಟು ಖರ್ಚಾಗಿದೆ ಎಂದು ನೋಡಿದರೆ ಆಗ ಒಂದು ಬಿಗಿ ಬರುತ್ತದೆ, ಅದರ ಬಗ್ಗೆ ಏನು ಅನುಮಾನವಿಲ್ಲ.

(ಗೊಂದಲ)

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಶಾಸಕರೂ ಗ್ರಾಮಸಭೆಗೆ ಹೋದ ಮಾತ್ರಕ್ಕೆ ಅವರು ಹೇಳಿದ ರೀತಿಯಲ್ಲಿ ನಡೆಯುತ್ತದೆ ಎನ್ನುವುದರಲ್ಲಿ ಅರ್ಥವಿಲ್ಲ ಏಕೆಂದರೆ ಅಲ್ಲಿ ಜನ ಕೂಡ ಇರುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ : ಗ್ರಾಮ ಸಭೆಗೆ ಶಾಸಕರು ಹೋಗುವುದನ್ನು ಯಾರು ಅಡ್ಡಿ ಮಾಡಬಾರದು ಎಂದು ಮಾಡಬಹುದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಗ್ರಾಮ ಸಭಾ ಮೊದಲನೆ ಪಾಯಿಂಟ್ ಆಫ್ ಪ್ಲಾನ್ ಅದು. The first point of plan is Grama Sabha. ವಾಸ್ತವವಾಗಿ ಹಾಗೆ ಆಗುತ್ತಾ ಇಲ್ಲ. ನಿಮಗೆ ಇಬ್ಬರೆ ಫಲಾನುಭವಿಗಳು ಬೇಕು ಎಂದರೆ ಛೇರ್ಮನ್ ಇಬ್ಬರೇ ಫಲಾನುಭವಿಗಳನ್ನು ತೋರಿಸುತ್ತಾನೆ. ನೀವು ಬೇಕಾದರೆ ಒಂದು ಸಂಖ್ಯೆಯನ್ನು ನಿಗದಿ ಮಾಡಿ, 500 ಮನೆಗಳಿರುವ ಗ್ರಾಮದಲ್ಲಿ ಕೊನೆಯ ಪಕ್ಷ 50 ರಿಂದ 100 ಜನ ಆ ಸಭೆಯಲ್ಲಿ ಸೇರುವುದಿಲ್ಲ. ಯಾರಿಗೆ ಎರಡು ಮನೆ ಕೊಡುತ್ತಿರುತ್ತಾರೆ ಆ ಎರಡು ಮೂರು ಮನೆಯವರು ಸೇರಿಕೊಂಡು ಪಂಚಾಯಿತಿಯಲ್ಲಿ ಒಂದು ನಿರ್ಣಯ ಪಾಸ್ ಮಾಡುವಂತಹ ವ್ಯವಸ್ಥೆ ನಡೆಯುತ್ತದೆ. ಐಆರ್‌ಡಿಪಿ ಫಲಾನುಭವಿಗಳ ಆಯ್ಕೆ ಕೂಡ ಹೀಗೆ ನಡೆಯುತ್ತಿದೆ. ನೀವು ಹೇಳಿದ ರೀತಿಯಲ್ಲಿ ಇಡೀ ಹಳ್ಳಿಯವರನ್ನು ಸೇರಿಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು, ಪ್ರಿಯಾರಿಟಿ ಸೆಲೆಕ್ಟ್ ಮಾಡುವುದು ಇವು ಯಾವುದು ಕರ್ನಾಟಕದ ಗ್ರಾಮ ಸಭೆಗಳಲ್ಲಿ ನಡೆಯುತ್ತಿಲ್ಲ. ಛೇರ್ಮನ್ ಹಾಗೂ ಮೆಂಬರ್ ಕೂಡಿಕೊಂಡು ಅವರಿಗೆ ಬೇಕಾದಂತಹವರಿಗೆ ಒಂದು ಪಟ್ಟಿ ಕೊಟ್ಟು ಅದನ್ನು ಅಪ್ರೂವ್ ಮಾಡುವಂತಹ ಸ್ಥಿತಿ ಇವತ್ತು ನಿರ್ಮಾಣವಾಗಿದೆ. ಈ ಸ್ಥಿತಿಯಲ್ಲಿ ಅಲ್ಲಿ ಎಂಎಲ್ಎ ಇದ್ದರೆ ತಪ್ಪಾಗುತ್ತಿದೆ, ಅವರು ಶಿಫಾರಸ್ಸು ಮಾಡುತ್ತಾರೆ ಎನ್ನುವುದು ತಪ್ಪಾಗುವುದಿಲ್ಲ, ನಾವು ಅವನಿಗಿಂತ ಇವನು ಅರ್ಹ ಫಲಾನುಭವಿ ಎಂದು ಹೇಳುವುದಕ್ಕೆ ಅವಕಾಶ ಇರಬಹುದು. ಏಕೆಂದರೆ ನಾನು ಕೂಡ ಆ ಭಾಗದಲ್ಲಿಂದ ಬಂದಿರುವುದಲ್ಲದೇ ಅಲ್ಲಿಂದ ಗೆದ್ದಿರುತ್ತೇನೆ. We can identify a better person. ಹಾಗಾದರೆ ನಿಮ್ಮ ಛೇರ್ಮನ್ ಶಿಫಾರಸ್ಸು ಮಾಡುತ್ತಿಲ್ಲವೆ? ನಿಮ್ಮ ಪಂಚಾಯಿತಿ ಮೆಂಬರ್ ಶಿಫಾರಸ್ಸು ಮಾಡುತ್ತಿಲ್ಲವೆ? ತಮಗೆ ಬೇಕಾದವರನ್ನು ಫಲಾನುಭವಿಗಳ ಪಟ್ಟಿಗೆ ಸೇರಿಸುತ್ತಿಲ್ಲವೆ? ಇವುಗಳನ್ನೆಲ್ಲಾ ಎಂಎಲ್ಎ ಮಾಡುತ್ತಾರೆ ಅಲ್ಲಿಗೆ ಹೋಗಬೇಡಿ ಎನ್ನುವುದರಲ್ಲಿ ಏನೂ ಅರ್ಥವಿಲ್ಲ. We are all politicians. ಅವರು ಮಾಡುವ ಶಿಫಾರಸ್ಸು ನಾವು ಮಾಡುತ್ತೇವೆ. At least with our good integrity we can prevent it.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಮೊಯಿಲಿಯವರು ಹೇಳಿದ್ದರಲ್ಲಿ ಅರ್ಥವಿದೆ ಗ್ರಾಮ ಸಭೆಗೆ ಎಂಎಲ್‌ಎಯವರು ಹೋಗದಿದ್ದರೆ ಅಲ್ಲಿದ್ದವರಿಗೆ ಒಂದು ರೀತಿಯ Sovereignty ಇರುತ್ತದೆ, ಅವರು ಏನಾದರೂ ತೀರ್ಮಾನ ಮಾಡುತ್ತಾರೆ, ಎಂಎಲ್‌ಎ ಆ ಗ್ರಾಮ ಸಭೆಗೆ ಹೋದ ತಕ್ಷಣ ಇನ್‌ಫ್ಲ್ಯೂಯೆನ್ಸಿಂಗ್, ಈ ರಾಜಕೀಯ ಒತ್ತಡ ಬರಬಹುದು. All of us are interested in functioning of this Gramasabha in an impartial way. ಏಕೆಂದರೆ ಅದೇ ನಮಗೆ ಅಲ್ಟಿಮೇಟ್ ಗ್ಯಾರಂಟಿ for decentralisation of power. ದಯಮಾಡಿ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಇದರ ಬಗ್ಗೆ ಕಂಪಲ್‌ಸರಿ ಮಾಡುವುದು ಬೇಡ, ಗ್ರಾಮ ಸಭೆಗೆ ಎಂಎಲ್‌ಎಗಳು ಅಟೆಂಡ್ ಆಗಲೇಬೇಕು ಎಂದು ಕಂಪಲ್‌ಸರಿ ಮಾಡದೇ ಇದ್ದರೂ ಗ್ರಾಮ ಸಭೆಗಳಿಗೆ ಅಟೆಂಡ್ ಮಾಡುವುದಕ್ಕೆ ಯಾವುದೇ ಅಭ್ಯಂತರವಿಲ್ಲ.

(ಗೊಂದಲ)

ಶ್ರೀ ಬಿ. ರಾಮನಾಥ್ ರೈ : ಎಲ್ಲಾ ರಾಜ್ಯಗಳಲ್ಲೂ ಗ್ರಾಮಸಭೆ ನಡೆಯುತ್ತದೆಯೋ?

ಶ್ರೀ ಬಿ. ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ಶಾಸಕರು ಗ್ರಾಮ ಸಭೆಗಳಿಗೆ ಹೋಗುವುದರಿಂದ ಏನು ಅನುಕೂಲವಾಗುತ್ತದೆ ಎನ್ನುವುದಕ್ಕೆ ಒಂದು ನಿದರ್ಶನವನ್ನು ಹೇಳುತ್ತೇನೆ. ನಾನು ಒಂದು ಗ್ರಾಮಸಭೆಗೆ ಅಟೆಂಡ್ ಮಾಡಿದ್ದೆ. ಆ ಗ್ರಾಮ ಸಭೆಗೆ ಎಷ್ಟು ಮನೆಗಳು ಸಿಗುತ್ತವೆ ಎನ್ನುವ ಒಂದು ಪಟ್ಟಿ ಬಂತು, ಆ ಒಂದು ಗ್ರಾಮ ಸಭೆಗೆ ಒಟ್ಟು 15 ಮನೆ ಸಿಗುತ್ತವೆ ಎಂದರೆ ಆ ಗ್ರಾಮ ಪಂಚಾಯಿತಿಗೆ ಸೇರಿದ ಆ ಗ್ರಾಮಗಳಿಗೆ ಹಂಚಿದಾಗ ಪ್ರತಿಯೊಂದು ಗ್ರಾಮಕ್ಕೆ 3-3 ಮನೆಗಳು ಲಭಿಸುತ್ತವೆ, ಎಲ್ಲಾ ಗ್ರಾಮದವರು ಆ ಗ್ರಾಮಸಭೆಗಳಿಗೆ ಬಂದಿರುವುದಿಲ್ಲ, ಅಲ್ಲಿ ಬಂದಿದ್ದವರು 3 ಮನೆಗೆ ಅರ್ಜಿ ಹಾಕಿದ್ದರು, ನಾನು ಒಂದು ಅವರಿಗೆ ಪ್ರಶ್ನೆ ಕೇಳಿದೆ ನೀವು ಅಲ್ಲಿ ಬಂದಿರುವವರು ಅರ್ಜಿ ಹಾಕಿದ್ದೀರಿ, ಈ ವಿಷಯ ಗೊತ್ತಿಲ್ಲದವರು ಹಾಗೂ ಅವಶ್ಯಕವಾಗಿ ಮನೆ ಬೇಕಾದವರು ಅವರು ಇಲ್ಲಿ ಬಂದಿಲ್ಲ ಅವರು ಅಲ್ಲಿರಬಹುದು, ನೀವೆ ಒಂದು ತೀರ್ಮಾನ ಮಾಡಿ, ನಿಮ್ಮ ಊರಿನಲ್ಲಿ ನಿಮಗಿಂತಲೂ ಅವಶ್ಯಕತೆ ಯಾರಿಗೆ ಇದೆ ಎಂದು ಅವರ ಹೆಸರನ್ನು ಹೇಳಿದರೆ ಅವರಿಗೆ ಮನೆಯನ್ನು ಅಲಾಟ್ ಮಾಡುತ್ತೇವೆಂದಾಗ ಆ ಊರಿನವರು ನಮಗೆ ಇನ್ನೊಂದು ಸಾರಿ ಕೊಡಿ ಪರವಾಗಿಲ್ಲ ಅವರಿಗೆ ಮನೆಗಳನ್ನು ಕೊಡಿ ಎಂದು ಹೆಸರುಗಳನ್ನು ಕೊಟ್ಟರು. ಈ ರೀತಿ ಅನುಕೂಲವಾಗುತ್ತದೆ. ಏಕೆಂದರೆ, ನಾವು ಅಲ್ಲಿ ಕುಳಿತು ಅವರು ಹೇಳಿದ್ದನ್ನು ತೀರ್ಮಾನಮಾಡಿ ಬಿಡುತ್ತೇವೆ. ಮನೆ ಅವಶ್ಯಕತೆ ಇರುವವರು ಆ ಗ್ರಾಮ ಸಭೆಗೆ ಬಾರದೆ ಇದ್ದಾಗ ನಾವು ಬಂದಿರುವವರನ್ನು ಮನವೊಲಿಸಿ ಅವರಿಗೆ ಅಂದರೆ ಅವಶ್ಯಕತೆ ಇರುವವರಿಗೆ ಮನೆಗಳನ್ನು ಕೊಡಿಸುವಂತಹ ವ್ಯವಸ್ಥೆಯಾಗುತ್ತದೆ, ಈ ಒಂದು ಸಂದರ್ಭದಲ್ಲಿ ನಾನು ಈ ನಿದರ್ಶನ ಕೊಡುವುದಕ್ಕೆ ಬಯಸುತ್ತೇನೆ.

MR. SPEAKER : Hon'ble Member D.R. Patil to continue.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, Members of higher bodies ಕೆಳಗಡೆ ಇರತಕ್ಕಂಥ ಸಂಸ್ಥೆಗೆ ಬರಬಾರದು ಎನ್ನತಕ್ಕ ಒಂದು ವಾದವು ಕೂಡ ಇದೆ. ಈ ವಿಷಯದ ಬಗ್ಗೆ

ಆಂಧ್ರಪ್ರದೇಶದಲ್ಲಿ ಬಹಳ ದೊಡ್ಡ ಚರ್ಚೆಯಾಯಿತು. ಮೊನ್ನೆ ಪ್ರಧಾನ ಮಂತ್ರಿಗಳು ಗ್ರಾಮ ಪಂಚಾಯಿತಿ ವಿಷಯಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿಗಳ ಒಂದು ಸಭೆಯನ್ನು ಕರೆದಿದ್ದರು, ಅದರಲ್ಲಿ ಬಹಳ ಜನ ಒತ್ತು ಕೊಟ್ಟಿರುವುದೆಂದರೆ, ಈ ಎಂಎಲ್‌ಎ ಹಾಗೂ ಎಂಪಿಗಳು ಜಿಲ್ಲಾ ಪಂಚಾಯಿತಿಯಲ್ಲಿರುವುದಾಗಲಿ, ಜಿಲ್ಲಾ ಪಂಚಾಯಿತಿ ಸದಸ್ಯರುಗಳು ತಾಲ್ಲೂಕು ಪಂಚಾಯಿತಿ ಸಭೆಗೆ ಬರತಕ್ಕಂಥದ್ದು, ಅಥವಾ ತಾಲ್ಲೂಕು ಪಂಚಾಯಿತಿ ಸದಸ್ಯರುಗಳು ಈ ಗ್ರಾಮ ಸಭೆಗಳಿಗೆ ಬರತಕ್ಕಂಥದ್ದು ಅಲ್ಲ. ಏಕೆಂದರೆ ಅಷ್ಟರ ಮಟ್ಟಿಗೆ ಸ್ವಾಯತ್ತತೆ ಇರಬೇಕು. ಈ ಬಗ್ಗೆ ಅನೇಕ ಚರ್ಚೆಗಳು ನಡೆದರೂ ಸಹ ಇನ್ನೂ ಅಂತಿಮ ತೀರ್ಮಾನ ಆಗಿಲ್ಲ. ಆದರೆ ಮುಖ್ಯಮಂತ್ರಿಗಳು ಹೇಳಿದಂತೆ ಅಧಿಕಾರದ ವಿಕೇಂದ್ರೀಕರಣವನ್ನು ನಿಜವಾದ ಅರ್ಥದಲ್ಲಿ ನಾವು ಜಾರಿಗೆ ಮಾಡಬೇಕಾದರೆ ಪ್ರಬುದ್ಧತೆ ಬೇಕಾಗುತ್ತದೆ, ಸಮಯದ ಬಗ್ಗೆ ಯೋಚನೆ ಮಾಡಿ ಇದರ ಬಗ್ಗೆ ನಿರ್ಣಯ ಮಾಡಬಹುದು.

ಶ್ರೀ ಡಿ. ಆರ್. ಪಾಟೀಲ್ : ಅಧ್ಯಕ್ಷರೆ, ಗ್ರಾಮ ಪಂಚಾಯಿತಿಯಲ್ಲಿ ಸಾಕಷ್ಟು ಹಳ್ಳಿ ಲಿಮಿಟ್ಸ್ ಎಕ್ಸ್‌ಟೆಂಡಾಗಿದೆ. ಬಹುತೇಕ ಎಲ್ಲಾ ಗ್ರಾಮಗಳಲ್ಲಿ ಹೊಸದಾಗಿ ರಚಿತವಾಗಿರುವ ಬಡಾವಣೆಗಳು ಬಂದಿವೆ. ಈ ಹೊಸ ಬಡಾವಣೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಅನುಕೂಲವಾಗಿಲ್ಲ. ಈಗಾಗಲೇ ಎಲ್ಲೆಲ್ಲಿ ವಾಟರ್ ಸಪ್ಲೈ ಪೈಪ್ಸ್ ಸ್ಕೀಮ್ ಇಂಪ್ಲಿಮೆಂಟ್ ಆಗಿದೆಯೋ ಅಲ್ಲಿ ಹೊಸ ಬಡಾವಣೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗಿಲ್ಲ. ಇದಕ್ಕೆ ದಯಮಾಡಿ ಬೆಳೆಯುತ್ತಿರುವ ಗ್ರಾಮಗಳಿಗೆ, ಹಾಗೂ ಹೊಸ ಬಡಾವಣೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಆಗ್ಮೆಂಟೇಷನ್‌ಮಾಡಲಿಕ್ಕೆ ಹಾಗೂ ರಿಸರ್‌ವಾಯರ್ ಅವಶ್ಯವಿದ್ದರೆ ಅದನ್ನು ಮಾಡಲಿಕ್ಕೆ ಸಾಕಷ್ಟು ಹಣಕಾಸಿನ ಅನುಕೂಲತೆಯನ್ನು ತಾವು ಮಾಡಬೇಕು, ಈ ಹೊಸ ಬಡಾವಣೆಗಳಿಗೆ ನೀರು, ದೀಪ ಹಾಗೂ ನಾಗರೀಕ ಸೌಲಭ್ಯಗಳನ್ನು ಕೊಡುವ ಕೆಲಸ ಆಧ್ಯತೆ ಮೇರೆಗೆ ಮಾಡುವ ಹಾಗೆ ವ್ಯವಸ್ಥೆ ಮಾಡಬೇಕು, ಏಕೆಂದರೆ ಇಲ್ಲಿ ಏನಾಗುತ್ತಿದೆ ಎಂದರೆ ಈ ಒಂದು ಗ್ರಾಮದಲ್ಲಿ ತಾರತಮ್ಯ ಮಾಡಿದಂತಾಗುತ್ತದೆ. ಹೊಸ ಬಡಾವಣೆಯಲ್ಲಿರುವವರು ಸುಮಾರು ಕಿಲೋಮೀಟರ್‌ಗಳಷ್ಟು ದೂರ ಹೋಗಿ ನೀರು ತರುವುದು, ಹಳೆ ಊರಿನಲ್ಲಿರುವವರು ಮನೆಯಲ್ಲಿ ನಳದ ಮೂಲಕ ನೀರು ಬರುವುದು, ಹೀಗಾಗಿ ಅವರಲ್ಲಿ ಒಂದು ಭೇದ ಭಾವನೆ ಬರುತ್ತದೆ. ಅನೇಕ ಹೊಸ ಸಮಸ್ಯೆಗಳಿಗೆ ಕಾರಣಿಭೂತವಾಗುತ್ತದೆ. ಒಂದು ಹಳ್ಳಿಯಲ್ಲಿ ಖಾಸಗಿ ಆಸ್ತಿ ಇರಲಿ, ಪಂಚಾಯಿತಿ ಆಸ್ತಿ ಇರಲಿ, ಸಾರ್ವಜನಿಕ ಆಸ್ತಿ ಇರಲಿ ಇವು ಯಾವುದು ಸರ್ವೆಯಾಗಿ ಒಂದು ಬೌಂಡರಿ ಫಿಕ್ಸ್ ಆಗಿಲ್ಲ. ಸರಿಯಾಗಿ ಸರ್ವೆಯ್ಯಾಗಿ ಬೌಂಡರಿ ಫಿಕ್ಸ್ ಮಾಡುವುದಕ್ಕೆ ತಾವು ಏನು ಮಾಡುತ್ತೀರಿ? ಏಕೆಂದರೆ ಇದರಿಂದಾಗಿ ಅನೇಕ ಸಲ ಕ್ರಿಮಿನಲ್ ಆಕ್ಟಿವೀಟಿಸ್ ಆಗುತ್ತದೆ. ಅಲ್ಲಿ ಏನಾಗುತ್ತದೆ ನನ್ನ ಜಾಗ ಇದು ನಿನ್ನ ಜಾಗ ಇದು ಎನ್ನುವಷ್ಟರ ಮಟ್ಟಿಗೆ ಗೊಂದಲಮಯವಾಗುತ್ತದೆ. ಅನಂತರ ಎಲ್ಲರೂ ಕೂಡಿ ಈ ಪಂಚಾಯಿತಿ ಆಸ್ತಿಯನ್ನೇ ಒತ್ತುವರಿ ಮಾಡುವುದು, ಈ ಎಲ್ಲಾ ಘಟನೆಗಳು ನಿರಾತಂಕವಾಗಿ ನಡೆಯುತ್ತಿರುತ್ತವೆ. ಇದಕ್ಕೆ ಒಂದು ಸರ್ವೆಯಾಗಬೇಕು. ಇದು ಎಲ್ಲ ಮಾಡಬೇಕಾದರೆ ಒಂದು ದೊಡ್ಡ ಪ್ರೋಗ್ರಾಮ್ ಆಗುತ್ತದೆ, ಇದನ್ನು ತಾವು ಹೇಗೆ ಮಾಡುತ್ತೀರೋ ಗೊತ್ತಿಲ್ಲ ಆದರೂ ತಾವು ಈ ಒಂದು ಕ್ರಮವನ್ನು ಮಾಡಲೇಬೇಕಾಗುತ್ತದೆ. ಗ್ರಾಮಪಂಚಾಯಿತಿಯಲ್ಲಿರುವ ಎಲ್ಲಾ ಆಸ್ತಿಗಳು ಅಂದರೆ ಖಾಸಗಿಯಾಗಲಿ,

ಸಾರ್ವಜನಿಕವಾಗಲಿ, ಗ್ರಾಮಠಾಣವಾಗಲಿ, ಈ ಎಲ್ಲಾ ಆಸ್ತಿಗಳನ್ನು ಸರ್ವೆ ಮಾಡಿ ಬೌಂಡರಿ ಫಿಕ್ಸ್ ಮಾಡಿ ಈ ಆಸ್ತಿಗಳು ಇಂಥವರಿಗೆ ಸಂಬಂಧಿಸಿದ್ದು ಎನ್ನುವಂತಹ ಒಂದು ರಿಜಿಸ್ಟರ್ ಇಡುವುದು ಪಂಚಾಯಿತಿ ಮಟ್ಟದಲ್ಲಿ ಆಗಬೇಕು. ಈಗ ನಾನು ನನ್ನ ಹಿತ್ತಲನ್ನು ಮತ್ತೊಬ್ಬರಿಗೆ ಮಾರಾಟ ಮಾಡಿಬಿಡುತ್ತೇನೆ. ನನ್ನ ಮಗ್ಗುಲಲ್ಲಿದ್ದವನ ಹಿತ್ತಲನ್ನೂ ಕೂಡಿಕೊಂಡು ನಾನು ಮಾರಾಟ ಮಾಡಿಬಿಡುತ್ತೇನೆ. ಆಗ ಮಗ್ಗುಲಲ್ಲಿದ್ದವನದೂ ಎನ್‌ಕ್ರೋಚ್‌ಮೆಂಟ್ ಆಗುತ್ತದೆ. ಆಗ ನಾನು ರೊಕ್ಕ ಕೊಟ್ಟು ತೆಗೆದುಕೊಂಡಿದ್ದೇನೆ ಎಂದು ಇವನು ಹೇಳುತ್ತಾನೆ. ಮೂಲ ದಾಖಲೆಯಲ್ಲಿ ಅವನ ಹಿತ್ತಲು ಎಷ್ಟು ಎಂದು ಇರುವುದಿಲ್ಲ, ಇವನ ಹಿತ್ತಲು ಎಷ್ಟು ಎಂದು ಇರುವುದಿಲ್ಲ. ಉದ್ದ ಅಗಲ ಎಷ್ಟು ಎಂದು ಇರುವುದಿಲ್ಲ. ವಹಿವಾಟಿನ ಮೇಲೆಯೇ ಎಲ್ಲಾ ಕೆಲಸ ನಡೆದಿರುತ್ತದೆ. ಈಗ ವಹಿವಾಟಿನ ಮೇಲೆ ನಿಮ್ಮ ಪ್ರಾಪರ್ಟಿ ಇಷ್ಟೇ ಎಂದು ಬೌಂಡರಿ ಫಿಕ್ಸ್ ಆಗುವಹಾಗೆ ತಾವು ವ್ಯವಸ್ಥೆ ಮಾಡಬೇಕು. ಈ ದಿಸೆಯಲ್ಲಿ ಚಿಂತನೆ ನಡೆಯಬೇಕು. ಇದಕ್ಕೆ ಒಂದು ಪರಿಹಾರವನ್ನು ಮುಂಬರುವ ನಾಲ್ಕೈದು ವರ್ಷಗಳಲ್ಲಿ ನಾವು ಕಂಡುಕೊಳ್ಳುವ ಹಾಗೆ ಆದರೆ ಬಹಳ ಅನುಕೂಲವಾಗುತ್ತದೆ ಎನ್ನುವಂಥ ಮಾತನ್ನು ಹೇಳುತ್ತೇನೆ. ಎಂಪ್ಲಾಯ್‌ಮೆಂಟ್ ಅಷ್ಯೂರೆನ್ಸ್ ಸ್ಕೀಮ್‌ನಲ್ಲಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ತಾವು ನೇಮಿಸಿದ್ದೀರಿ, ಅದಕ್ಕೆ ಶಾಸಕರು ಮತ್ತು ಜಿಲ್ಲಾ ಪಂಚಾಯಿತಿ ಮೆಂಬರ್ಸ್ ಎಂಪ್ಲಾಯ್‌ಮೆಂಟ್ ಅಫ್ಯೂರೆನ್ಸ್ ಸ್ಕೀಮ್‌ನಲ್ಲಿ ಕಾರ್ಯಕ್ರಮ ನಾವು ನಿಗದಿ ಮಾಡುತ್ತೇವೆ. ಈ ಕಾರ್ಯಕ್ರಮಕ್ಕೆ ಇಷ್ಟು ಎಂದು ಹಣ ನಿಗದಿ ಮಾಡಿ ನಾವು ಜಿಲ್ಲಾ ಪಂಚಾಯಿತಿಗೆ ಕಳುಹಿಸುತ್ತೇವೆ. ಆ ಜಿಲ್ಲಾ ಪಂಚಾಯಿತಿಯಲ್ಲಿ ಬದಲು ಏತಕ್ಕಾಗಬೇಕು? ತಾಲ್ಲೂಕು ಪಂಚಾಯಿತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಯಾವ ಊರೊಳಗೆ ಕೆಲಸ ಯಾವುದು ಅವಶ್ಯಕತೆ ಇದೆ ಎಂದು ನಮಗೆ ತಾಲ್ಲೂಕು ಪಂಚಾಯಿತಿ ಸಮಿತಿಗೆ ಹೆಚ್ಚು ಗೊತ್ತಿರುತ್ತದೋ ಜಿಲ್ಲಾ ಪಂಚಾಯಿತಿ ಸಮಿತಿಗೆ ಗೊತ್ತಿರುತ್ತದೋ? ದಯವಿಟ್ಟು ತಾಲ್ಲೂಕು ಪಂಚಾಯಿತಿಯಲ್ಲಿ ಏನಾಗುತ್ತದೋ ಅದನ್ನು ಜಿಲ್ಲಾ ಪಂಚಾಯಿತಿಯವರು ಅನುಮೋದನೆ ಮಾಡಲೇಬೇಕು ಎನ್ನುವಂಥ ವ್ಯವಸ್ಥೆಯನ್ನು ತಾವು ಮಾಡಿ. ಇಲ್ಲದಿದ್ದರೆ ಈ ಫಂಡ್ಸ್ ಸರಿಯಾಗಿ ಡಿಸ್ಟ್ರಿಬ್ಯೂಟ್ ಆಗುವುದಿಲ್ಲ. ಜೋರಿದ್ದವನಿಗೆ ಹೆಚ್ಚು ಫಂಡ್ಸ್ ಸಿಗುತ್ತದೆ. ಆದ್ದರಿಂದ, ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕು. ಏಕೋ ತಾವು ಯೋಜನಾ ಮಂಡಳಿ ರಚನೆ ಮಾಡುವುದರಲ್ಲಿ ಸ್ವಲ್ಪ ಹಿಂದೇಟು ಹಾಕಿದ್ದೀರಿ. ನಾನು ಕಳೆದ ಎರಡು ವರ್ಷಗಳಿಂದ ಇದನ್ನು ತಮ್ಮಲ್ಲಿ ಕೇಳುತ್ತಿದ್ದೇನೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ಆದಮೇಲೆಯೇ ಯೋಜನಾ ಮಂಡಳಿ ನಿಯಮ 310ರ ಕಲಂನ ಅನ್ವಯ ರಾಜ್ಯ ಸರ್ಕಾರ ಮಾಡಬೇಕಾದ ಕರ್ತವ್ಯ ಇದೆ. ಇದು ಆಗಿಲ್ಲ ಎಂದು ಜಿಲ್ಲಾ ಮಟ್ಟದಲ್ಲಿ ಗ್ರಾಮೀಣ ಮತ್ತು ನಗರಪ್ರದೇಶಗಳ ಯೋಜನೆಗಳನ್ನು ಕ್ರೋಢಿಕರಿಸಿ ಯೋಜನಾ ಮಂಡಳಿ ಮುಖಾಂತರ ಯೋಜನೆಯ ಅನುಷ್ಠಾನ, ಮುಂದೆ ಮಿಡ್‌ಟರ್ಮ್ ಅಪ್ರೈಸಲ್ ಇವೆಲ್ಲಾ ಆಗುವಂಥ ವೇದಿಕೆ ಏನು ತಯಾರಾಗಬೇಕಾಗಿತ್ತು, ಆ ವೇದಿಕೆ ತಯಾರಾಗಿಲ್ಲ. ಅದಕ್ಕೆ ದಯವಿಟ್ಟು ಆ ವೇದಿಕೆ ತಯಾರಾಗುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು.

ಶ್ರೀ ಎಂ. ಪಿ. ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಇದರಲ್ಲಿ ಒಂದೇ ವಿಷಯ ಕರ್ನಾಟಕ ಪಂಚಾಯಿತಿಯ 73ನೇ ತಿದ್ದುಪಡಿ ನಂತರ ಇಡೀ ರಾಷ್ಟ್ರದಲ್ಲೇ ಯೋಜನಾ ಮಂಡಳಿಗಳನ್ನು

ಚುನಾವಣೆ ಮಾಡಿ ಮಾಡಿರತಕ್ಕ ರಾಜ್ಯ ಅಂದರೆ ನಮ್ಮದೇ. ಬೇರೆ ಯಾವ ರಾಜ್ಯಗಳೂ ಇದನ್ನು ಮಾಡಿಲ್ಲ. ಆಮೇಲೆ ಅಲ್ಲಿರುವಂಥ ತಮಾಷೆ ಹೇಗಿದೆಯೆಂದರೆ ನಮ್ಮ ರಾಷ್ಟ್ರಮಟ್ಟದಲ್ಲಿರತಕ್ಕ ಯೋಜನಾ ಆಯೋಗ ಅದು ಯಾವುದೇ ಕಾನೂನಿನಿಂದ ಅಸ್ತಿತ್ವಕ್ಕೆ ಬಂದಿಲ್ಲ. ಬರೀ ಒಂದು ಎಗ್ಸಿಕ್ಯುಟೀವ್ ಆರ್ಡರ್‌ನಿಂದ ಅಸ್ತಿತ್ವಕ್ಕೆ ಬಂದಿದೆ. ಅದಕ್ಕೆ ಯಾವುದೇ ಕಾನೂನಾಗಲೀ ಅಥವಾ ಸಂವಿಧಾನದಲ್ಲಿ ಸ್ಥಳ ಇಲ್ಲ. ಹಾಗೆ ರಾಜ್ಯ ಮಟ್ಟದಲ್ಲಿರತಕ್ಕ ಯೋಜನಾ ಆಯೋಗಗಳಿಗೂ ಕೂಡ ಕಾನೂನಿನ ಯಾವುದೇ ಒಂದು ಬೆಂಬಲ ಇಲ್ಲ. ಮತ್ತು ಅದರಿಂದ ಅದು ಅಸ್ತಿತ್ವಕ್ಕೆ ಬಂದಂಥವೂ ಅಲ್ಲ. ಅವುಗಳು ಕೂಡ ಈ ರೀತಿಯಾದಂಥ ಒಂದು ಒಂದು ಸರ್ಕಾರಿ ಆದೇಶದ ಮೂಲಕ ಅಸ್ತಿತ್ವಕ್ಕೆ ಬಂದಿದೆ ಆದರೆ ನಮ್ಮಲ್ಲಿ ಮಾತ್ರ ಈ ಜಿಲ್ಲಾ ಪಂಚಾಯಿತಿಗಳಿಗೆ 73ನೇ ಸಂವಿಧಾನದಲ್ಲಿ ಈ ವಿಚಾರವನ್ನು ಮಾಡಿದ್ದಾರೆ. ಜಿಲ್ಲಾ ಪಂಚಾಯಿತಿ ಅಧ್ಯಕ್ಷರನ್ನೇ ಅದರ ಅಧ್ಯಕ್ಷರನ್ನಾಗಿ ಮಾಡಬೇಕು. ಜಿಲ್ಲಾ ಕೇಂದ್ರ ನಗರಸಭೆಯಾಗಲೀ ನಗರಪಾಲಿಕೆಯಾಗಿರಲಿ ಅದರ ಮೇಯರ್ ಆಗಲೀ ಅಥವಾ ಅಧ್ಯಕ್ಷರಾಗಲೀ ಯಾರಿರುತ್ತಾರೆ ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಬೇಕು ಎಂಬುದನ್ನು ನಾವು ಯೋಚನೆ ಮಾಡಿದ್ದೇವೆ. ಜಿಲ್ಲಾ ಉಸ್ತುವಾರಿ ಮಂತ್ರಿಯವರನ್ನು ಮಾಡಬೇಕು ಎನ್ನುವಂಥ ಒಂದು ಸಲಹೆ ಬಂದಿತ್ತು. ಅಲ್ಲೇ ಇರತಕ್ಕ ಸದಸ್ಯರಲ್ಲಿ ಒಬ್ಬರನ್ನು ಆಯ್ಕೆ ಮಾಡಬೇಕು ಎನ್ನುವಂಥ ಒಂದು ಸಲಹೆ ಬಂದಿತ್ತು. ಆದರೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಅದರ ಅಧ್ಯಕ್ಷರಾಗಬೇಕು ಎಂದು ಈಗ ಏನು ವ್ಯಾಪಕವಾದ ತಿದ್ದುಪಡಿಯನ್ನು ತಂದಿದ್ದೇವೆ ಈ ಸದನದ ಮುಂದೆ ಅದರ ಬಗ್ಗೆ ನಾಳೆ ನಾಡಿದ್ದರಲ್ಲಿ ಮಾನ್ಯ ಅಧ್ಯಕ್ಷರು ನಿರ್ಣಯ ಮಾಡುತ್ತಾರೆ. ಆ ಸಂದರ್ಭದಲ್ಲಿ ಅವರನ್ನೇ ಮಾಡಬೇಕು ಎಂದು ಮಾಡಿದ್ದೇವೆ. ಇದನ್ನು ಮಾಡುವಾಗ ಈಗ ಹೊಸ ಜಿಲ್ಲೆಗಳು ಅಸ್ತಿತ್ವಕ್ಕೆ ಬಂತು. ಈ ಜಿಲ್ಲೆಯ ಯೋಜನಾ ಮಂಡಳಿಗೆ ಆಯ್ಕೆಯಾಗಿರುವುದು ಇಡೀ ಜಿಲ್ಲೆಯಲ್ಲಿ ನಿಗದಿ ಪಡಿಸಿರತಕ್ಕಂಥ ಸ್ಥಾನಗಳ ಮೂಲಕ ಆಗಿದೆ. ಅವು ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ತಾಲ್ಲೂಕುಗಳಿಗೆ ಹರಿದುಹಂಚಿಹೋಗುತ್ತವೆ. ಆ ಕಾರಣಕ್ಕಾಗಿ ಈಗ ಮತ್ತೆ ಚುನಾವಣೆ ಮಾಡುವಂಥ ಸಂಭವ ಇದೆ ಎಂದು ಹೇಳಿ ಕಾನೂನು ಇಲಾಖೆ ಮೂಲಕ ಅದನ್ನು ವಿಚಾರ ಮಾಡಿಸುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಪ್ಲಾನಿಂಗ್ ಕಮಿಟಿ ಏನು ಮಾಡಿದ್ದಾರೆ, ಈಗ ನಮ್ಮ ಲೆಜಿಸ್ಲೇಚರ್‌ನಲ್ಲಿ ಏನಾಗುತ್ತದೆ ಎಂದರೆ ಪ್ರೊಪೋರ್ಷನಲ್ ರೆಪ್ರಸೆಂಟೇಷನ್‌ಗೆ ಇಲ್ಲಿ ಅವಕಾಶ ಇದೆ. ಅದರಲ್ಲಿಲ್ಲ. ಅದರಲ್ಲಿ ಅಂದರೆ ಮೆಜಾರಿಟಿ 51 ಪರ್ಸೆಂಟ್ ಇದ್ದರೆ ಎಲ್ಲಾ ಮೆಂಬರ್ಸ್ ಒಂದೇ ಪಕ್ಷದವರು ಬರಬಹುದು ಅಥವಾ ಒಂದೇ ಗುಂಪಿನವರು ಬರಬಹುದು. ಯಾವಾಗ ನಾವು ಪ್ರೊಪೋರ್ಷನಲ್ ರೆಪ್ರಸೆಂಟೇಷನ್ ಪ್ರಕಾರ ಬೇರೆ ಕಮಿಟಿಗಳನ್ನು ಮಾಡುತ್ತೇವೆ, ಉಳಿದೆಲ್ಲಾ ಕಮಿಟಿಗಳಿಗೆ ಅವಕಾಶ ಇದೆ ಇದು ಬಿಟ್ಟು, ಅದಕ್ಕಾಗಿ ಇದನ್ನು ಸರಿಪಡಿಸದೇ ಹೋದರೆ ಬೇರೆಯವರಿಗೆ ಅದರಲ್ಲಿ ಭಾಗವಹಿಸುವುದಕ್ಕೆ ಅವಕಾಶ ಸಿಗುವುದಿಲ್ಲ. ಯಾವರೀತಿಯಾಗಿ ಬೇರೆ ಕಮಿಟಿಗಳಲ್ಲಿ ಅವಕಾಶ ಇದೆ ಆ ರೀತಿಯಾಗಿ ಇಲ್ಲಿ ಕಮಿಟಿಯಲ್ಲಿ ಅವಕಾಶ ಮಾಡಿಕೊಡಬೇಕಾಗುತ್ತದೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ವಿರೋಧಪಕ್ಷದ ನಾಯಕರು ಇದರ ಬಗ್ಗೆ ಪತ್ರ ಕೂಡ ಬರೆದಿದ್ದಾರೆ. ಏಕೆಂದರೆ, ಇದೂ ಒಂದು ತರಹ ಪ್ರೊಪೋರ್ಷನಲ್ ರೆಪ್ರಸೆಂಟೇಷನ್ ಇದ್ದಾಗ ಮಾತ್ರ

ಕನಿಷ್ಠಪಕ್ಷ ವಿರೋಧಪಕ್ಷದವರು ಎಷ್ಟೇ ಜನ ಇರಲಿ ಅವರಿಗೆ ಒಂದು ಅವಕಾಶ ಸಿಗಬಹುದು ಎಂದು, ನಗರಪಾಲಿಕೆಗಳಲ್ಲಿ ಮಾಡುವಾಗ ಸ್ಥಾಯಿ ಸಮಿತಿಗಳನ್ನು ಮಾಡುವಾಗ ಇದನ್ನು ಮಾಡುತ್ತಾರೆ. ಆದರೆ ಇಲ್ಲಿ ಮಾತ್ರ ಇಲ್ಲ. ಈ ತರಹ ಸಂದರ್ಭ ಬಂದಿರುವುದರಿಂದ ಪ್ರಾಯಶಃ ಇದನ್ನು ಯೋಚನೆ ಮಾಡಿ ಸಚಿವಸಂಪುಟದ ಸಭೆಯಲ್ಲಿ ಇದನ್ನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಡಿ. ಆರ್. ಪಾಟೀಲ್: ಸಾರ್, ಈಗ ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ ಮೆಟೀರಿಯಲ್ಸ್ ಖರೀದಿ ಮಾಡುತ್ತಾರೆ. ಇದರ ಮೇಲೆ ಸಾಕಷ್ಟು ನಿಗಾ ವಹಿಸುವ ಅವಶ್ಯಕತೆ ಬಹಳಷ್ಟಿದೆ ಎಂದು ನನಗನ್ನಿಸುತ್ತದೆ. ಎಲ್ಲ ಕಡೆ ಇದರ ಬಗ್ಗೆ ತನಿಖೆ ಮಾಡಿಸಿ. ಆ ಜಿಲ್ಲೆಯಲ್ಲಿ ಅದರ ಅವಶ್ಯಕತೆ ಇದೆಯೋ ಇಲ್ಲವೋ. ಏಕೆಂದರೆ ಖರೀದಿ ಮಾಡುವಾಗ ಅವಶ್ಯಕತೆ ಇರಲಿ ಇಲ್ಲದಿರಲಿ ಅಥವಾ ಮುಂದೆ ಇನ್ನೂ ಹತ್ತು ವರ್ಷಕ್ಕೆ ಬೇಕಾಗುವಷ್ಟು ಈಗಲೇ ಖರೀದಿ ಮಾಡಿದಂಥ ಅನೇಕ ಪ್ರಸಂಗಗಳು ತಮ್ಮ ನಜರಿಗೆ ಬಂದಿವೆ. ಇದು ಆಗಬಾರದು. ನಮಗೆ ಎಷ್ಟು ರಿಕ್ವೈರ್‌ಮೆಂಟ್ ಇರುತ್ತದೋ ಅಷ್ಟೇ ಖರೀದಿ ಮಾಡುವ ಹಾಗೆ ಆಗಬೇಕು. ಮತ್ತು ಖರೀದಿ ಬಹಳ ಟ್ರಾನ್ಸ್‌ಪರೆಂಟ್ ಇರುವ ಹಾಗೆ ಇರಬೇಕು. ಈಗ ಸರ್ಕಾರ ಬಲ್ಕ್ ಪರ್ಚೇಸರ್ ಆಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ದಯವಿಟ್ಟು ಕ್ಷಮಿಸಬೇಕು. ಈ ಸಂದರ್ಭದಲ್ಲಿ ಒಂದು ಯೋಚನೆ ನಮ್ಮ ಇಲಾಖೆಯಿಂದ ಮಾಡುತ್ತಿದ್ದೇವೆ. ಪ್ರಾಯಶಃ ಇದನ್ನು ಸದನದಲ್ಲಿ ಹೇಳಿದರೆ ತಮ್ಮ ಅನುಭವ ಮತ್ತು ಸಲಹೆ ಕೂಡ ನನಗೆ ಅನುಕೂಲವಾಗಬಹುದು. ಬಹಳಷ್ಟು ವ್ಯಾಪಕವಾದಂಥ ಭ್ರಷ್ಟಾಚಾರ ಈ ಖರೀದಿಯಲ್ಲಿ ಆಗಿದೆ ಎಂದು ದಿವಸವೂ ನನಗೆ ಇದು ಒಂದು ದೊಡ್ಡ ತೊಂದರೆಯಾಗಿದೆ. ಅದರ ಮೂಲಕವಾಗಿ ಈ ವರ್ಗಾವರ್ಗಿಗಳ ಒತ್ತಡವೂ ಹೆಚ್ಚಾಗುತ್ತಿದೆ.

ಅಧ್ಯಕ್ಷರು : ಖರೀದಿ ಅಂದರೆ ಷಾಪಿಂಗಾ?

SRI M.P. PRAKASH : Not shopping sir, purchasing. In a way the purchase has become a shopping.

ಅಧ್ಯಕ್ಷರು : ಕನ್‌ಫ್ಯೂಷನ್ ಆಯಿತು. ಅದಕ್ಕೆ ಕೇಳಿದೆ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಒಂದು ಸಲಹೆ ಬಂದಿರುವಂಥದ್ದು ಸಿಮೆಂಟ್ ಕಬ್ಬಿಣ, ಡಾಂಬರ್ ಮೊದಲಾದವುಗಳನ್ನು ನಾವೇನು ಖರೀದಿ ಮಾಡಿ ಅವರಿಗೆ ಕೊಡುತ್ತಾ ಇರುತ್ತೇವೆ ಮತ್ತು ಕುಡಿಯುವ ನೀರಿಗೆ ಸಂಬಂಧಪಟ್ಟಿದ್ದೆಲ್ಲವನ್ನೂ ಒಂದು ಸಗಟಾಗಿ ಖರೀದಿ ಮಾಡಿ ಅದನ್ನು ಇಲಾಖೆಯಿಂದ ಏನು ಕೊಡುತ್ತಿದ್ದೇವೆ ಅದನ್ನು ಆಯಾ ಕಂಟ್ರಾಕ್ಟರುಗಳೇ ತೆಗೆದುಕೊಡತಕ್ಕ ರೀತಿಯಲ್ಲೇ ವ್ಯವಸ್ಥೆ ಮಾಡಬೇಕು, ಅವರೇ ಅದನ್ನು ಖರೀದಿ ಮಾಡಬೇಕು, ಅಲ್ಲಿಯ ಗುಣಮಟ್ಟವನ್ನು ಆಯಾ ಅಧಿಕಾರಿಗಳೇ ಅಲ್ಲಿ ಪರೀಕ್ಷೆ ಮಾಡಬೇಕು ಎನ್ನುವಂಥ ಒಂದು ವಾದ ಬಂದಿದೆ. ಒಂದು ಕಡೆಗೆ ಉಗ್ರಾಣದಲ್ಲಿರುವಂಥ ಸಾಮಾನುಗಳ ಗುಣಮಟ್ಟವನ್ನೇ ಪರೀಕ್ಷೆ ಮಾಡುವುದಕ್ಕಾಗದಿದ್ದರೆ ಕಂಟ್ರಾಕ್ಟರುಗಳು ಖರೀದಿ ಮಾಡಿದಾಗ ಆ ಮಟ್ಟದಲ್ಲಿ ಏನಾಗಬಹುದು ಎಂಬ ಒಂದು ಸಂಶಯ ಇದೆ. ಆದ್ದರಿಂದ ಈ

ವಿಷಯದಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳುವುದಕ್ಕೆ ತಡ ಮಾಡುತ್ತಿದ್ದೇನೆ. ದಯವಿಟ್ಟು ಇದರ ಬಗ್ಗೆ ಕೂಡ ತಾವು ಬೆಳಕು ಚೆಲ್ಲಿದರೆ ಯಾವುದು ಉಪಯುಕ್ತವಾಗಬಹುದು ಎಂಬುದು ಮತ್ತು ಇದನ್ನು ಯಾವರೀತಿ ತಡೆಹಿಡಿಯಬಹುದು ಎನ್ನುವ ಬಗ್ಗೆಯೂ ತಮ್ಮ ಸಲಹೆ ಕೊಟ್ಟರೆ ನಮಗೆ ಉಪಕಾರ ಮಾಡಿದಂತಾಗುತ್ತದೆ.

ಶ್ರೀ ಡಿ. ಆರ್. ಪಾಟೀಲ್: ದಯವಿಟ್ಟು ಸಾಹೇಬರೇ ಅದನ್ನು ಮಾಡಬೇಡಿ. ನಮ್ಮ ಕಂಟ್ರಾಕ್ಟರ್ ಖರೀದಿ ಮಾಡಿ ಅವನಿಗೆ ಉಪಯೋಗವಾಗುವ ಹಾಗೆ ಮಾಡುವುದಕ್ಕೆ ಹೋಗಬೇಡಿ. ಅದಾದರಂತೂ ತೀರೇ ಹೋಯಿತು. ನಿಮ್ಮ ಅಧಿಕಾರಿಗಳು ಖರೀದಿ ಮಾಡುವುದಿದ್ದರೆ ನಿಮ್ಮ ಕೈಯಲ್ಲಾದರೂ ಇರುತ್ತಾರೆ ಅವರು. ಅವರ ಮೇಲೆ ಏನಾದರೂ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈಗ ಕಂಟ್ರಾಕ್ಟರೇ ಖರೀದಿ ಮಾಡಿ ಹಾಕುವುದು ಎಂದು ನೀವು ಅಂದಿರಿ. ಈಗ ಕೇಸಿಂಗ್ ಪೈಪ್ ಇತ್ತು ಎಂದು ತಿಳಿಯಿರಿ ಬೋರ್‌ವೆಲ್‌ನಲ್ಲಿ. ಕೇಸಿಂಗ್ ಪೈಪ್‌ನೊಳಗೆ ಎಲ್ಲಾ ನಮೂನೆ ಪೈಪೂ ಇವೆ. Depending upon the thickness of the pipe ಕ್ವಾಲಿಟಿ ವೇರಿ ಆಗುತ್ತದೆ, ಪ್ರೈಸೂ ವೇರಿ ಆಗುತ್ತದೆ. ನೀವು ಅವರಿಗೇ ಅಧಿಕಾರ ಕೊಟ್ಟರಿ ಅಂದರೆ ಈ ಕೇಸಿಂಗ್ ಪೈಪ್ ಇಳಿಸುವ ಮುಂದೆ ಅವ ಅಲ್ಲಿ ಸಂಬಂಧಿಸಿದ ಇಂಜಿನಿಯರ್ ಮತ್ತು ಕಂಟ್ರಾಕ್ಟರ್ ಒಂದಾಗಿಬಿಟ್ಟರೆ ಮುಗಿದೇಹೋಯಿತು. ಮುಂದೆ ಎಂಥದ್ದು ಇಳಿಸಿದ್ದಾನೆ ಎಂಬುದು ಯಾರಿಗೂ ಗೊತ್ತಾಗುವುದಿಲ್ಲ. ಈ ಕೇಸಿಂಗ್ ಪೈಪು 130 ರೂಪಾಯಿನಿಂದ ಹಿಡಿದು 18 ರೂಪಾಯಿವರೆಗೂ ಇದೆ. It varies as per the thickness, as per the quality and as per the make. ಅದಕ್ಕಾಗಿ ಇದು ದಯವಿಟ್ಟು ಆಗತಕ್ಕದ್ದಲ್ಲ. The Government being a bulk purchaser, if you purchase the same at State level, it would be excellent. You can bargain. However, the purchase system should be transparent. ಬಹಳ ಓಪನ್ನಾಗಿರಬೇಕು. ಇಲ್ಲಿ ಯಾವುದೇ ಮಾಮೂಲಿಗೆ ವ್ಯವಸ್ಥೆ ಇಲ್ಲದಹಾಗೆ ತಾವು ಅದನ್ನು ರೂಪಿಸಬೇಕು. ಈಗ ಬೋರ್‌ವೆಲ್ ಇದೆ. ನೀವು ಕುಡಿಯುವ ನೀರಿನ ಬೋರ್‌ವೆಲ್ ನೋಡಿ. ನಾನು ಕೇಳಿದೆ ಹೇಗೆ ಬಿಲ್ ಕೊಡುತ್ತೀರಿ ನೀವು ಎಂದು. 180 ರೂಪಾಯಿ ಒಂದು ಮೀಟರ್‌ಗೆ ಕೊಡುತ್ತೇವೆ ನಾವು ಎಂದು ಹೇಳಿದರು. ಗೌರ್ನಮೆಂಟ್ ಬೋರ್‌ವೆಲ್ ಹಾಕಿಸುವಷ್ಟು ಪ್ರೈವೇಟ್‌ನವರು ಯಾರೂ ಹಾಕಿಸುವುದಿಲ್ಲ. ಮೊನ್ನೆ ಎರಡು ತಿಂಗಳ ಹಿಂದೆ ನಮ್ಮ ಮಿಲ್‌ನೊಳಗೆ ಒಂದು ಬೋರ್‌ವೆಲ್ ಹಾಕಿಸಿದೆವು. 40 ರೂಪಾಯಿಗೆ ಒಂದು ಫುಟ್. ಇವರು 180 ರೂಪಾಯಿಗೆ ಒಂದು ಮೀಟರ್. ಅಂದರೆ 60 ರೂಪಾಯಿಗೆ ಒಂದು ಫುಟ್ ಇವರು ಕೊಡುತ್ತಾರೆ, 40 ರೂಪಾಯಿಗೆ ಒಂದು ಫುಟ್ ನಾವು ಕೊಡುತ್ತೇವೆ. ಹೀಗೆ ಏಕೆ ರೇಟಾಗುತ್ತದೆ? ಆದ್ದರಿಂದ, ತಾವು ದಯವಿಟ್ಟು ಈ ಸ್ಟೇಟ್ ಲೆವಲ್‌ನಲ್ಲಿ ರೇಟ್ ಫಿಕ್ಸ್ ಮಾಡುವ ಹಾಗೆ ಮಾಡಿ, ನೀವು ಈ ರೇಟನ್ನು ಉಪಯೋಗ ಮಾಡಿಕೊಳ್ಳಿ. ಹೀಗೆ ಮಾಡುವುದಾದರೆ ಹೆಚ್ಚು ಅನುಕೂಲವಾಗುತ್ತದೆ ಎಂದು ನನಗನ್ನಿಸುತ್ತದೆ. ಮತ್ತೆ ಮೆಟೀರಿಯಲ್ ಸಹಿತ, ಕ್ವಾಲಿಟಿ ಮೆಟೀರಿಯಲ್ ಸೆಂಟ್ರಲೈಸ್ ಆಗಿ ಖರೀದಿ ಮಾಡಿ ಡಿಸ್ಟ್ರಿಬ್ಯೂಟ್ ಮಾಡುವುದರಿಂದ ನಿಮಗೆ ಬಾರ್ಗೈನಿಂಗ್ ಪವರ್ ಹೆಚ್ಚು ಇರುವುದರಿಂದ ಸಾಕಷ್ಟು ಡಿಸ್ಕೌಂಟ್ ಮ್ಯಾನ್ಯುಫಾಕ್ಚರಿಂಗ್ ಲೆವಲ್‌ನೊಳಗೆ ನಿಮಗೆ ಸಿಗುತ್ತದೆ. ಆದ್ದರಿಂದ ಅದನ್ನು ಮಾಡಿದರೆ ಹೆಚ್ಚು ಅನುಕೂಲ ಎನ್ನುವ

ಮಾತನ್ನು ತಮಗೆ ಹೇಳಿ ಹೋದಸಾರಿ ಯಾದಗೀರ್ ಜೆಡ್‌ಪಿ. ಡಿವಿಜನ್‌ನೊಳಗೆ ಏನು ಖರೀದಿಯೊಳಗೆ ಅವ್ಯವಹಾರ ಆಗಿದೆ ಎನ್ನುವಂಥ ಮಾತನ್ನು ತಮ್ಮ ಗಮನಕ್ಕೆ ತಂದಾಗ ತಾವು ಅದನ್ನು ಎನ್‌ಕ್ವೈರಿ ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎನ್ನುವಂಥ ಭರವಸೆಯನ್ನು ಈ ಸದನಕ್ಕೆ ತಾವು ಕೊಟ್ಟಿದ್ದೀರಿ. ಇನ್ನೂ ಏನೂ ಆ್ಯಕ್ಷನ್ ಎಂದು ನಮಗೆ ತಿಳಿದು ಬಂದಿದೆ. ದಯವಿಟ್ಟು ಈ ಖರೀದಿಯೊಳಗೆ ಆಗತಕ್ಕಂಥ ಅವ್ಯವಹಾರಗಳು, ನಜರಿಗೆ ಬಂದ ಕೂಡಲೇ ಅವರಿಗೆ ಹೆದರಿಕೆ ಆಗಬೇಕು. ಇದು ಹೇಗೆ ಆ ಲಕ್ಕೂಭಾಯಿ ಪಟೇಲನದ್ದು 12-13ವರ್ಷ ಹಿಂದಿನದು ಬಂತಲ್ಲ ಹಾಗೆ ಯಾವಾಗಲೂ ಇದು ಬಿಡುವುದಿಲ್ಲ, ಒಟ್ಟು ಇದು ಬರುವಂಥಾದ್ದೇ, ನಾವು ತಪ್ಪು ಮಾಡಿದ್ದೀರಿ, ಇದು ಆಗುವುದೇ ಅನ್ನುವಂಥ ಒಂದು ಹೆದರಿಕೆ ಮೂಡುವ ಹಾಗೆ ಆಡಳಿತ ಯಂತ್ರದಲ್ಲಿ ಬದಲಾವಣೆಯನ್ನು ತಾವು ತರಬೇಕು ಎನ್ನುವಂಥ ಮಾತನ್ನು ತಮಗೆ ಹೇಳಿ ಅಧ್ಯಕ್ಷರು ಬಹಳಷ್ಟು ಸಮಯವನ್ನು ನನಗೆ ಕೊಟ್ಟು ನನ್ನ ಅಭಿಪ್ರಾಯಗಳನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ಅವರಿಗೆ ಅಭಿನಂದನೆಯನ್ನು ಸಲ್ಲಿಸಿ, ಒಂದು ಮಾತನ್ನು ನಾನು ಹೇಳದೇ ಇದ್ದರೆ ತಪ್ಪಾಗುತ್ತದೆ. ನೀವು ನಿಜವಾಗಿಯೂ ಈ ವಾರ್ಷಿಕ ವರದಿಯನ್ನು ಏನು ಕೊಟ್ಟಿದ್ದೀರಿ, ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಇದು ಗ್ರಾಫಿಕಲ್‌ಆಗಿ presentation is excellent. I must place on record my appreciation to the concerned officers. ಮತ್ತು ನೀವು ಅವರಿಗೆ ಸೂಕ್ತ ಮಾರ್ಗದರ್ಶನ ಮಾಡಿರಬಹುದು. ನಿಮ್ಮ ಈ ಅನುಕರಣೆಯನ್ನು ಉಳಿದ ಎಲ್ಲ ಇಲಾಖೆಯವರೂ ಮಾಡಿ ನಮ್ಮ ಶಾಸಕರಿಗೆ ಒದಗಿಸಿದರೆ ಹೆಚ್ಚು ಅನುಕೂಲವಾಗುತ್ತದೆ. ಮಾನ್ಯ ಸಿದ್ದರಾಮಯ್ಯ ಸಾಹೇಬರು ಈ ಕೆಲಸವನ್ನು ಎಲ್ಲ ಡಿಪಾರ್ಟ್‌ಮೆಂಟ್‌ಗಳ ಮೂಲಕ ಮಾಡಿಸಬೇಕು ಎನ್ನುವಂಥ ಮಾತನ್ನು ಹೇಳಿ ಈ ಪಂಚಾಯತ್ ವ್ಯವಸ್ಥೆ ಸಾಕಷ್ಟು ಭದ್ರವಾಗಬೇಕಾದರೆ ಗ್ರಾಮಸಭೆಗಳು ಸರಿಯಾಗಿ ನಡೆಯುವ ಹಾಗೆ ತಾವು ಮಾಡಬೇಕು. ಗ್ರಾಮಸಭೆಗಳಲ್ಲಿ ಎಲ್ಲಾ ಕಾರ್ಯಕ್ರಮಗಳ ಪರವೀಕ್ಷಣೆ ನಡೆಯುವ ಹಾಗೆ, ಲೆಕ್ಕಪತ್ರಗಳನ್ನು ಎಲ್ಲ ಅಲ್ಲಿ ತೆಗೆದುಕೊಳ್ಳುವ ಒಂದು ವ್ಯವಸ್ಥೆಯನ್ನು ಮಾಡಬೇಕು. ಈಗ ನೀವು ತರುವಂಥ ಕಾನೂನು ಬದಲಾವಣೆಯಲ್ಲಿ ಗ್ರಾಮ ಸಭೆಗೆ ಒಂದು ಕೋರಮ್ ಫಿಕ್ಸ್ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಇಲ್ಲಿ ಗ್ರಾಮಸಭೆಗೆ ಕೋರಮ್ ಇಲ್ಲ. ಕೋರಮ್ ಇಲ್ಲದಿರುವುದರಿಂದ ಮಾನ್ಯ ಮಾಧುಸ್ವಾಮಿ ಅವರು ಹೇಳಿದಹಾಗೆ ಅದು ಅಲ್ಲಿ ಪಂಚಾಯತ್ ಕುಟುಂಬದ ಸದಸ್ಯರು ಕೂಡಿದರೂ ಅದು ಕಾನೂನುಬದ್ಧವಾಗಿ ಒಂದು ಗ್ರಾಮಸಭೆಯೇ ಆಗುತ್ತದೆ. ಅದಕ್ಕೇ ಗ್ರಾಮಸಭೆಗೆ ಒಂದು 10 ಪರ್ಸೆಂಟ್, 5 ಪರ್ಸೆಂಟ್ ಮಿನಿಮಮ್ ಇಷ್ಟು ಪಾಪ್ಯುಲೇಶನ್‌ಗೆ ಇಷ್ಟು ಎಂದು ಹೇಳಿ ನೀವು ಫಿಕ್ಸ್ ಮಾಡಿ ಕೋರಮ್ ಎಂದು ಮಾಡಿದಿರಿ ಎಂದರೆ ಹೆಚ್ಚು ಜನ ಅದರಲ್ಲಿ ಭಾಗವಹಿಸುವಂಥ ಅನಿವಾರ್ಯತೆ ನಿರ್ಮಾಣವಾಗುತ್ತದೆ. ಅದು ಅನುಕೂಲವಾಗುತ್ತದೆ ಎನ್ನುವಂಥ ಮಾತನ್ನು ಹೇಳಿ ತಮ್ಮೆಲ್ಲರಿಗೂ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ನಾನು ಮುಗಿಸುತ್ತೇನೆ.

+ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೇ, ಈ ಬೇಡಿಕೆಗಳ ಬಗ್ಗೆ ಮಾತನಾಡಲಿಕ್ಕೆ ನನ್ನನ್ನು ಕರೆದಿದ್ದಕ್ಕೆ ನಾನು ತಮಗೆ ಆಭಾರಿಯಾಗಿದ್ದೇನೆ ಎಂದು ಹೇಳಿ ಮೊದಲನೆಯದಾಗಿ, ಕಂದಾಯ ಇಲಾಖೆಯ ಮೇಲೆ ಒಂದೆರಡು ಮಾತುಗಳನ್ನಾಡಿ ಆಮೇಲೆ ಗ್ರಾಮೀಣಾಭಿವೃದ್ಧಿ ಇಲಾಖೆಯ ಮೇಲೆ ಮಾತನಾಡಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಒಂದು ನಿಮಿಷ ಇರಿ. ಪ್ರಕಾಶ್‌ರವರೇ, ನಾನು ಬೆಳಿಗ್ಗೆಯೇ ಹೇಳಿದೆ. ನಿಮ್ಮ ಮುಖ್ಯ ಸಚೇತಕರಿಗೂ ಹೇಳಿದೆ. ನಾನು ನಿನ್ನೆ ಅವರ ಮೇಲೆ ಆಕ್ಷೇಪಣೆ ಮಾಡಿದೆ. ಸಮಯ ವ್ಯರ್ಥವಾಗುತ್ತಾ ಇದೆ, ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಾ ಇಲ್ಲ ಎಂದು ಹೇಳಿ ಅವರ ಮೇಲೆ ಆಕ್ಷೇಪಣೆಯನ್ನು ಮಾಡಿದ್ದೆ. ಅವರು ನಿನ್ನೆ ಎಲ್ಲ ಬಂದು ಸಹಕರಿಸಿದರು. ಇವತ್ತು ಶೂನ್ಯವೇಳೆ, ಗಮನ ಸೆಳೆಯುವ ಸೂಚನೆ, ನಿಯಮ 69 ಎಲ್ಲವನ್ನೂ ಬಿಟ್ಟಿದ್ದೇವೆ. ನೇರವಾಗಿ ಬೇಡಿಕೆಗಳ ಮೇಲೆ ಚರ್ಚೆ ಮಾಡೋಣ ಎಂದು ಸಂಬಂಧಿಸಿದ ಮಂತ್ರಿಗಳು, ಬೇಡಿಕೆಗಳನ್ನು ಮಂಜೂರು ಮಾಡಿಸಿಕೊಳ್ಳಬೇಕಾದವರು, ಕೋಟ್ಯಾಂತರ ರೂಪಾಯಿಗಳ ಬೇಡಿಕೆಗಳನ್ನು ಮುಂದಿಟ್ಟವರು ಹಾಜರಿಲ್ಲದೇ ಹೋದರೆ ನನಗೆ ಅರ್ಥವಾಗುವುದಿಲ್ಲ. I think we can adjourn if the Ministers are not interested. When I have not spared my friends from the Opposition, why should I be considerate to them?

SRI M.P. PRAKASH : I apologise for that.

(ಈ ಹಂತದಲ್ಲಿ ಮಾನ್ಯ ಕಂದಾಯ ಮಂತ್ರಿಗಳಾದ ಶ್ರೀ ರಮೇಶ್ ಜಿಗಜಿಣಗಿ ಆಗಮಿಸಿದರು)

MR SPEAKER. : If anybody trying to look at the Assembly with indifference, could it be intolerated?

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಈ ಇಲಾಖೆ ಬಗ್ಗೆ ಮಾತನಾಡುವುದಕ್ಕೆ ಮೊದಲೇ, ಇದನ್ನು ಇನಿಶಿಯೇಟ್ ಮಾಡಿದ ಸನ್ಮಾನ್ಯ ತಿಮ್ಮಪ್ಪನವರಿಂದ ನಾನು ಸ್ಫೂರ್ತಿ ತೆಗೆದುಕೊಳ್ಳುವುದಕ್ಕೆ ಬಯಸುತ್ತೇನೆ. ವಿಲೇಜ್ ಅಕೌಂಟೆಂಟ್‌ನಿಂದ ಅವರು ತಮ್ಮ ಭಾಷಣವನ್ನು ಶುರು ಮಾಡಿದರು. ನಾನು ಅದಕ್ಕಿಂತ ಒಂದು ಹಂತ ಕೆಳಕ್ಕೆ ಹೋಗುತ್ತೇನೆ. ಅವರಿಗೂ ಒಬ್ಬರು ಸಹಾಯಕರು ಎಂದು ಇದ್ದಾರೆ. ಇವತ್ತಿನವರೆಗೂ ಅವರ ಸ್ಥಿತಿ ಏನಾಗಿದೆ ಎಂದು ಹೇಳಿ ನೀತಿ ನಿರೂಪಣೆ ಆಗಿಲ್ಲ. ಗ್ರಾಮ ಸಹಾಯಕರಿಗೆ ತಾವೇನು ಸರ್ಕಾರಿ ನೌಕರರು ಎಂದು ಮಾಡಿದ್ದೀರಾ ಅಥವಾ ಅಂತ್ಯಕಾಲದ ನೌಕರರು ಎಂದು ಮಾಡಿದ್ದೀರಾ, ದಿನ ಕೂಲಿ ನೌಕರರು ಎಂದು ಮಾಡಿದ್ದೀರಾ? 20-25 ವರ್ಷ ಕೆಲಸ ಮಾಡಿರುವ ಗ್ರಾಮ ಸಹಾಯಕರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಅನಗತ್ಯವಾಗಿ ಹುದ್ದೆಗಳನ್ನು ಸೃಷ್ಟಿ ಮಾಡಿ, ಮುಂಬಡ್ತಿ ಕೊಡುತ್ತಿದ್ದರೆ ಅದು ಈ ಕಂದಾಯ ಇಲಾಖೆಯಲ್ಲಿ. ಅವರಿಗೆ ಅಗತ್ಯವಿರುವುದಕ್ಕಿಂತ ಎರಡರಷ್ಟು, ಮೂರರಷ್ಟು ರಾಜಸ್ವ ನಿರೀಕ್ಷಕರನ್ನು ಇವತ್ತು ಸೃಷ್ಟಿಮಾಡಿದ್ದಾರೆ. ಇದನ್ನು ಏತಕ್ಕೆ ಸೃಷ್ಟಿ ಮಾಡಿದ್ದಾರೆ ಎಂದರೆ, ಆ ಕಡೆ ಎರವಲು ಕೊಡುತ್ತೇವೆ, ಈ ಕಡೆಗೆ ಎರವಲು ಕೊಡುತ್ತೇವೆ, ಅಲ್ಲಿಗೆ ಬೇಕಾಗುತ್ತಾರೆ ಎಂದು ಹೇಳಿ. ಆದರೆ ದುರ್ದೈವಕ್ಕೆ ಯಾರೂ ಆ ಇಲಾಖೆಯನ್ನು ಬಿಟ್ಟು ಆಚೆ ಹೋಗಲಿಕ್ಕೆ ತಯಾರಾಗಿಲ್ಲ. ಇದು ಒಂದು ವೈಜ್ಞಾನಿಕವಾಗಿ ಆಗಬೇಕಾದದ್ದು. ಒಂದು ಕಡೆ ನಾವು ಮಿತವ್ಯಯ ಮಾಡುತ್ತೇವೆ ಎನ್ನುವುದು. ಇನ್ನೊಂದು ಕಡೆ ಹುದ್ದೆಗಳನ್ನು ಮಾಡಿ ಮುಂಬಡ್ತಿಗಳನ್ನು ಕೊಡುವುದು; ಸೃಷ್ಟಿ ಮಾಡುವುದು ಇದು ಮಾಡಿಕೊಂಡು ಹೋಗಿ ಈ ರಾಜ್ಯದಲ್ಲಿ ಅನಗತ್ಯವಾಗಿ

ಶೇಕ್‌ದಾರರು ಎಂದರೆ ರಾಜಸ್ವ ನಿರೀಕ್ಷಕರನ್ನು ನೇಮಕಮಾಡಿ ಅವರು ಇವತ್ತು ಹೆಚ್ಚಾಗಿದ್ದಾರೆ. ಅದರ ಜೊತೆಗೆ ಈ ಉಪವಿಭಾಗಾಧಿಕಾರಿಗಳು. ಮಾನ್ಯ ಬಂಗಾರಪ್ಪನವರು ಇದ್ದಾಗ ಇಲ್ಲಿ ಒಂದು ಹೇಳಿಕೆಯನ್ನು ಮಾಡಿದ್ದರು. ಎಲ್ಲ ಅಸಿಸ್ಟೆಂಟ್ ಕಮೀಷನರ್ ಹುದ್ದೆಗಳನ್ನು ನಾವು ರದ್ದುಮಾಡುತ್ತಿದ್ದೇವೆ, ಎಲ್ಲ ಡಿವಿಜನಲ್ ಕಮೀಷನರ್ ಹುದ್ದೆಗಳನ್ನು ನಾವು ರದ್ದುಮಾಡುತ್ತಿದ್ದೇವೆ. ಅದಕ್ಕಾಗಿ ತಹಸೀಲ್ದಾರರನ್ನು ಗ್ರೇಡ್-(1) ಗ್ರೇಡ್-(2) ಅಂತ ವರ್ಗೀಕರಣ ಮಾಡುತ್ತಿದ್ದೇವೆ ಎಂದು ಹೇಳಿದರು ಈಗ ಗ್ರೇಡ್-1 ತಹಸೀಲ್ದಾರರಿಗೆ ಅಸಿಸ್ಟೆಂಟ್ ಕಮೀಷನರ್‌ಗೆ ಇರಬೇಕಾದಂಥ ಹಕ್ಕುಭಾದ್ಯತೆಗಳನ್ನು ಕೊಟ್ಟು ನಾವು ಅವರನ್ನು ಕೆಲಸ ಮಾಡಲಿಕ್ಕೆ ತಾಲ್ಲೂಕು ಮಟ್ಟದಲ್ಲಿ ಬಿಡುತ್ತೇವೆ. ಏನು ಆಯಿತು ಸ್ವಾಮಿ ಆ ತೀರ್ಮಾನ? ಇವತ್ತು ತಹಸೀಲ್ದಾರರನ್ನು ನೀವು ಗ್ರೇಡ್-(1) ಆಗಿ ಮಾಡಿದಿರಿ. ತಹಸೀಲ್ದಾರರಲ್ಲಿ ಇನ್ನೊಂದು ವರ್ಗ ಗ್ರೇಡ್-(2) ಎಂದು ಮಾಡಿ ಅವರಿಗೆ ಮ್ಯಾಜಿಸ್ಟ್ರೇಟ್ ಪವರ್ ಇಲ್ಲ ಅಂದಿರಿ. ಇನ್ನೊಂದು ಕಡೆ 58ರಿಂದ 75 ಜನ ಅಸಿಸ್ಟೆಂಟ್ ಕಮೀಷನರ್‌ಗಳು ಈ ರಾಜ್ಯಕ್ಕೆ ಬೇಕು. ತಮ್ಮ ಹತ್ತಿರ ಸರಿಸುಮಾರು 300 ಅಸಿಸ್ಟೆಂಟ್ ಕಮೀಷನರ್‌ಗಳು ಇವತ್ತು ಇದ್ದಾರೆ. ಆ ಅಸಿಸ್ಟೆಂಟ್ ಕಮೀಷನರ್ ಏನು ಮಾಡುತ್ತಿದ್ದೀರಿ ಎಂದರೆ ಅವರು ಯಾರೂ ಇವತ್ತು ಬೆಂಗಳೂರು ಬಿಟ್ಟು ಅಥವಾ ತಮ್ಮ ರೆವಿನ್ಯೂ ಇಲಾಖೆ ಬಿಟ್ಟು ಆಚೆ ಹೋಗಲಿಕ್ಕೆ ತಯಾರಾಗಿಲ್ಲ. ಒಂದು ಕಡೆ 54-55 ವರ್ಷವಾಗಿರುವ ತಹಸೀಲ್ದಾರರುಗಳು. ಇನ್ನೊಂದು ಕಡೆ 42-43-44ರ ವಯೋಮಿತಿಯಲ್ಲಿರುವ ಆ ಎ.ಸಿ.ಗಳು, ಈ ತಹಸೀಲ್ದಾರರುಗಳಿಗೆ ಏನಾದರೂ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳಿದರೆ ಪಾಪ, ಅವರು ಕೆಲಸಕ್ಕೆ ಸೇರಿದ ದಿವಸದಲ್ಲಿ ಯಾವ ಹಂತದಲ್ಲಿ ಇದ್ದರೋ ಅದೇ ಹಂತದಲ್ಲಿದ್ದಾರೆ. ಅವತ್ತು ತಹಸೀಲ್ದಾರರು ಕೇಳುತ್ತಿದ್ದರು. ಇವತ್ತು ಡೆಪ್ಯುಟಿ ಕಮೀಷನರ್ ಅಥವಾ ಎ.ಸಿ. ಸಾಹೇಬರನ್ನು ಕೇಳಿ ಸೈನ್ ಹಾಕ್ತೀವಿ ಎನ್ನುವ ಸ್ಥಿತಿಯಲ್ಲಿರುವ ತಹಸೀಲ್ದಾರರುಗಳು. ಈ ತಾರತಮ್ಯವನ್ನು ತಾವು ಸರಿಪಡಿಸದೇ ಹೋದರೆ ರೆವಿನ್ಯೂ ಇಲಾಖೆಯಲ್ಲಿ ಕೆಲಸ ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಅಸಿಸ್ಟೆಂಟ್ ಕಮೀಷನರ್‌ಗಳಿಗೆ ತಾವು ಏನು ಕೆಲಸ ವಹಿಸಲಿಕ್ಕೆ ಕಡ್ಡಾಯವಾಗಿ ಹೊರಟಿದ್ದೀರಿ? ನಾನು ಈ ಶಾಸನ ಸಭೆಯಲ್ಲಿ ಆವತ್ತು ಇದ್ದೆ. ಈ ವರ್ಗವನ್ನು ಅಸಿಸ್ಟೆಂಟ್ ಕಮೀಷನರ್ ವರ್ಗಕ್ಕೆ ತೆಗೆದುಕೊಂಡು ಹೋಗಿದ್ದೀವಿ, ಅವರು ತಾಲ್ಲೂಕಿನ ಎಲ್ಲ ಇಲಾಖೆಗಳನ್ನೂ ಮಾನಿಟರಿಂಗ್ ಮಾಡಬೇಕಾಗುತ್ತದೆ. ಸೂಪರ್‌ವೈಸ್ ಮೂಡಬೇಕಾಗುತ್ತದೆ. ಹಾಗಾಗಿ ತಾಲ್ಲೂಕು ಪಂಚಾಯತಿ ಎಕ್ಸಿಕ್ಯೂಟೀವ್ ಆಫೀಸರ್ ಒಬ್ಬ ಅಸಿಸ್ಟೆಂಟ್ ಕಮೀಷನರ್‌ಗೆ ಸರಿಸಮಾನವಾದ ಹುದ್ದೆಯವರು ಇದ್ದರೆ ಶ್ರೇಷ್ಠವಾಗಬಹುದು. ಹಾಗಾಗಿ ಎಲ್ಲ ಇಲಾಖೆಗಳ ಅಧಿಕಾರಿಗಳು ಅವರ ನಿಯಂತ್ರಣಕ್ಕೆ ಒಳಪಡಬಹುದು ಎನ್ನುವ ದೃಷ್ಟಿಯಲ್ಲಿ ಸನ್ಮಾನ್ಯ ಬಸವಲಿಂಗಪ್ಪನವರು ಇರಬಹುದು, ಇ.ಒ. ಹುದ್ದೆಯನ್ನು ಎ.ಸಿ. ಕೇಡರ್ ಹುದ್ದೆ ಎಂದು ಮಾಡಿದರು. ಇವತ್ತು ಎಷ್ಟು ಜನ ಅಸಿಸ್ಟೆಂಟ್ ಕಮೀಷನರ್‌ಗಳನ್ನು ನೀವು ಅಲ್ಲಿಗೆ ನಿಯೋಜನೆ ಮಾಡಿದ್ದೀರಿ? ಏಕೆ ಆ ಅಸಿಸ್ಟೆಂಟ್ ಕಮೀಷನರ್‌ಗಳು ಅಲ್ಲಿ ಹೋಗುತ್ತಿಲ್ಲ? ಆ ಆಧಾರ ಇಟ್ಟುಕೊಂಡು ನೀವೇನು ಪ್ರಮೋಷನ್ಸ್ ಕೊಟ್ಟಿದ್ದೀರಿ, ಅದನ್ನು ಏಕೆ, ಸರ್ಕಾರದವರು ವಾಪಾಸ್ಸು ತೆಗೆದುಕೊಳ್ಳಬಾರದು? ಅನಗತ್ಯವಾಗಿ ಈ ಹುದ್ದೆಗಳನ್ನು ಏಕೆ ಇಟ್ಟುಕೊಂಡಿದ್ದೀರಿ? ಇದಕ್ಕೆ ತಾವು ಉತ್ತರ ಹೇಳಬೇಕಾಗಿದೆ. ಇನ್ನು ಈ ಡೆಪ್ಯುಟಿ ತಹಸಿಲ್ದಾರರು ಸೈನ್

ಮಾಡುತ್ತಾರೋ ಇಲ್ಲವೋ ಎಂದು ನನಗೆ ಅರ್ಥವಾಗಲಿಲ್ಲ. ಸ್ವಾಮಿ, ಇವತ್ತು ಅವರಿಗೆ ಒಂದು ಇನ್‌ಕಮ್ ಸರ್ಟಿಫಿಕೇಟ್ ಕೊಡುವ ಅಧಿಕಾರವೂ ಇಲ್ಲ. ಹೋಬಳಿ ಮಟ್ಟದಲ್ಲಿ ಹಾಕಿರುವ ನಿಮ್ಮ ಡೆಪ್ಯುಟಿ ತಹಸೀಲ್ದಾರರು ಏನಿದ್ದಾರೆ ಅವರಿಗೆ ಖಾತೆ, ಪಹಣಿ ಮಾಡಿ ಅಂದರೂ ಅವರು ತಹಸೀಲ್‌ದಾರರು ಆರ್ಡರ್ಸ್‌ಗೆ ಬರೆಯುತ್ತಾರೆ. ಏಕೆ ಬೇಕು ಈ ಹುದ್ದೆ? ತಾವು ಮೊನ್ನೆ ತಮ್ಮ ಭಾಷಣದಲ್ಲಿ ಹೇಳಿದ್ದೀರಿ. ಇಲ್ಲ, ಎಲ್ಲ ಹೋಬಳಿಗಳಿಗೂ ನಾವು ಇವತ್ತು ಒಬ್ಬ ಡೆಪ್ಯುಟಿ ತಹಸೀಲ್ದಾರರನ್ನು ನೇಮಕ ಮಾಡುತ್ತೇವೆ ಎಂದು. ನಾಡಕಚೇರಿಯಲ್ಲಿ ಅವನಿಗೆ ಏನಾದರೂ ಸ್ವಲ್ಪ ಅಧಿಕಾರಕೊಡದೆ, ಅವನನ್ನು ಇನ್ನೊಬ್ಬ ಶೇಕ್‌ದಾರನನ್ನಾಗಿ ಮಾಡದೆ, ಪ್ರಮೋಶನ್ ಸ್ವಲ್ಪ ಮಾಡಿಕೊಂಡು ಇಂತಹ ಹುದ್ದೆಗಳನ್ನು ಸೃಷ್ಟಿಮಾಡಿಕೊಂಡು ಹೋಗುವುದರಲ್ಲಿ ಅಗತ್ಯ ಇದೆಯಾ? ಮಾನ್ಯ ಸಿದ್ಧರಾಮಯ್ಯನವರು ಭಾಷಣದಲ್ಲಿ ಹೇಳಿದರು, ನಾವು ಐದು ಪರ್ಸೆಂಟ್ ಕಡಿತ ಮಾಡುತ್ತೇವೆ ಎಂದು. ಈ ರಾಜ್ಯದ ಆಡಳಿತ ಎಲ್ಲಿಗೆ ಹೋಗುತ್ತಿದೆ? 8 ರಿಂದ 10 ಜಿಲ್ಲೆ ಜಾಸ್ತಿ ಮಾಡುತ್ತೀರಿ. ಕನಿಷ್ಟ ಒಂದು ಜಿಲ್ಲೆಯಿಂದ 18 ರಿಂದ 20 ಕೋಟಿ ರೂಪಾಯಿಗಳು ಹೆಚ್ಚು ಖರ್ಚು ಮಾಡುವ ಸ್ಥಿತಿಯನ್ನು ನಿರ್ಮಾಣ ಮಾಡುತ್ತೀರಿ. ಇನ್ನೊಂದು ಕಡೆ ಎಲ್ಲರಿಗೂ ಪ್ರಮೋಶನ್ ಕೊಡುತ್ತೀರಿ. ಸಾರಾಸಗಟು ಅಗಿ ಕೆಲಸಕ್ಕೆ ಸೇರಿದವರನ್ನು ಎಲ್ಲರನ್ನೂ ಅಸಿಸ್ಟೆಂಟ್ ಕಮೀಷನರ್ ಮಾಡಿ ರಿಟೈರ್ ಮಾಡುವುದಕ್ಕೆ ಹೊರಟಿದ್ದೀರಿ. ಕೆಲಸ ಏನು ಕೊಡುತ್ತಿದ್ದೀರಿ ಎಂದರೆ ನಿಮ್ಮ ವರಮಾನ ಏನಿದೆ, ಹತ್ತು ರೂಪಾಯಿ ಕಂದಾಯ ವಸೂಲಿ ಮಾಡಲಿಕ್ಕೆ 100-120 ರೂಪಾಯಿಗಳ ಖರ್ಚನ್ನು ಈ ರಾಜ್ಯದಲ್ಲಿ ತಾವು ಮಾಡುತ್ತಿದ್ದೀರಿ. ರೆವಿನ್ಯೂ ಇಲಾಖೆ, ರಾಜಸ್ವ ಇಲಾಖೆ ಎಂದು ಬರೆದುಕೊಂಡು ಪೂರ್ಣ ಖರ್ಚಿಗೆ ತಾವು ಇಲಾಖೆಯನ್ನು ಇಟ್ಟುಕೊಳ್ಳುವುದಾದರೆ ಏಕೆ ಬೇಕಾಗಿತ್ತು ಇದು? ಜಿಲ್ಲಾ ಪಂಚಾಯತ್ ಆದಮೇಲೆ ನಿಮ್ಮ ಅಸಿಸ್ಟೆಂಟ್ ಕಮೀಷನರ್ಸ್ ಒಂದೊಂದು ಡಿ.ಸಿ. ಆಫೀಸಿನಲ್ಲಿ ಮೂರು ಜನರು ಕುಳಿತುಕೊಳ್ಳುತ್ತಾರೆ.

1.10 ಪಿ.ಎಂ.

ಒಬ್ಬರು ಫುಡ್ ಅಸಿಸ್ಟೆಂಟ್, ಒಬ್ಬರು ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್, ಮತ್ತೊಬ್ಬರು ರೆಗ್ಯುಲರ್ ಅಸಿಸ್ಟೆಂಟ್ ಕಮೀಷನರ್ ಏನು ಸ್ವಾಮಿ ಇವರಿಗೆ ಕೆಲಸ? ಒಂದು ಕಡೆ ಫುಡ್ ಸೆಕ್ರೆಟರಿಯೇಟ್, ಡೈರೆಕ್ಟ್‌ರೇಟ್ ಮಾಡುತ್ತೇವೆಂದು ತಮ್ಮ ಭಾಷಣದಲ್ಲಿ ಹೇಳುತ್ತೀರಿ, ಮತ್ತೊಂದು ಕಡೆ ಹುದ್ದೆಗಳನ್ನು ಜಾಸ್ತಿ ಮಾಡುತ್ತಿದ್ದೀರಿ, ಇವತ್ತು ಹೆಡ್ ಕ್ವಾರ್ಟರ್ಸ್ ಅಸಿಸ್ಟೆಂಟ್‌ರವರ ಕೆಲಸ ಭಾರಿ ಪ್ರಾಮಾಣಿಕವಾಗಿ ಉಳಿದಿದೆಯೇ? ಡಿಸಿ. ಗೆ ಇರುವ ಡೆವಲಪ್‌ಮೆಂಟ್ ಇಲಾಖೆಯನ್ನು ವರ್ಗಾವಣೆ ಮಾಡಿ ಮತ್ತೊಬ್ಬ ಐಎಎಸ್ ಆಫೀಸರ್ಸನ್ನು ಜೆಡ್‌ಪಿ.ಗೆ, ಸಿಇಓ ಎಂದು ಮಾಡಿದ್ದಾದ ಮೇಲೆ ಡಿಸಿಗೆ ಅಸಿಸ್ಟ್ ಮಾಡುವುದಕ್ಕೆ ಒಬ್ಬ ಸೂಪರಿಂಟೆಂಡೆಂಟ್ ಅಥವಾ ಮ್ಯಾನೇಜರ್ ಅಥವಾ ತಹಸೀಲ್ದಾರ್ ಕೇಡರ್ ಆಫೀಸರ್ಸ್ ಆಗುತ್ತಿರಲಿಲ್ಲವೆ? ಮತ್ತೊಂದು ಕಡೆ ಅವರು ಹೇಳುತ್ತಾರೆ ನಾವು 67 ಪರ್ಸೆಂಟ್ ಸಂಬಳ ಕೊಡುತ್ತೇವೆ, 67 ಪರ್ಸೆಂಟ್ ಅದು ತಲುಪಬಹುದು ಉಳಿದ 33 ಭಾಗ ನಾವು ಡೆವಲಪ್‌ಮೆಂಟ್ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ, ಆಡಳಿತ ನಡೆಸಿಕೊಂಡು ಹೋಗುವವರಿಗೆ ಇದು ಒಂದು ರೀತಿ ಖುಷಿಯಾಗಿ ಬಿಟ್ಟಿದೆ. ಯಾರಾದರೂ ಬರಲಿ ತಾನೂ ಒಂದಿಷ್ಟು ಜನಕ್ಕೆ ಪ್ರಮೋಷನ್ ಕೊಟ್ಟು ಒಳ್ಳೆಯ ಹೆಸರು ತೆಗೆದುಕೊಳ್ಳುವುದು ವಾಡಿಕೆಯಾಗಿದೆ. ಎಲ್ಲಿಯವರೆಗೆ, ನೀವು ಈ

ಪ್ರಮೋಷನ್ ಕೊಡುತ್ತೀರಿ? ಬೇರೆ ಇಲಾಖೆಗಳಲ್ಲಿರುವ ಹುದ್ದೆಗಳನ್ನು ಸೃಜನೆ ಮಾಡಿ ನೀವು ಏಕೆ ಅವರನ್ನು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಅವರ ಸ್ಟ್ರೆಂತ್ ತೋರಿಸುತ್ತೀರಿ? ಈ ಹುದ್ದೆಗಳ ಬಗ್ಗೆ ನೀವು ಸಂಬಂಧಪಟ್ಟ ಗ್ರಾಮೀಣಾಭಿವೃದ್ಧಿ ಸಚಿವರ ಜೊತೆಯಲ್ಲಿ ನೀವು ಸ್ಪಷ್ಟವಾಗಿ ಕೇಳಬೇಕು. ಇವುಗಳಿಗಾಗಿ ನೀವು ಫಾರೆಸ್ಟ್ ಆಫೀಸರ್ಸ್‌ನ್ನು ಹಾಕುವುದಾದರೆ, ಎಇಇ ಅವರನ್ನು ಹಾಕುವುದಾದರೆ, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರನ್ನು ಹಾಕುವುದಾದರೆ, ನೀವು ಏಕೆ ಕಮೀಷನರ್ ಎಂದು ಪ್ರಮೋಷನ್ ಕೊಡಬೇಕು? ನೀವು ಈ ಕೆಲಸವನ್ನು ಮಾಡದೇ ಹೋದರೆ ಬಹುಶಃ ನಿಮ್ಮ ಇಲಾಖೆಯಲ್ಲಿ ಬರುವ ವರಮಾನದಲ್ಲಿ ಸುಮಾರು 10ರಷ್ಟು ಹಣ ಖರ್ಚಾಗುತ್ತಿದೆ. ಇದರ ಜೊತೆಗೆ ಸ್ವಾಮಿ ಈ ಇಲಾಖೆಯಲ್ಲಿ ಯಾವ ರೀತಿಯಲ್ಲಿ ಕಾರ್ಯಕ್ರಮಗಳು ನಡೆಯುತ್ತಿದೆ ಎಂದು ಮಾತನಾಡಬೇಕಾಗಿದೆ. ತಾವು ಒಂದು ಕಡೆ ಹೇಳುತ್ತೀರಿ ನಾವು ಭೂ ಸುಧಾರಣೆ ಕಾಯಿದೆ ತಂದು ಸೀಲಿಂಗ್ ಮಾಡಿದೆವು, ಕರ್ನಾಟಕದಲ್ಲಿ ಇದಕ್ಕೆ ಭಾರಿ ಹೆಸರುಗಳಿಸಿದೆ ಎಂದು ಹೇಳುತ್ತೀರಿ, ಮತ್ತೊಂದು ಕಡೆ ಈ ಕಾಯಿದೆಗೆ ತಿದ್ದುಪಡಿ ಮಾಡಿಬಿಟ್ಟಿದ್ದೇವೆಂದು ಹೇಳುತ್ತೀರಿ. ಹಳ್ಳಿಯಲ್ಲಿ ಏನಾಗಿದೆ ಎಂದರೆ ತಮ್ಮ ಇಲಾಖೆಗಳಲ್ಲಿನ ಸರ್ಕಾರಿ ನೌಕರರು ಬಹಳ ಚೆನ್ನಾಗಿ ಲೂಟಿ ಮಾಡಿದ್ದಾರೆ. ಅವರು ಇವತ್ತು ಹಳ್ಳಿಗಳಲ್ಲಿ ಜಮೀನು ಕೊಳ್ಳುತ್ತಾರೆ. ಪಹಣಿ ಇಲ್ಲದವರನ್ನು ರಿಜಿಸ್ಟರ್ ಮಾಡಿಸಿ, ಜಮೀನು ಕೊಳ್ಳಬಾರದು ಎಂದು ಏನು ನೀವು ನಿರ್ಬಂಧ ಮಾಡಿದ್ದೀರೋ ಅದನ್ನು ರಿಲ್ಯಾಕ್ಸ್ ಮಾಡಿದ್ದೀರಿ, ಯಾರ್‍ಯಾರು ಎಲ್ಲೆಲ್ಲಿ ಬಚ್ಚಿಡುವುದಕ್ಕಾಗುವುದಿಲ್ಲವೋ, ಟ್ಯಾಕ್ಸ್ ಕಟ್ಟುವುದಕ್ಕಾಗುವುದಿಲ್ಲವೋ, ಅವರೆಲ್ಲರೂ ಅಗ್ರಿಕಲ್ಚರ್ ಇನ್‌ಕಂ ತೋರಿಸುತ್ತಾರೆ. ಇವತ್ತು ರೈತರಿಗೆ ಅವಮಾನ ಮಾಡುವಂತಹ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ನಮಗೆ ಜಮೀನಿನಲ್ಲಿ ವರಮಾನ ಇದೆ, ಜೊತೆಗೆ ಆಕ್ಯುಪೇಷನಲ್ಲಿ ಸಬ್ಸಿಡಿರಿ ಇನ್‌ಕಂ ಇದೆ ಎಂದು ಡಿಕ್ಲೇರೇಷನ್ ಕೊಡುವಂತಹ ಸ್ಥಿತಿಯನ್ನು ತಂದಿದ್ದೀರಿ. ಮಾನ್ಯ ರಮೇಶ್‌ರವರೆ, ಇವತ್ತು ಅಗ್ರಿಕಲ್ಚರ್ ಯೂನಿವರ್ಸಿಟಿಗೆ ಅರ್ಜಿ ಹಾಕಿರುವವರನ್ನು ತೆಗಿಸಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಎಲ್ಲಾ ಅಧಿಕಾರಿಗಳು ಕೂಡ ಅಗ್ರಿಕಲ್ಚರ್ ಕೋಟಾವನ್ನು ಕ್ಲೇಮ್ ಮಾಡುತ್ತಾರೆ. ರೈತರ ಮಕ್ಕಳಿಗೆ ಅಗ್ರಕಲ್ಚರ್ ಯೂನಿವರ್ಸಿಟಿಯಲ್ಲಿ 2 ಅಥವಾ 3 ಸೀಟು ಇರುವಂತಹ ಸ್ಥಿತಿ ನಿರ್ಮಾಣವಾಗಿತ್ತು. ಇದಕ್ಕೆ ಇವರು ನನ್ನ ಸಂಬಳಕ್ಕಿಂತ ಕೃಷಿ ಆದಾಯ ಜಾಸ್ತಿ ಎಂದು ಹೇಳುತ್ತಾರೆ. ಈ ರಾಜ್ಯಕ್ಕೆ ಈ ಸ್ಥಿತಿಯನ್ನು ಏಕೆ ತಂದಿದ್ದೀರಿ? ತಾವು ಹೇಳಬೇಕು. ಇವತ್ತು ನಗರದವರು ಹಳ್ಳಿಗಳಿಗೆ ಹೋಗಿ ರೆವಿನ್ಯೂ ಜಮೀನುಗಳನ್ನು ವಾಸ್ತವಕ್ಕಿಂತ ಹೆಚ್ಚು ಅಂದರೆ 2-3-4ರಷ್ಟುಕ್ಕೆ ರಿಜಿಸ್ಟರ್ ಮಾಡಿಸುತ್ತಿದ್ದಾರೆ. ಇದಕ್ಕೆ ಒಂದು ಕಡಿವಾಣ ಹಾಕಬೇಕಾಗಿದೆ. ಅವರು ನನಗೆ ಇಷ್ಟು ಜಮೀನು ಇದೆ ಆ ವರಮಾನವನ್ನು ನಾನು ಭರಿಸುತ್ತೇನೆಂದು ತೋರಿಸುತ್ತಾರೆ. ಇನ್ನು ಕೆಲಸ ಕಾರ್ಯಗಳ ಬಗ್ಗೆ ಬಂದಾಗ ನಿಮ್ಮ ಸಬ್ ರಿಜಿಸ್ಟ್ರಾರ್‌ರವರು ಈ ಜಮೀನಿಗೆ ಇಷ್ಟು ಮೌಲ್ಯವಾಗಿದೆ ಎಂದು ಬರೆದಿಡುತ್ತಾರೆ. ಜಮೀನು ನಾವು ಯಾರಾದರೂ ಕೊಂಡರೆ ಅದಕ್ಕಿಂತ ಹೆಚ್ಚು ಬೆಲೆ ಕೊಟ್ಟು ತೆಗೆದುಕೊಳ್ಳಬೇಕಾಗುತ್ತದೆ. ಜೊತೆಗೆ ರೆವಿನ್ಯೂ ಇಲಾಖೆಗಳ ಕಾರ್ಯಕ್ರಮಗಳ ಬಗ್ಗೆ ನಾನು ಮಾತನಾಡುವುದಕ್ಕೆ ಬಯಸುತ್ತೇನೆ. ಬಗರ್‌ಹುಕುಂ ಯೋಜನೆಯಲ್ಲಿ ನಾವು ಸುಮಾರು 10,86,836 ಅರ್ಜಿಗಳ ಪೈಕಿ 2,68,963 ಅರ್ಜಿಗಳನ್ನು ವಿಲೇವಾರಿ ಮಾಡಿದ್ದೇವೆಂದು ಹೇಳುತ್ತಾರೆ. ಎಷ್ಟು ವರ್ಷಗಳಲ್ಲಿ ಮಾಡಿದ್ದೀರಿ?

1991ನೇ ಇಸವಿ ಕಟ್-ಅಫ್-ಡೇಟ್‌ನಲ್ಲಿ ಇರುವಂತಹ 10 ಲಕ್ಷ ಅರ್ಜಿಗಳಲ್ಲಿ ತಾವು ಇದುವರೆವಿಗೂ ವಿಲೇ ಮಾಡಿರುವುದು ಕೇವಲ 2 ಲಕ್ಷ ಅರ್ಜಿಗಳನ್ನು ಮಾತ್ರ ಮಾಡಿದ್ದೀರಿ. ಅಂದರೆ ಕೇವಲ 20 ಪರ್ಸೆಂಟ್ ಆಫ್ ಫೈವ್ ಇಯರ್ಸ್ . ಇದು 5 ವರ್ಷಗಳಲ್ಲಿ ಐದನೇ ಒಂದು ಭಾಗವನ್ನು ವಿಲೇವಾರಿ ಮಾಡಿದ್ದೀರಿ. ಏಕೆ ಸ್ವಾಮಿ ತಾವು ಮಾಡಲಿಲ್ಲ? ನಾನು ಇಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಅದೇನೆಂದರೆ, ಒಂದು ಕಡೆ ಸಮಿತಿ ಮಾಡಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ, ಮತ್ತೊಂದು ಕಡೆ ಸಣ್ಣ ಕಾರಣಕ್ಕಾಗಿ ರಿಡೆಕ್ಷನ್ ಆಫ್ ಗೋಮಾಳ, ಅಥವಾ ರಿಡೆಕ್ಷನ್ ಆಫ್ ಖರಾಬ್ ಎಂದು ಒಬ್ಬ ಅಸಿಸ್ಟೆಂಟ್ ಕಮೀಷನರ್‌ರವರನ್ನು ಪೋಸ್ಟ್ ಮ್ಯಾನ್ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಅದನ್ನು ಡಿಸಿ ಆಫೀಸ್‌ಗೆ ಹೊತ್ತು ಹಾಕಬೇಕಾಗಿದೆ. ಶಾಸಕರು ಇಲ್ಲಿ ಕುಳಿತು ಇತ್ಯರ್ಥ ಮಾಡಿದಂತಹ ಪ್ರಕರಣದ ಬಗ್ಗೆ ನಾನು ಈಗಾಗಲೇ ಮಾನ್ಯ ರಮೇಶ್‌ರವರಲ್ಲಿ ಪ್ರಶ್ನೆ ಕೂಡ ಕೇಳಿದ್ದೆ. ಅಸಿಸ್ಟೆಂಟ್ ಕಮೀಷನರ್ 2-3 ವರ್ಷ ಅವರ ಆಫೀಸ್‌ನಲ್ಲಿ ಇಟ್ಟುಕೊಳ್ಳುತ್ತಾರೆ. ನಾನು ಹೋದ ಟರ್ಮ್‌ನಲ್ಲಿ ಬಗರ್‌ಹುಕುಂನಲ್ಲಿ ಮಂಜೂರು ಮಾಡಿಸಿರುವುದಕ್ಕೆ ಇನ್ನೂ ಕೂಡ ಅವರಿಗೆ ಮಂಜೂರಾತಿ ಚೀಟಿ ಕೊಟ್ಟಿಲ್ಲ. ಇದು ಏಕೆ? ನಾನು ಜಾಗ ನೋಡಬೇಕು, ನಾನು ತೀರ್ಮಾನ ತೆಗೆದುಕೊಳ್ಳಬೇಕು, ನಂತರ ನಾನು ಡಿಸಿಯವರಿಗೆ ಒಂದು ರಿಪೋರ್ಟ್ ಮಾಡಬೇಕು, ಎಲ್ಲಿಯವರೆಗೆ ನೀವು ಈ ವ್ಯವಸ್ಥೆಯನ್ನು ತೆಗೆದುಕೊಂಡು ಹೋಗುತ್ತೀರಿ? ಎಲ್ಲಾ ಹಂತದವರೆಗೆ ನೀವು ಚೆಕ್ ಡ್ಯಾಮ್, ಚೆಕ್ ಪೋಸ್ಟ್‌ಗಳನ್ನು ಮಾಡುತ್ತಾ ಹೋದರೆ ಕೆಲಸ ಮಾಡುವುದು ಯಾವಾಗ? ಒಂದು ದಿನ ನಾನು ಈ ಸಭೆಯಲ್ಲಿ ಹೇಳಿದ್ದೆ by constituting more bodies you are coming in the way of justice ಹೆಚ್ಚು ಹೆಚ್ಚು ಅಡಚಣೆಗಳನ್ನು ತಾವು ನಿರ್ಮಾಣ ಮಾಡುವುದರಿಂದ ನ್ಯಾಯ ದೊರಕುವುದು ಕೂಡ ತಡವಾಗುತ್ತದೆ. ಇತ್ಯರ್ಥವಾಗುವುದೂ ಕೂಡ ತಡವಾಗುತ್ತದೆ. ತಾವು ಇದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದೀರಾ? ನೀವು ಅಲ್ಲಿರುವ ತಹಸೀಲ್ದಾರ್‌ರವರಿಗೆ ಅಧಿಕಾರ ಕೊಟ್ಟರೆ ಅವರು ಗೋಮಾಳ ಅಥವಾ ಖರಾಬ್ ಲ್ಯಾಂಡ್ ಏನಿದೆ ಅದನ್ನು ರಿಡೆಕ್ಷನ್ ಮಾಡಿ ಡಿಸಿಯವರಿಗೆ ಕಾಗದ ಬರೆದು ಈ ಕಡೆ ಮಂಜೂರು ಚೀಟಿ ಇಶ್ಯೂ ಮಾಡಲಿ. ಇದನ್ನು ನೀವು ಏಕೆ ಮಾಡುವುದಕ್ಕಾಗುವುದಿಲ್ಲ? ನೀವು ಏಕೆ ಅಸಿಸ್ಟೆಂಟ್ ಕಮೀಷನರವರ ಮೇಲೆ ಇಷ್ಟೊಂದು ಡಿಫೆಂಡ್ ಆಗಿದ್ದೀರಿ? ಇದು ಯಾವುದೂ ನನಗೆ ಅರ್ಥವಾಗುತ್ತಿಲ್ಲ. ಇದನ್ನು ನೀವು ಇತ್ಯರ್ಥ ಮಾಡಲೇಬೇಕು. ವೈಯಕ್ತಿಕವಾಗಿ ಹೇಳುವುದಾದರೆ ಚಿಕ್ಕನಾಯಕನಹಳ್ಳಿಯ ತಾಲ್ಲೂಕಿನಲ್ಲಿ ಸುಮಾರು ಎರಡು-ಎರಡೂವರೆ ವರ್ಷಗಳಿಂದ ಅಥವಾ ಎರಡು ದಿವಸ ಮಾತ್ರ ಈ ಬಗರ್‌ಹುಕುಂ ಸಮಿತಿ ನಡೆದಿದೆ. ಆ ನಂತರ ಆ ಸಮಿತಿಯನ್ನು ನಡೆಸುವುದಕ್ಕೆ ತಮಗೆ ಆಸಕ್ತಿ ಇಲ್ಲ. ಏನಾದರೂ ಪರ್‌ಸ್ಯೂ ಮಾಡುತ್ತೇವೆಂದರೆ ನಮ್ಮ ಹೆಸರು ಹೇಳುವುದಕ್ಕೆ ಶಕ್ತಿ ಇಲ್ಲ. ಈ ಮಟ್ಟಕ್ಕೆ ಏಕೆ ನೀವು ತಂದಿದ್ದೀರಿ? ಚಿಕ್ಕನಾಯಕನಹಳ್ಳಿ ಮತ ಕ್ಷೇತ್ರದಲ್ಲಿ ಸುಮಾರು 12,12,800 ಅರ್ಜಿಗಳಲ್ಲಿ ಕೇವಲ ನಾಲ್ಕೂವರೆ ಸಾವಿರ ಅರ್ಜಿಗಳನ್ನು ಮಾತ್ರ ವಿಲೇವಾರಿ ಮಾಡುವುದಕ್ಕಾಗಿದೆ. ಇನ್ನೂ ಮೂಕ್ಕಾಲು ಭಾಗ ಅರ್ಜಿಗಳು ಹಾಗೆ ಉಳಿದಿವೆ. ತಮಗೆ ಇಷ್ಟವಿಲ್ಲದಿದ್ದರೆ ಮಾಡಬೇಡಿ, ಇದಕ್ಕೆ ಬೇರೆ ಯಾವುದಾದರೂ ಒಂದು ಸಮಿತಿ ಮಾಡಿ ಅರ್ಜಿಗಳನ್ನು ವಿಲೇವಾರಿ ಮಾಡಿಸಿ. ಇದರ ಜೊತೆಗೆ ನಾವು ಮತ್ತು ಮಾನ್ಯ ಜಯಚಂದ್ರರವರು ಸೇಂದಿ ವನದ ಬಗ್ಗೆ

ಪ್ರಸ್ತಾಪಿಸಿದ್ದೆವು. ಇವತ್ತು ಬಗರ್‌ಹುಕುಂ ಜಮೀನು ಏನು ಕೊಡುತ್ತೀರಿ ಅದಕ್ಕಿಂತ ಉತ್ತಮವಾದ ಜಮೀನು ಸೇಂದಿ ವನ. ನಮ್ಮ ಭಾಗದಲ್ಲಿ 35-40 ವರ್ಷಗಳಿಂದ ಈಗಾಗಲೇ ಅಲ್ಲಿ ತೋಟ ಮಾಡಿ ಕೊಂಡಿದ್ದಾರೆ. ಹಿಡುವಳಿಗೆ ಬಂದಿದೆ, ಉಳುಮೆಯಾಗಿದೆ, ಇದಕ್ಕೆ ಏನಾದರೂ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಸೇಂದಿ ವನವನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ನೀವು ಹೇಳಬಹುದು, ಆದರೆ ಸರ್ಕಾರಕ್ಕೆ ಏಕೆ ಕೊಡುವುದಕ್ಕೆ ಬರುವುದಿಲ್ಲ? ಬ್ಯಾನ್ ಮಾಡಿದ್ದೀರಿ, ಇವತ್ತು ಕರ್ನಾಟಕದಲ್ಲಿ ಸೇಂದಿ ಇಲ್ಲ, ಕುಡಿಯುವವರು ಇಲ್ಲ, ತಯಾರು ಮಾಡುವವರು ಈಚಲ ಗಿಡಗಳು ಇಲ್ಲ, ಇಲ್ಲಿ ದುಡಿಯುತ್ತಿರುವ ರೈತನಿಗೆ ಏನಾದರೂ ಮಾಡಿ ದಂಡ ಹಾಕುತ್ತೀರೋ, ಬಗರ್‌ಹುಕುಂ ಕೊಡಿಸುತ್ತೀರೋ, ಇಲ್ಲವಾದರೆ ಮೌಲ್ಯಾಧಾರದ ಮೇಲೆ ಕೊಡುತ್ತೀರೋ ಏನಾದರೂ ಮಾಡಿ ಆ ಸೇಂದಿ ವನವನ್ನು ಆದಷ್ಟು ವಿಲೇ ಮಾಡಲಿಕ್ಕೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಬೆಂಗಳೂರಿನ ಸಿಟಿಯಲ್ಲಿ ಯಾರಾದರೂ ಮನೆಗಳನ್ನು ಕಟ್ಟಿದರೆ ತಕ್ಷಣ ಅದನ್ನು ಸಕ್ರಮ ಮಾಡುತ್ತೀರಿ, ಆದರೆ ಅಲ್ಲಿ ಒಟ್ಟು ರೈತ ಮಾಡುತ್ತಿರುವ ಜಮೀನಿಗೆ ಹಾಗೂ ಅವನು ಬೆಳೆಯುತ್ತಿರುವ ಬೆಳೆಗೆ ಇನ್ನು ಏಕೆ ಸಕ್ರಮ ಮಾಡಿಲ್ಲ? ನೀವು ಸಕ್ರಮ ಮಾಡಿ, ಬೇಕಾದರೆ ದಂಡ ಹಾಕಿ, ಕಂದಾಯದ ಮೇಲಾಗಲಿ, ಮೌಲ್ಯದ ಮೇಲಾಗಲಿ ದಂಡ ಹಾಕಿದರೆ ಅಲ್ಲಿ ಕುಳಿತು ಆ ದಂಡವನ್ನು ರೈತರಿಂದ ನಾವು ತಮಗೆ ಕೊಡಿಸಿಕೊಡುತ್ತೇವೆ. ಮತ್ತೊಂದು ವಿಷಯ ಎಂದರೆ, ಎರಡು ತಿಂಗಳ ಹಿಂದೆ ಚಿಕ್ಕನಾಯಕನಹಳ್ಳಿಯಲ್ಲಿ ಗಾಳಿ ಬೀಸಿ ಸುಮಾರು 3-4 ಹಳ್ಳಿಗಳಲ್ಲಿ 2,000 ದಿಂದ 2,500 ತೆಂಗಿನ ಮರಗಳು ಉರುಳಿದವು. ಇದಕ್ಕೆ ತಾವು ಕೊಡುವ ಪರಿಹಾರವೆಂದರೆ ಒಂದು ತೆಂಗಿನ ಮರಕ್ಕೆ 100 ರೂಪಾಯಿಗಳು. ನೀವು ಬೆಳೆಗಳಿಗೆ ಏನು ಪರಿಹಾರ ಕೊಡುತ್ತೀರಿ, ಅದರಲ್ಲೂ ತೋಟಗಾರಿಕೆ ಬೆಳೆಗೆ ಕೊಡುವ ಪರಿಹಾರವನ್ನು ಮಾನ್ಯ ಕಂದಾಯ ಸಚಿವರು ನೋಡಬೇಕು ಆಗ ತಮಗೆ ಗೊತ್ತಾಗುತ್ತದೆ. ಯಾರಾದರೂ ಗೌರವದಿಂದ ಇರುವವರು ಆ ಪರಿಹಾರವನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಸುಮಾರು 100 ರಿಂದ 200 ತೆಂಗಿನ ಕಾಯಿ ಬಿಡುವಂತಹ ಒಂದು ತೆಂಗಿನ ಮರ ಇವತ್ತು 5,000 ದಿಂದ 10,000 ರೂಪಾಯಿ ಬೆಲೆ ಬಾಳುವ ತೆಂಗಿನ ಮರಕ್ಕೆ ನಮ್ಮ ಕಂದಾಯ ಇಲಾಖೆಯಿಂದ 100 ರೂಪಾಯಿ ಒಂದು ಮರಕ್ಕೆ ಕೊಡುತ್ತೇವೆಂದು, ಜೊತೆಗೆ ನಮ್ಮನ್ನೂ ಕೂಡ ಆ ಚೆಕ್ಕು ಹಂಚುವುದಕ್ಕೆ ಕರೆದುಕೊಂಡು ಹೋಗುತ್ತಾರೆ. ನಿಮ್ಮ ಚೆಕ್ಕು ನಮಗೆ ಬೇಡ ಎಂದು ಸುಮಾರು ಜನ ವಾಪಸ್ ಹೋದರು. ಸ್ವಲ್ಪ ಅದರ ವ್ಯಾಲ್ಯೂವೇಷನ್ ಮೇಲೆ ಅಂದರೆ ತೋಟಗಾರಿಕೆ ಇಲಾಖೆಯವರು 3 ಹಂತದಲ್ಲಿ ಈ ತೆಂಗಿನ ಮರಕ್ಕೆ ಬೆಲೆಯನ್ನು ನಿಗದಿ ಮಾಡುತ್ತಾರೆ. ಅದು ಯಾವ ರೀತಿ ಎಂದರೆ, ಒಂದು ತೆಂಗಿನ ಮರ ಇಷ್ಟು ವರ್ಷ ಬಾಳುತ್ತದೆ, ಅಂದರೆ ಸಸಿ ಇದ್ದಾಗ, ಮಧ್ಯಮಾವಸ್ಥೆಯಲ್ಲಿದ್ದಾಗ, ಹಾಗೂ ಮರ ದೊಡ್ಡದಾದಾಗ ಎಷ್ಟು ಎಂದು 3 ಹಂತದಲ್ಲಿ ಬೆಲೆಗಳನ್ನು ನಿಗದಿ ಮಾಡುತ್ತಾರೆ. ಇದರಲ್ಲಿ ಕೊನೆಯ ಪಕ್ಷ ಅರ್ಧ ಅಥವಾ 40 ಪರ್ಸೆಂಟ್ ನೀವು ಪರಿಹಾರ ಕೊಡದೇ ಹೋದರೆ ಏನು ಪ್ರಯೋಜನವಾಗುತ್ತದೆ? ಹಾಗೂ ಇದರ ಜೊತೆಗೆ ವಿಕೋಪಕ್ಕೆ ಸಿಕ್ಕಿದ ಮತ್ತು ಆಗಾಗ್ಗೆ ಹಾಳಾಗುತ್ತಿರುವ ಮರಗಳಿಗೂ ತಾವು ಪರಿಹಾರವನ್ನು ಹೆಚ್ಚು ಮಾಡುವಂತೆ ಭಾರತ ಸರ್ಕಾರದವರನ್ನು ಕೇಳಬೇಕು, ಮತ್ತು ಇದರ ಜೊತೆಗೆ ಕರ್ನಾಟಕ ರಾಜ್ಯದ ಒಂದು ಕಾಂಟ್ರಿಬ್ಯೂಷನ್ ಸೇರಿಸಿ ಕೊಡಬೇಕು. ಇನ್ನು ತುಮಕೂರು, ಚಿತ್ರದುರ್ಗ, ಹಾಗೂ

ಕೋಲಾರ ಜಿಲ್ಲೆಗಳ ಬಗ್ಗೆ ಹೇಳಬೇಕಾದರೆ, ನಮಗೇನಾಗಿದೆಯೋ ಗೊತ್ತಿಲ್ಲ, ಸುತ್ತ ಮಳೆ ಬೀಳುತ್ತದೆ ಆದರೆ ನಾವು ಮೋಡ ಮಾತ್ರ ನೋಡುತ್ತೇವೆ, ಅಥವಾ ಟಿ.ವಿ.ಯಲ್ಲಿ ಮಳೆ ಬಿದ್ದಿದೆ ಎಂದು ಸುದ್ದಿ ಮಾತ್ರ ಕೇಳುತ್ತೇವೆ. ನಮ್ಮ ಸ್ಥಿತಿ ಇಲ್ಲಿ ಬಹಳ ಗಂಭೀರವಾಗಿದೆ, ಇಲ್ಲಿ ಚರ್ಚೆ ಮಾಡೋಣ ಎಂದರೆ ತಾವು ಕೂಡ ನಮ್ಮ ಬಗ್ಗೆ ಮಳೆರಾಯ ತೋರಿಸಿದಷ್ಟೇ ಉದಾಸೀನವನ್ನು ತೋರಿಸುತ್ತೀರಿ.

ಅಧ್ಯಕ್ಷರು : ಈಗ ಮಾತನಾಡಿ, ಡಿಮ್ಯಾಂಡ್ಸ್ ಇದೆ ಅಲ್ಲವೆ ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್, ನಮಗೆ ಏನಾಗಿದೆ ಎಂದರೆ ಎಲ್ಲಾ ಬೋರ್‌ವೆಲ್‌ಗಳು ಡ್ರೈ ಆಗುತ್ತಿವೆ. ಈ ವಿಷಯ ಮಾನ್ಯ ಕಂದಾಯ ಸಚಿವರಿಗೆ ಗೊತ್ತಿರುವುದರಿಂದ ನಾನೇನು ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಕುಡಿಯುವ ನೀರಿಗಾಗಿ ನಾವು ಸುಮಾರು 150 ರಿಂದ 400 ಅಡಿಗಳನ್ನು ಬೋರ್‌ವೆಲ್ ಕೊರೆದಿದ್ದರೂ ಮಳೆ ಬೀಳದ ಪ್ರದೇಶಗಳಾದ ತುಮಾಕೂರು, ಚಿತ್ರದುರ್ಗ, ಕೋಲಾರ, ಜಿಲ್ಲೆಗಳಲ್ಲಿ ಇದರಿಂದಾಗಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಈ ಬಗ್ಗೆ ತಮ್ಮ ಇಲಾಖೆಯವರಿಗೆ ನಾವು ಅನೇಕ ಬಾರಿ ಕೇಳಿಕೊಂಡಿದ್ದೇವೆ. ಇದಕ್ಕೆ ತಕ್ಷಣ ಏನಾದರೂ ಕ್ರಮ ತೆಗೆದುಕೊಳ್ಳಬೇಕು, ಹಾಗೂ ಕುಡಿಯುವ ನೀರು ಮತ್ತು ಮೇವಿಗಾಗಿ ಏನಾದರೂ ವ್ಯವಸ್ಥೆ ಮಾಡಿ ಎಂದು ಹಲವಾರು ಬಾರಿ ನಾವು ಕೇಳಿಕೊಂಡಿದ್ದೇವೆ. ಏಕೆಂದರೆ ನಾಳೆ ಮೇವು ಸುಮ್ಮಸುಮ್ಮನೆ ದುಬಾರಿಯಾಗುತ್ತವೆ. ಹಾಗೂ ಸಾಗಾಣಿಕೆಯ ವೆಚ್ಚ ಕೂಡ ಜಾಸ್ತಿಯಾಗಿರುವುದರಿಂದ ತಾವು ಈಗ ಒಂದು ಕ್ರಮ ಕೈಗೊಂಡರೆ ಅಂದರೆ ಹತ್ತಿರದಲ್ಲಿ ಮೇವನ್ನು ಸಂಗ್ರಹ ಮಾಡಿಕೊಳ್ಳಬಹುದು. ಇದಕ್ಕಾಗಿ ಮಾನ್ಯ ಕಂದಾಯ ಸಚಿವರು ಹೆಚ್ಚಿನ ಒತ್ತನ್ನು ಕೊಡಬೇಕಾಗುತ್ತದೆ. ಇವತ್ತು 2-3-4 ಜಿಲ್ಲೆಗಳು ಮಳೆ ಇಲ್ಲದೆ ಸಂಕಷ್ಟಕ್ಕೆ ಈಡಾಗಿರುವಾಗ, ಇಡೀ ರಾಜ್ಯದಲ್ಲಿರುವ ಸಂಪತ್ತು ಹಾಗೂ ಆಗಿರುವ ಮಳೆಯ ಪ್ರಮಾಣವನ್ನು ಲೆಕ್ಕಹಾಕಿದರೆ, ನಮಗೆ ಸ್ವಲ್ಪ ಪರಿಹಾರ ಮಾಡಿದರೆ ಇದರಿಂದ ತಮಗೆ ಭಾರವಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಸ್ವಲ್ಪ ಆ ಬಗ್ಗೆ ತಾವು ಗಮನಹರಿಸಿ ಇಲಾಖಾಧಿಕಾರಿಗಳನ್ನು ಹಾಗೂ ಶಾಸಕರನ್ನೂ ಕರೆದು ಕುಳಿತು ಏನಾದರೂ ತ್ವರಿತವಾದ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು, ಜೊತೆಗೆ ನಮಗೆ ತಕ್ಷಣ ಒಂದೊಂದು ಮತ ಕ್ಷೇತ್ರಕ್ಕೆ ಕನಿಷ್ಠ ಪಕ್ಷ 50 ರಿಂದ 70 ಬೋರ್‌ವೆಲ್‌ಗಳನ್ನು ಕೊರೆಯುವಂತಹ ವ್ಯವಸ್ಥೆ ಮಾಡಬೇಕಾಗುತ್ತದೆ.

ನಾವು ಏನಾದರೂ ಇವತ್ತು ಹೆಡ್ ಕ್ವಾರ್ಟರ್‌ಗೆ ಹೋದರೆ, ಜನರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಮಗೆ ಕುಡಿಯುವ ನೀರು ಬಂದ್ ಆಗುತ್ತಿದೆ, ನಮಗೆ ತಕ್ಷಣ ಕುಡಿಯುವ ನೀರನ್ನಾದರೂ ಕೊಡಿ ಎಂದು ಕೇಳುತ್ತಾರೆ. ತಕ್ಷಣ ನಾವು ಅಷ್ಟೂ ಕೊಡುವುದಕ್ಕಾಗದಿದ್ದ ಮೇಲೆ ಬಹುಶಃ ನಾವು ಇದು ಸರ್ಕಾರಿ ವ್ಯವಸ್ಥೆ ಎಂದು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ತಾವು ನಗುತ್ತಿದ್ದೀರಿ, ನಮ್ಮ ಕಷ್ಟವನ್ನು ತಾವು ಬಂದು ನೋಡಬೇಕು. ನೀರೇ ಇಲ್ಲವೆನ್ನುವ ಸ್ಥಿತಿ ನಿರ್ಮಾಣ ಆಗಿಬಿಟ್ಟಿದೆ. ಇನ್ನು ಈ ಭೂ ದಾಖಲೆಗಳ ಇಲಾಖೆ ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗಿದೆ. ಈ ಭೂದಾಖಲೆಗಳು ಎಂದು ಹೇಳಿದರೆ, ಸರ್ವೆ ಸೆಟಲ್‌ಮೆಂಟ್ ಅಂಡ್ ಲ್ಯಾಂಡ್ ರಿಕಾರ್ಡ್ಸ್ ಮೇಲೆ ಮಾತನಾಡಬೇಕೆಂದರೆ, ಈಗೇನೋ ತಾವು ಹೊಸದಾಗಿ ಎಲ್ಲಾ ತಾಲ್ಲೂಕುಗಳಿಗೂ ಸರ್ವೆ ಡಿಪಾರ್ಟ್‌ಮೆಂಟನ್ನು ಕೊಟ್ಟಿದ್ದೀರಿ.

ಆದರೆ, ಇವತ್ತು ಅಲ್ಲಿ ಸಮರ್ಪಕವಾಗಿ ಕೆಲಸ ಮಾಡುವಷ್ಟು ಜನರನ್ನು ಅಲ್ಲಿಗೆ ಕೊಟ್ಟಿಲ್ಲ. ಈ ರಾಜ್ಯಕ್ಕೆ 90 ವರ್ಷ 100 ವರ್ಷಗಳಿಂದ ರೀ ಸರ್ವೆ ಸೆಟಲ್‌ಮೆಂಟ್ ಆಗಿಲ್ಲ. ರಾಜ್ಯದಲ್ಲಿ ಏನಾದರೂ ಕೋರ್ಟ್‌ನಲ್ಲಿ ಸಿವಿಲ್ ಲಿಟಿಗೇಷನ್ ಕೇಸುಗಳು ಜಾಸ್ತಿ ಇವೆಯೆಂದರೆ, ದಾರಿ ವ್ಯಾಜ್ಯಗಳಿಂದ ಇವೆ, ಬೌಂಡರಿ ವಿಷಯದಲ್ಲಿ ಇವೆ, ಇಲ್ಲವೇ ಪಹಣಿ ಕಲ್ಲು ವ್ಯಾಜ್ಯದಲ್ಲಿ ಇವೆ. ಇವುಗಳನ್ನು ನಾವೇ ಹುಟ್ಟು ಹಾಕುತ್ತಿರುವುದು. 30-40 ವರ್ಷಗಳ ಹಿಂದೆ ಮಂಜೂರ್ಮಾಡಿರುವ ಜಮೀನನ್ನು ಇವತ್ತಿನವರೆಗೂ ನೀವು ಹದ್ದುಬಸ್ತ್ ನಿಗದಿ ಮಾಡಲಿಲ್ಲ. ಇವತ್ತಿನವರೆಗೂ ಅವರವರ ಗಡಿಯನ್ನು ನಿಗದಿ ಮಾಡಿಕೊಟ್ಟಿಲ್ಲ. ಯಾವುದೋ ನಂಬರಿನಲ್ಲಿ ಕುಳಿತು ಜಮೀನು ಮಂಜೂರ್ಮಾಡಿದ್ದೀರಿ, ಎಲ್ಲೋ ಕೂತು ಯಾರೋ ಉಳುಮೆ ಮಾಡುತ್ತಾ ಇದ್ದಾರೆ. ಇನ್ನಾರೋ ಹೋಗಿ ವ್ಯಾಜ್ಯ ಆಡುತ್ತಿದ್ದಾರೆ. ಈ ಸೈಟು ನಮಗೆ ಬರುತ್ತೆ, ಆ ಸೈಟು ಇವರಿಗೆ ಬರುತ್ತೆ ಎಂದು. ಈ ಸರ್ವೆಯರುಗಳನ್ನು ಇನ್ನೂ ಸ್ವಲ್ಪ ಜಾಸ್ತಿ ಮಾಡಿ, ಈ ಬಗರ್‌ಹುಕುಂ ಕಡತಗಳನ್ನು ತಯಾರು ಮಾಡಬೇಕು. ಎರಡನೆಯದು ಇವತ್ತೇನು ಅರ್ಜಿಗಳಿವೆ, ಸರ್ವೆ ಮಾಡಿಕೊಡಬೇಕು ಅಥವಾ ಫಿಕ್ಸ್ ಮಾಡಬೇಕು ಅಥವಾ ಬಂದು ಅಳತೆ ಮಾಡಬೇಕು ಎಂದು, ಇದನ್ನು ಮಾಡುವುದು ಎರಡನೆಯದು. ಮೂರನೆಯದು, ಕಡ್ಡಾಯವಾಗಿ ಇವತ್ತೇನು ಖರಾಬು ಇದೆ, ಅದರಲ್ಲೂ ದಾರಿ ಖರಾಬು ಅದನ್ನು ಖುಲ್ಲಾ ಮಾಡಿಸಿಕೊಡಬೇಕು ಮತ್ತು ಕೆರೆ ಅಂಗಳದ ಒತ್ತುವರಿ ಏನಾಗಿದೆ, ಅದನ್ನು ಅಳತೆ ಮಾಡಲಿ. ನಾವು ಯಾವುದೇ ಇಂಜಿನಿಯರ್‌ಗೆ ಕೆರೆ ಅಂಗಳದ ಒತ್ತುವರಿಯಾಗುತ್ತಿದೆ ನೋಡಿ ಎಂದರೆ, ಅವರು ತಾಲ್ಲೂಕು ಆಫೀಸಿಗೆ ಬರೆಯುತ್ತಾರೆ. ಅವರು ಹೇಳುತ್ತಾರೆ, ನಮ್ಮಲ್ಲಿ ಸರ್ವೆಯರುಗಳಿಲ್ಲ, ನಾವು ಸರ್ವೆ ಮಾಡುವುದಕ್ಕಾಗುವುದಿಲ್ಲ ಎಂದು. ಈ ಕಡೆ ತಾವು ಸ್ವಲ್ಪ ಆಲೋಚನೆ ಮಾಡಬೇಕು. ಇವತ್ತು ತಕ್ಷಣವಾಗಿ ಸರ್ವೆಯರುಗಳ ಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡು, ಆದಷ್ಟು ಜಾಗ್ರತೆ ಈ ವ್ಯಾಜ್ಯಗಳೇನಿವೆ, ಇವುಗಳನ್ನು ಕಡಿಮೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಸಿವಿಲ್ ಕೇಸ್‌ಏನು ನಡೆಯುತ್ತಿವೆ, ಇವೆಲ್ಲಾ ನಮ್ಮ ಕಂದಾಯ ಸಚಿವರ ಮರ್ಜಿಯಲ್ಲಿ ನಡೆಯುವಂಥ ಸ್ಥಿತಿ ನಿರ್ಮಾಣವಾಗಬೇಕು. ಯಾರೋ ಇಬ್ಬರು ನಮ್ಮೂರಲ್ಲಿ ಭಾಗ ಆಗುತ್ತಾರೆ. ಒಂದು ಜಮೀನಿನಿಂದ ಇನ್ನೊಂದು ಜಮೀನಿಗೆ ಹೋಗುವುದಕ್ಕೆ ಅವನಿಗೆ ಪಾರಿಕತ್‌ನಲ್ಲಿ ಬರೆಸುವುದಕ್ಕೆ ಶಕ್ತಿ ಬರುವುದಿಲ್ಲ. ಅಷ್ಟೇ ಕಾರಣಕ್ಕೆ ಅವನಿಗೆ ನಾಳೆ ದಾರಿ ಇಲ್ಲವೆಂದು ಹೇಳುತ್ತಾರೆ. ಭಾಗವಾದ ಮೇಲೆ ಅಣ್ಣತಮ್ಮಂದಿರು ವ್ಯಾಜ್ಯ ಆಡುತ್ತಾರೆ. ಇವೆಲ್ಲಾ ಕಂದಾಯ ಸಚಿವರು ಯೋಚನೆ ಮಾಡಬೇಕು. ಒಂದು ನಂಬರಿನಲ್ಲಿ ಭಾಗವಾದವರಿಗೆ, ಇನ್ನೊಬ್ಬರಿಗೆ ದಾರಿ ಕೊಡುವುದು ಕಡ್ಡಾಯ ಎಂದು ತಾವು ಒಂದು ಶಾಸನ ಮಾಡಬೇಕು. ನಾವೇನು ಹಾರಿ ಹೋಗುವುದಕ್ಕಾಗುತ್ತದೆಯೇ? ಅಥವಾ ಎಲ್ಲಾ ಸೇರಿ ಅರ್ಜಿ ತೆಗೆದುಕೊಂಡು ಹೇಗಿ ಅಸಿಸ್ಟೆಂಟ್ ಕಮೀಷನರ್ ಮುಂದೆ ನಿಂತುಕೊಳ್ಳುವುದಕ್ಕಾಗುತ್ತದೆಯೇ? ಭಾಗ ಆಗಬೇಕಾದರೆ ಎಲ್ಲರೂ ಬರೆಸಬೇಕಾಗುತ್ತದೆಯೇ, ಇದರ ಜೊತೆಗೆ ಈ ಲ್ಯಾಂಡ್ ರೆಕಾರ್ಡ್ಸ್‌ನಲ್ಲಿ 5-6-7 ವರ್ಷಗಳಿಂದ ಅರ್ಜಿಗಳು ಅಳತೆ ಆಗದೇ ಹಾಗೆಯೇ ಉಳಿದಿವೆ. ನಿಮ್ಮ ಸರ್ವೆಯರುಗಳನ್ನು ನಂಬುವ ಕಾಲ ಹೋಗಿಬಿಟ್ಟಿದೆ. ಈಗ ತಾವೇನಾದರೂ ಒಂದು ಆದೇಶ ಕೊಡಬೇಕು. ಸರ್ವೆಯರುಗಳು ಹೋಗುವಾಗ ಕಡ್ಡಾಯವಾಗಿ ರೆವಿನ್ಯೂ ಇನ್‌ಸ್ಪೆಕ್ಟರುಗಳನ್ನು ಅಥವಾ ವಿಲೇಜ್ ಅಕೌಂಟೆಂಟನ್ನು ಜೊತೆಯಲ್ಲಿ ಕರೆದುಕೊಂಡು ಹೋಗಿ ಸರ್ವೆ ಮಾಡಬೇಕೆಂದು

ಹೇಳಬೇಕು. ಒಬ್ಬರು ಬರುತ್ತಾರೆ ಒಂದು ಫಿಕ್ಸ್ ಮಾಡಿ ಹೋಗುತ್ತಾರೆ. ಇನ್ನೊಬ್ಬ ಬರುತ್ತಾನೆ, ಇನ್ನೊಂದು ಕಡೆ ಫಿಕ್ಸ್ ಮಾಡುತ್ತಾನೆ. ಇಬ್ಬರು ಸರ್ವೆಯರುಗಳೇ, ಹಳ್ಳಿಯಲ್ಲಿ ಜನ ಹೊಡೆದಾಡುತ್ತಾ ಕುಳಿತು ಬಿಡುತ್ತಾರೆ. ಇದನ್ನು ಏನಾದರೂ ಮಾಡಿ ತಾವು ತೀರ್ಮಾನ ಮಾಡಬೇಕು. ಇದರ ಜೊತೆಗೆ ರಿಜಿಸ್ಟ್ರೇಷನ್ ಇಲಾಖೆಯಲ್ಲಿ, ಸನ್ಮಾನ್ಯ ಜಾಲಪ್ಪನವರ ಕಾಲದಲ್ಲಿ ಈ ಇಲಾಖೆಗೆ ಚಾಲನೆ ತಂದುದಕ್ಕಾಗಿ ನಾವು ಈ ಸರ್ಕಾರವನ್ನು ಶ್ಲಾಘಿಸಬೇಕಾಗಿದೆ. ಆದರೆ, ವಾಸ್ತವವಾಗಿ ನಮಗೆ ಅದರಿಂದ ಏನು ಅನುಕೂಲವಾಗಬೇಕಾಗಿತ್ತೋ ಅಷ್ಟು ಅನುಕೂಲವಾಗಲಿಲ್ಲ. ಯಾವುದೋ ಒಂದು ಜಮೀನನ್ನು ನೀವು ಮೌಲ್ಯ ಮಾಡಿ ಅಥವಾ ಒಂದು ಗ್ರಾಮಕ್ಕೆ ಸೇರಿದುದರಲ್ಲಿ ಮೂರು ರೇಟ್ ಎಂದು ನಿಗದಿ ಮಾಡಿ ಹೇಳುತ್ತೇವೆ. ಅದರೊಳಗೆ ರಿಜಿಸ್ಟರ್ಡ್ ಮಾಡಿಕೊಳ್ಳಬೇಕೆಂದು ಇರುತ್ತದೆ. ಆದರೆ, ಕೆಲವರಿಗೆ ಬೇಕೆಂದೆ ಜಾಸ್ತಿ ರೇಟಿಗೆ ರಿಜಿಸ್ಟರ್ಡ್ ಮಾಡಿಕೊಡುವುದು ಅನಿವಾರ್ಯವಾಗಿರುತ್ತದೆ. ನಾನು ಯಾವುದೋ ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳಬೇಕಾಗಿರುತ್ತೆ, ಸಾಲಕ್ಕೆ ನಾನು ಪ್ಲೆಡ್ಜ್ ಮಾಡಬೇಕಾದರೆ, ನಾನು ಪೇಪರೇ ಜಾಸ್ತಿ ಬರೆಸಿಬಿಡುತ್ತೇನೆ. ಹಾಗಾಗಿ ನಾನು ಈ ಸಾಲದ ವ್ಯವಹಾರ ಮಾಡಲಿಕ್ಕೆ ಅನುಕೂಲ ಜಾಸ್ತಿಯಾಗುತ್ತದೆ. ಅದನ್ನೇ ಆಧಾರ ಇಟ್ಟುಕೊಂಡು ಕಡಿಮೆ ಧಾರಣೆಗೆ ಕೊಂಡುಕೊಂಡವನಿಗೆ ಅದರ ಮೇಲೆ 10 ಪರ್ಸೆಂಟ್ ಜಾಸ್ತಿ ಎಂದು ನಿಯಮ ಮಾಡಿದ್ದೀರಿ. ತಾವು ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ವಾಸ್ತವವಾಗಿ ಒಂದು ವರ್ಷದಲ್ಲೋ ಮೂರು ವರ್ಷದಲ್ಲೋ ಏನು ರಿಜಿಸ್ಟ್ರೇಷನ್ಸ್ ಆಗಿದೆ, ಅದರಲ್ಲಿ ಸರಾಸರಿ ತೆಗೆದುಕೊಂಡು ದರ ನಿಗದಿ ಮಾಡುವಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಎರಡನೆಯದು ರಿಜಿಸ್ಟ್ರೇಷನ್ ಇಷ್ಟೇ ಕೊಂಡು ಕೊಳ್ಳುವುದು ಎಂದು ಬಾಕಿ ಇದೆ, ಮಾನ್ಯ ಅಧ್ಯಕ್ಷರೇ ಇದನ್ನು ಹೇಳಲಿಕ್ಕೆ ನೋವಾಗುತ್ತದೆ. 8 ರಿಂದ 10 ವರ್ಷದವರೆಗೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಪೆಂಡಿಂಗ್ ಇಟ್ಟುಕೊಂಡಿದ್ದಾರೆ. ರೀ ಎವಾಲ್ಯುಯೇಷನ್ ಮಾಡಬೇಕಾಗಿರುವ ರೆಕಾರ್ಡುಗಳನ್ನು ಬಾಕಿ ಇಟ್ಟುಕೊಂಡಿದ್ದಾರೆ. ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ನೋಂದಣಿಯಾದ ಮೇಲೆ ಪತ್ರಗಳು ಪರಿಶೀಲನೆಗೆ ಹೋಗುವಾಗ ಮತ್ತೆ ರ್‍ಯಾಂಡಂ ಚೆಕಪ್ ಮಾಡುತ್ತಿದ್ದರು. ಈಗ ಅಪೀಲು ಅಥವಾ ಲೆಸ್ ಸ್ಟ್ಯಾಂಪ್ ಎಂದು ಅವರಿಗೆ ಮನವಿ ಹೋಗುತ್ತಿದ್ದಾರೆ, ಅಪೀಲು ಹೋಗುತ್ತಿದ್ದಾರೆ 8 ರಿಂದ 10 ವರ್ಷ ಬಾಕಿ ಉಳಿದಿವೆ. ಇದನ್ನು ಏನಾದರೂ ಮಾಡಿ ಡಿಸ್‌ಪೋಸ್ ಮಾಡಲಿಕ್ಕೆ ತಾವು ಆದೇಶ ಕೊಡಬೇಕು. ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ಸ್ ಒಂದೊಂದು ತಾಲ್ಲೂಕಿನಲ್ಲಿ, ಎರಡೆರಡು ತಾಲ್ಲೂಕಿನಲ್ಲಿ ಕ್ಯಾಂಪ್ ಮಾಡಿ ಆ ಕಡತಗಳನ್ನು ವಿಲೇ ಮಾಡದೇ ಹೋದರೆ, ರಿಜಿಸ್ಟರ್ ಮಾಡಿಸಿಕೊಂಡವರ ಗತಿ ಏನು? 5-6 ವರ್ಷಗಳವರೆಗೆ ನನಗೆ ಸರ್ಟಿಫಿಕೇಟ್ ಸಿಗಲಿಲ್ಲವೆಂದರೆ, ನಾನು ರಿಜಿಸ್ಟರ್ ಮಾಡಿಸಿಕೊಂಡಿದ್ದರಿಂದ ಏನಾದರೂ ಪ್ರಯೋಜನವಾಗುತ್ತದೆಯೆ ಜೊತೆಗೆ ರಿಜಿಸ್ಟರ್ ಆದಮೇಲೆ ಖಾತೆಯಾಗಬೇಕಾದರೆ ಮತ್ತೊಂದು ಸಲ ನೀನು 21 ಅಥವಾ 29 ಫಾರಂ ಏನಿದೆ, ನೋ ಅಬ್ಜಕ್ಷನ್ ಫಾರಂ ಮತ್ತೆ ಶುರು ಮಾಡಿ ಎಂದು ಇನ್‌ಸಿಸ್ಟ್ ಮಾಡುತ್ತಾರೆ. ಇದನ್ನು ತಪ್ಪಿಸಬೇಕು. ಒಬ್ಬ ಮನುಷ್ಯ ನಾನು ಟೈಟಲ್ಲೆ ಮಾರಿದ್ದೇನೆಂದು ಹೇಳಿ, ಸ್ಟ್ಯಾಂಪ್ ಕೊಟ್ಟು ಸಬ್ ರಿಜಿಸ್ಟ್ರಾರ್ ಮುಂದೆ ಡಿಕ್ಲೇರ್ ಮಾಡಿದ ಮೇಲೆ ಮತ್ತೊಂದು ಸಾರಿ ತಕರಾರು ಇಲ್ಲವೇ ಎಂದು ಅವನ ಹತ್ತಿರ ಹೋದರೆ, ಮಾರಿದವನು ಏನು ಮಾಡುತ್ತಾನೆ? ಮತ್ತೆ ನನಗೆ ದುಡ್ಡುಕೊಡು ಎಂದು ಕೇಳುತ್ತಾನೆ. ಇದನ್ನು ತಾವು ಅವಾಯ್ಡ್ ಮಾಡಬೇಕು. ನಾನು ಬರೆಸಿಕೊಂಡಿರುತ್ತೇನೆ,

ಖರೀದಿಗೆ ತೆಗೆದುಕೊಂಡಿರುತ್ತೇನೆ. ಮತ್ತೆ ನೀವು ಫಾರಂ ಶುರು ಮಾಡಿಬಿಟ್ಟು, ಖಾತೆ ಮಾಡಲೇ ಬೇಡವೇ ಎಂದು ಅವನನ್ನು ಕೇಳುವುದರಲ್ಲಿ ಏನಿದೆ? ಏನೋ ಅಣ್ಣತಮ್ಮ ಪಂಚಾಯ್ತಿ ಪಾರಿಕತ್ ಮಾಡಿಕೊಂಡಿದ್ದರು, ರಿಜಿಸ್ಟರ್ಡ್ ಡಾಕ್ಯುಮೆಂಟ್ಸ್ ಇಲ್ಲ, ತಕರಾರಿಲ್ಲ ಎಂದು ಹೇಳಿ, ಅಬ್ಜಕ್ಷನ್ ಇಲ್ಲವೆಂದಾಗ ಖಾತೆ ಮಾಡುವುದು ನಮಗೆ ಅರ್ಥವಾಗುತ್ತೆ.

ಶ್ರೀ ಜಗದೀಶ್ ಶೆಟ್ಟರ್ : ರಿಜಿಸ್ಟ್ರೇಷನ್ ಆದಮೇಲೆ ಒಂದು ಡಾಕ್ಯುಮೆಂಟ್, ಸಿಟಿ ಸರ್ವೆ ಆಫೀಸಿಗಾಗಲಿ ಅಥವಾ ಕಂದಾಯ ಇಲಾಖೆಗೆ ಹೋಗುತ್ತದೆ. ಅಲ್ಲಿಂದ ಕಂದಾಯ ಅಧಿಕಾರಿಗಳೇ ಅದನ್ನು ನೋಂದಾವಣೆ ಮಾಡಬೇಕು; ಆ ರೀತಿ ಕಾನೂನೇ ಇದೆ. ಆದರೂ ಅವರು ಮತ್ತೆ ಇನ್‌ಸಿಸ್ಟ್ ಮಾಡುತ್ತಾರೆ. ಮತ್ತೆ ನೀವು ಆ ಮಾಲೀಕರ ಕಡೆಯಿಂದ ನೋ ಅಬ್ಜಕ್ಷನ್ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. ಈ ರೀತಿಯಾಗುತ್ತಿದೆ, ಇದು ಆಗಬಾರದು. ಆ ಸೈಟ್ ನೋಂದಾವಣೆ ಆದಮೇಲೆ ಸಬ್‌ರಿಜಿಸ್ಟ್ರಾರ್ ಆಫೀಸಿನಿಂದ ನೇರವಾಗಿ ಕಂದಾಯ ಇಲಾಖೆಗೆ ಹೋಗಬೇಕು. ಅಲ್ಲಿ ತನಗೆ ತಾನೇ ಅದು ನೋಂದಾವಣೆ ಆಗುತ್ತದೆ. ಆ ರೀತಿಯ ಸಿಸ್ಟಂ ಬರಬೇಕು.

ಶ್ರೀ ಜಿ. ಸಿ. ಮಾಧುಸ್ವಾಮಿ : ಅದು ನಿಜ. ಜೆ. ಸ್ಲಿಪ್ ಇಷ್ಯೂ ಆಗಿ ಅದು ಖಾತೆಯಾಗಬೇಕಾಗಿತ್ತು. ಸಬ್ ರಿಜಿಸ್ಟ್ರಾರ್ ಆಫೀಸು ಮತ್ತು ತಾಲ್ಲೂಕು ಆಫೀಸು ಒಂದೇ ಕಟ್ಟಡದಲ್ಲಿ ಇಟ್ಟಿರತಕ್ಕ ಘನ ಉದ್ದೇಶ ಅದೇ. ಇದೆಲ್ಲಾ ರೆವಿನ್ಯೂ ಇಲಾಖೆಗಳ ಕೆಳಗೆ ಇರತಕ್ಕ ಉದ್ದೇಶ. ಆದರೆ, ಇವತ್ತು ಹಾಗೆ ಆಗುತ್ತಾ ಇಲ್ಲ. ನೀವು ಜೆ.ಸ್ಲಿಪ್ ಕೊಡುವುದು ಬೇಡ. ನಮಗೆ ಖಾತೆ ಮಾಡಿಕೊಡಿ ಎಂದರೆ, ಇನ್ನೊಂದು ಫಾರಂ ಕೊಡುತ್ತಾನೆ. ಮಾರಿದವನ ಹತ್ತಿರ ನೋ ಅಬ್ಜಕ್ಷನ್ ಬರೆಸಿಕೊಂಡು ಬನ್ನಿ ಎಂದು ಹೇಳುತ್ತಾರೆ. ಜನ ಎರಡೆರಡು ಸಾರಿ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳತಕ್ಕ ಸ್ಥಿತಿ ಬಂದಿದೆ. ಸುಮ್ಮನೇ ಸೈನ್ ಹಾಕುವುದಿಲ್ಲ. ಒಂದು ರುಜು ಹಾಕಿ ಎಂದರೆ, ಮತ್ತೆ ಏನೋ ಇದರಲ್ಲಿ ನನಗೆ ಬರುತ್ತದೆ, ಏನೋ ಅನ್ಯಾಯವಾಗಿದೆ ಎಂದು ಕೇಳತಕ್ಕ ಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. ಇದನ್ನು ತಪ್ಪಿಸಬೇಕಾಗಿದೆ. ಇದರ ಜೊತೆಗೆ, ಇವತ್ತೇನು ನಾವು ರಿಜಿಸ್ಟರ್ಡ್ ಮಾಡಿಸುತ್ತಾ ಇದ್ದೇವೆ, ಪತ್ರಗಳನ್ನು ಕೊಡುವುದಕ್ಕೆ ಎಷ್ಟೆಷ್ಟು ದಿವಸ ತೆಗೆದುಕೊಳ್ಳುತ್ತೀರಿ ಎಂದರೆ 6 ತಿಂಗಳು ಒಂದು ವರ್ಷ, ಎರಡು ವರ್ಷ, ಮೂರು ವರ್ಷ ಒಂದು ರಿಜಿಸ್ಟ್ರೇಷನ್ ಸರ್ಟಿಫಿಕೇಟ್ ಇಷ್ಯೂ ಮಾಡುವುದಕ್ಕೆ ತೆಗೆದುಕೊಳ್ಳುತ್ತೀರಿ. ತಾವು ಏಕೆ ಒಂದು ಫೋಟೋ ಕಾಪಿಯರ್‌ನ್ನೂ ಎಲ್ಲಾ ಸಬ್ ರಿಜಿಸ್ಟ್ರಾರ್ ಆಫೀಸಿಗೆ ಕೊಡಬಾರದು? ಅದು ಎಷ್ಟು ಬಾಳಬಹುದು. 18-20 ಸಾವಿರದ ಒಂದು ಕಾಪಿಯರ್‌ಗೆ ಆಗಬಹುದು ಅದನ್ನು ಕೊಟ್ಟರೆ, 10-15 ನಿಮಿಷದೊಳಗೆ ನಿಮ್ಮ ರಿಜಿಸ್ಟರ್ಡ್ ಸರ್ಟಿಫಿಕೇಟ್ ವಾಪಸ್ ಕೊಡಬಹುದು. ಇವತ್ತು ಅದನ್ನೆಲ್ಲಾ ಏಕೆ ಮಾಡುತ್ತಾ ಇಲ್ಲವೆಂಬುದನ್ನು ಕೇಳಬೇಕಾಗುತ್ತೆ. ಇನ್ನು ತಾವು ಜ್ಯುಡಿಷಿಯರಿ ಪವರ್ ಅನ್ನು ರೆವಿನ್ಯೂದವರಿಗೆ ಕೊಟ್ಟಿದ್ದೀರಿ. ನಾಡ ಕಚೇರಿ ಡೆಪ್ಯೂಟಿ ತಹಶೀಲ್ದಾರ್‌ರಿಂದ ಹಿಡಿದು, ಡಿವಿಜನಲ್ ಕಮೀಷನರ್, ರೆವಿನ್ಯೂ ಕಮೀಷನವರ್‌ರವರೆಗೆ ನ್ಯಾಯಾಧಿಕರಣದ ಅಧಿಕಾರ ಕೊಟ್ಟು ಬಿಟ್ಟಿದ್ದೀರಿ. ತಾವು ಯಾವತ್ತಾದರೂ ಒಂದು ದಿವಸ ಕುಳಿತು ಇದನ್ನು ರಿವ್ಯೂ ಮಾಡಬೇಕು. ಯಾವ ಯಾವ ಕೇಸ್ ಪೆಂಡಿಂಗ್ ಇಟ್ಟಿದ್ದಾರೆ, ಎಷ್ಟು ವರ್ಷ ಕೇಸ್ ಪೆಂಡಿಂಗ್ ಇಟ್ಟಿರುತ್ತಾರೆ, ಎಷ್ಟು ಸಲ ರೈತರನ್ನು ಕರೆದು,

ಹಿಂದಕ್ಕೆ ಕಳುಹಿಸುತ್ತಾರೆ. ನನ್ನ ವ್ಯಾಪ್ತಿಗೆ ಬರುವುದಿಲ್ಲವೆಂದು ಹೇಳಲಿಕ್ಕೆ 2 ವರ್ಷ 3 ವರ್ಷ ಕೇಸ್ ಕೂಗಿಸುತ್ತಾರೆ. ಈ ರಾಜ್ಯದಲ್ಲಿರುವ ಅಸಿಸ್ಟೆಂಟ್ ಕಮೀಷನರ್ ಆಫೀಸಿನ ಮುಂದೆ ಸುಮಾರು ಜನ ವಕೀಲರುಗಳು ಧರಣಿ ಮಾಡಿದ್ದಾರೆ. ವಕೀಲರು ಬರಬೇಡಿ ಎಂದು ಹೇಳಿರತಕ್ಕ ನಿರ್ದಶನಗಳು ಇವೆ. ವಕೀಲರುಗಳು ಮಧ್ಯೆಪ್ರವೇಶ ಮಾಡಬೇಡಿ ಎಂದು ಹೇಳಿರತಕ್ಕ ನಿದರ್ಶನಗಳು ಇವೆ. ರಿಟನ್ ಸ್ಟೇಟ್‌ಮೆಂಟ್ ಫೈಲ್ ಮಾಡಬೇಡಿ, ನಾವೇ ಕುಳಿತುಕೊಂಡು ಪರಿಹರಿಸುತ್ತೇವೆಂದು ನಿಮ್ಮ ಎ.ಸಿ.ಗಳು ಆರ್ಡರ್ ಮಾಡಿರತಕ್ಕ ನಿದರ್ಶನಗಳು ಇವೆ. ಇದಕ್ಕೆ ತಾವು ಉತ್ತರ ಹೇಳಬೇಕು ಯಾವುದೋ ಒಂದು ಪಾರಿಕತ್ತಾಗಬೇಕು. ಮತ್ತೊಂದಾಗಬೇಕೆಂದರೆ, 3-4 ವರ್ಷ ಬೇಕಾಗುತ್ತದೆಯೇ? ಸಣ್ಣಪುಟ್ಟ ಡಿಸ್‌ಪ್ಯೂಟ್ಸ್, ನಿಮ್ಮ ಆರ್.ಆರ್. ಟಿ ಕೇಸನ್ನು ತಾವು ಸ್ವಲ್ಪ ತೆಗೆಸಿ ನೋಡಬೇಕು. ಈ ರಾಜ್ಯದಲ್ಲಿ ಎಷ್ಟು ದಿವಸ ನಡೆಸಿದ್ದಾರೆ. ಸನ್ಮಾನ್ಯ ಜಿಲ್ಲಾಧಿಕಾರಿಗಳು ಯಾವತ್ತಾದರೂ ಎರಡು ಡೇಟ್, ಮೂರು ಡೇಟ್‌ನೊಳಗೆ ಯಾವುದಾದರೂ ಪಾರ್ಟಿ ಕರೆಸಿ ಕೇಸ್ ನಡೆಸಿದ್ದಾರೆಯೇ ಎಂಬುದನ್ನು ತಾವು ನೋಡಬೇಕು. ಕೇಸ್ ಕರೆಸುವುದು ಅಲ್ಲಿಯವರಿಗೆ ಯಾರಿಗೋ ಹೇಳುವುದು. ಡೇಟ್ ಕೊಡಿ ಎಂದು ಹೇಳಿ ಹೋಗುವುದು. ಯಾರೋ ಬರುತ್ತಾರೆ ಎಂದೋ, ಟೂರ್ ಎಂದೋ ಅಥವಾ ಯಾವುದೋ ಮೀಟಿಂಗ್ ಎಂದು ಹೇಳಿ ಹೋಗುವುದು. ಹಾಗಾದರೆ ಹಳ್ಳಿಜನ ಎಂದರೆ ತಮಗೆ ಕಾಲು ಕಸವೇ? ಇವತ್ತು ಡಿ.ಸಿ. ಆಫೀಸಿಗೆ ಬಂದು ಹೋಗುವುದು ಎಂದರೆ ಹುಡುಗಾಟವೇ? ಏನು ಡೇಟ್ ಗೊತ್ತು ಮಾಡಿರುತ್ತೀರಿ, ಅವರು 3 ಗಂಟೆಯಿಂದ 6 ಗಂಟೆಯವರೆಗೆ ಕುಳಿತು, ಕನಿಷ್ಟ ಬಂದವರನ್ನು ನೋಡಿ, ಇತ್ಯರ್ಥ ಮಾಡದೇ ಇದ್ದರೂ ಇನ್ನೊಂದು ಡೇಟ್ ಕೊಡುವಷ್ಟು ಸೌಜನ್ಯ ಬೇಡವೇ? ಎಲ್ಲಾ ಡಿ.ಸಿ. ಆಫೀಸುಗಳಲ್ಲೂ ಇದರ ಬಗ್ಗೆ ತಾವು ವಿಮರ್ಶೆ ಮಾಡಬೇಕು. ಡೆಪ್ಯೂಟಿ ಕಮೀಷನರ್ ಅಲ್ಲಿರುವ ಮ್ಯಾನೇಜರ್‌ಗೆ ಹೇಳಿಬಿಡುತ್ತಾರೆ. ನನಗೆ ಬೇರೆ ಪ್ರೋಗ್ರಾಂ ಇದೆ, ಅಲ್ಲಿಗೆ ಹೋಗುತ್ತೇನೆ. ಮಂತ್ರಿಗಳು ಕರೆಯುತ್ತಾರೆ, ಮತ್ತೊಬ್ಬರು ಕರೆಯುತ್ತಿದ್ದಾರೆ ಆದ್ದರಿಂದ, ನೀವು ಬಂದವರಿಗೆ ತಕ್ಷಣ ಇನ್ನೊಂದು ಡೇಟ್ ಕೊಟ್ಟು ಕಳುಹಿಸಿ ಎಂದು ಹೇಳುತ್ತಾರೆ. ನೀವು ಎಲ್ಲಿಯವರೆಗೆ ನಡೆಸಿಕೊಂಡು ಹೋಗುತ್ತೀರಿ. ಒಂದು ಪಹಣಿ ಬರೆದಿರುವ ತಪ್ಪು ಎಂದರೆ, ಅದನ್ನು ಇನ್ನೊಂದು ಸಾರಿ ಅಡ್ವರ್ಸ್ ಪೊಸಿಷನ್ ಪ್ರೂವ್ ಮಾಡುವವರೆಗೆ ಬೆಳೆಸುತ್ತೀರಾ. 15 ವರ್ಷ ನಡೆಸುತ್ತೀರಾ? 30 ವರ್ಷ ನಡೆಸುತ್ತೀರಾ? ಆಮೇಲೆ ಹೈಕೋರ್ಟಿಗೆ ಹೋಗಿನಿಂತುಕೊಳ್ಳಿ ಎಂದು ಹೇಳುತ್ತೀರಾ? ನನಗೆ ಅಡ್ವರ್ಸ್ ಪೊಸಿಷನ್ ಇದೆ, ನಾನೇ ಇದರ ಮಾಲೀಕ ಎಂದು ಹೇಳುತ್ತೀರಾ? ಇದನ್ನೆಲ್ಲಾ ತಾವು ಸ್ವಲ್ಪ ರೆಕ್ಟಿಫೈ ಮಾಡದೇ ಹೋದರೆ, ಕಂದಾಯ ಇಲಾಖೆಗೆ ಒಳ್ಳೆಯ ಹೆಸರು ಬರುವುದಿಲ್ಲ. ಆದ್ದರಿಂದ, ಮಾನ್ಯ ಕಂದಾಯ ಸಚಿವರು ಈ ಕೆಲಸವನ್ನು ಮಾಡಬೇಕು.

ಅಧ್ಯಕ್ಷರು : ಮಾನ್ಯ ಮಾಧುಸ್ವಾಮಿಯವರೇ ಈಗ ಸಭೆಯನ್ನು ಮುಂದೂಡಿ ಊಟ ಮಾಡಿ ಬಂದ ನಂತರ ಮತ್ತೆ ತಾವು ತಮ್ಮ ಭಾಷಣವನ್ನು ಮುಂದುವರಿಸಬಹುದು.

(ಸಭೆಯು 1-32 ನಿಮಿಷಕ್ಕೆ ಮುಂದೂಡಿ ಮತ್ತೆ ಸಭೆಯು 2-30 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 2.40 ಗಂಟೆಗೆ ಮತ್ತೆ ಸಮಾವೇಶಗೊಂಡಿತು)

(ಪೀಠದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಉಪಸ್ಥಿತರಿದ್ದರು)

ವಿತ್ತೀಯ ಕಾರ್ಯಕಲಾಪ :

1997-98ನೇ ಸಾಲಿನ ಬೇಡಿಕೆಗಳ ಮೇಲಿನ ಮುಂದುವರೆದ ಚರ್ಚೆ.

ಅಧ್ಯಕ್ಷರು : ಮಾಧುಸ್ವಾಮಿಯವರೆ ತಾವು ಮಾತನಾಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ನಾನು ನೋಂದಣಿ ಇಲಾಖೆಯ ಬಗ್ಗೆ ಮಾತನಾಡುತ್ತಿದ್ದೆ. ಈ ಸರ್ಕಾರ ಬಂದ ನಂತರ ಈ ಇಲಾಖೆಯಲ್ಲಿ ಒಂದು ಒಳ್ಳೆಯ ಕೆಲಸವಾಗಿದೆ. ಮೊದಲು ರೈತರು ಸಾಲ ತೆಗೆದುಕೊಳ್ಳಬೇಕಾದರೆ ಸ್ಟಾಂಪನ್ನು ಇನ್ಸಿಸ್ಟ್ ಮಾಡುತ್ತಿದ್ದರು, ಅದನ್ನು ತೆಗೆದುಹಾಕಿದ್ದು ಒಳ್ಳೆಯ ಕೆಲಸವಾಗಿದೆ. ಇದರ ಜೊತೆಗೆ ಇನ್ನೂ ಒಂದಿಷ್ಟು ಒಳ್ಳೆಯ ಕೆಲಸ ಮಾಡಬೇಕಾಗುತ್ತದೆ. ಈಗ ಬೆಂಗಳೂರು ಸಿಟಿಯಲ್ಲಿ ಹೋದ ವರ್ಷ ಅಥವಾ ಈ ವರ್ಷದ ವ್ಯಾಲ್ಯುಯೇಷನ್ ರೇಟ್‌ಗೆ ಸೈಟುಗಳು ಹೋಗುವುದಿಲ್ಲ. ಆ ರಿಜಿಸ್ಟ್ರೇಷನ್ ಫೀಗಳನ್ನು ಹೋದ ವರ್ಷಕ್ಕಿಂತ ಜಾಸ್ತಿ ಮಾಡಿ ಎಂದು ಹೇಳುವುದು ಅಥವಾ 6 ತಿಂಗಳು ಅಥವಾ ವರ್ಷಕ್ಕೆ ಒಂದು ಸಲ ರಿವೈಸ್ ಮಾಡಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಮಂಜುನಾಥ್ ಸಿ. ಕುನ್ನೂರ್ : ಸನ್ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ಒಂದು ಉದಾಹರಣೆ ಕೊಡಬೇಕಾದರೆ ಅಲ್ಲಿನ ಸಬ್‌ರಿಜಿಸ್ಟ್ರಾರ್‌ರವರು ಪ್ರತಿಯೊಂದು ತಾಲ್ಲೂಕಿಗೆ ವ್ಯಾಲ್ಯುಯೇಷನ್ ಅನ್ನು 20 ಪರ್ಸೆಂಟ್‌ನಿಂದ 40 ಪರ್ಸೆಂಟ್‌ವರೆಗೆ ಜಾಸ್ತಿ ಮಾಡುತ್ತಿದ್ದಾರೆ. ಮತ್ತು ಸುತ್ತಮುತ್ತಲಿನ ತಾಲ್ಲೂಕುಗಳಲ್ಲಿದ್ದಂಥ ಜಮೀನುಗಳಲ್ಲಿಯೂ ಸಹ ಅವರು 6 ತಿಂಗಳಿಗೆ ಒಂದು ಸಲ 20 ಪರ್ಸೆಂಟ್ ಇನ್‌ಕ್ರೀಸ್ ಮಾಡುತ್ತಿದ್ದಾರೆ. ಮೊನ್ನೆ ಇಂಡಿಯಾ ಟುಡೆಯಲ್ಲಿ ಒಂದು ವಿಷಯ ಬಂದಿದೆ. ರಿಯಲ್ ಎಸ್ಟೇಟ್ ನಾವು ತೆಗೆದುಕೊಂಡೆವು ಎಂದರೆ ಆ ವ್ಯಾಲ್ಯುಯೇಷನ್ ಡಿಕ್ರೀಸ್ ಆಗುತ್ತಿದೆ. ಆದರೆ, ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಪ್ರತಿ 6 ತಿಂಗಳಿಗೆ ಅದು ಹೆಚ್ಚಾಗುತ್ತಿದೆ. ಆದುದರಿಂದ, ಇದನ್ನು ದಯವಿಟ್ಟು ಮಾನ್ಯ ಸಚಿವರು ಗಮನಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ಇವರು ಅಸೆಸ್‌ಮೆಂಟ್ ಆಫೀಸರ್ಸ್ ಎಂದು ಕಳುಹಿಸುತ್ತಾರೆ. ಅವರು ಮಾಡುವುದಿಷ್ಟೆ, ಯಾರು ಹೋಗಿ ಅವರನ್ನು ಟಿ.ಬಿ.ಯಲ್ಲಿ ಅಥವಾ ಅವರಿರುವ ಜಾಗದಲ್ಲಿ ನೋಡುತ್ತಾರೆ ಅವರಿಗೆ ಅಸೆಸ್‌ಮೆಂಟನ್ನು ಕಡಿಮೆ ಮಾಡುತ್ತಾರೆ. ಯಾರು ಆ ರೀತಿ ಅವರನ್ನು ಹೋಗಿ ನೋಡುವುದಿಲ್ಲ ಅವರಿಗೆ ಎರಡರಷ್ಟು, ಮೂರರಷ್ಟು ಅಥವಾ ನಾಲ್ಕರಷ್ಟು ಜಾಸ್ತಿ ಮಾಡುತ್ತಾರೆ. ನಂತರ ಒಂದು ಸೈಟು ಕಳೆದ ಸಲ 50 X 80 ಅಡಿ ಇತ್ತು ಎಂದರೆ ಅದನ್ನು ದಿಡೀರ್ ಎಂದು ಅಸೆಸ್‌ಮೆಂಟ್‌ನಲ್ಲಿ ಈ ಬಾರಿ 40 X 20 ಅಥವಾ 20 X 60 ಅಡಿ ಎಂದಾಗಿರುತ್ತದೆ. ಒಂದು ವೇಳೆ ಅದು ಕಡಿಮೆಯಾಗಿದ್ದರೆ ಅದು ಏತಕ್ಕೆ ಕಡಿಮೆಯಾಗಿದೆ ಅಥವಾ ಅದು ಬೇರೆ ಉಪಯೋಗಕ್ಕೇನಾದರೂ ಬಂದಿದೆಯೆ ಎಂಬುದನ್ನು ಬರೆಯಬೇಕಾಗುತ್ತದೆ. ಆದರೆ ಆ ಕೆಲಸ ಆಗುತ್ತಿಲ್ಲ. ಇದನ್ನು ಸ್ವಲ್ಪ ನಿಗಾವಹಿಸಿ ನೋಡಬೇಕು. ಇದರ ಜೊತೆಗೆ ಈ ಇಲಾಖೆಯಲ್ಲಿನ ಅರ್ಧ ಕೆಲಸವನ್ನು ಮುಜರಾಯಿ ಇಲಾಖೆಗೂ ಉಳಿದ ಬೇರೆ ಅರ್ಧ ಕೆಲಸವನ್ನು ನೋಡಿಕೊಳ್ಳಲು ಅವರ

ಜೊತೆಗೆ ಜಿಲ್ಲಾ ಆಡಳಿತವನ್ನೂ ಹಾಕಿರುತ್ತಾರೆ. ಸುಮ್ಮಸುಮ್ಮನೆ ಯಾವುದೋ ದೇವಸ್ಥಾನದ ಒಡವೆ ತೆಗೆದುಕೊಂಡು ಬರುವುದು, ಟ್ರೆಜರಿಯಲ್ಲಿ ಇಡುವುದು ಮತ್ತೆ ತೆಗೆದುಕೊಳ್ಳುವುದು ಈ ಕೆಲಸವನ್ನು ಅವರು ತಹಶೀಲ್ದಾರ್‌ರವರಿಗೆ ಡಿ.ಸಿ.ಯವರಿಗೆ ಹಚ್ಚಿಕೊಂಡು ಕುಳಿತ್ತಿದ್ದಾರೆ. ಇಂಥದ್ದನ್ನು ಮಾನ್ಯ ಕಂದಾಯ ಸಚಿವರು ಸ್ವಲ್ಪ ಮಟ್ಟಿಗೆ ಡೀಸೆಂಟ್ರಲೈಜೇಷನ್ ಮಾಡಬೇಕು. ಯಾವುದೊ ದೇವಸ್ಥಾನದ ಒಡವೆ ಇಟ್ಟುಕೊಂಡು ಅದಕ್ಕೇ ಗಲಾಟೆ ಮಾಡುವುದು, 8-10 ದಿವಸ ಕೋರ್ಟ್‌ನಲ್ಲಿ ಕೇಸ್ ಹಾಕುವುದು, ಅದಕ್ಕೆ ಒಂದು ಸಲ ಕೋರ್ಟಿಗೆ ವಕಾಲತ್ತಿಗಾಗಿ ಲಾಯರುಗಳು ಹೋಗುವುದು, ಒಡವೆ ರಿಲೀಸ್ ಮಾಡಿ ಎನ್ನುವುದು, ಚಿನ್ನದ್ದು ಕೊಡಬೇಕೇ ಅಥವಾ ಬೆಳ್ಳಿಯದ್ದು ಕೊಡಬೇಕೇ ಎನ್ನುವುದು ಇದನ್ನೆಲ್ಲಾ ತಾವು ಕಂಟ್ರೋಲ್ ಮಾಡಬೇಕಾಗುತ್ತದೆ. ಇದರ ಜೊತೆಗೆ ವಿಲೇಜ್ ಅಕೌಂಟೆಂಟ್‌ಗಳ ವಿಷಯವೊಂದಿದೆ. ಈ ಬಗ್ಗೆ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡಿದ್ದಾರೆ, ಆದ್ದರಿಂದ ನಾನು ಹೆಚ್ಚಿಗೆ ಮಾತನಾಡಲಿಲ್ಲ. ಇವೊತ್ತು ಸನ್ಮಾನ್ಯ ಕಂದಾಯ ಸಚಿವರು ಮಾತನಾಡುತ್ತಾ ಅವರಿಗೆ ಕ್ವಾರ್ಟರ್ಸ್‌ಗಳನ್ನು ಕೊಟ್ಟಿಲ್ಲ, ಅವರು ಇರುವುದಕ್ಕೆ ಅನುಕೂಲ ಇಲ್ಲ ಎಂಟು ಸಾವಿರ ಜನ ಇರಬೇಕಾದ ಕಡೆ ನಾಲ್ಕು ಅಥವಾ ಐದು ಸಾವಿರ ಜನ ವಿಲೇಜ್ ಅಕೌಂಟೆಂಟ್‌ಗಳನ್ನು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು. ಆದರೆ ಸುಮಾರು ಕಡೆ ಕ್ವಾರ್ಟರ್ಸ್‌ಗಳಿದ್ದರೂ ಸಹ ವಿಲೇಜ್ ಅಕೌಂಟೆಂಟ್‌ಗಳು ಅಲ್ಲಿ ಇಲ್ಲ. ಏತಕ್ಕೆ ಇಲ್ಲ ಎಂದರೆ ಅವರು ಹೇಳುತ್ತಾರೆ, ನಮ್ಮ ಹುಡುಗರು ಟೌನ್‌ನಲ್ಲಿ ಓದಬೇಕು. ಆದ್ದರಿಂದ ನಾವು ಹೋಬಳಿ ಹೆಡ್‌ಕ್ವಾರ್ಟ್ರ್ ಅಥವಾ ತಾಲ್ಲೂಕು ಹೆಡ್‌ಕ್ವಾರ್ಟ್ರ್‌ನಲ್ಲಿ ಇರುತ್ತೇವೆ ಎಂದು. ನಮ್ಮ ಜಿಲ್ಲಾ ಮಂತ್ರಿಗಳಾದ ಶ್ರೀ ಸತ್ಯನಾರಾಯಣ ಅವರೂ ಇಲ್ಲಿ ಕುಳಿತಿದ್ದಾರೆ, ಒಂದು ದುರುಂತವೆಂದರೆ ಸನ್ಮಾನ್ಯ ಕಂದಾಯ ಸಚಿವರು ಇದನ್ನು ಗಮನಿಸಬೇಕು, ಕ್ವಾರ್ಟರ್ಸ್ ಕಟ್ಟಿದಾಗಿನಿಂದ ಇವತ್ತಿನವರೆಗೆ ಆ ಕ್ವಾರ್ಟ್ರ್ಸ್‌ನಲ್ಲಿ ಒಬ್ಬ ವಿಲೇಜ್ ಅಕೌಂಟೆಂಟ್ ಕೂಡ ಹೋಗಿಲ್ಲ. ಈಗ ನಮ್ಮ ಹಳ್ಳಿಯಲ್ಲಿ ಒಂದು ಕ್ವಾರ್ಟ್ರ್ಸ್ ಇದೆ. ನಾನು ಕಷ್ಟಪಟ್ಟು ಒಬ್ಬರನ್ನು ಕರೆದುಕೊಂಡು ಬಂದು ಅಲ್ಲಿ ಬಿಟ್ಟಿದ್ದೆ. ಆದರೆ ಅವನನ್ನು ಟ್ರಾನ್ಸ್‌ಫರ್ ಮಾಡಿದಿರಿ. ಆತ ಹೋದ ಇನ್ನೊಬ್ಬ ಬರಲೇ ಇಲ್ಲ. ಒಂದು ಕಡೆ ನಾವು ಕ್ವಾರ್ಟರ್ಸ್ ಕಟ್ಟಿಲ್ಲ ಎಂದು ಹೇಳುವುದು ಇನ್ನೊಂದು ಕಡೆ ಅವರು ಗ್ರಾಮೀಣ ಪ್ರದೇಶದಲ್ಲಿ ಬಂದು ವಾಸ ಮಾಡುವುದಿಲ್ಲ ಎಂದು ಹೇಳುವುದು ಈ ರೀತಿ ಆಗಿದೆ. ತಾವು ಏನಾದರೂ ಮಾಡಿ ಇದನ್ನು ಒಂದು ನಿಬಂಧನೆಗೆ ಒಳಪಡಿಸಬೇಕಾಗುತ್ತದೆ. ಕನಿಷ್ಠ ಒಬ್ಬ ವಿಲೇಜ್ ಅಕೌಂಟೆಂಟ್ ಆದರೂ ಹಳ್ಳಿಯಲ್ಲಿ ಸಿಗದೆ ಹೋದರೆ ಆ ಹಳ್ಳಿಗೆ ನಾವು ಸ್ವರಾಜ್ಯ ಕೊಟ್ಟಿದ್ದೇವೆ, ಆ ಹಳ್ಳಿ ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಬಂದಿದೆ ಎಂದು ಹೇಳುವುದಕ್ಕೆ ಏನೂ ಉಳಿದಿಲ್ಲ. ಇದನ್ನು ತಾವು ಸ್ವಲ್ಪ ನಿಗಾ ಕೊಟ್ಟು ಸನ್ಮಾನ್ಯ ಕಂದಾಯ ಸಚಿವರು ಜಿಲ್ಲಾ ಆಡಳಿತದ ಮೇಲೆ ಒಂದು ರೀತಿಯಲ್ಲಿ "ಕ್ಷ ಕಿರಣವನ್ನು" ಬೀರಬೇಕಾಗುತ್ತದೆ. ಏಕೆಂದರೆ, ಹಿಂದೆ ಕಂದಾಯ ಸಚಿವರು ನಮ್ಮ ಜಿಲ್ಲೆಗೆ ಬರುತ್ತಿದ್ದರು, ಮೀಟಿಂಗ್ ಮಾಡುತ್ತಿದ್ದರು. ಆ ಮೀಟಿಂಗ್‌ಗೆ ನಮ್ಮನ್ನೂ ಕರೆಯುತ್ತಿದ್ದರು. ನಾವು ಡಿ.ಸಿ.ಯವರ ಆಫೀಸ್‌ನಲ್ಲಿ ಕುಳಿತು ಜಿಲ್ಲೆಯ ಸಮಸ್ಯೆಗಳೇನಾದರೂ ಇದ್ದರೆ ಅದನ್ನು ಅಲ್ಲಿ ಕುಳಿತು ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತಿತ್ತು. ಆದರೆ, ಕಳೆದ ಎರಡು ಮೂರು ವರ್ಷಗಳಲ್ಲಿ ಅಂಥ ಸಭೆ ನಡೆಸಲೇ ಇಲ್ಲ. ಒಂದು ದಿವಸವಾದರೂ ತಾವು ಜಿಲ್ಲಾ ಕಛೇರಿಗಳಿಗೆ ಭೇಟಿ ಕೊಟ್ಟು ಅದನ್ನು ರಿವ್ಯೂ ಮಾಡಬೇಕಾಗುತ್ತದೆ. ಡಿಸಿಯವರು ಏನು ಮಾಡುತ್ತಿದ್ದಾರೆ.

ಅವರ ಆಫೀಸ್‌ನಲ್ಲಿ ಪೆಂಡಿಂಗ್ ಇರುವ ಕೆಲಸ ಎಷ್ಟು, ಇದು ಏತಕ್ಕೆ ಆಗಿಲ್ಲ ಎಂದು ಹೇಳ ಬೇಕಾಗುತ್ತದೆ. ಈ ಕಡೆಗೆ ತಾವು ನಿಗಾ ಕೊಡಬೇಕಾಗುತ್ತದೆ. ಇನ್ನು ಲ್ಯಾಂಡ್ ಸರ್ವೆ ಸೆಟ್ಲ್‌ಮೆಂಟ್ ಇದೆ. ಅಸಿಸ್ಟೆಂಟ್ ಡೈರೆಕ್ಟರ್ ಹುದ್ದೆಗಳನ್ನು ತಾವು ಎಲ್ಲಾ ತಾಲ್ಲೂಕುಗಳಲ್ಲೂ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಭಾವನೆ. ಎಲ್ಲಾ ತಾಲ್ಲೂಕುಗಳಲ್ಲೂ ಆಫೀಸ್ ಕೊಟ್ಟಿದ್ದೀರಿ ಆದರೆ ಅಸಿಸ್ಟೆಂಟ್ ಡೈರೆಕ್ಟ್‌ರ್ ಕೇಡರ್ ಆಫೀಸ್ ಕೊಟ್ಟಿಲ್ಲ ಎಂದು ನಾನು ಹೇಳುತ್ತಿರುವುದು. ಅದನ್ನು ಸಬ್‌ಡಿವಿಜನ್‌ನಲ್ಲೇ ಉಳಿಸಿಬಿಟ್ಟಿದ್ದೀರಿ ಇವತ್ತು ನಾನೇನಾದರೂ ನಿಮ್ಮ ಸರ್ವೇಯರ್ ಮೇಲೆ ಅಪೀಲ್ ಹೋಗಬೇಕೆಂದರೆ ಅಲ್ಲಿಗೆ ಹೋಗಬೇಕಾಗುತ್ತದೆ. ನಿಮ್ಮ ಸರ್ವೆಯರ್ ಮಾಡಿದ್ದು ನನಗೆ ಸಮ್ಮತಿ ಇಲ್ಲಾಂದರೆ ಅಲ್ಲಿಗೆ ಹೋಗಿ ಕೂತ್ಕೋಬೇಕಾಗುತ್ತದೆ. ಆಮೇಲೆ ಇವರೇನು ನೋಟಿಸ್‌ಗಳನ್ನು ಕಳಿಸುತ್ತಾರೆ, ಅವುಗಳನ್ನು ಸಮರ್ಪಕವಾಗಿ ಅವನ್ನು ಕಳಿಸುತ್ತಾ ಇಲ್ಲ. ಬಾಜುದಾರರಿಗೆ ನೋಟಿಸ್ ಕಳಿಸಬೇಕು ಅವರನ್ನು ಅಲ್ಲಿಗೆ ಕರೆದುಕೊಂಡುಹೋಗಿ ನಿಲ್ಲಿಸಿಕೊಂಡು ಸರ್ವೆ ಮಾಡಬೇಕು ಏನಾದರೂ ತಕರಾರಿದ್ದರೆ ರಿಜಿಸ್ಟರ್ ಮಾಡಬೇಕು ಎಂದು ತಾವೇನು ನಿಯಮ ಮಾಡಿದ್ದೀರಿ, ಅವರು ಭಾನುವಾರ ಬರುವುದು ಶನಿವಾರ ಬರುವುದು ಅನಧಿಕೃತವಾಗಿ ಸರ್ವೆ ಮಾಡುವುದು ಇಂತಹ ಕೆಲಸ ಮಾಡುತ್ತಿದ್ದಾರೆ ಅದಕ್ಕೆ ತಾವು ಕಡಿವಾಣ ಹಾಕಬೇಕು. ಇನ್ನು ಅಕ್ರಮ ಸಾಗುವಳಿ ಬಗ್ಗೆ ಎರಡು ಮಾತು ಆಡಲೇ ಬೇಕಾಗುತ್ತದೆ. ಅಧ್ಯಕ್ಷರೇ, ಇವತ್ತು 5ನೇ 4ಭಾಗದಷ್ಟು ಜಮೀನು ಒಂದು ಕಡೆ ಉಳಿದಿದ್ದರೆ ಇನ್ನೊಂದು ಕಡೆ ಅರ್ಜಿ ಹಾಕಲಾರದೆ ಆಚೆ ಉಳಿದಿರುವವರ ಸಂಖ್ಯೆ ಅಷ್ಟೇ ಉಳಿದಿದೆ. 1991ನೇ ಇಸವಿ ಸೆಪ್ಟೆಂಬರ್ ತಿಂಗಳೊಳಗೆ 50ನೇ ಫಾರಂನಲ್ಲಿ ಅರ್ಜಿ ಹಾಕಬೇಕೆಂದು ತಾವು ಕೇಳಿದ್ದಿರಿ ಆ ನಮೂನೆಯಲ್ಲಿ ಅರ್ಜಿ ಹಾಕಲಾರದವರು ಪಾಪ ಗ್ರಾಮೀಣ ಪ್ರದೇಶದಲ್ಲಿದ್ದು ತಿಳಿವಳಿಕೆ ಇಲ್ಲದವರು ಸುಮಾರು ಜನ ಹಾಗೇ ಉಳಿದುಕೊಂಡು ಬಿಟ್ಟಿದ್ದಾರೆ. 'ಇದನ್ನೂ ಪುನರ್‌ಪರಿಶೀಲನೆ ಮಾಡಬೇಕಾಗುತ್ತದೆ. ಇನ್ನೊಂದು ಕಟಾಫ್ ಡೇಟನ್ನು ತಾವು ನಿಗದಿಮಾಡಿ ಕನಿಷ್ಟ ಯಾವ್ಯಾವ ತಾಲ್ಲೂಕಿನಲ್ಲಿ ಹಾಕಿದ್ದ ಅರ್ಜಿಗಳೆಲ್ಲ ವಿಲೇವಾರಿ ಆಗಿಹೋಗಿವೆ, ಏಕೆಂದರೆ ಈ ಮಾತನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರೆವಿನ್ಯೂ ಮಿನಿಸ್ಟರಾಗಿದ್ದಾಗ ಹೇಳಿದ್ದರು. ಇದೆಲ್ಲ ಮುಗಿದುಬಿಡಲಿ, ಆಮೇಲೆ ಇನ್ನೊಂದ್ಸಲ ಪರಿಶೀಲನೆ ನಾವು ಮಾಡುತ್ತೇವೆ ಎಂದು. ಇವತ್ತು ಮುಗಿದಿರುವ ಕಡೆ ಅಥವಾ ಇರುವ ಕಡೆ ನೀವೇನಾದರೂ ಒಂದು ನಿಯಮ ಮಾಡಿ ಮತ್ತೊಂದ್ಸಲ ತಾರೀಖನ್ನು ನೀವು ನಿಗದಿಮಾಡಿ ಅರ್ಜಿ ತಗೊಂಡು ಈ ಸಮಿತಿಗಳನ್ನು ಮಾಡುವ ಕೆಲಸ ತಾವು ಮಾಡಬೇಕು. ಎಲ್ಲಿ ಹೆಚ್ಚು ಅರ್ಜಿಗಳು ಪೆಂಡಿಂಗ್‌ನಲ್ಲಿವೆ ಅಲ್ಲಿ ಒಂದಲ್ಲ ಎರಡು ಸಮಿತಿ ಆಗಲಿ. ತಾವೇನಾದರೂ ಮಾಡಿ ಇದನ್ನು ವಿಲೇ ಮಾಡಲಿಕ್ಕೆ ಕ್ರಮ ಕೈಗೊಳ್ಳಬೇಕು. ಇದರ ಜೊತೆಗೆ ಅರಣ್ಯ ಒತ್ತುವರಿಯಾಗಿರುವುದು-ಅದು ಬಹುಶಃ ಬಗರ್‌ಹುಕುಂ ಕಮಿಟಿ ವ್ಯಾಪ್ತಿಗೆ ಬರುವುದಿಲ್ಲ ಇವರು ಜಿಲ್ಲಾ ಮಟ್ಟದಲ್ಲಿ ಇನ್ನೊಂದು ಕಮಿಟಿ ಮಾಡಿದ್ದರು, ಆ ಕಮಿಟಿ ಸಿಟಿಂಗೇ ಆಗಲಿಲ್ಲ, ಅವರು ಎಲ್ಲೂ ಕೂರಲೂ ಇಲ್ಲ, ಡಿಸಿಷನ್ನೇ ತಗೊಳಲಿಲ್ಲ. ಕ್ಯಾಟಗರಿ ಸಿ ಮತ್ತು ಡಿ ಲ್ಯಾಂಡ್ ಎನ್‌ಕ್ರೋಚಾಗಿದ್ದರೆ ಏನೂ ಫಾರೆಸ್ಟ್ ಇಲಾಖೆದು ಇನ್‌ವೆಸ್ಟ್‌ಮೆಂಟ್ ಇಲ್ಲದೇ ಇದ್ದರೆ ರೈತರಿಗೆ ಮಂಜೂರು ಮಾಡಬಹುದು ಅಂತಾನೇ ಮಾಡಿದ್ದಿರಿ ಇವತ್ತಿನವರೆಗೂ ಒಂದು ಎಕರೆಯಾದರೂ ವಿಲೆ ಮಾಡುವಂತಹ ಸ್ಥಿತಿ ತಾವು ನಿರ್ಮಾಣ ಮಾಡಿಲ್ಲ. ಈ ಕಡೆ ಹೆಚ್ಚು ಒತ್ತಾಸೆಯನ್ನು ತಾವು ಕೊಡಬೇಕು.

ಒಬ್ಬ ಸದಸ್ಯರು : ಅಧ್ಯಕ್ಷರೇ, ನಮ್ಮ ಕೊಡಗಿನಲ್ಲಿ ಕೂಡ.ಹಿಂದೆ ಖುಷ್ಕಿಗೆ ಎಂದು ಮಾತ್ರವೇ ಮಾಡಿದ್ದರು. ಕಾಫಿಗೆ ಮಾಡಲಿಲ್ಲ. ಕೊಡಗಿನಲ್ಲಿ ಕಾಫಿ ಏಲಕ್ಕಿ ಬೆಳೆಯುವುದು ಬಿಟ್ಟರೆ ಬೇರೆ ಯಾವುದೂ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕಾಫಿ ಏಲಕ್ಕಿಗೂ ಫಾರಂ 50 ಕೊಟ್ಟು ಸ್ಯಾಂಕ್ಷನ್ ಮಾಡುವಂತಹ ಪರಿವರ್ತನೆ ತರಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇಲ್ಲದಿದ್ದರೆ ಕಾಫಿ ಬೆಳೆಯಿಂದ ಸರ್ಕಾರಕ್ಕೆ ಲಾಸು. ಕಾಫಿ ಬೆಳೆದ ಜಾಗದಿಂದ ಸರ್ಕಾರಕ್ಕೆ ಯಾವುದೇ ಟ್ಯಾಕ್ಸಾಗಲಿ ಕೃಷಿ ವರಮಾನತೆರಿಗೆಯಾಗಲಿ ಯಾವುದೂ ಸಿಗುತ್ತಿಲ್ಲ. ಆದ್ದರಿಂದ ದಯಮಾಡಿ ಅದನ್ನೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಧ್ಯಕ್ಷರೇ, ಹಿಂದೆ ಯಾವುದೋ ಕಾರಣಕ್ಕೆ ಕಾಫಿ, ಗದ್ದೆಗಾಗಿ ಯಾರು ಸರ್ಕಾರಿ ಜಮೀನನ್ನು ರೈತರು ಉಳುಮೆ ಮಾಡುತ್ತಾರೋ ಅಂಥವರು ಫಾರಂ ನಂ. 50 ಹಾಕಿಕೊಳ್ಳುವುದಕ್ಕೆ ಅವಕಾಶ ಇರಲಿಲ್ಲ. ಈಗ ನಾವು ಮತ್ತು ಲಾ ಮಿನಿಸ್ಟರು ಕುಳಿತುಕೊಂಡು ಕೊಡಗು ಹಾಸನ ಮುಂತಾಗಿ ಹೆಚ್ಚು ಕಾಫಿ ಬೆಳೆಯುವ ಕಡೆಯು ಬಹಳ ಜನ ನನ್ನ ಗಮನಕ್ಕೂ ತಂದಾಗ ಈಗಾಗಲೇ ನಾವು ತೀರ್ಮಾನ ಮಾಡಿದ್ದೇವೆ. ಚಿಕ್ಕಮಗಳೂರು ಕೊಡಗುಗಳಲ್ಲಿ ಕಾಫಿ ಬದಲು ಜೋಳ ಏನು ಬೆಳೆಯುವುದಿಲ್ಲ ಆದರೆ, ಆ ಕಾಫಿ ಡಿಲಿಟ್ ಮಾಡಿದ್ದರು. ಇದರ ಬಗ್ಗೆ ನಾನು ನಾಳೆ ಆ ಮಸೂದೆಯನ್ನು ಮಂಡಿಸುತ್ತೇನೆ. ಅಧ್ಯಕ್ಷರೇ, ಆಣೆ ಬಾಣೆ, ಕಾಫಿಲ್ಯಾಂಡನ್ನು ಯಾರ್ಯಾರು ಎನ್‌ಕ್ರೋಚ್ ಮಾಡಿದ್ದಾರೋ ಅವರಿಗಾಗಿ ನಾಳೆ ಮಂಡಿಸುತ್ತಿನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಭೂದಾಖಲೆಗಳನ್ನು ಮೈಂಟೆನ್ ಮಾಡುವ ಬಗ್ಗೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಧ್ಯಕ್ಷರೇ, ಮೇಲ್ಮನೆಯಲ್ಲಿ ನನ್ನದು ಈಗ ಪ್ರಶ್ನೋತ್ತರ ಇದೆ ತಾವು ಅನುಮತಿ ಕೊಟ್ಟರೆ ಹೋಗುತ್ತೇನೆ.

ಅಧ್ಯಕ್ಷರು : ನನ್ನದೇನಿಲ್ಲ, ಯಾರಿಗಾದರೂ ನಿಮ್ಮ ಸಹೋದ್ಯೋಗಿಗಳಿಗೆ ಜವಾಬ್ದಾರಿ ಒಪ್ಪಿಸಿ ಹೋಗಿ. ಮಾನ್ಯ ಸದಸ್ಯರು ಎಲ್ಲ ಪರಿಣತರಿದ್ದು ಮಾತನಾಡುತ್ತಿದ್ದಾರೆ ತಿಮ್ಮಪ್ಪನವರಾಗಲಿ ಬಿಜೆಪಿ ಸ್ನೇಹಿತರು ಮಾತನಾಡುವುದಾಗಲಿ ಎಲ್ಲ ಪಾಯಿಂಟ್ಸ್ ಕವರ್ ಮಾಡಿ ಉತ್ತರಕೊಡಬೇಕು ನೀವು.

ಶ್ರೀ ಜೆ. ಸಿ. ಮಾಧುಸ್ವಾಮಿ : ಈ ಭೂದಾಖಲೆಗಳ ಇಲಾಖೆಯಲ್ಲಿ ರೆಕಾರ್ಡ್ಸ್‌ನ್ನು ತಾವು ಕಂಪ್ಯೂಟರೈಸ್ ಮಾಡಬೇಕಾಗುತ್ತದೆ. ಗಣಕೀಕರಣ ಆಗದೇಹೋದರೆ ಬಹುಶಃ ರೆಕಾರ್ಡ್ಸ್ ಹುಡುಕಿಸುವುದು ಸ್ಕೆಚ್‌ಕಾಪಿ ನೀವು ತಗೊಂಡು ಬನ್ನಿ ಅನ್ನುವುದು - ಇಂಥದ್ದನ್ನು ತಾವು ಕಡಿಮೆ ಮಾಡಲಿಕ್ಕೆ ಆಗುವುದಿಲ್ಲ. ಸಚಿವರು ಆ ಬಗ್ಗೆ ಹೆಚ್ಚು ಆಸ್ಥೆವಹಿಸಬೇಕೂಂತ ಕೇಳುತ್ತೇನೆ. ಎರಡನೆಯದಾಗಿ ಜನಸಂಪರ್ಕ ಸಭೆ- ಮಾಡಬೇಕೂಂತ ಬಹುಶಃ ಮುಖ್ಯಮಂತ್ರಿಗಳು ಎಲ್ಲೋ ಭಾಷಣ ಮಾಡಿದ್ದು ನಾನು ಕೇಳಿದ್ದೇನೆ. ಇವತ್ತಿನವರೆಗೂ ಅಂತಹ ಸಭೆ ಮಾಡುವ ಕಾರ್ಯಕ್ರಮವನ್ನು ರಾಜ್ಯ ಸರ್ಕಾರವಾಗಲಿ ಜಿಲ್ಲಾ ಆಡಳಿತವಾಗಲಿ ಹಮ್ಮಿಕ್ಕೊಂಡಿದ್ದು ಕಾಣಲಿಲ್ಲ. ಈ ಜನಸಂಪರ್ಕ ಸಭೆ ಮಾಡುವುದಕ್ಕೆ ಪೂರ್ವಭಾವಿಯಾಗಿ ಯಾರಾದಾದರೂ ಸಣ್ಣಪುಟ್ಟ ಖಾತೆ ಆಗುವುದು ಪಹಣಿ ಬದಲಾಗುವುದು ಫವತಿ ಖಾತೆ ಇದ್ದರೆ

ಮಾಡೋದು ಈ ಕಾರ್ಯಕ್ರಮಗಳನ್ನು ಮುಗಿಸಿ ಏನಾದರೂ ಸ್ವಲ್ಪ ತೀಕ್ಷ್ಣ ಕಾರ್ಯಕ್ರಮಗಳನ್ನಾದರೂ ಕೈಗೊಂಡಿದ್ದರೆ ಅಧ್ಯಕ್ಷರೇ ಇವತ್ತು ಬಹಳ ಅನುಕೂಲವಾಗುತ್ತಿತ್ತು. ನಮ್ಮ ಭಾಗದಲ್ಲಿ ಏನು ಸಮಸ್ಯೆ ಆಗಿದೆ ಅಂದರೆ ಐದು ಎಕರೆವರೆಗೆ ಬಗರ್‌ಹುಕುಂ ಅವನದು ಇರೋದು ನಾವು ಕೊಡೋದು ಎರಡೂ ಸೇರಿ ಆಗಬೇಕೂಂತ ಆಗುತ್ತದೆ. ಸರ್ವೇಸಮಾನ್ಯವಾಗಿ ತಾತನ ಕಾಲದಲ್ಲಿ ಅವರಪ್ಪನ ಕಾಲದಲ್ಲಿ ಖಾತೆಗಳು ಇರುತ್ತವೆ. ಅವನಿಗೆ ಐದು ಎಕರೆ ಕೊಡುತ್ತೇವೆ ಅಂದರೆ ನಗೆಪಾಟಲಾಗುತ್ತದೆ. ಏಕೆಂದರೆ ಅವನು ಇರೋದೆ ಇಲ್ಲ, ಅವನ ಮೊಮ್ಮಗನೋ ಮುಮ್ಮಗನೋ ಇವತ್ತು ಅರ್ಜಿದಾರನಾಗಿರುತ್ತಾನೆ. ಖಾತೆ ಅವನ ಹೆಸರಲ್ಲಿ ಉಳಿದುಬಿಟ್ಟಿರುತ್ತದೆ. ನಾವೇನಾದರೂ ಇವತ್ತು ರೆಕಾರ್ಡ್ ಮಂಜೂರು ಮಾಡಬೇಕೆಂದರೆ ಅವನು ಸಫಿಷಿಯೆಂಟ್ ಹೋಲ್ಡರ್ ಇದ್ದಾನೆ ಅವನಿಗೆ ನೀವು ಕೊಡಲಿಕ್ಕೆ ಬರೋಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗುತ್ತದೆ. ಇದನ್ನೇನಾದರೂ ರೆವಿನ್ಯೂ ಇಲಾಖೆಯವರು ಅವರೇನು ಭಾಗ ಆಗಿದ್ದಾರೆ, ವಿಭಾಗ ಆಗಿದ್ದರೆ ತೋರಿಸಿಕೊಂಡು ಅದನ್ನು ಬಂದಿದ್ದರೆ ಇವತ್ತು ಅವನು ಫಲಾನುಭವಿ ಆಗಿರೋನು. ಇವತ್ತು ಆ ಸ್ಥಿತಿ ತಪ್ಪಿದೆ ಕಡ್ಡಾಯವಾಗಿ ಫವತಿ ಖಾತೆಗಳನ್ನು ಮತ್ತು ವಾರಸ್ ಖಾತೆಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಾದರೆ, ಇವೊತ್ತು, ಈ ಇಲಾಖೆಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಭಾರಿ ಹುಮ್ಮಸ್ಸಿನಲ್ಲಿ, ಒಳ್ಳೆಯ ಅಭಿಪ್ರಾಯದಲ್ಲಿ ಇಲಾಖೆಯನ್ನು ನಡೆಸುತ್ತಿದ್ದಾರೆ. ನಾವು ತಿಳಿದ ಮಟ್ಟಿಗೆ ಈ ಇಲಾಖೆ ಚೆನ್ನಾಗಿ ನಡೆಯುತ್ತಿದೆಯೆಂದು ಇಲ್ಲಿ ನಿಂತುಕೊಂಡು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರಾದ ಪಾಟೀಲ್‌ರವರು ನೀತಿಗಳ ಬಗ್ಗೆ ಮತ್ತು ಮುಂದೆ ಮಾಡಬಹುದಾದ ಕಾರ್ಯಕ್ರಮಗಳ ಬಗ್ಗೆ ಈಗಾಗಲೇ ಮಾತನಾಡಿದ್ದಾರೆ. ನಾನು ಈ ವ್ಯವಸ್ಥೆ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ತಾಲ್ಲೂಕು ಪಂಚಾಯಿತಿ ಸಮಿತಿಗಳ ಬಗ್ಗೆ ಮೊದಲು ಹೇಳಬಯಸುತ್ತೇನೆ. ನೀವು ಇವೊತ್ತಿನವರೆವಿಗೂ ಬಿ.ಡಿ.ಓ. ಅಧಿಕಾರ ಏನು ? ಇ.ಓ. ಅಧಿಕಾರವೇನೆಂದು ಸ್ಪಷ್ಟಪಡಿಸಲಿಲ್ಲ. ಮೊದಲು ಇ.ಓ. ಅವರಿಗಿದ್ದ ಅಧಿಕಾರವನ್ನು ತೆಗೆದಿರಿ. ಯಾರದೋ ಒತ್ತಡಕ್ಕೆ ಮಣಿದು ಬಿ.ಡಿ.ಓ.ಗೆ ಅಧಿಕಾರ ಕೊಟ್ಟಿರಿ. ಬಿ.ಡಿ.ಓ.ಗೆ ನೀನು ಮನೆಗಳ ರಿಪೇರಿ ಮಾಡಿಸಿಕೊಂಡಿರು, ಜೀಪ್ ಬೇಕಾದರೆ ತಾಲ್ಲೂಕು ಪಂಚಾಯಿತಿ ಸಮಿತಿಯಿಂದ ಪಡೆದುಕೊಳ್ಳಬೇಕೆಂದು ಮಾಡಿದ್ದೀರಿ. ಆದರೆ, ಇ.ಓ. ಮಾತ್ರ ಎಲ್ಲಾ ಇಲಾಖೆಗಳಿಗೂ ಕೋ-ಆರ್ಡಿನೇಟ್ ಮಾಡುವುದಕ್ಕೆ ಇರುವ ಅಧಿಕಾರಿ ಎಂದು ಅವರು ಭಾವಿಸಿ ಕೊಳ್ಳಲಿಲ್ಲ. ಈ ಇಬ್ಬರು ಅಧಿಕಾರಿಗಳಿಂದ ಮನೆ ಕಟ್ಟುವುದರಲ್ಲಿ, ರಸ್ತೆ ಮಾಡುವುದರಲ್ಲಿ ಎರಡು ಪರ್ಸೆಂಟ್ ಜಾಸ್ತಿ ಕಮೀಷನ್ ತೆಗೆದುಕೊಳ್ಳುತ್ತಿರುವುದನ್ನು ಬಿಟ್ಟರೆ ಜನರಿಗೆ ಏನೂ ಪ್ರಯೋಜನವಾಗಲಿಲ್ಲ. ಈ ಮೊದಲು ಬಿ.ಡಿ.ಓ. ಮಾತ್ರ ಪರ್ಸೆಂಟೇಜ್ ತೆಗೆದುಕೊಳ್ಳುತ್ತಿದ್ದ. ಈಗ ಈತನ ಜೊತೆ ಇ.ಓ. ಸಹ ಪರ್ಸೆಂಟೇಜನ್ನು ತೆಗೆದುಕೊಳ್ಳುತ್ತಿದ್ದಾನೆ. ಆದುದರಿಂದ, ತಾವು ಇದರ ಬಗ್ಗೆ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬೇಕು ಇ.ಓ. ಅಥವಾ ಬಿ.ಡಿ.ಓ. ಈ ಇಬ್ಬರಲ್ಲಿ ಯಾರಾದರೂ ಒಬ್ಬರನ್ನೂ ಇಟ್ಟುಕೊಳ್ಳಿ, ಇದನ್ನು ತಮ್ಮ ಪರಿಮಿತಿಗೆ ಬಿಡುತ್ತೇನೆ. ಅಲ್ಲದೆ, ಇವರಿಬ್ಬರು ಅಧಿಕಾರಿಗಳ ಮಧ್ಯೆ ಆಗಿಂದಾಗ್ಗೆ ಸಂಘರ್ಷ ಕೂಡ ಆಗುತ್ತಿದ್ದು, ಕಛೇರಿಗಳಲ್ಲಿ ಕೆಲಸ ಮಾಡಲು ಕಷ್ಟವಾಗುವ ಸ್ಥಿತಿ ನಿರ್ಮಾಣವಾಗಿದೆ. ಒಂದು ಬಿ.ಡಿ.ಓ. ಆಫೀಸಿಗೆ ಇಬ್ಬರು ಅಥವಾ ಮೂವರು

ಇಂಜಿನಿಯರುಗಳನ್ನು ತಾವು ಇಟ್ಟಿದ್ದೀರಿ. ಇವರ ಕೆಲಸವೇನೆಂದರೆ, ಮನೆ ಕಟ್ಟುವುದು, ರಿಪೇರಿ ಮಾಡುವುದು ಮತ್ತು ಶಾಲಾ ಕಟ್ಟಡಗಳನ್ನು ಕಟ್ಟುವುದೆಂದು ತಾವು ಭಾವಿಸಿದ್ದೀರಿ. ಆದರೆ, ವಾಸ್ತವವಾಗಿ ಹಾಗಾಗುತ್ತಿಲ್ಲ. ಬಿ.ಡಿ.ಓ. ಆಫೀಸಿನಲ್ಲಿರುವ ಇಂಜಿನಿಯರುಗಳನ್ನು ಜಿಲ್ಲಾ ಪಂಚಾಯತ್ ಆಫೀಸಿಗೆ ಕೊಟ್ಟು ಒಬ್ಬ ಎ.ಇ.ಇ. ಯವರ ನಿಯಂತ್ರಣದಲ್ಲೇ ಎಲ್ಲಾ ಕೆಲಸ ಮಾಡುವಂತೆ ಒಬ್ಬನಿಗೆ ಒಂದು ಅಥವಾ ಎರಡು ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಆ ಪಂಚಾಯಿತಿಗೆ ಆತನೇ ಚೀಫ್ ಇಂಜಿನಿಯರ್ ಆಗಿ ಇರಲಿ ಎನ್ನುವ ಬಗ್ಗೆ ಒಂದು ನಿರ್ಣಯ ಮಾಡಿ ಕೇಳಿಕೊಂಡಿದ್ದೇವೆ. ಈ ಸ್ಥಿತಿಯನ್ನು ತಾವೇಕೆ ನಿರ್ಮಾಣ ಮಾಡಬಾರದು? ಒಂದೇ ಜಿಲ್ಲಾ ಪಂಚಾಯತ್ ಆಡಳಿತದ ಕೆಳಗೆ ಜಿಲ್ಲಾ ಪಂಚಾಯತ್ ಆಫೀಸಿನಲ್ಲಿ 5-6 ಜನ ಇಂಜಿನಿಯರ್ಸ್ ಇರುತ್ತಾರೆ. ಇಲ್ಲಿಗೆ ಬಿ.ಡಿ.ಓ. ಆಫೀಸಿನ ಮೂರು ಜನ ಇಂಜಿನಿಯರ್‌ಗಳನ್ನು ಹಾಕಿ ಒಟ್ಟು ಎಂಟು ಜನರನ್ನು ಒಂದು ಕಡೆ ಇಟ್ಟು ಆ ತಾಲ್ಲೂಕಿನಲ್ಲಿ ಏನೇನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆಯೋ ಅದನ್ನೆಲ್ಲಾ ಅವರಿಗೆ ವಹಿಸಿ, ಎಲ್ಲಾ ಕೆಲಸವನ್ನೂ ಆತನೇ ಮಾಡುವಂತಾಗಬೇಕು. ಉದಾಹರಣೆಗೆ, ಮನೆಯನ್ನು ಆತನೇ ಕಟ್ಟಲಿ, ನೀರನ್ನೂ ಅತನೇ ನೋಡಿಕೊಳ್ಳಲಿ, ರಸ್ತೆ, ಸಾರಿಗೆಯನ್ನು ಆತನೇ ನೋಡಿಕೊಳ್ಳಲಿ. ಹೀಗೆ ಇವೊತ್ತು ನೀವು ಅವರುಗಳಿಗೆ ಜವಾಬ್ದಾರಿ ಹೊರಿಸದೆ ಹೋದರೆ ಇಂಜಿನಿಯರುಗಳಿಂದ ಕೆಲಸ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇ.ಎ.ಎಸ್. ಕಮಿಟಿ ಇರುತ್ತದೆಂದು ತಾವು ಹೇಳಿದಿರಿ. ಆದರೆ, ಇ.ಎ.ಎಸ್. ಕಮಿಟಿಯ ಶಿಫಾರಸ್ಸನ್ನು ಕೇಳುವುದಿಲ್ಲ. ಇಲ್ಲೊಂದು ಪ್ರಮುಖ ವಿಷಯವನ್ನು ಮಾನ್ಯ ಸದಸ್ಯರಾದ ಡಿ.ಆರ್. ಪಾಟೀಲ್‌ರವರು ಕೇಳಿದರು. ಇದೆಲ್ಲವೂ ಕಂಟ್ರಾಕ್ಟರ್ ಮೂಲಕವೇ ನಡೆಯುವುದು. ನಮಗೆ ಬೇಕಿರಲಿ, ಬೇಡದಿರಲಿ ಯಾವ ಇಂಜಿನಿಯರ್‌ಗಳು ಸಹ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸಕ್ಕೆ ಆಳುಗಳನ್ನು ಕರೆದುಕೊಂಡು ಬರುವವರಿಲ್ಲ. ಯಾರೋ ಒಬ್ಬ ಕಂಟ್ರಾಕ್ಟರ್ ಆಳುಗಳನ್ನು ಇಟ್ಟುಕೊಂಡು ಯಾವುದೋ ಬಿಲ್ ಮಾಡಿ ಹಣ ಪಡೆಯುತ್ತಾನೆ, ಇನ್ನಷ್ಟನ್ನು ಇಂಜಿನಿಯರ್ ತನ್ನ ಜೇಬಿನಲ್ಲಿಟ್ಟುಕೊಂಡು ಹೋಗುತ್ತಾನೆ. ಎಲ್ಲಾದರೂ ಒಂದು ಕಡೆ ಕಂಟ್ರಾಕ್ಟರ್‌ದಾರರು ಎಂದು ನಮಗೆ ಸಿಗುತ್ತಾರೆಯೇ? ಇಲ್ಲ. ಏಕೆಂದರೆ, ನೀವು ಹೇಳುತ್ತೀರಿ, ಇದು ಎನ್.ಆರ್.ಕೆಲಸ ಇಲ್ಲಿ ಕಂಟ್ರಾಕ್ಟರನ್ನು ಎಂಪ್ಲಾಯ್ ಮಾಡುವಂತಿಲ್ಲವೆಂದು. ಈ ಎಲ್ಲಾ ವಾಸ್ತವಾಂಶಗಳನ್ನು ಜೀರ್ಣಿಸಿಕೊಳ್ಳುವ ಕಾಲಕ್ಕೆ ಬಂದಿದ್ದೇವೆ. ಆದಕಾರಣ ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಚ್ಛಿಪಡುವುದೇನೆಂದರೆ, ಕಂಟ್ರಾಕ್ಟ್ ಮಾಡುತ್ತಿದ್ದಾರೆಂದರೆ ಲೋಕಲ್ ಕಂಟ್ರಾಕ್ಟರ್‌ದಾರರನ್ನು ಕರೆದು ನಿಬಂಧನೆ ಏನೇನಿದೆಯೋ ಅದನ್ನೆಲ್ಲಾ ಟೆಂಡರ್‌ನಲ್ಲಿ ಪ್ರಿಸ್ಕ್ರೈಬ್ ಮಾಡುವುದು, ನಂತರ ಆಯ್ಕೆಯಾದ ಕಂಟ್ರಾಕ್ಟರ್‌ದಾರರಿಂದ ಒಂದು ಅಗ್ರಿಮೆಂಟ್ ಮಾಡಿಸಿಕೊಂಡು ಕೆಲಸ ಮಾಡಿಸುವುದಕ್ಕೆ ಏನು ತೊಂದರೆ? ನಾನು ಏಕೆ ಈ ಮಾತನ್ನು ಕೇಳುತ್ತಿದ್ದೇನೆಂದರೆ, ಚಿಕ್ಕನಾಯಕನಹಳ್ಳಿಗೆ ಸಂಬಂಧಿಸಿದಂತೆ, ಇ.ಎ.ಎಸ್. ಲಿಸ್ಟ್‌ನಲ್ಲೋ, ಜೆ.ಆರ್.ವೈ. ಲಿಸ್ಟ್‌ನಲ್ಲೋ ಇಂಜಿನಿಯರ್ಸ್ ಏನಾದರೂ ಜಿಲ್ಲಾ ಪಂಚಾಯತ್ ಮೆಂಬರ್ ಹೇಳಿದವರಿಗೆ ಕೊಟ್ಟು ಆ ಕೆಲಸ ಬದಲಾವಣೆ ಮಾಡಿದರೆ ಕೆಲಸದ ಸ್ಥಿತಿ ಏನಾಗಬೇಕು? ಇವೊತ್ತು ತಾವು ಜಿಲ್ಲಾ ಪರಿಷತ್ತುಗಳಿಂದ ಮಾಹಿತಿಗಳನ್ನು ತರಿಸಿ ನೋಡಿ. ಒಂದೊಂದು ಕಡೆ 2-3-4 ಸ್ಥಳಗಳು ಬದಲಾಗಿರುತ್ತವೆ. ಅಲ್ಲಿ ತಾಂತ್ರಿಕವಾಗಿ ಕೆಲಸ ಮಾಡಲಾರದ, ಅಗತ್ಯವಿಲ್ಲವೆನ್ನುವ ಸ್ಥಿತಿಗೆ ಬಂದು ನಮ್ಮ ಅಧಿಕಾರಿಗಳು

ಇದರ ಅಗತ್ಯವಿಲ್ಲವೆಂದು ಕೆಲಸವನ್ನು ಬದಲಾವಣೆ ಮಾಡಿದರೆ ನಾನು ತಕರಾರು ಮಾಡುವಂತಿಲ್ಲ. ಒಂದು ಕಡೆ ರಾಜಕಾರಣಿಗಳಾದ ನಾವುಗಳು ನಾನು ಹೇಳಿದವನಿಗೆ ಕಂಟ್ರಾಕ್ಟ್‌ಗೆ ಸಿಗಲಿಲ್ಲ ಅವರಿಗೆ ಅನುಕೂಲವಾಗಲಿಲ್ಲ.' ಎಂದು ತಿಳಿದು ಸಂಬಂಧಿಸಿದ ಅಧಿಕಾರಿಗೆ ಕಾಟ ಕೊಟ್ಟು ಕೆಲಸವನ್ನು ಬೇರೆ ಭಾಗಕ್ಕೆ ಶಿಫ್ಟ್ ಮಾಡಿಸುವುದು. ಆದರೆ, ಅಲ್ಲಿ ಯಾರೋ ಕೆಲಸ ಶುರು ಮಾಡಿರುತ್ತಾರೆ, ಈ ಕೆಲಸವೂ ಅಲ್ಲಿಗೆ ಶಿಫ್ಟ್ ಮಾಡದಿದ್ದರೆ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಕುಳಿತುಕೊಂಡು 'ನಾನು ಶಿಫ್‌ಗೆ ಕೊಟ್ಟರೆ ಏಕೆ ಮಾಡುವುದಿಲ್ಲವೆಂದು ಜಗಳವಾಡುವುದು. ಈ ದಿಸೆಯಲ್ಲಿ ಸರ್ಕಾರದವರಾದ ತಾವು ಒಂದನ್ನು ಕಡ್ಡಾಯ ಮಾಡಬೇಕಾಗಿದೆ. ಯಾವ ಸದಸ್ಯ ಇಂಥ ಕಡೆ ಕೆಲಸವಾಗಬೇಕೆಂದು ಬರೆದು ಕೊಟ್ಟಿರುತ್ತಾನೋ, ಆ ಕೆಲಸವನ್ನು ಯಾವುದೇ ಕಾರಣಕ್ಕೂ ಬದಲಾಯಿಸುವುದಕ್ಕೆ ತಾವು ಕಾನೂನಿನ ಕೆಳಗೆ ಅವಕಾಶ ಕೊಡಬಾರದು. ಕಂಟ್ರಾಕ್ಟ್ ಮಾಡುವ ಯಾರಾದರೂ ಸದಸ್ಯರಿದ್ದರೆ ಅವರನ್ನು ನಾವು ಡಿಸ್‌ಕ್ವಾಲಿಫೈ ಮಾಡುತ್ತೇವೆಂದು ತಾವು ನಿನ್ನೆ ಮಾತನಾಡಿದ್ದೀರಿ. ತಮಗೆ ಆತ ಕಂಟ್ರಾಕ್ಟ್ ಮಾಡುತ್ತಾನೆಂದು ಏನು ಆಧಾರ ಸಿಗುತ್ತದೆ? ಯಾವಾಗ ನೀವು ಟೆಂಡರ್ ಕರೆಯುವುದಿಲ್ಲವೋ ಆಗ ಲೈಸೆನ್ಸ್ ಇರುವ ಕಂಟ್ರಾಕ್ಟ್‌ದಾರ ಬಂದು ಅರ್ಜಿ ಹಾಕುತ್ತಾನೆ. ನೀವು ಬಿಡ್ ಮಾಡಿ ಎಂದು ಅವರಿಗೆ ಹೇಳುವುದಿಲ್ಲ. ಜೊತೆಗೆ ಯಾವ ಅಗ್ರಿಮೆಂಟನ್ನೂ ನೀವು ಅವರೊಂದಿಗೆ ಮಾಡಿಕೊಳ್ಳುವುದಿಲ್ಲ. ಈತ ಕಂಟ್ರಾಕ್ಟ್ ಮಾಡುತ್ತಿದ್ದಾನೆಂದು ಯಾರೂ ಪ್ರೂವ್ ಮಾಡುವುದಕ್ಕಾಗುವುದಿಲ್ಲ. ಕಂಟ್ರಾಕ್ಟ್ ಮಾಡುವ ಸದಸ್ಯರನ್ನು ಡಿಸ್‌ಕ್ವಾಲಿಫೈ ಮಾಡುತ್ತೇವೆಂದು ನಾವೇ ನೀತಿಯಲ್ಲಿ ಹೇಳಿ ಮತ್ತು ಆ ವ್ಯವಸ್ಥೆ ಕೆಳಗೆ ಅವರು ಇರಬಾರದೆಂದು ಹೇಳುವ ನಾವು ಮೊದಲು ವ್ಯವಸ್ಥೆಯನ್ನು ಸರಿಪಡಿಸಬೇಕು. ಇವೊತ್ತು ನೀವು ತಿಳಿದಕೊಂಡಂತೆ 99 ಭಾಗದ ತಾಲ್ಲೂಕು ಪಂಚಾಯತಿ ಸಮಿತಿ ಸದಸ್ಯರಾಗಲೀ, ಜಿಲ್ಲಾ ಪಂಚಾಯತ್ ಸದಸ್ಯರಾಗಲೀ ಕಂಟ್ರಾಕ್ಟ್ ಮಾಡುವುದು ಅಥವಾ ಕಂಟ್ರಾಕ್ಟರ್‌ದಾರರಿಗೆ ಹೇಳುವಂಥ ಸ್ಥಿತಿ ಈ ರಾಜ್ಯದಲ್ಲಿಲ್ಲ. ಅವರು ಏನು ಮಾಡುತ್ತಿದ್ದಾರೆಂದರೆ, ಇಂತಹವರಿಗೆ ಕಂಟ್ರಾಕ್ಟ್ ಕೊಡಿ ಎಂದು ಹೇಳಿ ಕೊಡಿಸುತ್ತಿದ್ದಾರೆ. ಇದರಿಂದಾಗಿ ಯಾವ ಇಂಜಿನಿಯರ್ ಇವೊತ್ತು ಕೊಟೇಶನ್ ಅನ್ನು ಇನ್‌ಸಿಸ್ಟ್ ಮಾಡುವುದಕ್ಕಾಗುತ್ತದೆ? ಶಾಸಕರಾದ ನಾವು ಯಾರಾದರೂ ಹೋಗಿ ಆ ಕೆಲಸವನ್ನು ಚೆಕ್ ಮಾಡೋಣವೆಂದರೆ ಇವೊತ್ತು ಪರಿಸ್ಥಿತಿ ನಮಗೆ ಚೆನ್ನಾಗಿಲ್ಲ. ಯಾರದೋ ಮೆಂಬರ್ ವರ್ಕ್, ಎಂ.ಪಿ. ವರ್ಕ್, ತಾಲ್ಲೂಕು ಸಮಿತಿಯವರ ವರ್ಕ್, ಶಾಸಕರ ವರ್ಕ್ ಎಂದು ವಿಂಗಡಿಸುವ ಸ್ಥಿತಿ ಇವೊತ್ತು ಜಿಲ್ಲೆಯಲ್ಲಿ ನಿರ್ಮಾಣವಾಗಿದೆ. ಇದರ ಜೊತೆಗೆ ಭಾರತ ಸರ್ಕಾರ ಪಾರ್ಲಿಮೆಂಟ್ ಸದಸ್ಯರಿಗೆ ತಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಒಂದು ಕೋಟಿ ರೂಪಾಯಿಕೊಟ್ಟಿದೆ. ಇದು ಖಂಡಿತವಾಗಿಯೂ ಯೋಜನೆ ಹಣವಾಗಿದ್ದು, ಎಕ್ಸ್‌ಟ್ರಾ ಗ್ರಾಂಟ್ ಜಿಲ್ಲೆಗೆ ಬಂದಿದೆಯೆಂದು ನಾನು ತಿಳಿದುಕೊಂಡಿಲ್ಲ. ಅವರು ಇಷ್ಟ ಬಂದಷ್ಟು ಬರೆದು ಕೊಡಬಹುದು. ನಾನು ಇದರ ಬಗ್ಗೆ ಟೀಕೆ ಮಾಡುತ್ತಿಲ್ಲ. ಕುಡಿಯುವ ನೀರಿಗೆ ತೊಂದರೆಯಾಗಿರುವುದರಿಂದ ಹಣ ಕೊಡಿ ಎಂದರೆ ಅವರ ಆಧ್ಯತಾ ಪಟ್ಟಿಯಲ್ಲಿ ಅದು ಬರುವುದಿಲ್ಲ. ಹಾಗಾದರೆ ಎಂ.ಪಿ.ಗಳಿಗೆ ಕೊಡುತ್ತಿರುವಂತೆ ಎಂ.ಎಲ್.ಎ.ಗಳಿಗೂ 10-15 ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಡಿ. ಇದರ ಜೊತೆಗೆ ಎಂ.ಪಿ.ಗಳು ಇ.ಎ.ಎಸ್. ಪಟ್ಟಿ ಮತ್ತು ಜೆ.ಆರ್.ವೈ. ಪಟ್ಟಿಯಲ್ಲೂ ತಮ್ಮ ಕೋಟಾ ತೆಗೆದುಕೊಳ್ಳುವುದಾಗಿ

ಹೇಳುತ್ತಾರೆ. ಒಂದು ಕೋಟಿ ರೂಪಾಯಿಯನ್ನು ಎಂಟು ಅಸೆಂಬ್ಲಿ ಅಥವಾ ಪಾರ್ಲಿಮೆಂಟರಿ ಕ್ಷೇತ್ರಗಳಿಗೆ 12-13 ಲಕ್ಷ ರೂಪಾಯಿಗಳಂತೆ ಕುಡಿಯುವ ನೀರಿಗೆ, ರಸ್ತೆ ರಿಪೇರಿ, ನಿರ್ಮಾಣಕ್ಕೆ ಹಂಚಿದ್ದರೆ ನಮಗೆ ಇವೊತ್ತು ಚೆನ್ನಾಗಿ ಉಸಿರಾಡುವಂಥ ಪರಿಸ್ಥಿತಿ ಇರುತ್ತಿತ್ತು. ಆದರೆ, ಹಾಗಾಗಿಲ್ಲ. ನಾನು ಸಮುದಾಯ ಭವನ ಕಟ್ಟಿಸುತ್ತೇನೆಂದು, ಒಬ್ಬರು ಹೇಳಿದರೆ ನಾನು ಬರೀ ಮನೆಗಳನ್ನು ಕಟ್ಟಿಸುತ್ತೇನೆಂದು ಇನ್ನೊಬ್ಬರು ಹೇಳುತ್ತಾರೆ. ಹಾಗಾದರೆ, ನಿಮ್ಮ ಪ್ಲಾನ್ ಪ್ರೋಸೆಸ್ ಏನಾಯಿತು? ನೀವು 60-70 ಕೋಟಿ ರೂಪಾಯಿಗಳಷ್ಟು ಹಣ ಏನು ನಿಗದಿ ಮಾಡಿದ್ದೀರಿ, ಒಂದೊಂದು ಜಿಲ್ಲೆಯಲ್ಲೂ ಈ ತರಹ 3-4 ಕೋಟಿ ರೂಪಾಯಿಗಳಷ್ಟು ಹಣ ವ್ಯಯ ಮಾಡುತ್ತಾ ಹೋದರೆ ಒಂದು ಕಡೆ ನಮಗೆ ಕೆಲಸ ಮಾಡುವುದಕ್ಕೆ ದುಡ್ಡಿಲ್ಲದೆ ಇನ್ನೊಂದು ಕಡೆ ನಮಗೆ ಅನಗತ್ಯವೆನ್ನುವಂಥ ಕೆಲಸಗಳು ಅವರ ಪ್ರೈಯಾರಿಟಿ ಲಿಸ್ಟ್‌ಗೆ ಬರುತ್ತವೆ. ಇದಕ್ಕೆ ತಾವು ಏನಾದರೊಂದು ನಿಬಂಧನೆ ಹಾಕಬೇಕು. ಪಾರ್ಲಿಮೆಂಟ್ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಿಸುವುದಕ್ಕೆ ನಮ್ಮದೇನೂ ತಕರಾರಿಲ್ಲ. ಆದರೆ, ಅದರ ಫ್ರೇಮ್ ವರ್ಕ್‌ನೊಳಗೆ, ಸ್ಟ್ರಕ್ಚರ್‌ನೊಳಗೆ ಹಣವನ್ನು ಇಂತಿಂಥ ಕಾಮಗಾರಿಗಳಿಗೆ ಬಳಸುತ್ತೇವೆಂದು ಹೇಳುವುದರಲ್ಲಿ ತಪ್ಪೇನಿದೆ? ನಾನು ದೇವಸ್ಥಾನ ಕಟ್ಟಿಸುತ್ತೇನೆ, ಸಮುದಾಯ ಭವನ ಕಟ್ಟಿಸುತ್ತೇನೆ, ಕಲ್ಯಾಣಿ ಕಟ್ಟಿಸುತ್ತೇನೆಂದು ಹೇಳಿಕೊಂಡು ಏನು ಬೇಕಾದರೂ ಕಟ್ಟಿಸುತ್ತೇವೆಂದರೆ ಜಿಲ್ಲಾ ಪಂಚಾಯತ್‌ಗೆ ಬರುವ ದುಡ್ಡು ಅಥವಾ ಜಿಲ್ಲೆಗೆ ಬರುವ ದುಡ್ಡನ್ನು ಈ ರೀತಿ ಡೈವರ್ಟ್ ಮಾಡುತ್ತಾ ಹೋದರೆ ಈ ದೇಶದಲ್ಲಿ ಯಾವುದಾದರೂ ಯೋಜನೆ ಅನುಷ್ಠಾನವಾಗುತ್ತದೆಯೇ? ತಾವು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಬೇಕಾದರೆ, ಸೀಮಿತವಾದ ಪ್ರೋಗ್ರಾಂನೊಳಗೆ ಅವರು ಪ್ರೈಯಾರಿಟಿ ಕೊಡಲಿ. ಮೊದಲು ಅವರ ಆದ್ಯತಾ ಪಟ್ಟಿಯನ್ನು ಕೊಡಲಿ, ನಂತರ ತಾವು ಇದರ ಬಗ್ಗೆ ಏನಾದರೊಂದು ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ಬಸವರಾಜು : ಸಾಮಾನ್ಯವಾಗಿ ಜಿಲ್ಲಾ ಪಂಚಾಯತ್‌ನಲ್ಲಿರುವ ಇಂಜಿನಿಯರ್‌ಗಳು ಗುಣ ನಿಯಂತ್ರಣದ ವಿಚಾರದಲ್ಲಿ ಸರ್ಟಿಫೈ ಮಾಡಿದ ನಂತರ ಹಣವನ್ನು ಬಿಡುಗಡೆ ಮಾಡುತ್ತಿದ್ದಾರೆ. ಆದರೆ, ಈಗ ಅದರ ಬಗ್ಗೆ ಸರ್ಟಿಫೈ ಮಾಡುವವರು ಯಾರೂ ಇಲ್ಲ. ಆದುದರಿಂದ, ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಗುಣ ನಿಯಂತ್ರಣಕ್ಕೆ ಆದ್ಯತೆ ಕೊಡಬೇಕು. ಏಕೆಂದರೆ, ಮೇಲುಸ್ತುವಾರಿವಹಿಸುವಂಥ ಒಂದು ಜವಾಬ್ದಾರಿಯನ್ನು ನೀವು ಎಲ್ಲಿಯವರೆಗೆ ಅಭಿಯಂತರರಿಗೆ ಕೊಡುವುದಿಲ್ಲವೋ ಅಲ್ಲಯವರೆಗೆ ಅವರಿಗೆ ತಮ್ಮ ಜವಾಬ್ದಾರಿಯ ಅರಿವು ಇರುವುದಿಲ್ಲ. ಅವರು ಗುಣ ನಿಯಂತ್ರಣ ಮಾಡುವುದರಲ್ಲೂ ಕೂಡ ತಮ್ಮ ಅಸಮರ್ಥತೆಯನ್ನು ವ್ಯಯಕ್ತಪಡಿಸುತ್ತಿದ್ದಾರೆ. ಆದುದರಿಂದ, ಗುಣ ನಿಯಂತ್ರಣ ತರುವಂಥ ವ್ಯವಸ್ಥೆ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಇನ್ನು ಸ್ಯಾನಿಟರಿ ಪ್ರೋಗ್ರಾಂ ಬಗ್ಗೆ ಹೇಳುವುದಾದರೆ ತಾವು ಒಂದು ಎನ್‌ಕ್ವೈರಿ ನಡೆಸಬೇಕು. ನಿಮಗೆ ಹೇಳುವುದಾದರೆ ಕಳೆದ ವರ್ಷ ಮತ್ತು ಅದರ ಹಿಂದಿನ ವರ್ಷ ಗ್ರಾಮೀಣ ಪ್ರದೇಶಗಳಲ್ಲಿ ನಾವು ಏನು ಟಾಯ್ಲೆಟ್-ಲೆಟ್ರಿನ್ಸ್ ನಿರ್ಮಾಣ ಮಾಡಿದ್ದೇವೆಂದು ಹೇಳುತ್ತೇವೆ, ಅದರ ಕೆಲಸ ಶೇಕಡ ಮೂವತ್ತರಷ್ಟು ಕೂಡ ನಡೆದಿಲ್ಲ. ಸದರಿ ಉದ್ದೇಶಕ್ಕಾಗಿ ಫಲಾನುಭವಿಗಳಿಗೆ

ಕೊಡುವ ರೂ.1,600ಗಳನ್ನು ಪಂಚಾಯಿತಿಯಲ್ಲಿ ಹುಳಿತುಕೊಂಡು ಇಷ್ಟ ಬಂದವರಿಗೆ ಬರೆದು ಯಾರದ್ದೋ ಮನೆಯಲ್ಲಿರುವ ಲೆಟ್ರಿನ್ ತೋರಿಸಿ ಕಟ್ಟಿಸಿದ್ದೇವೆಂದು ಹೇಳಿದ್ದಾರೆ. ಇಲ್ಲದಿದ್ದರೆ, ಲೆಟ್ರಿನ್‌ಗಳನ್ನು ನಿರ್ಮಿಸಲಾಗಿದೆಯೆಂದು ಬಿಲ್ ತೋರಿಸುತ್ತಾರೆ. ಇದರ ಬಗ್ಗೆ ಕೆ.ಡಿ.ಪಿ ಮೀಟಿಂಗ್‌ನಲ್ಲೂ ಚರ್ಚೆಯಾಗಿ ರೆಕಾರ್ಡ್ ಸಹ ಆಗಿದೆ. ಈ ಕುರಿತು ನಾನು ಆ ಸಮಯದಲ್ಲಿ ಬಿಲ್ ಬಗ್ಗೆ ಇಂಜಿನಿಯರ್ ಅವರಿಂದ ಬಾಯಿ ಬಿಡಿಸಿದಾಗ ಹೇಳಿರುತ್ತಾರೆ.

3.10 ಪಿ.ಎಂ.

ನಾವು ಫಾಲ್ಸ್ ಬಿಲ್ಲನ್ನು ಕೊಟ್ಟಿದ್ದೇವೆ, ಅದು ನಮಗೆ ಅನಿವಾರ್ಯ, ನಮಗೆ ಕೆಲಸ ಮಾಡಲು ಆಗುತ್ತಿಲ್ಲವೆಂದು ಒಂದು ಸಭೆಯಲ್ಲಿ ಇಂಜಿನಿಯರ್ಸ್‌ಗಳೇ ಬಾಯಿ ಬಿಟ್ಟು ಹೇಳಿದ್ದಾರೆ. 1600 ರೂಪಾಯಿಗಳಲ್ಲಿ ಇವತ್ತು ಏನನ್ನು ಕಟ್ಟುವುದಕ್ಕಾಗುವುದಿಲ್ಲ. ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಸರ್ಕಾರ ಹಣ ಕೊಡುತ್ತಿದೆ ಅಲ್ಲಿ ಕೆಲಸ ಮಾಡುತ್ತಿದ್ದಾರೆಂದರೆ ಸರಿ. ಆದರೆ ತಾವು ತಂದಿರುವ ಯೋಜನೆಯು 50 ಪರ್ಸೆಂಟ್‌ನಷ್ಟಾದರೂ ಅನುಷ್ಠಾನಕ್ಕೆ ತಂದ್ದಿದ್ದರೆ ರಾಜ್ಯದ ಅಭಿವೃದ್ಧಿ ಹೇಗೆ ಆಗಬೇಕು? ಜಿಲ್ಲೆಗಳ ಅಭಿವೃದ್ಧಿ ಹೇಗೆ ಆಗಬೇಕು? ತಾವು ಇದರ ಬಗ್ಗೆ ಪರಿಶೀಲನೆ ಮಾಡಬೇಕು. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೇಳುವುದಾದರೆ, ಇದೊಂದು ಬಾರಿ ಯೋಜನ. ಇದರಲ್ಲಿ ರಾಷ್ಟ್ರೀಯ ಮತ್ತು ರಾಜ್ಯದ ಯೋಜನೆಗಳೆರಡೂ ಬರುತ್ತದೆ. ಮಾನ್ಯ ಏಆರ್‌ಡಬ್ಲ್ಯೂಎಸ್ ಮತ್ತು ಎನ್‌ಆರ್‌ಡಬ್ಲ್ಯೂಎಸ್ ಕಾರ್ಯಕ್ರಮದ ಬಗ್ಗೆ ರಿವ್ಯೂ ಮಾಡಬೇಕು. ಯಾವುದೇ ಜಿಲ್ಲೆಯಲ್ಲಿ ಈ ಕಾರ್ಯಕ್ರಮಕ್ಕೆ ಆದ್ಯತೆ ಕೊಡುತ್ತಿಲ್ಲ. ಯಾವುದೇ ಜಿಲ್ಲೆಯಲ್ಲಿ ಟ್ಯಾಂಕ್ ಕಟ್ಟಿ ನೀರು ಕೊಡುವ ಕಾರ್ಯಕ್ರಮಕ್ಕೆ ಇಂಜಿನಿಯರ್‌ಗಳು ಆದ್ಯತೆಯನ್ನು ಕೊಡುತ್ತಿಲ್ಲ. ಕಾರಣವೇನೆಂದರೆ ಕಾಂಟ್ರಾಕ್ಟರ್‌ಗಳು ಪರ್ಸೆಂಟೇಜ್ ಕೊಟ್ಟು ಟ್ಯಾಂಕ್ ಕಟ್ಟಲ್ಲಿಕ್ಕೆ ಬರಲು ತಯಾರಿಲ್ಲ. ಈ ಸ್ಕೀಮ್‌ನಲ್ಲಿ ಒಂದು ಸಾವಿರಕ್ಕಿಂತ ಮೇಲ್ಪಟ್ಟು ಜನಸಂಖ್ಯೆ ಇರುವಲ್ಲಿ ನೀರು ಕೊಡಬೇಕಾಗಿತ್ತು. ಆದರೆ ಒಂದೊಂದು ಯೋಜನೆಗೆ 8-10 ವರ್ಷ ತೆಗೆದುಕೊಳ್ಳುತ್ತಿದ್ದಾರೆ. ಒಂದು ಊರಿನಲ್ಲಿ ಎನ್‌ಆರ್‌ಡಬ್ಲ್ಯೂಎಸ್ ಮತ್ತು ಓವರ್‌ಹೆಡ್ ಟ್ಯಾಂಕ್ ಸ್ಕೀಮ್ ಎರಡೂ ಸ್ಕೀಮ್‌ಗಳು ಸ್ಯಾಂಕ್ಷನ್ ಆಗುತ್ತದೆ. ಆ ಸ್ಕೀಮನ್ನು ಮುಗಿಸಲು ಎಷ್ಟು ವರ್ಷ ಬೇಕು? ಇದಕ್ಕೆ ಹಣವಿಲ್ಲವೆಂದು ಹೇಳುವಂತಯೇ ಇಲ್ಲ. ಕುಡಿಯುವ ನೀರಿನ ಯೋಜನೆಗಳಿಗೆ ಇವತ್ತು ಹೇರಳವಾಗಿ ಹಣ ಬಂದಿದೆ. ತುಮಕೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ, ನಾನು ಮತ್ತು ಮಾನ್ಯ ನಾರಯಣ್‌ರವರು ಏಆರ್‌ಡಬ್ಲ್ಯೂಎಸ್ ಮತ್ತು ಎನ್‌ಆರ್‌ಡಬ್ಲ್ಯೂಎಸ್ ಸ್ಕೀಮ್‌ನಲ್ಲಿ ಏಕೆ ಹಣವನ್ನು ಖರ್ಚು ಮಾಡುತ್ತಿಲ್ಲವೆಂದು ಕೇಳಿದಾಗ ಅದರ ಬಗ್ಗೆ ಯಾರೂ ಉತ್ತರ ಹೇಳಲಿಲ್ಲ. ಆದರೆ ಮಿನಿ ವಾಟರ್ ಸ್ಕೀಮ್ ಏನಿದೆ, ಲೇಬರ್ ಓರಿಯೆಂಟೆಂಡ್ ಸ್ಕೀಮ್ ಏನಿದೆ ಅದರಲ್ಲಿ ಸಿಸ್ಟ್ರಾನ್ ಇಟ್ಟು ಪೈಪ್ ಹಾಕಲು ಕಂಟ್ರಾಕ್ಟರ್‌ಗಳಿಗೆ ಹಣವನ್ನು ಕೊಡಬಹುದು, ಈ ಕೆಲಸ ಬಹಳ ವ್ಯಾಪಕವಾಗಿ ಮಾಡುತ್ತಿದ್ದಾರೆ. ಅಧಿಕಾರಿಗಳು ನಿಮ್ಮ ಆಕ್ಷನ್ ಪ್ಲಾನ್, ಟಾರ್ಗೆಟ್ ಏನನ್ನೂ ಕೇಳುವುದಿಲ್ಲ, ನೀವೇನು ಹಣ ಕೊಡುತ್ತೀರಿ ಅದನ್ನೂ ಕೇಳಲ್ಲ, ಏಕೆಂದರೆ ನಿಮ್ಮ ಅಧಿಕಾರಿಗಳೇ ಇದರ ಫಲಾನುಭವಿಗಳಾಗಿರುತ್ತಾರೆ. ಇದರಲ್ಲಿ ಅವರಿಗೆ ಭಾರಿ ಆಸಕ್ತಿ ಇದೆ. ತಾವು ಸಮರ್ಪಕವಾಗಿ ಒಂದೊಂದು ಜಿಲ್ಲೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದರೆ ಇಷ್ಟೊಂದು ಬರಪೀಡಿತ ಪರಿಸ್ಥಿತಿಯನ್ನು ಎದುರಿಸಬೇಕಾದ ಪ್ರಸಂಗ

ಬರುತ್ತಿರಲಿಲ್ಲ. ಇದರ ಜೊತೆಗೆ ಒಂದೊಂದು ಸ್ಕೀಮ್‌ಗಳನ್ನು ಎರಡು ಮೂರು ವರ್ಷ ಮುಂದುವರೆಸಿಕೊಂಡು ಹೋದರೆ ಏನಾಗುತ್ತದೆಂದರೆ ಒಂದು ಪಾಯಿಂಟ್ ಡ್ರಿಲ್ ಮಾಡಿರುತ್ತೀರಿ, ಆರು ತಿಂಗಳು, ಇಲ್ಲವೆ ಒಂದು ವರ್ಷ ಆಗುವುದರಲ್ಲಿ ಡ್ರೈ ಆಗಿರುತ್ತದೆ. ನಮ್ಮ ಭಾಗದಲ್ಲಿ ಇದು ಹೆಚ್ಚಾಗಿ ಆಗುತ್ತದೆ. ತಮ್ಮ ಅಧಿಕಾರಿಗಳು ಡ್ರಿಲ್ ಮಾಡುವ ಮೊದಲು ಅಲ್ಲಿ ನೀರು ಇದೆಯೇ ಇಲ್ಲವೋ ಎಂದು ನೋಡುವುದಿಲ್ಲ. ಒಂದು ಕಡೆ ಕುಳಿತುಕೊಂಡು ಟ್ಯಾಂಕ್‌ವರೆಗೆ ಪೈಪ್ ಹಾಕಿಬಿಡುತ್ತಾರೆ, ಅನಂತರ ಒಂದು ಮೋಟಾರ್ ಬಿಡುತ್ತಾರೆ, ಕಡೆಗೆ ಸೋರ್ಸ್ ಡ್ರೈ ಆಗಿದೆಯೆಂದು ಹೇಳುತ್ತಾರೆ. ಅನಂತರ ಆ ಪೈಪನ್ನು ಕೀಳಬೇಕು, ಸೋರ್ಸ್ ಬೇರೆ ನೋಡಬೇಕು, ಎಸ್ಟಿಮೇಟ್ ಬೇರೆ ಮಾಡಬೇಕಾಗುತ್ತದೆ. ಈ ಸ್ಥಿತಿಯ ಬಗ್ಗೆ ತಾವು ವಿಮರ್ಶೆ ಮಾಡಬೇಕಾಗಿದೆ. ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಅವರವರ ಜವಾಬ್ದಾರಿಯನ್ನು ಅವರವರೇ ಮಾಡಿಕೊಳ್ಳಲಿ ಎಂದು ತಾವು ಹೇಳಿದ್ದೀರಿ. ಆದರೆ ಇವತ್ತು ಆ ರಿಪೇರಿ ಕೆಲಸ ಎಷ್ಟರಮಟ್ಟಿಗೆ ಆಗುತ್ತಿದೆ ಎಂದು ಕೇಳಬಯಸುತ್ತೇನೆ. ತಾವು ಯಾವುದೇ ತಾಲ್ಲೂಕಿಗೆ ಹೋಗಿ, ನೀವು ಅನ್‌ಸರ್ವೀಸಬಲ್ ಮತ್ತು ರಿಪ್ಲೇಸ್‌ಮೆಂಟ್ ಮಾಡಿರುವ ಸ್ಟಾಕನ್ನು ಇವತ್ತಿನವರೆಗೆ ಮೆಂಟೇನ್ ಮಾಡುವುದಕ್ಕಾಗಿಲ್ಲ. ಪೈಪ್ ಹೋಯ್ತು ಎಂದರೆ ಹೊಸ ಪೈಪ್ ತಂದರೂ, ಹಳೆಯ ಪೈಪ್ ಏನಾಯಿತು ಎಂಬ ಬಗ್ಗೆ ಲೆಕ್ಕ ಸಿಗುತ್ತಿಲ್ಲ. ಇವತ್ತು ಹ್ಯಾಂಡ್ ಪಂಪ್ ಫೇಲ್ ಆಯಿತು ಎಂದರೆ ಅದನ್ನು ಬಿಚ್ಚಿ ಹೊಸದನ್ನು ಹಾಕಿ ಎಂದರೆ ಯಾರೂ ಉತ್ತರ ಹೇಳುವುದಕ್ಕೆ ತಯಾರಿಲ್ಲ. ಬೋರ್‌ವೆಲ್ ಡ್ರೈ ಆಗಿದೆಯೆಂದು ಹ್ಯಾಂಡ್ ಪಂಪ್ ಬಿಚ್ಚಿದಮೇಲೆ, ಆ ಪಂಪ್ ಏನಾಗಿದೆ ಎಂಬ ಬಗ್ಗೆ ಲೆಕ್ಕಕ್ಕೇ ಬರುವುದಿಲ್ಲ.6-7 ಲೆಂತ್ ಪೈಪ್‌ಗಳನ್ನು ತೆಗೆದುಕೊಂಡು ಹೋಗುತ್ತಾರೆ, ಅದರಲ್ಲಿ ಎಷ್ಟು ಹಾಕುತ್ತಾರೆ, ಯಾರು ಹಾಕುತ್ತಾರೆ ಎಂಬ ಬಗ್ಗೆ ಲೆಕ್ಕ ಇರುವುದಿಲ್ಲ. ಈ ವ್ಯವಸ್ಥೆಯಲ್ಲಿ ಯಾರ ಜವಾಬ್ದಾರಿಯೂ ಇಲ್ಲ. ಹ್ಯಾಂಡ್ ಪಂಪ್, ಬೋರ್‌ವೆಲ್, ಮೋಟಾರ್ ಹಾಕಿಸಿ ಎಂದು ನಾವು ಕೇಳುತ್ತಿದ್ದೇವೆ ಆದರೆ.

ಶ್ರೀ ಎಂ. ಪಿ. ಪ್ರಕಾಶ್ : ಪ್ರತಿಯೊಂದು ಬೋರ್‌ವೆಲ್‌ಗಳನ್ನು ಕೊರೆದಾಗ ಆ ಗ್ರಾಮದ ಜಿಲ್ಲಾಪಂಚಾಯತ್ ಅಧ್ಯಕ್ಷರಿಗೆ ಒಂದು ಸುತ್ತೋಲೆಯನ್ನು ಕಳಿಸಿಕೊಡುತ್ತೇವೆ. ಒಂದು ವೇಳೆ ಅಧ್ಯಕ್ಷರು, ಉಪಾಧ್ಯಕ್ಷರು ಇಲ್ಲದಿದ್ದರೆ ಸದಸ್ಯರಿಗೆ ಕಳುಹಿಸಿಕೊಡುತ್ತೇವೆ. ಅವರೂ ಸಿಗದಿದ್ದರೆ ಗ್ರಾಮದ ಯಾರಾದರೂ ಗೌರವಸ್ಥರ ಕೈಯಲ್ಲಿ ಅದನ್ನು ಕೊಟ್ಟು ಬರಬೇಕೆಂದು ಹೇಳುತ್ತೇವೆ. ಅನೇಕಸಲ ಅದನ್ನು ತೆಗೆದುಕೊಂಡು ಹೋದವರು ಯಾರದೋ ಸಹಿ ಮಾಡಿಸಿಕೊಂಡು ಕೊಟ್ಟು ಬಂದುಬಿಡುತ್ತಾರೆ. ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಅಧಿಕಾರ ವಿಕೇಂದ್ರಿಕರಣ ಮಾಡಿ, ಸುತ್ತೋಲೆಗಳ ಮೂಲಕ ನಿಯಮಾವಳಿಗಳ ಮೂಲಕ ನಿರ್ದೇಶನದ ಮೂಲಕ ನಾವು ಇದನ್ನು ಮಾಡುತ್ತೇವೆ. ಆದರೆ ಗ್ರಾಮಪಂಚಾಯಿತಿಯ ಅಧ್ಯಕ್ಷರು ಎರಡು ಮೂರು ತಾಸು ಇಂತಹ ವಿಷಯಗಳ ಬಗ್ಗೆ ವಿನಿಯೋಗ ಮಾಡಲಿಕ್ಕೆ ತಯಾರಾಗಿಲ್ಲವೆಂದರೆ ನಾವೇ ಏನು ಮಾಡಬೇಕು ? ಅದಕ್ಕೆ ಪರ್ಯಾಯವಾದ ಸೂಚನೆಯನ್ನು ದಯಮಾಡಿ ಹೇಳಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಕೊಳವೆ ಬಾವಿಗಳನ್ನು ಮಾಡತಕ್ಕ ಅಧಿಕಾರ ಜಿಲ್ಲಾಪಂಚಾಯಿತಿಗಳಿಗೆ ವಹಿಸಿಬಿಟ್ಟಿದ್ದೀರಿ. ಇದು ಜಿಲ್ಲಾ ಸ್ಕೀಮ್‌ಗಳಾಗಿದೆ. ನಮ್ಮ ತೀರ್ಥಹಳ್ಳಿಯಲ್ಲಿ ಜಿಲ್ಲಾಪರಿಷತ್ ಇಂಜಿನಿಯರ್ ವಿಭಾಗದಿಂದ ಹಳ್ಳಿಯ ತಾಲ್ಲೂಕಿನಲ್ಲಿ ಯಾವುದೇ ಒಂದು

ಮೂಲೆಯಲ್ಲಿರತಕ್ಕ ಬೋರ್‌ವೆಲ್ ರಿಪೇರಿ ಮಾಡಲು ವಾಹನದಲ್ಲಿ ಒಬ್ಬ ಇಂಜಿನಿಯರ್ ಹೋಗತಕ್ಕಂಥದ್ದು ಇಲ್ಲವೇ ಇಲ್ಲ. ರಿಪೇರಿಗಳನ್ನು ಪಂಚಾಯತ್‌ಗಳೇ ನಿರ್ವಹಣೆ ಮಾಡುತ್ತಿದ್ದಾರೆ. ಆ ಪಂಚಾಯಿತಿಗಳ ವಾರ್ಷಿಕ ವೆಚ್ಚವನ್ನು ತಾವೇ ತುಂಬುತ್ತಿದ್ದೀರಿ. ರಾಜ್ಯದಲ್ಲಿ ಯಾವ್ಯಾವ ಪಂಚಾಯಿತಿಗಳು ಆ ರೀತಿ ನಿರ್ವಹಣೆಯ ಕೆಲಸ ಮಾಡುತ್ತಿವೆ ಅಂಥ ಪಂಚಾಯಿತಿಗಳಿಗೆ ಬೋರ್‌ವೆಲ್‌ಗಳ ದುರಸ್ತಿ ವೆಚ್ಚವನ್ನು 400 ರೂ.ಗಳನ್ನು ಕೊಡುತ್ತಿದ್ದೀರಿ. ದಯಮಾಡಿ ಇದನ್ನು 500 ರೂ.ಗಳಿಗೆ ಏರಿಸಬೇಕು. ಅವರಿಗೆ ನೂರು ರೂಪಾಯಿ ಇನ್‌ಸೆಂಟೀವ್ ಕೊಡಿ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಬೋರ್‌ವೆಲ್ ರಿಪೇರಿಯ ಕೆಲಸವನ್ನು ಆಯಾಯ ಪಂಚಾಯಿತಿಯವರಿಗೇ ವಹಿಸಿದರೆ ಒಳ್ಳೆಯದೆಂದು ನನ್ನ ಅನುಭವದ ಮಾತು. ನಮ್ಮ ತೀರ್ಥಹಳ್ಳಿಯಲ್ಲಿ ಆ ಕೆಲಸವನ್ನು ಮಾಡಿದ್ದೇವೆ. ನಮ್ಮಲ್ಲಿ ಟ್ರೈಬಲ್ ಸ್ಕೀಮ್‌ನಲ್ಲಿ ಆಯಾಯ ಪಂಚಾಯತ್ ಏರಿಯಾದಲ್ಲಿ ಒಬ್ಬೊಬ್ಬರನ್ನು ಬೋರ್‌ವೆಲ್ ಕೊರೆಯುವುದಕ್ಕೆ ತರಬೇತಿ ನೀಡಿದ್ದೇವೆ. ಒಂದು ಬೋರ್ ವೆಲ್ ಅಟೆಂಡ್ ಮಾಡಿದರೆ ಅವನಿಗೆ 50 ರೂ. ಕೊಡುತ್ತಿದ್ದೇವೆ. ಇದರಿಂದ ಅವನಿಗೂ ಉದ್ಯೋಗ ಸಿಕ್ಕಿದಂತಾಗುತ್ತದೆ. ಇದು ನಮ್ಮಲ್ಲಿ ಯಶಸ್ವಿಯಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇದು ಅನೇಕ ಸಂದರ್ಭಗಳಲ್ಲಿ ಪ್ರಯೋಗವಾಗಿದೆ. ದಿವಂಗತ ಅಬ್ದುಲ್ ಸಾಹೇಬ್‌ರವರು ಇದ್ದಾಗ ಒಂದೊಂದು ಗ್ರಾಮಪಂಚಾಯತಿಗೆ ಬೋರ್‌ವೆಲ್ ಅಟೆಂಡ್ ಮಾಡಿದರೆ ಅವನಿಗೆ 50 ರೂ. ಕೊಡುತ್ತಿದ್ದೇವೆ. ಇದರಿಂದ ಅವನಿಗೂ ಉದ್ಯೋಗ ಸಿಕ್ಕಿದಂತಾಗುತ್ತದೆ. ಇದು ನಮ್ಮಲ್ಲಿ ಯಶಸ್ವಿಯಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇದು ಅನೇಕ ಸಂದರ್ಭಗಳಲ್ಲಿ ಪ್ರಯೋಗವಾಗಿದೆ. ದಿವಂಗತ ಅಬ್ದುಲ್ ನಜೀರ್ ಸಾಹೇಬ್‌ರವರು ಇದ್ದಾಗ ಒಂದೊಂದು ಗ್ರಾಮಪಂಚಾಯಿತಿಗೆ ಬೋರ್‌ವೆಲ್‌ನ ಸಣ್ಣ ಪುಟ್ಟ ರಿಪೇರಿಗಳಿಗಾಗಿ ಟೂಲ್‌ಕಿಟ್ ಎಂದು ಕೊಡುತ್ತಿದ್ದರು. ಟ್ರೈಬಲ್ ಸ್ಕೀಮ್‌ನಲ್ಲಿ ಬರುವ ಅದನ್ನು ತೆಗೆದುಕೊಳ್ಳಬೇಕೆಂದಿತ್ತು. ಅದರನ್ವಯ ಸಣ್ಣಪುಟ್ಟ ಬೋರ್‌ವೆಲ್ ರಿಪೇರಿಗಳನ್ನು ಗ್ರಾಮಪಂಚಾಯಿತಿಯವರೇ ಮಾಡಿಕೊಳ್ಳಬೇಕಾಗಿತ್ತು. ತಮ್ಮ ಮಲೆನಾಡು ಪ್ರದೇಶದಲ್ಲಿ ಚಿಕ್ಕ ಗ್ರಾಮಗಳು ಇರುತ್ತವೆ. ಬಯಲು ಸೀಮೆಗಳಲ್ಲಿ 6-7 ಸಾವಿರ ಜನಸಂಖ್ಯೆಯ ಗ್ರಾಮಗಳು ಇರುತ್ತವೆ. ಅಲ್ಲಿ ಓವರ್‌ಹೆಡ್‌ಟ್ಯಾಂಕ್ ಇರತಕ್ಕಂಥ ಕುಡಿಯುವನೀರು, ಕಿರು ನೀರಿನ ಯೋಜನೆ ಇದ್ದಾಗ ಅದನ್ನು ಉಪಯೋಗಿಸಿಕೊಳ್ಳತಕ್ಕ ವಿಷಯವಿರಲಿ, ಅದನ್ನು ನಿರ್ವಹಣೆ ಮಾಡಬೇಕಾದರೆ ಗ್ರಾಮಪಂಚಾಯಿತಿಯವರು ಆ ಜವಾಬ್ದಾರಿಯನ್ನು ನಮಗೆ ಕೊಡಬೇಡಿ ಜಿಲ್ಲಾಪಂಚಾಯಿತಿಯ ಇಂಜಿನಿಯರಿಂಗ್ ವಿಭಾಗದವರೇ ಅದನ್ನು ಮಾಡಿಕೊಂಡು ಹೋಗಲಿ ಎಂದು ಹೇಳುತ್ತಾರೆ. ಅಕಸ್ಮಾತ್ ಅದು ಇದ್ದರೆ ಅದನ್ನು ಬೇರೆ ಕಡೆ ಉಪಯೋಗಿಸತಕ್ಕಂಥ ಸಂಭವ ಕೂಡ ಇರುತ್ತದೆ. ಇಂಥ ಅನೇಕ ಸಮಸ್ಯೆಗಳಿವೆ. ಅನುಭವದ ಮೂಲಕ ನಾವು ಇದನ್ನು ತಿಳಿಯಬೇಕಾಗಿದೆ. ಇನ್ನೇನಾದರು ಪರ್ಯಾಯ ವ್ಯವಸ್ಥೆ ಇದ್ದರೆ ತಾವು ದಯಮಾಡಿ ಹೇಳಿ ಪ್ರತಿಯೊಂದು ಕಾನೂನನ್ನು ಯಾವ ರೀತಿಯಾಗಿ ಮುರಿಯ ಬೇಕು, ಯಾವ ರೀತಿಯಾಗಿ ನಮಗೆ ಅನುಕೂಲವಾಗುವಂತೆ ಉಪಯೋಗಿಸಬೇಕು ಎನ್ನುವುದರಲ್ಲಿ ಬಹಳ ನಿಸ್ಸೀಮರು ಇದ್ದಾರೆ. ತಾವು ಇದರ ಬಗ್ಗೆ ಸಲಹೆ ನೀಡುವುದಿದ್ದರೆ ದಯಮಾಡಿ ತಿಳಿಸಿ.

ಶ್ರೀ ಕುಂಬ್ಳೆ ಸುಂದರ್‌ರಾವ್ : ಮಾನ್ಯ ಅಧ್ಯಕ್ಷರೆ, ಜಿಲ್ಲಾಪಂಚಾಯತಿಯವರು ಬೋರ್‌ವೆಲನ್ನು ಇಂಥ ಕಡೆ ಕೊರೆಯಬೇಕೆಂದು ಪಟ್ಟಿ ಮಾಡುತ್ತಾರೆ. ಅದರನ್ವಯ ಬೋರ್‌ವೆಲ್ ಕಂಪನಿಯವರಿಗೆ ಹೇಳಿಬಿಡುತ್ತಾರೆ. ಆದರೆ ಅಧಿಕಾರಿಗಳು ಜೊತೆಗೆ ಹೋಗುವುದಿಲ್ಲ. ಒಬ್ಬ ಪಂಚಾಯತ್ ಸದಸ್ಯನೂ ಸಹ ಕೊರೆಯುವ ಸ್ಥಳದಲ್ಲಿ ಇರುವುದಿಲ್ಲ. ಕೆಲವು ಕಡೆ ರಾತ್ರಿ ಬೆಳಗಾಗುವುದರೊಳಗೆ ಬೋರ್‌ವೆಲ್ ಆಗಿರುತ್ತದೆ. ನಮ್ಮ ಬಜ್‌ಪೆ ಪಂಚಾಯಿತಿಯಲ್ಲಿ ಬೋರ್‌ವೆಲ್ ಕೊರೆಯಿರಿ ಎಂದು ಕಳುಹಿಸಿದರು. ಅದು ಪಾಕಿಸ್ತಾನ್ ಬಾರ್ಡರ್ ಎನ್ನುವಂತೆ ಅವರವರೊಳಗೇ ಜಗಳವಾಯಿತು. ಇದು ನಮ್ಮ ಬೋರ್‌ವೆಲ್ ಎಂದು ಒಬ್ಬರು, ಮತ್ತೊಬ್ಬರು ಇದು ನಮ್ಮ ಭಾಗದ ಬೋರ್‌ವೆಲ್ ಎಂದು, ನೀರು ಬೇಕಾಗಿರುವುದು ಇವರಿಗೆ, ಬೋರ್‌ವೆಲ್ ಮಾತ್ರ ನಮ್ಮ ಕಡೆ ಇರಲು ಬಿಟ್ಟು ಕೊಡುವುದಿಲ್ಲವೆಂದು ಜಗಳವಾಯಿತು. ಅವರಿಗೇನಾದರು ಮಿಲಿಟರಿ ಪವರ್ ಇದ್ದಿದ್ದರೆ ಲಡಾಯ್ ಮಾಡುತ್ತಿದ್ದರು. ಇಂಥ ಪರಿಸ್ಥಿತಿಯಲ್ಲಿ ನಾನೊಂದು ಖಾಜಿ ನ್ಯಾಯವನ್ನು ಮಾಡಿದೆ. ಇಲ್ಲೊಂದು ಬೋರ್‌ವೆಲ್ ಕೊರೆಯೋಣ ಇದರ ನೀರು ಅವರು ತೆಗೆದುಕೊಳ್ಳಲಿ, ಅದರ ನೀರು ಇವರೂ ತೆಗೆದುಕೊಳ್ಳಲಿ ಎಂದು ಹೇಳಿದೆ. ಇಂಥ ಸಮಸ್ಯೆಗಳನ್ನು ಸೃಷ್ಟಿ ಮಾಡುತ್ತಾರೆ. ಆದ್ದರಿಂದ ಬೋರ್‌ವೆಲ್‌ಗಳನ್ನು ಕೊರೆಯುವಾಗ ಅಲ್ಲಿನ ಪಂಚಾಯತ್ ಸದಸ್ಯರಿಗಾಗಲಿ, ಶಾಸಕರ ಗಮನಕ್ಕಾಗಲಿ ತರಬೇಕು. ಮತ್ತು ಹಗಲಿನಲ್ಲೇ ಬೋರ್‌ವೆಲ್‌ಗಳನ್ನು ಕೊರೆಯಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕಳೆದ ಏಳೆಂಟು ವರ್ಷಗಳಿಂದ ನಿರಂತರವಾಗಿ ಬೋರ್‌ವೆಲ್‌ಗಳನ್ನು ಕೊರೆಯುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮಿನಿ ವಾಟರ್ ಸಪ್ಲೈಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಮಾಡುತ್ತಿದ್ದೇವೆ. ಇವತ್ತು ಎಲ್ಲಾ ಹಳ್ಳಿಗಳಲ್ಲೂ ಬೋರ್‌ವೆಲ್‌ಗಳು ಇಲ್ಲ ಎಂದು ಹೇಳುವ ಸ್ಥಿತಿ ಇಲ್ಲ. ಕೆಲವು ವಿಶೇಷವಾದ ಹಳ್ಳಿಗಳಲ್ಲಿ ಮಾತ್ರ ಬೋರ್‌ವೆಲ್‌ಗಳು ಇಲ್ಲದಿರಬಹುದು. ಎಲ್ಲೆಲ್ಲಿ ಬೋರ್‌ವೆಲ್‌ಗಳನ್ನು ತೋಡಿ ಒಳ್ಳೆಯ ನೀರು ಬಂದಿರುತ್ತದೆ ಅದಕ್ಕೆ ಪೈಪ್‌ಹಾಕಿ ಮಿನಿ ವಾಟರ್‌ಸಪ್ಲೈ, ಹತ್ತಾರು ನಲ್ಲಿಗಳನ್ನು ಹಾಕುವ ಮೂಲಕ ನೀರನ್ನು ಒದಗಿಸುತ್ತಾ ಹೋದರೆ ಇನ್ನು ಮುಂದೆ ಬೋರ್‌ವೆಲ್‌ಗಳನ್ನು ಕೊರೆಯುವುದನ್ನು ಕಡಿಮೆ ಮಾಡುತ್ತಾ ಹೋಗಬಹುದು. ಆದರೆ ನಮ್ಮ ಅಧಿಕಾರಿಗಳು ಇನ್ನೂ ನಿರಂತರವಾಗಿ ಬೋರ್‌ವೆಲ್ ಕೊರೆಯುವುದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಕೆಟ್ಟಿರುವ ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದಿಲ್ಲ. ಪೈಪ್ ಜಾಮ್ ಆಗಿದೆಯೆಂದು ಹೇಳುತ್ತಾರೆ. ಅಲ್ಲಿ ಇನ್ನೊಂದು ಬೋರ್‌ವೆಲ್ ತೆಗೆದರೆ ನಮಗೆ ಪರ್ಸೆಂಟೇಜ್ ಸಿಗುತ್ತದೆಂದು ಅಧಿಕಾರಿಗಳು ಇರುತ್ತಾರೆ. ಈಗ ಇರುವ ಬೋರ್‌ವೆಲ್ ಸಫಿಶಿಯೆಂಟ್ ಇದೆಯೇ, ವಾಟರ್ ಸಫಿಶಿಯೆಂಟ್ ಇದೆಯೇ? ಎಂಬ ಬಗ್ಗೆ ತನಿಖೆ ಮಾಡಿಸಿ, ಒಂದು ಗ್ರಾಮವನ್ನು ಮಾದರಿಯಾಗಿ ತೆಗೆದುಕೊಂಡು ಪರಿಶೀಲನೆ ಮಾಡಿ. ನೀರನ್ನು ತೆಗೆದು ಸರಿಯಾದಂಥ ರೀತಿಯಲ್ಲಿ ವಿತರಣೆ ಮಾಡುವ ವ್ಯವಸ್ಥೆಯಾಗಬೇಕು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇದು ಸಮಸ್ಯೆಯ ಒಂದು ಮುಖವಾಗಿದೆ. ತಾವು ಹೇಳಿದಂತೆ ಇದನ್ನು ಪುನಶ್ಚೇತನಗೊಳಿಸಬೇಕು. ಇದರಿಂದ ಕಡಿಮೆ ವೆಚ್ಚವಾಗುತ್ತದೆ. ಆದರೆ ಜನರು ಹೊಸ ಬಾವಿ ಬೇಕು ಎಂದು ಹೇಳುತ್ತಾರೆ. ಜನಪ್ರತಿನಿಧಿಗಳಾದ ನಮ್ಮ ಕಷ್ಟ ಎಷ್ಟಿದೆಯೆಂದರೆ, ಈ

ಬೀದಿಯಲ್ಲಿ ಒಂದು ಕೊಳವೆಬಾವಿ ಇದ್ದರೆ ಮತ್ತೊಂದು ಬೀದಿಯಲ್ಲೂ ಕೊಳವೆ ಬಾವಿ ಆಗಲೇ ಬೇಕು. ನಾವು ಮತದಾರರ ಮುಲಾಜಿಗೆ ಕಟ್ಟುಬಿದ್ದಿದ್ದೇವೆ. ಮುಂದಿನ ದಿವಸಗಳಲ್ಲಿ ಕೊಳವೆ ಬಾವಿಗಳೆಲ್ಲಾ ಬಚ್ಚಲುಗಳಾಗುತ್ತವೆ, ಅಂತರಜಲ ಕಡಿಮೆಯಾಗುತ್ತದೆಂಬುದರ ಸೂಕ್ಷ್ಮತೆಯ ಬಗ್ಗೆ ಹೇಳುವಂಥ ಎದೆಗಾರಿಕೆಯನ್ನು ನಾವು ಉಳಿಸಿಕೊಂಡಿಲ್ಲ. ಎಲ್ಲಾ ಮಟ್ಟದಲ್ಲಿ ಒತ್ತಡಗಳು ಇರುತ್ತವೆ. ಮೂರು ಕೊಳವೆ ಬಾವಿಗಳು ಇದ್ದರೂ ನಾಲ್ಕನೆಯದು ಬೇಡವೆಂದು ಯಾರೂ ಹೇಳುವುದಿಲ್ಲ. ನಮಗೆ ಬಹಳ ಕಡಿಮೆ ಬಾವಿಗಳು ಇದೆ, ಇನ್ನೊಂದು ಕೊಳವೆ ಬಾವಿ ಹಾಕಿಸಿ ಎಂದು ನಮಗೆ ಪ್ರತಿ ಸಲ ಮನವಿಗಳು ಬರುತ್ತಿವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ಸಾಮಾನ್ಯವಾಗಿ ಎಲ್ಲಾ ಹಳ್ಳಿಗಳಲ್ಲೂ ಬೋರ್‌ವೆಲ್‌ಗಳಿವೆ. ಈಗ ಬೋರ್‌ವೆಲ್‌ಗಳನ್ನು ಹಾಕುವುದನ್ನು ನಿಲ್ಲಿಸಿ. ನೀರಿನ ಕೊರತೆಯೇನಾದರು ಬಿದ್ದರೆ ಮಿನಿ ವಾಟರ್ ಸಪ್ಲೈ ಸ್ಕೀಮ್‌ನ್ನು ತನ್ನಿ. ಎರಡು ಮೂರು ಹಳ್ಳಿಗಳಿಗೆ ಒಂದೇ ಸಲ ನೀರನ್ನು ಕೊಡಬಹುದು. ಖರ್ಚು ಕಡಿಮೆಯಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಶತಬಾವಿ ಮತ್ತು ದಶಬಾವಿಯೆಂದು ಎರಡು ಸ್ಕೀಮ್‌ಗಳಿತ್ತು. ಈ ವರ್ಷದಿಂದ ದಶಬಾವಿ ಯೋಜನೆಯನ್ನು ನಿಲ್ಲಿಸಿಬಿಟ್ಟಿದ್ದೇವೆಂದು ಹೇಳಿದ್ದೀರಿ. ಈ ಬಾವಿಗಳನ್ನು ಕೊರೆದುಬಿಟ್ಟಿದ್ದರೆ ವಿದ್ಯುತ್ ಸಂಪರ್ಕ ಮತ್ತು ಸಬ್ಸಿಡಿಯನ್ನು ಪಡೆದುಕೊಳ್ಳಲು ಅನುಕೂಲವಾಗುತ್ತಿತ್ತು. ತುಮಕೂರು ಜಿಲ್ಲೆಗೆ ಈ ವರ್ಷ ದಶಬಾವಿ ಯೋಜನೆಯ ಕಾರ್ಯಕ್ರಮವನ್ನು ನಿಲ್ಲಿಸಿದ್ದೀರೆಂದು ತಿಳಿದುಬಂದಿದೆ. ಎರಡು ವರ್ಷಗಳ ಹಿಂದೆ ಚಿಕ್ಕನಾಯಕನಹಳ್ಳಿಗೆ 8-10 ಲಕ್ಷ ರೂಪಾಯಿ ಸಬ್ಸಿಡಿ ಬಂತು. ಸಬ್ಸಿಡಿಯನ್ನು ವಿತರಣೆ ಮಾಡಲು ತಾಲ್ಲೂಕು ಸಮಿತಿಯವರ ಗಮನಕ್ಕಾಗಲಿ, ಜಿಲ್ಲಾಸಮಿತಿಯವರ ಗಮನಕ್ಕಾಗಲಿ ತರಬೇಕಾಗಿತ್ತೆ ಎಂಬದು ಇಲ್ಲಿ ಪ್ರಶ್ನೆ. ಎಗ್ಸಿಕ್ಯುಟೀವ್ ಅಧಿಕಾರಿಗಳು ಯಾರು ಪಂಪ್‌ಸೆಟ್‌ಗೆ ವಿದ್ಯುತ್ ಸಂಪರ್ಕವನ್ನು ತೆಗೆದು ಕೊಂಡಿದ್ದಾರೆ ಎಂಬುದನ್ನು ನೋಡಲಿಲ್ಲ, ಯಾರದ್ದು ಸೀನಿಯಾರಿಟಿ ಇದೆ, ಯಾರಿಗೆ ಕೊಡಬೇಕು ಯಾರಿಗೆ ಕೊಡಬಾರದು ಎಂಬ ಬಗ್ಗೆ ವಿಚಾರಣೆ ಮಾಡಲಿಲ್ಲ, ಲೋಕಸಭಾ ಚುನಾವಣೆ ಇದೆಯೆಂಬ ಕಾರಣವನ್ನು ಕೊಟ್ಟು ಆ ಸಬ್ಸಿಡಿ ಹಣವನ್ನು ಅವರಿಗೆ ಬೇಕಾದಂತೆ ಕೊಟ್ಟಿದ್ದಾರೆ. ಏನಾದರು ಸಾಮಗ್ರಿಯನ್ನು ತೆಗೆದುಕೊಳ್ಳಬೇಕಾದರೆ ನಿಗದಿಯಾದ ಫರ್ಮಿನಲ್ಲಿ ಅಥವಾ ಮೈಸೂರ್ ಲ್ಯಾಂಪ್ಸ್‌ನಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ. ಸ್ಟಾರ್ಟರ್‌ಗಳನ್ನು ಇಂಥದ್ದೇ ಹಾಕಬೇಕೆಂದು ಹೇಳುತ್ತೀರಿ. ಹಾಗೆ ಮಾಡದಿದ್ದರೆ ಕಾರ್ಯದರ್ಶಿಯವರ ಸಂಬಳದಲ್ಲಿ ವಸೂಲಿ ಮಾಡುತ್ತಾರೆ. ಆದರೆ ಒಬ್ಬ ಎಗ್ಸಿಕ್ಯುಟೀವ್ ಅಧಿಕಾರಿಯವರು ತಾವು ಕೊಟ್ಟಿರುವ ಆದೇಶವನ್ನು ಮೀರಿ ಇನ್‌ಸ್ಟಲೇಷನ್ ಹಾಕುತ್ತಾರೆ. ಅವರು ಆ ರೀತಿ ಮಾಡಬಹುದೆ? ತಮ್ಮ ಇ.ಒ.ಗೆ ಏನಾದರು ಕೆಲಸವಿದೆಯೇ? ಇ.ಒ. ಕೆಳಗಿರುವ ಅಸಿಸ್ಟೆಂಟ್ ಇಂಜಿನಿಯರ್‌ಗೆ ಯಾವ ಪೈಪ್ ರೀಪ್ಲೇಸ್ ಆಗಿದೆ, ಯಾವುದಕ್ಕೆ ಹೆಚ್ಚುವರಿ ಬಿಟ್ಟಿದೆ ಅದಕ್ಕೆಲ್ಲಾ ನಿನ್ನನ್ನೇ ಜವಾಬ್ದಾರಿಯನ್ನಾಗಿ ನಿಗದಿ ಮಾಡಿರುವುದಾಗಿ ಹೇಳಿ. ಅಧಿಕಾರಿಗಳಿಗೆ ಆ ರೀತಿ ಜವಾಬ್ದಾರಿಯನ್ನು ನಿಗದಿ ಮಾಡಬೇಕಾಗಿದೆ. ಈ ರೀತಿ ಏನಾದರು ತೊಂದರೆಗಳಾದರೆ ಈ ಕ್ರಮಕ್ಕೆ ಒಳಪಡುತ್ತೀಯಾ ಎಂದು ಹೇಳಬೇಕಾಗುತ್ತದೆ. ಇದು ದೊಡ್ಡ ಹುಲ್ಲುಗಾವಲು, ಯಾರು ಏನು ಬೇಕಾದರೂ ಮೆಯ್ದುಕೊಳ್ಳಬಹುದು, ಮಾರ್ಚ್,

ಏಪ್ರಿಲ್ ಬಂದರೆ ವರ್ಗಾವಣೆ ಮಾಡಿಸಿಕೊಳ್ಳಬಹುದು ಎನ್ನತಕ್ಕ ಸ್ಥಿತಿಯನ್ನು ನಿರ್ಮಾಣ ಮಾಡಿದರೆ ಶಾಸಕರು ಪಂಚಾಯಿತಿಯ ಅಧ್ಯಕ್ಷರು ಅದನ್ನೆಲ್ಲ ಕಂಟ್ರೋಲ್ ಮಾಡಲು ಕಷ್ಟವಾಗುತ್ತದೆ. ಸ್ಟೋರ್ ಇಶ್ಯೂಗೆ ಆ ಅಧಿಕಾರಿ ಜವಾಬ್ದಾರಿ. ಅವರ ಮೇಲೆ ಜವಾಬ್ದಾರಿಯನ್ನು ನಿಗದಿ ಮಾಡಬೇಕಾಗುತ್ತದೆ. ಚಿಕ್ಕನಾಯಕನಹಳ್ಳಿಯಲ್ಲಾಗಿರುವ ಈ ವಿಚಾರದ ಬಗ್ಗೆ ಪರಿಶೀಲನೆ ಮಾಡುತ್ತೀರಾ ಎಂದು ಕೇಳಬಯಸುತ್ತೇನೆ. ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಸಮನ್ವಯವನ್ನು ಕಾಪಾಡಬೇಕಾಗಿದೆ. ಗ್ರಾಮಸಭೆಗಳು ಮೊದಲನೆಯ ಪ್ಲಾನಿಂಗ್ ಯೂನಿಟ್‌ಗಳಾಗಿವೆ. ಅದು ಪಲ್ಯೂಟ್ ಆಗಬಾರದು. ಅಲ್ಲಿನ ವಾತಾವರಣ ಕಲುಶಿತವಾಗಿಬಿಟ್ಟರೆ ಪ್ಲಾಂಟ್ ಪ್ರೋಸೆಸ್‌ಗೆ ಸಂಪೂರ್ಣವಾಗಿ ಧಕ್ಕೆಯಾಗುತ್ತದೆ. ಅವರ ಯೋಜನೆಯನ್ನು ಅವರೇ ಮಾಡಿಕೊಳ್ಳಬೇಕು ಎನ್ನತಕ್ಕ ನೀತಿಮೇಲೆ ಬಂದಿದ್ದೀರಿ. ಆದರೆ ಇಂದು ಗ್ರಾಮಸಭೆಯು ನಿಗದಿ ಮಾಡುವ ಅಧಿಕಾರವನ್ನು ತಾಲ್ಲೂಕು ಪಂಚಾಯಿತಿಗೆ ಕೊಟ್ಟಿದ್ದೀರಿ. ಗ್ರಾಮದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಪಂಚಾಯಿತಿಗೆ ಕೊಟ್ಟಿದ್ದೀರಿ. ನಾನು ಅಧ್ಯಕ್ಷನಾಗಿ ತಾಲ್ಲೂಕು ಪಂಚಾಯಿತಿಗಳಲ್ಲಿ ಮನೆಯನ್ನು ಕೊಡಬೇಕೆಂದರೆ ತಾಲ್ಲೂಕು ಪಂಚಾಯಿತಿ ಸದಸ್ಯ ಆ ಊರಿನ ಗ್ರಾಮಪಂಚಾಯಿತಿಯನ್ನೇ ಸ್ಕಿಪ್‌ಅಪ್ ಮಾಡಿಬಿಡುತ್ತಾನೆ. ಎಲ್ಲಾ ಊರುಗಳಲ್ಲೂ ಗ್ರಾಮಸಭೆಯಾಗುವುದಿಲ್ಲ. ತಾಲ್ಲೂಕು ಸಮಿತಿಯಲ್ಲೇನು ಊರು ನಿಗದಿಯಾಗುತ್ತದೆ ಆ ಊರಿನಲ್ಲಿ ಗ್ರಾಮಸಭೆಯಾಗುತ್ತದೆ. ಈ ಸದಸ್ಯರಿಗೆ ಬೇಕಾಗಿರುವ ಊರಿನಲ್ಲಿ ಗ್ರಾಮಪಂಚಾಯಿತಿಯವರು ಅನುಕೂಲ ಕೊಡುವುದಿಲ್ಲ. ಇದನ್ನು ಸರಿಪಡಿಸಬೇಕಾಗುತ್ತದೆ. ಬೇರೆ ಒಂದು ಊರಿನ ಫಲಾನುಭವಿಗಳನ್ನು ಮತ್ತೊಬ್ಬರು ಆಯ್ಕೆ ಮಾಡುವ ಕೆಲಸವಾಗುತ್ತಿದೆ. ಸೌಲಭ್ಯವನ್ನು ಯಾರಿಗೆ ಕೊಡಬೇಕು, ಯಾರಿಗೆ ಕೊಡಬಾರದು ಎಂಬ ಬಗ್ಗೆ ಜಿಜ್ಞಾಸೆಯಾಗಿದೆ. ಪಂಚಾಯಿತಿಯವರು ತಾಲ್ಲೂಕು ಸಮಿತಿಯವರು ಆಯ್ಕೆ ಮಾಡಿರುವ ಫಲಾನುಭವಿಗಳ ಬಗ್ಗೆ ರೆಕಾರ್ಡ್ ಕೊಡಲು ಹಿಂದುಮುಂದು ನೋಡುತ್ತಾರೆ. 1993-94ರಿಂದ ರಾಜ್ಯದಲ್ಲಿ ಕಟ್ಟಬೇಕಾಗಿರುವ ಮನೆಗಳು ಇನ್ನೂ ಬಾಕಿ ಇವೆ. ಕೆಲವು ಅರ್ಧದಲ್ಲಿ ನಿಂತಿದೆ, ಕೆಲವು ರೆಕಾರ್ಡ್ ಬಾರದೆ ನಿಂತು ಹೋಗಿದೆ. ಕೆಲವು ಈ ವರ್ಷಕ್ಕಿಂತ ಮುಂದಿನ ವರ್ಷ ಹೆಚ್ಚು ಹಣ ಬರಬಹುದೆಂದು ನಿಲ್ಲಿಸಿದ್ದಾರೆ. ಹದಿನಾಲ್ಕೂವರೆ ಸಾವಿರ ಇದ್ದ ಮನೆಗಳನ್ನು 1995-96, 1996-97ರಲ್ಲಿ ಇಪ್ಪತ್ತು ಸಾವಿರವಾಗಿ ಮಾಡಿದಿರಿ. ಆಗ ಅವರು ಇನ್ನು ಮನೆಯ ಕೆಲಸ ಪೂರ್ಣ ಮಾಡಿರಲಿಲ್ಲ, ನನಗೂ ಇಪ್ಪತ್ತು ಸಾವಿರ ರೂಪಾಯಿ ಮಾರ್ಚ್ ಕಳೆದರೆ ಬರುತ್ತದೆಂದು ಮನೆಯ ಕೆಲಸವನ್ನು ನಿಲ್ಲಿಸಿದ. ಈ ಮಧ್ಯೆ 1996-97ರ ಮನೆಗಳಿಗೆ ಮಾರ್ಚ್ ಕಳೆದರೂ ಯಾವುದೇ ರೀತಿ ಗ್ರಾಂಟ್ ಬಿಡುಗಡೆ ಮಾಡದೆ ಆ ಮನೆಯ ಕೆಲಸವನ್ನೂ ಕೈಗೆತ್ತಿಕೊಳ್ಳಲು ಆಗಲಿಲ್ಲ. ಏಪ್ರಿಲ್ ಒಂದಕ್ಕೆ ಆಶ್ರಯ ಸಮಿತಿಗಳು ಮುಕ್ತಾಯಗೊಂಡವು. ಸಮಿತಿಯ ಅಧ್ಯಕ್ಷರು ಮನೆ ಕೊಡಬೇಕೇ, ತಾಲ್ಲೂಕು ಸಮಿತಿಯವರು ಮನೆ ಕೊಡಬೇಕೋ, ಪಂಚಾಯಿತಿಯವರು ಮನೆಕೊಡಬೇಕೋ ಎಂಬ ಬಗ್ಗೆ ಪರಿಹಾರವನ್ನು ಸಭೆಯಲ್ಲಿ ಸೂಚಿಸಲಿಲ್ಲ. 1996-97ಕ್ಕೇನು ತಾವು ಆಶ್ರಯದಲ್ಲಿ 200 ಮನೆಗಳು, ಅಂಬೇಡ್ಕರ್ ಯೋಜನೆಯಲ್ಲಿ 300 ಮನೆಗಳು ಕೊಡಬೇಕಾಗಿತ್ತೋ 1997ರ ಮಾರ್ಚ್ ಆದರೂ ಅದರ ಬಗ್ಗೆ ಕಮ್ಯುನಿಕೇಷನ್ ಇಲ್ಲ. ಅನಂತರ ಮನೆಗಳನ್ನು ತೆಗೆದುಕೊಳ್ಳಿ ಎಂದು ಕಮ್ಯುನಿಕೇಟ್ ಮಾಡಿದ್ದೀರಿ. ಜಿಲ್ಲಾಪಂಚಾಯಿತಿಯವರು

ಇದನ್ನು ಅನುಮೋದನೆ ಮಾಡಬೇಕೋ ಬೇಡವೋ ಎಂಬ ಬಗ್ಗೆ ಜಿಜ್ಞಾಸೆ ಬರುತ್ತದೆ. ಅವರು ಕಡತ ತರಿಸಿಕೊಳ್ಳುತ್ತಾರೆ ಆದರೆ ಅಪ್ರೂವ್ ಎಂದು ಹೇಳುವುದಿಲ್ಲ. ತಾಲ್ಲೂಕು ಸಮಿತಿಯವರೇ ಅಪ್ರೂವ್ ಮಾಡಿಕೊಳ್ಳಿ ಎಂದು ಹೇಳುವ ಸೌಜನ್ಯ ಅವರಿಗೆ ಇಲ್ಲ. ಇದರ ಬಗ್ಗೆ ತಾವು ಕುಳಿತು ವಿಚಾರ ಮಾಡಿದರೆ ಗ್ರಾಮಸ್ವರಾಜ್ಯದ ಕಲ್ಪನೆಗೆ ಹೆಸರು ಬರುತ್ತದೆ. ಎಲ್ಲಾ ಹಂತಗಳಲ್ಲಿ ಅವರು ಮಾಡಬೇಕೇ, ನಾವು ಮಾಡಬೇಕೇ ಎಂಬ ಬಗ್ಗೆ ಜಿಜ್ಞಾಸೆಯನ್ನು ತಂದಿಟ್ಟುಬಿಟ್ಟಿದ್ದೀರಿ.

ಶ್ರೀ ಎಂ. ಪಿ. ಪ್ರಕಾಶ್ : ಇಂದಿರಾ ಅವಾಸ್ ಯೋಜನೆಯಲ್ಲಿ ಯಾವುದೇ ಮನೆಗಳು ಬಾಕಿ ಇಲ್ಲ. ತಾವು ಹೇಳುತ್ತಿರತಕ್ಕದ್ದು ಆಶ್ರಯ ಯೋಜನೆಯ ಮನೆಗಳಾಗಿದ್ದರೆ ಅದು ವಸತಿ ಇಲಾಖೆಗೆ ಬರುತ್ತದೆ. ಅನಂತರ ಇದರ ಬಗ್ಗೆ ಹೇಳುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : 1.4.97ರಿಂದ ಆಶ್ರಯ ಸಮಿತಿಯಾಗಿದೆ. ಅದಕ್ಕೂ ಮೊದಲು ತಾಲ್ಲೂಕು ಪಂಚಾಯಿತಿಯವರೇ ಆ ಕಾರ್ಯಕ್ರಮವನ್ನು ಮಾಡುತ್ತಿದ್ದರು. ತಾವು ಮನೆಗಳನ್ನು ಕೊಡುತ್ತೇವೆ, ಅಥವಾ ಕೊಡುವುದಿಲ್ಲವೆಂದು ಎರಡೂ ಹೇಳಲಿಲ್ಲ. ಇದರ ಜೊತೆಗೆ ಐ.ಆರ್.ಡಿ.ಪಿ. ಕೆಲಸಗಳನ್ನು ಮಾಡುತ್ತಿದ್ದೀರಿ. ವಾಸ್ತವಿಕವಾಗಿ ಬ್ಯಾಂಕ್‌ನವರು ಯಾರನ್ನು ಒಪ್ಪುತ್ತಾರೆ ಅವರು ಇವತ್ತು ಫಲಾನುಭವಿಗಳು. ನಾವು ಆಯ್ಕೆ ಮಾಡಿದ್ದೇವೆಂದರೆ ಆ ಊರಿನಲ್ಲಿ ಡಿಫಾಲ್ಟ್ರ್ಸ್ ಜಾಸ್ತಿ ಇದ್ದಾರೆ, ಬಾರೋಯರ್ಸ್ ಜಾಸ್ತಿ ಇದ್ದಾರೆ, ಅವರ ಕುಟುಂಬದವರು ಡಿಫಾಲ್ಟರ್ ಆಗಿದ್ದಾರೆಂದು ಬ್ಯಾಂಕ್‌ನವರು ಅಬ್ಜೆಕ್ಷನ್ ಮಾಡುತ್ತಾರೆ. ನಾವು ಮೊದಲು ಬ್ಯಾಂಕ್ ಮ್ಯಾನೇಜರ್‌ರವರನ್ನು ಒಪ್ಪಿಸಿಕೊಂಡು ಬಾ ಎಂದು ಕಳಿಸಬೇಕಾಗುತ್ತದೆ. ಅನಂತರ ಇಲ್ಲಿ ಆಯ್ಕೆ ಮಾಡಿಸುತ್ತೇನೆಂದು ಹೇಳಬೇಕಾಗುತ್ತದೆ. ಐ.ಆರ್.ಡಿ.ಪಿ. ಕಾರ್ಯಕ್ರಮದಲ್ಲೇನು ಫಲವನ್ನು ವಿತರಣೆ ಮಾಡುತ್ತಿದ್ದೇವೆ ಅದರಲ್ಲಿ ಮೇಜರ್ ಪಾರ್ಟ್ ಬ್ಯಾಂಕ್‌ನವರದ್ದಾಗಿದೆ. ಇದನ್ನು ತಪ್ಪಿಸಬೇಕು. ಯೋಜನೆಯಲ್ಲಿ ಅತ್ಯಂತ ನಿಕೃಷ್ಟನಿಗೆ ಕೊಡಬೇಕೆಂದು ಹೇಳುತ್ತೀರಿ. ಆದರೆ ನಾವು ಅವನನ್ನು ಆಯ್ಕೆ ಮಾಡಿದರೆ ಬ್ಯಾಂಕ್‌ನವರು ಒಪ್ಪುವುದಿಲ್ಲ. ಬ್ಯಾಂಕ್‌ನವರು ಒಪ್ಪದಿದ್ದರೆ ಅವನಿಗೆ ಬೆನಿಫಿಟ್ಸನ್ನು ಕೊಡಲು ಆಗುವುದಿಲ್ಲ. ನಾವು ಐ.ಆರ್.ಡಿ.ಪಿ. ನಲ್ಲಿ ಇಷ್ಟು ಜನರನ್ನು ಕವರ್ ಮಾಡಿದ್ದೇವೆಂದು ಹೇಳುತ್ತೇವೆ. ಗುರಿಯನ್ನು ಸಹ ಇಟ್ಟುಕೊಂಡಿರುತ್ತೇವೆ. ಆದರೆ ಏನೋ ಒಂದು ಆದರೆ ಸಾಕು ಕೊಟ್ಟುಬಿಡೋಣ ಎನ್ನತಕ್ಕ ಸ್ಥಿತಿ ನಿರ್ಮಾಣವಾದಾಗ ಈ ಕಾರ್ಯಕ್ರಮ ಅಷ್ಟೊಂದು ಚೆನ್ನಾಗಿ ನಡೆದಿದೆಯೆಂದು ತಾವೇನಾದರು ತಿಳಿದುಕೊಂಡಿದ್ದರೆ ಸರಿಯಲ್ಲ. ಗ್ರಾಮಸಭೆಗಳನ್ನು ಕರೆಯುವಾಗ ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೋ ಅಷ್ಟೇ ಜನರನ್ನು ಕರೆಯುತ್ತಾರೆ. ನಾವು ತಿಳಿದುಕೊಂಡಂತೆ ಇಡೀ ಗ್ರಾಮಸ್ಥರನ್ನು ಕರೆದು ಅವರನ್ನು ಮುಂದೆ ನಿಲ್ಲಿಸಿಕೊಂಡು ಇದರಲ್ಲಿ ಯಾರು ಫಲಾನುಭವಿಗಳಾಗಲು ಸೂಕ್ತವಾಗಿದ್ದಾರೆ ಎಂದು ಆಯ್ಕೆ ಮಾಡುತ್ತಿಲ್ಲ. ಇಂಥ ದಿವಸ ಗ್ರಾಮಸಭೆ ನಡೆಯುತ್ತದೆಂದರೆ ಅಲ್ಲಿ ಅಧ್ಯಕ್ಷರು, ಪಂಚಾಯಿತಿಯವರು ಬೇಕಾಗಿರುವಷ್ಟು ಜನರಿಗೆ ಮಾತ್ರ ಮಾಹಿತಿಯನ್ನು ಕೊಡುತ್ತಿದ್ದಾರೆ. ವ್ಯಾಪಕವಾದ ಪ್ರಚಾರವಾಗುತ್ತಿಲ್ಲ. ವ್ಯಾಪಕವಾದ ಪ್ರಚಾರವನ್ನು ತಾವು ಕಡ್ಡಾಯವಾಗಿ ಮಾಡಬೇಕು. ಇಡೀ ಗ್ರಾಮ ಸಭೆ ಸೇರಿ ಆ ಯೋಜನೆಯನ್ನು ರೂಪಿಸಬೇಕು. ಯಾರೋ ನಾಲ್ಕು ಜನ ಫಲಾನುಭವಿಗಳು

ಬರುವುದಲ್ಲ. ಇವತ್ತು ಪಂಚಾಯಿತಿಯಲ್ಲಿ ಒಬ್ಬೊಬ್ಬ ಸದಸ್ಯ ಒಬ್ಬೊಬ್ಬ ಫಲಾನುಭವಿಗಳ ಹೆಸರನ್ನು ಬರೆದುಕೊಂಡಿರುವ ಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ ಎಲ್ಲಾ ಸದಸ್ಯರು ಒಂದೊಂದನ್ನು ಹಂಚಿಕೊಂಡುಬಿಡುತ್ತಾರೆ. ಇದನ್ನು ತಾವೇ ಖುದ್ದಾಗಿ ಪರಿಶೀಲನೆ ಮಾಡಬೇಕೆಂದು ಹೇಳುವುದಿಲ್ಲ. ಜಿಲ್ಲಾ ಪಂಚಾಯಿತಿ ಏನು ಮಾಡುತ್ತಿದೆ? ಇಂಥದ್ದೆಲ್ಲ ಅವರ ಗಮನಕ್ಕೆ ಹೋದರೂ ಅವರೇಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ? ಅವರಿಗೇನು ಕೆಲಸವನ್ನು ವಹಿಸಿದ್ದೀರಿ? ಅವರು ಅದನ್ನು ಮಾನಿಟರಿಂಗ್ ಸಹ ಮಾಡದಿದ್ದರೆ ಹೇಗೆ? ಇದರ ಜೊತೆಗೆ ಟ್ರೈಸಮ್ ಸ್ಕೀಮ್‌ನ ಬಗ್ಗೆ ಹೇಳುವುದಾದರೆ, ಇದು ಒಳ್ಳೆಯ ಕಾರ್ಯಕ್ರಮವಾಗಬೇಕಿತ್ತು. ಈಗಲೂ ಒಳ್ಳೆಯ ಕಾರ್ಯಕ್ರಮವಾಗಿದೆಯೆಂದು ಭಾವಿಸುತ್ತೇನೆ. ಇಲ್ಲಿ ಫಲಾನುಭವಿಗಳ ಸಂಖ್ಯೆಯನ್ನು ಒಂದೇ ಸಲ ನಿಗದಿ ಮಾಡುತ್ತಿಲ್ಲ. ಒಂದು ಸಲ 25 ಜನರಿಗೆ ಕೊಡುತ್ತೇವೆಂದು ಹೇಳುವುದು, ಅನಂತರ 80 ಜನರಿಗೆ ಕೊಡುತ್ತೇವೆಂದು ಹೇಳುವುದು, ಮಾರ್ಚ್ ಕೊನೆಯಲ್ಲಿ ಐ.ಆರ್.ಡಿ.ಪಿ. ಟ್ರೈಸಮ್‌ನಲ್ಲಿ ಗುರಿಯನ್ನು ಜಾಸ್ತಿ ಮಾಡಿದ್ದೇವೆಂದು ಬ್ಯಾಂಕ್‌ನವರಿಗೆ ಹೇಳುವುದು, ಬ್ಯಾಂಕ್‌ನವರು ನಮಗೆ ಈ ಹಂತದಲ್ಲಿ ಹಣ ಕೊಡಲು ಆಗುವುದಿಲ್ಲವೆನ್ನುವುದು, ಇದನ್ನು ತಾವು ತಪ್ಪಿಸಬೇಕು. ಆಯ್ಕೆಯಾದ ಫಲಾನುಭವಿಗಳನ್ನೇನು ಟ್ರೈಸಮ್ ಸ್ಕೀಮ್‌ನಲ್ಲಿ ತರಬೇತಿಗೆ ಕಳಿಸುತ್ತೀರಿ, ಆ ತರಬೇತಿ ಕೇಂದ್ರದ ಕ್ವಾಲಿಫಿಕೇಷನ್ ಏನಾದರೂ ಕೇಳಿದ್ದೀರಾ? ತರಬೇತಿ ಕೊಡುತ್ತಿರುವವರು ಯಾರು? ಅವರಿಗೆ ಇರುವ ಅರ್ಹತೆಗಳೇನು? ಅವರಿಗೆ ಬೇಕಾಗಿರುವ ಅರ್ಹತೆಗಳೇನು? ಇದರ ಬಗ್ಗೆ ಸ್ವಲ್ಪ ಗಮನಕೊಡಬೇಕು. ಯಾರೋ ಬಂದು ಟ್ರೈಸಮ್ ಕೇಂದ್ರವನ್ನು ನಡೆಸುತ್ತಿದ್ದೇನೆ ನನಗೆ ಇಷ್ಟು ಹಣ ಬರುತ್ತದೆಂದು ಡ್ರಾ ಮಾಡಿಕೊಂಡು ಹೋಗುವಂಥ ಸ್ಥಿತಿಯನ್ನು ತಾವು ತಪ್ಪಿಸುತ್ತೀರೆಂದು ತಿಳಿದುಕೊಂಡಿರುತ್ತೇನೆ. 'ದ್ವಾಕರ' ಕಾರ್ಯಕ್ರಮದ ಬಗ್ಗೆ ನಾನು ಹೆಚ್ಚಾಗಿ ಹೇಳುವುದಿಲ್ಲ. ಇದು ಚೆನ್ನಾಗಿ ನಡೆಯುತ್ತಿಲ್ಲವೆಂದು ಹೇಳಿದರೆ ತಪ್ಪಾಗುತ್ತದೆ. ಇದು ಮತ್ತು ವಿಶ್ವ ಕಾರ್ಯಕ್ರಮಗಳು ಕರ್ನಾಟಕದಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮಗಳಾಗುತ್ತವೆಂದು ನಾವು ತಿಳಿದುಕೊಂಡಿದ್ದೆವು. ದಿ ಪ್ರೊಸೀಡಿಂಗ್ಸ್ ಆಫ್ ದಿ 'ದ್ವಾಕರ' ಸ್ಕೀಮ್ಸ್ ಎಲ್ಲಿ ಮಾರಾಟ ಮಾಡಬೇಕು, ಅವರೇನು ತಯಾರು ಮಾಡುತ್ತಾರೆ ಅದನ್ನೆಲ್ಲಿ ಮಾರಾಟ ಮಾಡಬೇಕು, ಅವರೇನು ಕಾರ್ಯಕ್ರಮವನ್ನು ಹಮ್ಮಿಕೊಂಡು ಕೇಂದ್ರಗಳನ್ನು ನಡೆಸುತ್ತಿದ್ದಾರೆ, ಅವರಿಗೆ ಯಾರು ರಕ್ಷಣೆ ಎಂಬ ಬಗ್ಗೆ ನಿಗದಿ ಮಾಡಿದ್ದರೆ ಈ ಕಾರ್ಯಕ್ರಮ ಇನ್ನೂ ಯಶಸ್ವಿಯಾಗುತ್ತಿತ್ತು. ಅದು ಆಗದಿರುವುದರಿಂದ ಇವತ್ತು 'ದ್ವಾಕರ' ಕಾರ್ಯಕ್ರಮ ಅಷ್ಟೊಂದು ಚೆನ್ನಾಗಿ ನಡೆದಿಲ್ಲ. ಗ್ರೂಪ್ ಇನ್‌ಶ್ಯೂರೆನ್ಸ್ ಕಾರ್ಯಕ್ರಮವನ್ನೇನು ತಂದಿದ್ದೀರಿ ಇದು ಬಹಳ ಉತ್ತಮವಾದ ಕಾರ್ಯಕ್ರಮ. ಇದರಲ್ಲಿ ಸಬ್ಸಿಡಿಯನ್ನು ಬಡತನ ರೇಖೆಗಿಂತ ಕೆಳಗಿರುವವರಿಗೆ ಮಾತ್ರ ಕೊಡುತ್ತೇವೆಂದು ಹೇಳಿದ್ದೀರಿ. ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಕಮ್ಮಿ ಎಲ್ಲರೂ ಬಡವರೇ. ಇವರಲ್ಲೇನು ಮಧ್ಯಮ ವರ್ಗದವರಿದ್ದಾರೆಂದು ತಿಳಿದುಕೊಂಡಿದ್ದೆವೋ ಇವತ್ತು ಆ ಸ್ಥಿತಿಯಲ್ಲಿ ಅವರು ಉಳಿದಿಲ್ಲ. ಇನ್ನು ಗ್ರೂಪ್ ಇನ್‌ಶೂರೆನ್ಸ್ ಕವರೇಜ್ ಆಗಬೇಕಾದರೆ ದುಡಿಯುವ ಸದಸ್ಯನಿಗೆ ಅಥವಾ ಮೆಜಾರಿಟಿ ಬಂದ ಸದಸ್ಯನಿಗೆ, ಸ್ವಲ್ಪ ಲೋಯರ್, ಮಿಡಲ್ ಕ್ಲಾಸಿಗೂ ಈ ಸ್ಕೀಮನ್ನು ಅನ್ವಯ ಮಾಡಬೇಕಾಗುತ್ತದೆ. ಇವತ್ತು ನಾವು ಐ.ಆರ್.ಡಿ.ಪಿ. ಫಲಾನುಭವಿ ಅಥವಾ ಬಡತನದ ರೇಖೆಯಲ್ಲಿ ಕೆಳಗಿದ್ದಾನೆ ಎಂದರೆ ಅದೇ ಸರಿಯಿಲ್ಲ ಎಂದು ಭಾರತ ಸರ್ಕಾರದವರು

ಹೇಳಿದ್ದಾರೆ. ನೀವು ಗುರುತಿಸಿ ಮಾಡಬೇಕಾದ ಎರಡರಷ್ಟು ಜನ ಬಡತನದ ರೇಖೆಗಿಂತ ಕೆಳಗಿದ್ದಾರೆ ಎಂದು ನಾನು ಹೇಳಿದ್ದೇನೆ. ಇವತ್ತು ಈ ಕಾರ್ಯಕ್ರಮವನ್ನು ಇನ್ನೂ ಸ್ವಲ್ಪ ರಿಲ್ಯಾಕ್ಸ್ ಮಾಡಬೇಕಾಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಒಂದು ವರ್ಷಕ್ಕೆ 60 ರೂಪಾಯಿ ಪ್ರೀಮಿಯಂ ಕೊಡಬೇಕು. ಅಷ್ಟು ಪಾಲ್ಗೊಳ್ಳುವಿಕೆಯಲ್ಲೂ ಅವರು ಭಾಗವಹಿಸದಿದ್ದರೆ, ಅದನ್ನು ನಾವು ರದ್ದು ಮಾಡಲು ಆಗುತ್ತದೆಯೇ?

ಶ್ರೀ ಜೆ. ಸಿ. ಮಾಧುಸ್ವಾಮಿ : ಪ್ರೀಮಿಯಂ ಕಡಿಮೆ ಮಾಡಿ ಎಂದು ಹೇಳಲಿಲ್ಲ. ಒಂದು ಕೆಟಗರಿಗೆ ಸಬ್ಸಿಡೈಸ್ ಮಾಡುತ್ತಿದ್ದೀರಿ, ಇನ್ನೊಂದು ಕೆಟಗರಿಗೆ ಪ್ರೀಮಿಯಂ ನಿಗದಿ ಮಾಡಿದ್ದೀರಿ. ಅದರಲ್ಲಿ ಇನ್ನೂ ಸ್ವಲ್ಪ ಇನ್‌ಕಂ ಜಾಸ್ತಿ ಮಾಡಿಬಿಟ್ಟು, ಏನು ಈಗ ಬಡತನದ ರೇಖೆಯ ಆದಾಯವಿದೆ, ಇದನ್ನು ಇನ್ನೂ ಒಂದು ಸ್ವಲ್ಪ, ಅಂದರೆ ನಾಲ್ಕು ಸಾವಿರ ಅಥವಾ ಎರಡು ಸಾವಿರದವರೆಗೆ ರಿಲ್ಯಾಕ್ಸ್ ಮಾಡಿ ಎಂದು ನಾನು ಕೇಳುತ್ತಿದ್ದೇನೆ. ನೀವು 15 ಸಾವಿರದವನಿಗೋ, 20 ಸಾವಿರದವನಿಗೋ ಕೊಟ್ಟರೆ ಅದನ್ನು 10 ಸಾವಿರಕ್ಕೆ ಇಳಿಸಿದ್ದೀರಿ. ಆದ್ದರಿಂದ ಅದನ್ನು 15 ಸಾವಿರದವರೆಗೆ ತೆಗೆದುಕೊಂಡು ಹೋಗಿ, 20 ಸಾವಿರದವರೆಗೆ ತೆಗೆದುಕೊಂಡು ಹೋಗಿ ಎಂದು ಹೇಳುತ್ತೇನೆ. ಪ್ರೀಮಿಯಂ ಬಿಟ್ಟು ಮಾಡಿ ಎಂದು ನಾನು ಸನ್ಮಾನ್ಯ ಸಚಿವರಲ್ಲಿ ಕೇಳುತ್ತಿಲ್ಲ. ಇದರ ಜೊತೆಗೆ ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿ ಎಂದು ತಾವು ಮಾಡಿದ್ದೀರಿ. ತಾವು ಆಗಲೇ ಮಾತನಾಡುತ್ತಾ ಹೇಳಿದ್ದೀರಿ, ಅಧ್ಯಕ್ಷರನ್ನು ಯಾರನ್ನು ಮಾಡುತ್ತೀರಿ, ಉಪಾಧ್ಯಕ್ಷರನ್ನು ಯಾರನ್ನು ಮಾಡುತ್ತೀರಿ ಎಂದು. ಈ ವ್ಯವಸ್ಥೆಯಲ್ಲಿ ಒಬ್ಬನೇ ಒಬ್ಬ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಆಯ್ಕೆಯಾಗಲು ತಾವು ಅನುಕೂಲ ಮಾಡಿಕೊಡಲಿಲ್ಲ. ಹಾಗಾದರೆ ಟಿ.ಪಿ.ಎಸ್. ಎನ್ನುವ ವ್ಯವಸ್ಥೆಯೂ ಪ್ಲಾನಿಂಗ್ ಪ್ರೋಸೆಸ್‌ನಲ್ಲಿ ಬರಬಾರದು. ಮುನಿಸಿಪಾಲಿಟಿಯಿಂದ ಇಷ್ಟು ಜನ, ಜಿಲ್ಲಾ ಪಂಚಾಯಿತಿಯಿಂದ ಇಷ್ಟು ಜನ ಎಂದು ಮಾತ್ರ ಹೇಳಿದಿರಿ. ಗ್ರಾಮ ಪಂಚಾಯಿತಿಯವನ ಸ್ಥಿತಿ ಏನು? ಮತ್ತು ಇಲ್ಲಿ ಎಂ.ಎಲ್.ಎ.ಗಳ ಸ್ಥಿತಿ ಏನು? What is the fate of that Taluk Panchayat Member? We are not regular invitees. ತಾವು ಇದನ್ನು ತಿದ್ದುಪಡಿ ಮಾಡಬೇಕಾಗುತ್ತದೆ. ಶಾಸಕ ಎನ್ನಿಸಿಕೊಂಡವರು ಕನಿಷ್ಟ ಆ ಸಭೆಯ ರೆಗ್ಯುಲರ್ ಸದಸ್ಯರಾಗಲಿಲ್ಲ, ಇನ್‌ವೈಟಿಯಾಗಿ ಹೋಗುವುದು ಎಂದರೆ ತಮಗೆ ಇದು ಗೌರವ ತರುತ್ತದೆ ಎಂದರೆ ಇದನ್ನು ಹಾಗೆಯೇ ಇಡಿ. ಮತ್ತು ತಮಗೆ ನಾನು ಕಡ್ಡಾಯವಾಗಿ ಕೇಳುತ್ತಿದ್ದೇನೆ, ಟಿ.ಪಿ.ಎಸ್.ನಿಂದ ತಾಲ್ಲೂಕು ಪಂಚಾಯಿತಿ ಸಮಿತಿಯನ್ನೂ ಕೂಡ if you consider it as a Unit plan he must be involved in that process. ನೀವು ಪ್ಲಾನ್ ಮಾಡುತ್ತೇವೆ ಎಂದುಬಿಟ್ಟು, ಮುನಿಸಿಪಾಲಿಟಿ ಹಾಗೂ ಜಿಲ್ಲಾ ಪಂಚಾಯಿತಿಯವರು ಇಬ್ಬರೇ ಕುಳಿತು ಡಿಸ್ಟ್ರಿಕ್ಟ್ ಪ್ಲಾನ್ ಮಾಡಬೇಕು ಎನ್ನುವುದನ್ನು ಏಕೆ ಪರಿಗಣಿಸಲು ಹೋದಿರಿ? ನೀವು ಪಂಚಾಯಿತಿ ಕೇಂದ್ರದಿಂದ ಒಬ್ಬರನೋ, ಇಬ್ಬರನೋ, ಟಿ.ಪಿ.ಎಸ್.ನಿಂದ ಒಬ್ಬರನ್ನೋ, ಇಬ್ಬರನ್ನೋ ಅದೇ ಕೋಟಾದಲ್ಲಿ ಶೇರ್ ಮಾಡಿಸಿದ್ದರೆ, ಇದರಲ್ಲಿ ಏನು ತಪ್ಪು ಆಗುತ್ತಿರಲಿಲ್ಲ. ಇವತ್ತು ಒಬ್ಬನೇ ಒಬ್ಬ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷನಾಗಲೀ, ಸದಸ್ಯನಾಗಲೀ, ನಿಮ್ಮ ಪ್ಲಾನಿಂಗ್ ಕಮಿಟಿಯೊಳಗೆ ಬರಲು ಆಗಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಇದು ನಮ್ಮ ವ್ಯಾಪ್ತಿಯಲ್ಲಿ ಬರುತ್ತಿಲ್ಲ. ಸಂವಿಧಾನದಲ್ಲಿ ತಿದ್ದುಪಡಿಯಾಗಿದೆ. ಸಂವಿಧಾನದಲ್ಲೇ ಈ ವಿಚಾರವನ್ನು ಹೇಳುತ್ತಾರೆ, ಯಾವಯಾವ

ಕ್ಷೇತ್ರದಿಂದ ಎಷ್ಟು ಜನ ಇರಬೇಕು, ಸದಸ್ಯರ ಸಂಖ್ಯೆ, ಹಾಗೂ ಇತರ ಎಲ್ಲ ವಿಚಾರಗಳ ಬಗ್ಗೆ ಸಂವಿಧಾನದಲ್ಲೇ ಪ್ರಾವಿಜನ್ ಇದೆ. ಇದನ್ನು ವಿವರವಾಗಿ ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತೇನೆ. ಆದರೆ, ಸಂವಿಧಾನದಲ್ಲಿ ಒಂದು ನಿರ್ದೇಶನ ಕೊಟ್ಟಿರುವುದರಿಂದ, ಅದನ್ನು ಯಾವುದೇ ತರವಾದ ಬದಲಾವಣೆ ಮಾಡಲು ನಮಗೆ ಇಲ್ಲಿ ಅವಕಾಶವಿಲ್ಲ. ಇದು ಒಂದು ದೊಡ್ಡ ಕಷ್ಟದ ಸಂಗತಿ. ನಾನು ಆಗಲೇ ಹೇಳಿದಂತೆ, ನ್ಯಾಷನಲ್ ಪ್ಲಾನಿಂಗ್ ಕಮೀಷನ್‌ಗೆ ಈ ಯಾವುದೂ ಸ್ಟ್ಯಾಟ್ಯುಟರಿ ಪವರ್ಸ್ ಇಲ್ಲ. ಆದ್ದರಿಂದ ಇದು ಕ್ರಿಯೇಟೆಡ್ ಆದದ್ದು ಅಲ್ಲ.

Sri J. C. MADHUSWAMY : Everything is flexible. ಸಂವಿಧಾನ ಕೂಡ ಫ್ಲೆಕ್ಸಿಬಲ್. ತಾವು ಒಂದು ಸಲಹೆ ಕೊಡಿ. This is the suggestion of the Government of Karnataka. ಸಂವಿಧಾನದ 71, 72 ತಿದ್ದುಪಡಿಗಳಾಗಲು ಕರ್ನಾಟಕವೇ ಮೂಲ ಕಾರಣ. ಅದಕ್ಕೆ ಮೊದಲು ಅವರು ಈ ವ್ಯವಸ್ಥೆಯನ್ನೇ ಒಪ್ಪಿರಲಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, under the political system that is prevailing today in the country. Mr. Speaker, Sir, any amendment to the Constitution require more than 2/3 of both the Houses, more than 2/3 of the legislators. Can that be done? Let there be a political power to introduce such a drastic measure.

Sri. J.C. MADHUSWAMY : This is the suggestion, this is the lacuna ಎಂದು ಹೇಳಲು ನಮಗೆ ಪೊಲಿಟಿಕಲ್ ಸಿಸ್ಟಮ್‌ನಲ್ಲಿ ಅಧಿಕಾರ ಉಳಿದಿಲ್ಲ ಎಂದರೆ, This is where we are legging behind which is constituted by same Act is not represented in the entire planning process of the District. ಆಮೇಲೆ ತಾಲ್ಲೂಕು ಪಂಚಾಯಿತಿ ಕಾಮಗಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಕಾಮಗಾರಿಗಳ ಮಧ್ಯೆ ಒಂದು ಸ್ಪಷ್ಟವಾದ ತೀರ್ಮಾನವನ್ನು ಸಚಿವರು ಮಾಡಬೇಕಾಗಿದೆ. ಈಗ ನೀವು ಶೇಕಡ 80ರಷ್ಟು ತಾಲ್ಲೂಕು ಪಂಚಾಯಿತಿಗೆ, ಶೇಕಡ 20ರಷ್ಟು ಜಿಲ್ಲಾ ಪಂಚಾಯಿತಿಗೆ ಎಂದು ಹೇಳಿದ್ದೀರಿ. ಇದನ್ನು ರೆಡ್ಯೂಸ್ ಮಾಡಿಬಿಟ್ಟಿರಿ. ನೀವು ಮಧ್ಯೆ ಒಂದು ಏಜೆನ್ಸಿ ಅಥವಾ ಬಾಡಿ ಕಾರ್ಪೋರೇಟ್ ಮಾಡಿ, ಅದರಲ್ಲಿ ಇಷ್ಟು ಪರ್ಸೆಂಟ್ ಟಿ.ಪಿ.ಎಸ್.ಗೆ ಹೋಗಬೇಕು ಎಂದು ಮಾಡಿದಿರಿ. ಶೇಕಡ 65ಕ್ಕೆ ಪ್ಲಾನ್ ಮಾಡಬೇಕಾಗಿದ್ದವರನ್ನು ನೀವು ಮಾಮೂಲಿ ಪ್ಲಾನ್ ಮಾಡಿ, ಅದರ ಮೇಲೆ ಶೇಕಡ 25ರಷ್ಟು ಎಕ್ಸೆಸ್‌ಪ್ಲಾನ್ ಮಾಡಿ ಎಂದು ಒಂದು ಸುತ್ತೋಲೆ ಕೊಟ್ಟಿರಿ. ಈ ಶೇಕಡ 25ರಷ್ಟು ಎಕ್ಸೆಸ್ ಪ್ಲಾನ್‌ಗೆ what is the sanctity? ತಾವು ದುಡ್ಡು ಕೊಡುತ್ತೀರೋ, ಇಲ್ಲವೋ? ಆ ಯೋಜನೆಯನ್ನು ಮಾಡಿ ಕಳುಹಿಸಿದ ಮೇಲೆ ಅದು ಕಾರ್ಯಗತಕ್ಕೆ ಬರುತ್ತದೋ, ಇಲ್ಲವೋ? ತಾಲ್ಲೂಕು ಸಮಿತಿಯವರು ಮಾಡುತ್ತಿರುವ ಕಾರ್ಯಕ್ರಮಗಳು ಏನಾಗಬೇಕಾಗಿದೆ? ಇದನ್ನು ತಾವು ಇವತ್ತು ಈ ಸಭೆಯಲ್ಲಿ ನಮಗೆ ಸ್ಪಷ್ಟಮಾಡಬೇಕಾಗಿದೆ. ಇವತ್ತು, ನಮಗೆ ಕೊಡುತ್ತಿದ್ದಂಥ ಹಣದ ಮೇಲೆ ಶೇಕಡ 25ರಷ್ಟು ಪ್ಲಾನ್ ಮಾಡಿ ಎಂದು ಅವರಿಗೆ ಹೇಳಿ, ಮಧ್ಯದ ಯೋಜನೆಯನ್ನು

ತಾಲ್ಲೂಕು ಸಮಿತಿಯವರು ಮಾಡಿ ಎಂದು ತಾವು ಏನು ಹೇಳಿದ್ದೀರಿ, ಈ ಬಗ್ಗೆ ಒಂದು ವಿವರಣೆಯನ್ನು ತಾವು ನಮಗೆ ಕೊಡಬೇಕಾಗುತ್ತದೆ.

(ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು.)

ಅಧ್ಯಕ್ಷರು : ಮಾಧುಸ್ವಾಮಿಯವರೇ ನಿಮಗೆ ಇನ್ನೂ ಎಷ್ಟು ಹೊತ್ತು ಬೇಕಾಗಬಹುದು?

ಶ್ರೀ ಜೆ. ಸಿ. ಮಾಧುಸ್ವಾಮಿ : ಇನ್ನು ಕೆಲವೇ ನಿಮಿಷಗಳಲ್ಲಿ ಮುಗಿಬಿಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇನ್ನು ಇನ್‌ಪುಟ್ಸ್ ಬಗ್ಗೆ ಹೇಳಬೇಕಾದರೆ, ಮನೆ, ಬಾಗಿಲು, ಕಿಟಕಿಯಿಂದ ಹಿಡಿದು ಕಬ್ಬಿಣದ ನೇಗಿಲನ್ನು ಕೊಡಿಸುವವರೆಗೆ, ಕುಡಗೋಲು ಕೊಡಿಸುವವರೆಗೆ ಜಿಲ್ಲಾ ಪಂಚಾಯಿತಿಯವರಿಗೆ ಅಧಿಕಾರ ಇದೆ. ಇದನ್ನು ತಾವು ತೆಗೆದು ಹಾಕಬೇಕು. ಸ್ಥಳದಲ್ಲೇ, ತಾಲ್ಲೂಕು ಪಂಚಾಯಿತಿಯವರಿಗೆ ನಾವು ಅಧಿಕಾರ ಕೊಟ್ಟಿದ್ದರೆ, ಇವತ್ತು ಏನು ಸಾಮಗ್ರಿಗಳನ್ನು ಕೊಳ್ಳುತ್ತಿದ್ದಾರೆ, ಅದು ಕೃಷಿ ಇಲಾಖೆ ಮೂಲಕ ಇರಬಹುದು, ಆಶ್ರಯದ ಮೂಲಕ ಇರಬಹುದು, ಮತ್ತೊಂದರ ಮೂಲಕ ಇರಬಹುದು, ಜಿಲ್ಲಾ ಪಂಚಾಯಿತಿಯವರು ಇವತ್ತು ಏನು ದರ ನಿಗದಿ ಮಾಡಿ ಕೊಂಡುಕೊಳ್ಳುತ್ತಿದ್ದಾರೆ, ಆ ಕಾರ್ಯಕ್ರಮಗಳು ಅತ್ಯಂತ ಅಯಶಸ್ವಿ ಕಾರ್ಯಕ್ರಮಗಳು. 400 ರೂಪಾಯಿ ಎಂದು ಕೊಡಿಸುವ ನೇಗಿಲು 150-200 ರೂಪಾಯಿಗಳಿಗೆ ಸ್ಥಳದಲ್ಲೇ ಮಾಡಿಕೊಡುವ ಜನ ಇದ್ದಾರೆ. ಅವರಿಗೆ ಅದನ್ನು ಬಿಟ್ಟುಬಿಟ್ಟಿದ್ದರೆ, ಇನ್ನೂ ಉತ್ತಮವಾಗಿ ಮಾಡಿ ಕೊಟ್ಟಿರುತ್ತಿದ್ದರು. ಮತ್ತು ಅವರಿಗೆ ಜವಾಬ್ದಾರಿ ಇರುತ್ತಿತ್ತು. ಅದನ್ನು ತಾವು ಮಾಡಬೇಕಾಗುತ್ತದೆ. ಇದರ ಜೊತೆಗೆ, ತಾವು ಬೆಳಿಗ್ಗೆ ಹೇಳಿದಿರಿ, ಡಾಂಬರಿನಿಂದ ಹಿಡಿದು ಬೇರೆ ವಸ್ತುಗಳನ್ನು ಪರ್ಚೇಸ್ ಮಾಡುವ ಬಗ್ಗೆ. ಸ್ವಾಮಿ, ಈ ಕೆಲಸ ಮಾಡಿದರಂತೂ ಆಗಬಾರದ ದುರಂತವಾಗುತ್ತದೆ. ಅದಕ್ಕೆ ದಯಮಾಡಿ ಕೈಹಾಕಬೇಡಿ. ಕನಿಷ್ಟವೆಂದರೆ ಈಗ ನಮ್ಮ ಇಂಜಿನಿಯರುಗಳು ಅಕೌಂಟಬಲ್ ಆಗಿಯಾದರೂ ಇದ್ದಾರೆ. ಸ್ಟೋರ್ಸ್ ಪರ್ಚೇಸ್‌ನಿಂದಲೋ, ನಿಮ್ಮ ಇಲಾಖೆಯಿಂದಲೋ ಡಾಂಬರೋ, ಮತ್ತೊಂದನ್ನೋ ತರುತ್ತಾರೆ. ಈ ಡಾಂಬರಿನ ಕಥೆ ನಿಮಗೆ ಗೊತ್ತಿಲ್ಲ. ಒಂದು ಡ್ರಮ್ ಡಾಂಬರಿಗೆ ಇವತ್ತು 1,200 ರೂಪಾಯಿಗಳು. ಎಲ್ಲೋ ಒಂದು ಕಡೆ ಮಿಕ್ಸ್ ಮಾಡಿ, ಮಾಡಿಬಿಟ್ಟರೆ ಆ ರಸ್ತೆ ಆರು ತಿಂಗಳು ತಡೆಯುವುದಿಲ್ಲ. ಎಲ್ಲಿಂದಲೋ ಬರುತ್ತಾರೆ, ಏನೋ ಮಾಡಿಬಿಟ್ಟು ತೆಗೆದುಕೊಂಡುಬಂದು ರಸ್ತೆಗೆ ಹಾಕಿ, ನಾನು ಆಸ್ಫಾಲ್ಟ್ ರಸ್ತೆ ಮಾಡಿದ್ದೇನೆ ಎಂದು ಹೇಳಿಬಿಡುತ್ತಾರೆ. ಈ ಡಾಂಬರಿನ ವಿಷಯದಲ್ಲಿ ಮಾತ್ರ ರಾಜಿಯಾಗುವುದು ಬೇಡ. ಇದನ್ನು ನೀವೇ ಕೊಡಬೇಕು, ಸ್ಟೀಲನ್ನೂ ನೀವೇ ಕೊಡಬೇಕು, ಸಿಮೆಂಟನ್ನು ನೀವೇ ಕೊಡಬೇಕು. ಇದರಲ್ಲಿ ಎರಡು ಮಾತಿಲ್ಲ. ತಮ್ಮಲ್ಲಿ ನಾನು ಒಂದೇ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ಇದನ್ನು ಟೆಂಡರ್ ಮಾಡುವುದರಲ್ಲೇನೂ ತಪ್ಪಿಲ್ಲ. ಭಾರತ ಸರ್ಕಾರದವರು ನಿಮಗೆ ಏನು ಹೇಳಿದ್ದಾರೆ, ಆ ಎಲ್ಲಾ ನಿಬಂಧನೆಗಳನ್ನು ಹಾಕಿ, ಇಷ್ಟು ಜನ ಆಳುಗಳನ್ನು ತೆಗೆದುಕೊಳ್ಳಿ, ಇಷ್ಟು ಮೆಟೀರಿಯಲ್‌ಗೆ ಖರ್ಚು ಮಾಡಿ, ಇಷ್ಟು ಜನಕ್ಕೆ ನೀವು ಲೇಬರ್ ಕೊಡಿ, ಇವುಗಳನ್ನೆಲ್ಲಾ ಹೇಳಿ ಸ್ಥಳೀಯವಾಗಿ ಒಬ್ಬ ವ್ಯಕ್ತಿಯ ಜೊತೆ ಅಗ್ರಿಮೆಂಟ್ ಮಾಡಿಕೊಳ್ಳಿ ಅಥವಾ 10 ಜನರನ್ನು ಸೇರಿಸಿ ಕಂಟ್ರಾಕ್ಟ್ ಕರೆದುಬಿಟ್ಟು ಈ ಕೆಲಸಗಳನ್ನು ಮಾಡಿಸಿದರೆ, ನಾಳೆ ಅವರು ಜವಾಬ್ದಾರರಾಗುತ್ತಾರೆ.

ಇವತ್ತು ನಿಮ್ಮ ಇಂಜಿನಿಯರು ಏನು ಮಾಡುತ್ತಾರೆ ಎಂದರೆ, ದುಡ್ಡು ಡ್ರಾ ಮಾಡುತ್ತಾರೆ, ಬೇಕಾದಷ್ಟು ತೆಗೆದು ಕೊಡುತ್ತಾರೆ, ಮಿಕ್ಕಿದ್ದನ್ನು ಬ್ಯಾಗಿನಲ್ಲಿ ಇಟ್ಟುಕೊಂಡು ಹೋಗುತ್ತಾರೆ. ಇವನು ಜಾಸ್ತಿ ಕೇಳಿದರೆ, ಇವನಿಗೆ ನಾಳೆ ಅವರು ಕೆಲಸ ಕೊಡುವುದಿಲ್ಲ ಜವಾಬ್ದಾರಿ ಇಲ್ಲ. ಹಣವನ್ನು ಡ್ರಾ ಮಾಡುವುದು ಇಂಜಿನಿಯರ್, ಕೆಲಸ ಮಾಡುವುದು ಅವನು. ಕೊಟ್ಟಷ್ಟಕ್ಕೆ ಆದಷ್ಟು ಕೆಲಸ ಇವತ್ತು ನಡೆಯುತ್ತಿದೆ. ಇದನ್ನು ತಾವು ಬದಲಾಯಿಸಬೇಕು. ಮೀಸಲಾತಿ ಪದ್ಧತಿಯನ್ನು ತಾವು ತೆಗೆದಿರಿ, ರೋಸ್ಟರ್ ಸಿಸ್ಟಮ್ ಎಂದು ತಾವು ಏನು ಹೇಳಿದಿರಿ, ಇದು ಅಷ್ಟೊಂದು ಪಾರದರ್ಶಕವಾಗಿಲ್ಲ. ಇವತ್ತೊಂದು ಮಾತು ಕೇಳಿಬರುತ್ತಿದೆ, ಬಲವಾಗಿರುವವರಿಗೆ ಅವರಿಗೆ ಬೇಕಾದ ಕೆಟಗರಿ ಮೀಸಲಾಗುತ್ತಿದೆ, ಶಕ್ತಿಯಿಲ್ಲದವರಿಗೆ ಯಾರಿಗೂ ಬೇಡವಾದವುಗಳನ್ನು ಇಂಪೋಸ್ ಮಾಡುತ್ತಿದ್ದಾರೆ ಎಂದು. ಇವತ್ತು ಕೆಲವು ಕ್ಷೇತ್ರಗಳು ಏನು ಆಗುತ್ತಿವೆ ಎಂದು ನಾನು ಇಲ್ಲಿ ಮಾತನಾಡಲು ಬಯಸುವುದಿಲ್ಲ. ಬೇಕಾದ್ದು ಮೀಸಲು ಆಗುತ್ತದೆ, ಇನ್ನೂ ಕೆಲವು ಕ್ಷೇತ್ರಗಳಲ್ಲಿ ಏನು ಮಾಡಿದರೂ ಕೆಟಗರಿ ಬದಲಾಗುವುದಿಲ್ಲ. ಇದನ್ನು ತಾವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿ ಇಟ್ಟುಕೊಳ್ಳುವುದು ಬೇಕಾಗಿಲ್ಲ. ಒಂದು ಸ್ಪಷ್ಟವಾದ ತೀರ್ಮಾನ ಆಗಬೇಕು. ಎಲೆಕ್ಷನ್ ಕಮೀಷನ್‌ಗೆ ಬಿಡಿ ಅಥವಾ ಇನ್ನೊಬ್ಬರಿಗೇ ಬಿಡಿ. ಏಕೆ ನಿಮ್ಮ ಮೇಲೆ ಈ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಿದ್ದೀರಿ?

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಸದಸ್ಯರ ಸಲಹೆ ಯೋಗ್ಯವಾಗಿದೆ ಎಂದು ಪರಿಗಣಿಸಿ, ಸರ್ಕಾರ ಈ ಜವಾಬ್ದಾರಿಯನ್ನು ಹೊರುವುದೇ ಬೇಡ ಎಂದು ನಾವು ಈಗಾಗಲೇ ಅದಕ್ಕೆ ತಿದ್ದುಪಡಿಯನ್ನು ತಂದಿದ್ದೇವೆ. ಪ್ರಾಯಶಃ ನಾಳೆ ಅದು ಈ ಸಭೆಯಲ್ಲಿ ತಿದ್ದುಪಡಿ ವಿಚಾರ ಚರ್ಚೆಗೆ ಬರುತ್ತದೆ. ತಾವೆಲ್ಲರೂ ಅದನ್ನು ಒಪ್ಪುವುದಾದರೆ, ಚುನಾವಣೆಯನ್ನು, ನಮ್ಮ ಸಂಪೂರ್ಣ ಭೌಗೋಳಿಕವಾಗಿರತಕ್ಕಂಥ ಕ್ಷೇತ್ರದ ಪುನರ್ ವಿಂಗಡನೆ, ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂಥ ಮೀಸಲಾತಿ ಮತ್ತು ಪದಾಧಿಕಾರಿಗಳ ಮೀಸಲಾತಿ ಇವೆಲ್ಲವನ್ನೂ ಸಂಪೂರ್ಣವಾಗಿ ಚುನಾವಣಾ ಆಯುಕ್ತರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ನಾನಂತೂ ಇದನ್ನು ಸ್ವಾಗತಿಸುತ್ತೇನೆ. ಕೊನೆಯದಾಗಿ, ಐ.ಆರ್.ಡಿ.ಪಿ. ಮತ್ತು ಟ್ರೈಸಂ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಹಿಂದೆಯೆಲ್ಲಾ ಶಾಸಕರು ಆ ಸಮಿತಿಯ ಸದಸ್ಯರಾಗಿರುತ್ತಿದ್ದರು. ಈಗ ಏಕಾಏಕಿ ಅದನ್ನೂ ಕೂಡ ತೆಗೆದುಹಾಕಿದ್ದಾರೆ. ನನ್ನ ಎದುರಿಗೆ ಅಲ್ಲೊಂದು ಆಯ್ಕೆಯಾಗುತ್ತದೆ. ಜಿಲ್ಲಾ ಪರಿಷತ್ತು ಸದಸ್ಯರನ್ನು ಅದರ ಸದಸ್ಯರನ್ನಾಗಿ ಮಾಡುತ್ತೀರಿ. ತಾವು ಎಲ್ಲರನ್ನೂ ಮಾಡುತ್ತೀರಿ. ಅದರಲ್ಲಿ ತಪ್ಪೇನಿದೆ? ಶಾಸಕರು ಟ್ರೈಸೆಂ ಸ್ಕೀಮಿನ ಕಮಿಟಿಯಲ್ಲಿ ಕುಳಿತುಕೊಳ್ಳುವುದು ತಪ್ಪೇ? ಹಾಗಿದ್ದರೆ ನಮ್ಮನ್ನು ಹಾಸ್ಟೆಲ್ ಸಮಿತಿಗಳಲ್ಲಿ ಏಕೆ ಕೂಡಿಸುತ್ತೀರಿ? ಶಾಸಕರನ್ನು ಹಾಸ್ಟೆಲ್ ಸಮಿತಿಯಲ್ಲಿ ಕೂರಿಸಿ, 70 ಜನ ಅಭ್ಯರ್ಥಿಗಳಿಗೆ 15 ಅರ್ಜಿ ಬರುವಂಥಾದ್ದನ್ನು ಆಯ್ಕೆ ಮಾಡಿ ಎಂದು ಹೇಳುತ್ತೀರಿ. ಟ್ರೈಸೆಂ ಸ್ಕೀಂನಲ್ಲಿ ಇವತ್ತು ಅಧಿಕಾರಿಗಳು ಎಷ್ಟು ಲೂಟಿ ಮಾಡುತ್ತಿದ್ದಾರೆ. ನಾವು ಮಾತ್ರ ಅಯೋಗ್ಯರು, ಇನ್ನೆಲ್ಲರೂ ಸಾಚಾ ಎನ್ನುವ ತೀರ್ಮಾನಕ್ಕೆ ನಾವೇ ಬರಬೇಕೇ? ಈ ಶಾಸನ ಸಭೆಯ ಸದಸ್ಯರಾಗಿ, ನಮ್ಮ ಗುಂಡಿಯನ್ನು ನಾವೇ ತೋಡಿಕೊಳ್ಳುವಂಥ ಪರಿಸ್ಥಿತಿ ಬರಬೇಕೇ? ಐ.ಆರ್.ಡಿ.ಪಿ. ಮತ್ತು ಟ್ರೈಸೆಂ ಫಲಾನುಭವಿಗಳನ್ನು ಆಯ್ಕೆ ಮಾಡುವ ದಿವಸ

ಸನ್ಮಾನ್ಯ ಶಾಸಕರುಗಳನ್ನು ಆ ಸಭೆಯ ಸದಸ್ಯರನ್ನಾಗಿ ಮಾಡಲು ತಮಗೆ ಏನು ಕೊರತೆ ಇದೆ, ಏನು ತೊಂದರೆ ಇದೆ? ಇವತ್ತು ನಾವು ಅಲ್ಲಿಗೆ ಹೋಗುವ ಹಾಗಿಲ್ಲ. ಅಧಿಕಾರಿಗಳು ಕರ್ಟಸಿಗೋಸ್ಕರ ನಿಮ್ಮದು ಯಾವುದಾದರೂ ಇದೆಯಾ ಸಾರ್, ಹೇಳುತ್ತೀರಾ ಸಾರ್ ಎಂದು ಕೇಳುವಂಥ ಸ್ಥಿತಿಯನ್ನು ನಾವು ನಿರ್ಮಾಣ ಮಾಡಿಕೊಳ್ಳಬೇಕೇ?

3.40 ಪಿ. ಎಂ.

ರಾಜಕಾರಣ ಆಗೇ ಬಿಡಲಿ ಎಂದರೆ ಆಗಿಯೇ ಬಿಡುತ್ತದೆ, ದಯಮಾಡಿ ಆ ಕಮಿಟಿಗಳಿಗೆ ಮೆಂಬರ್ಸ್ ಮಾಡಬೇಕು ಮತ್ತು ಅನೇಕ ಹಂತಗಳಲ್ಲಿ ಅಧಿಕಾರದಲ್ಲಿ ಇರುವವರು ನಾವು ಮನಸ್ಸಿನಿಂದ ಹೇಳಬೇಕು. ಈ ಕಾಂಟ್ರಾಕ್ಟ್ ಒಡೆತನ ಏನು ಇಟ್ಟುಕೊಂಡಿದ್ದಾರೆ ಅದನ್ನು ತಪ್ಪಿಸದೆ ಹೋದರೆ ಯಾರಿಗೂ ಹೆಸರು ಬರುವುದಿಲ್ಲ ಎಂದು ನಾನು ಹೇಳಿ ಇನ್ನು ಎರಡು ಮಾತುಗಳನ್ನು ಲೋಕೋಪಯೋಗಿ ಬಗ್ಗೆ ಹೇಳುತ್ತೇನೆ. ಈ ಖಾತೆ ಹೇಗೆ ಆಗಿದೆ ಎಂದರೆ, ನಾವು ಕೋರ್ಟ್ ಬಗ್ಗೆ ಮಾತನಾಡಬಾರದು the decision is given on face, not on case. ಈ ಖಾತೆ ಹಾಗೆ ಆಗಿದೆ. ಒಂದೊಂದು ಬಾರಿ ಈ ಖಾತೆ ಭಾರಿ ಹಿಮಾಲಯದ ತುದಿಗೆ ಹೋಗಿ ಬಿಡುತ್ತದೆ, ಇನ್ನೊಂದು ಸಾರಿ ತೀರಾ ಕೆಳಗೆ ಅಂತರಗಂಗೆಗೆ ಬಂದು ನಿಂತುಕೊಂಡು ಬಿಡುತ್ತದೆ. ಪಾಪ ನಮ್ಮ ಉದಾಸಿಯವರಿಗೆ ಈ ಖಾತೆಯನ್ನು ಏಕೆ ಕೊಟ್ಟರು ಎಂದು ನನಗೆ ಅರ್ಥವಾಗುತ್ತಿಲ್ಲ. ಒಂದು ನಬಾರ್ಡ್‌ದು, ಇನ್ನೊಂದು ವರ್ಲ್ಡ್ ಬ್ಯಾಂಕಿನ ಎರಡು ಪುಸ್ತಕವನ್ನು ಹಿಡಿದುಕೊಂಡು ಓಡಾಡುತ್ತಾರೆ. ಏನಾದರೂ ಮಾಡಿ ಸ್ವಾಮಿ ಎಂದರೆ, ಒಂದು ನಬಾರ್ಡ್‌ಗೆ ಸೇರಿಸಿದ್ದೇವೆ ಎನ್ನುತ್ತಾರೆ, ಇಲ್ಲದಿದ್ದರೆ ವಾಷಿಂಗ್‌ಟನ್‌ಗೆ ಹೋಗಿ ಬರುತ್ತೇವೆ ಎನ್ನುತ್ತಾರೆ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಲೋಕೋಪಯೋಗಿ ಖಾತೆಗೆ ಹೆಚ್ಚು ಹಣ ಕೊಟ್ಟು ಆ ಖಾತೆಯ ಮಂತ್ರಿಗಳಿಗೆ ಕೆಲಸ ಮಾಡಲು ಅನುವು ಮಾಡಿಕೊಡದೆ ಹೋದರೆ ಈ ರಾಜ್ಯದಲ್ಲಿ ಎಷ್ಟು ಕಿ.ಮಿ. ಎಂದು ಹೇಳಿದ್ದಾರೆ ಅದರಲ್ಲಿ ಅರ್ಧದಷ್ಟು ಉಳಿಯೋದಿಲ್ಲ. ನನ್ನ ಗ್ರಾಮದಲ್ಲಿ ಒಂದು ರಸ್ತೆ ಬರುತ್ತದೆ. 40 ವರ್ಷವಾಯಿತು ಆ ರಸ್ತೆಯಾಗಿ ಇವತ್ತಿನವರೆಗೆ ಚಿಪ್ ಕಾರ್ಪೆಟಿಂಗ್ ಆಗಿಲ್ಲ. ನೀವು ಏಳುವರೆ ಸಾವಿರ, ಹನ್ನೆರಡು ಸಾವಿರ ಕಿ.ಮೀ.ಗೆ ಕೊಡುವ ಗ್ರ್ಯಾಂಟ್ ಯಾವುದಕ್ಕೂ ಸಾಲುವುದಿಲ್ಲ. ಉದಾಸಿಯವರೆ, ಆ ರೋಡ್ ಮಾಡಿಸಿ ಈ ರೋಡ್ ಮಾಡಿಸಿ ಎಂದು ನಾನು ಕೇಳಿದೆ, ಅನುದಾನದ ಲಭ್ಯತೆಯನ್ನು ಇಟ್ಟುಕೊಂಡು ಮಾಡುತ್ತೇನೆಂದು ಅವರು ಬರೆದಿದ್ದೆ ಬರೆದಿದ್ದು, ನಾನು ಈ ಸಭೆಯಲ್ಲಿ ಬೇಡಿಕೆ ಮೇಲೆ ಮಾತನಾಡುತ್ತಾ ಕೇಳುತ್ತೇನೆ, ಅವರಿಗೇನಾದರೂ ಅನುದಾನದ ಲಭ್ಯತೆಯನ್ನು ಸರ್ಕಾರದವರು ಮಾಡಿಕೊಡುತ್ತಾರೆಯೆ ಎಂದು. ಈ ಲೋಕೋಪಯೋಗಿ ಖಾತೆ ಹಿಂದೆ ಸಿದ್ದವೀರಪ್ಪ, ಶ್ರೀ ಚನ್ನವೀರಪ್ಪನವರ ಕಾಲದಿಂದ ಹೆಸರಾದ ಖಾತೆ ಅದು. ಕೈಕಾಲು ಕುತ್ತಿಗೆ ಎಲ್ಲ ತೆಗೆದು ಬರೀ ಶರೀರ ನಿಂತಿರುವ ಖಾತೆಗೆ ಉಸಿರಾಡಲು ಆಕ್ಸಿಜನ್ ಆದರೂ ಕೊಡುತ್ತಾರೆಯೇ ಎಂದು ಕೇಳುತ್ತೇನೆ. ಇವತ್ತು ಆ ಖಾತೆಗೆ ನಾವು ಜೀವ ತುಂಬದೆ ಹೋದರೆ ಭಾರಿ ತೊಂದರೆಯಾಗುತ್ತದೆ. ಯಾವ ರಸ್ತೆಗಳನ್ನು ಅವರು ರಿಪೇರಿ ಮಾಡಲು ಆಗುವುದಿಲ್ಲ. ಒಂದು ತಾಲ್ಲೂಕಿಗೆ ವರ್ಷಕ್ಕೆ 12 ಲಕ್ಷ 13 ಲಕ್ಷ ರೂಪಾಯಿಗಳ ಗ್ರ್ಯಾಂಟ್ ಬಿಡುಗಡೆಯಾಗುತ್ತದೆ. 3 ಕಿ.ಮೀ. ನಿಂದ 4 ಕಿ.ಮೀ.ವರೆಗೆ ರಸ್ತೆ

ದುರಸ್ತಿಯಾಗಿಬಿಟ್ಟರೆ ಹೆಚ್ಚು ಎನ್ನುವ ಸ್ಥಿತಿ ನಿರ್ಮಾಣವಾಗಿ ಬಿಟ್ಟಿದೆ. ಅವರಿಗೆಲ್ಲ ಉತ್ತರ ಹೇಳಬೇಕು. ಕನಿಷ್ಠ 150-200 ಕಿ.ಮೀ. ನಮ್ಮದು ಡಾಂಬರ್ ಆಗಿರುವ ರೋಡನ್ನು ಚಿಪ್ ಕಾರ್ಪೆಟಿಂಗ್ ಮಾಡಬೇಕಾಗಿದೆ. 100-120 ಕಿ.ಮೀ. ರೋಡ್ ಇನ್ನು ಹಾಗೆ ಉಳಿದಿದೆ, ನನ್ನ ಕ್ಷೇತ್ರದಲ್ಲಿ ರಾಜ್ಯ ರಸ್ತೆ ಆಸ್ಫಾಲ್ಟ್ ಆಗದೆ ಹಾಗೆ ಉಳಿದಿದೆ. ರಾಜ್ಯ ರಸ್ತೆಯನ್ನು ತಾವು ಇನ್ನು ಆಸ್ಫಾಲ್ಟ್ ಮಾಡಿಲ್ಲ. ಆ ರೋಡ್‌ನಲ್ಲಿ ಹೋದರೆ ನಮಗೆ ನಾಚಿಕೆಯಾಗುತ್ತದೆ. ಈ ಸ್ಥಿತಿಯಲ್ಲಿ ಇದೆ ಈ ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕು ವಿಚಾರದಲ್ಲಿ ಕನಿಷ್ಠ ರಾಷ್ಟ್ರೀಯ ಹೆದ್ದಾರಿ ಎಂದು ಬೋರ್ಡ್ ಹಾಕಿದ ಕಾರಣಕ್ಕಾದರೂ ಅಸ್ಫಾಲ್ಟ್ ಮಾಡಿ ಯಾರಾದರೂ ಬಂದು ಅಪಘಾತ ಮಾಡಿಕೊಂಡಾರು ಎಂದು ಕೆ.ಹೆಚ್. ರಂಗನಾಥ್‌ರವರ ಕಾಲದಿಂದ ಕೇಳುತ್ತಾ ಇದ್ದೇವೆ. ದಯಮಾಡಿ ಆ ಕಡೆಗೆ ಗಮನ ಕೊಡಬೇಕು. ಇನ್ನು ನಬಾರ್ಡ್ ಎಂದು ಏನು ತಾವು ಹೇಳುತ್ತಿದ್ದೀರಿ, ಇದಕ್ಕೆ ಒಂದು ಸ್ಟ್ಯಾಂಡರ್ಡ್‌ನ್ನು ಫಿಕ್ಸ್ ಮಾಡಬೇಕು. ಅವರು ಯಾರು ಎಲ್ಲಿ ಕೇಳುತ್ತೇವೆ, ಹೇಗೆ ಕೇಳುತ್ತೇವೆ ಅದಕ್ಕೆ ಅವರು ಆಗಲಿ ಎಂದು ಹೇಳಿ ಬಿಡುತ್ತಾರೆ. ನಬಾರ್ಡ್ ರಸ್ತೆಯವರು ಎರಡು ತಾಲ್ಲೂಕು ಬಂದು ಒಂದು ರೋಡ್ ಮಧ್ಯೆ ಪಾಸ್ ಆಗುತ್ತದೆ ಎಂದರೆ ಮೈನ್ ರೋಡ್‌ನ ಹಳ್ಳಿ ಒಳಗಡೆ ಬರುವ ಹಾಗೆ ತಿರುವುತ್ತಾರೆ. ನನ್ನ ಕ್ಷೇತ್ರಕ್ಕೆ ಇನ್ನೂ ಬಂದಿಲ್ಲ. ಅದಕ್ಕೆ ಇವರು ಸಹಿ ಹಾಕಿ ಬಿಡುತ್ತಾರೆ. ಒಂದು ರೋಡ್ ತೆಗೆದುಕೊಂಡ ಮೇಲೆ ಅದನ್ನು ನಾಮ್ನಿಕ್ಲೇಚರ್ ಮೇಲೆ ತೆಗೆದುಕೊಂಡು ಮಾಡಬೇಕು. ಇದನ್ನು ಕ್ಷೇತ್ರಕ್ಕೆ ಮತ್ತು ಶಾಸಕರಿಗೆ ದಯಮಾಡಿ ಸೀಮಿತ ಮಾಡಬೇಕು. ಕನಿಷ್ಠ ಮುಖ್ಯ ರಸ್ತೆಗಳು ಏನು ಇವೆ ಅವುಗಳನ್ನು ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕು. ನಾನು ಹೇಳುತ್ತೇನೆ ಒಂದು ಕಡೆಯಿಂದ ಸುತ್ತಿಕೊಂಡು ಬರುವ ರಸ್ತೆಯನ್ನು ನೀವು ಅಸ್ಫಾಲ್ಟ್‌ಟೇಶನ್ ಮಾಡುತ್ತೀರಿ. ಇದನ್ನು ತಪ್ಪಿಸದೇ ಹೋದರೆ ತೊಂದರೆಯಾಗುತ್ತದೆ. ಇದು ಯಾರ ದುಡ್ಡು ಸ್ವಾಮಿ ನಮ್ಮ ದುಡ್ಡ, ನಿಮ್ಮ ದುಡ್ಡ, ರಾಜ್ಯದ ದುಡ್ಡು ಮೊದಲು ಪ್ರಮುಖ ರಸ್ತೆಗಳನ್ನು ಮಾಡಿ ನಮ್ಮನ್ನು ಯಾರನ್ನು ಕೇಳಬೇಡಿ ಲಿಸ್ಟ್ ತರಿಸಿಕೊಂಡು ಬಿಡಿ, ಟ್ರಾಫಿಕ್ ಎಲ್ಲಿ ಜಾಸ್ತಿ ಇದೆ, ಎಲ್ಲಿ ಜನೋಪಯೋಗ ಜಾಸ್ತಿಯಾಗುತ್ತಿದೆ. ಯಾವ ರಸ್ತೆಗೆ ಆದ್ಯತೆ ಕೊಡಬೇಕೆಂದು ನಿಮ್ಮ ಕಂಪ್ಯೂಟರ್‌ಗೆ ಫೀಡ್ ಮಾಡಿ ನೋಡಿ. ಯಾವ ರಸ್ತೆ ಆಗಬೇಕು, ಯಾವ ರಸ್ತೆ ಆಗಬಾರದು ಎಂದು ತೀರ್ಮಾನವಾಗಿ ಹೋಗುತ್ತದೆ. ಇಲ್ಲ, ರಸ್ತೆಯನ್ನೆ ತೆಗೆದುಕೊಳ್ಳಬೇಡಿ, ರಸ್ತೆ ತೆಗೆದುಕೊಂಡು ಆ ಕ್ಷೇತ್ರದ ಅಂತ್ಯಕ್ಕೆ ಬಂದಾಗ ತಿರುಗಿಸುವ ಕಾರ್ಯವನ್ನು ತಾವು ಮಾಡಕೂಡದು. ತಾವು ಈ ಕಟ್ಟಡ ಏನು ಕಟ್ಟುತ್ತಿದ್ದೀರಿ, ನ್ಯಾಯಾಲಯದ ಕಟ್ಟಡ, ಆಸ್ಪತ್ರೆಯ ಕಟ್ಟಡಗಳಿಗೆ ಈಗಿನಿಂದ ಸಮಯ ಕೊಟ್ಟರೆ ಇನ್ನು 10 ವರ್ಷ, 15 ವರ್ಷದವರೆಗೆ ಇವು ಯಾವುದು ಮುಗಿಯುವುದಿಲ್ಲ. 1/3 ಭಾಗದ ಗ್ರ್ಯಾಂಟ್‌ಗೆ ಶುರು ಮಾಡಬೇಕು. ಆಡಳಿತಾಂಗದ ಅಪ್ಪಣೆ ತೆಗೆದುಕೊಂಡು ತಾವು ನಿಯಮ ಮಾಡಿಕೊಂಡು 60 ಲಕ್ಷ, 70 ಲಕ್ಷ ರೂಪಾಯಿಗಳ ಕಟ್ಟಡಕ್ಕೆ ಒಂದು ಲಕ್ಷ, ಎರಡು ಲಕ್ಷ ರೂಪಾಯಿಗಳ ಗ್ರ್ಯಾಂಟ್ ತೋರಿಸುತ್ತೀರಾ, ಅಲ್ಲಿ ಆ ಲಿಂಟಲ್ ಲೆವೆಲ್‌ಗೂ ಅಥವಾ ರೂಫ್ ಲೆವೆಲ್‌ಗೂ ತೆಗೆದುಕೊಂಡು ನಿಲ್ಲಿಸಿಬಿಟ್ಟು ಆ ಕಂಟ್ರಾಕ್ಟದಾರ ಓಡಿ ಹೋಗಿ ಬಿಡುತ್ತಾನೆ. ಏಕೆಂದರೆ ಅವನಿಗೆ ಅದು ಗಿಟ್ಟುವುದಿಲ್ಲ, ಟೆಂಡರ್ ಆಗಿರುತ್ತೆ, ಎಸ್ಟಿಮೇಟ್ ರಿವೈಜ್ ಮಾಡಲು ಬರುವುದಿಲ್ಲ. ಅವನನ್ನು ಹಿಡಿದುಕೊಂಡು ಬರಲು ನಿಮಗೆ ಶಕ್ತಿ ಇಲ್ಲ. ಆಮೇಲೆ ಹೇಳುತ್ತಾರೆ, ಕಂಟ್ರಾಕರ್ ಸಿಗುತ್ತಾ

ಇಲ್ಲ, ಕೆಲಸ ಮುಗಿಯಲು ಬಂದಿದೆ. ಸಿ.ಇ. ಹತ್ತಿರ ಇದೆ, ಎಸ್.ಇ. ಹತ್ತಿರ ಇದೆ, ಸೆಕ್ರೆಟರಿ ಹತ್ತಿರ ಇದೆ, ಫೈಲು ಅದು ಡಿಸೈಡ್ ಆದ ಮೇಲೆ ಇಲಾಖೆಗೆ ಬರುತ್ತದೆ. ಆಗ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ತಮ್ಮ ಕಾಲದಲ್ಲಿ ಯಾವುದೇ ಯೋಚನೆ ಮಾಡಿದ್ದರೆ ಅದಕ್ಕೆ ಒಂದು ನಿರ್ದಿಷ್ಟವಾದ ತೀರ್ಮಾನವಾಗಬೇಕು. ಕನಿಷ್ಟ 3 ರಿಂದ 5 ವರ್ಷಗಳಲ್ಲಿ ಒಂದು ಕೆಲಸ ಮುಗಿಸಲು ಆಗದಿದ್ದರೆ ಆ ಕೆಲಸ ಮಾಡುವುದನ್ನೇ ನಿಲ್ಲಿಸಿ ಬಿಡಬೇಕು. ಸನ್ಮಾನ್ಯ ಉದಾಸಿಯವರ ಕಾಲದಲ್ಲಿಯಾದರೂ ಒಂದು ಟೈಮ್ ಬೌಂಡ್ ಪ್ರೋಗ್ರಾಂ ಮಾಡಿ 3 ವರ್ಷಕ್ಕೆ ಮಾಡುತ್ತೀರಾ, 5 ವರ್ಷಕ್ಕೆ ಮಾಡುತ್ತೀರಾ, ಮಾಡಿ 1/5 ಭಾಗದ ಗ್ರ್ಯಾಂಟ್ ಕೊಡುತ್ತೀರಾ, 1/3 ಭಾಗದ ಗ್ರ್ಯಾಂಟ್ ಕೊಡುತ್ತೀರಾ, ಇದರ ಬಗ್ಗೆ ತಾವು ಒಂದು ತೀರ್ಮಾನಕ್ಕೆ ಬನ್ನಿ, ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಇವತ್ತು ಬಂದು ನೋಡಿ ಕೋರ್ಟ್ ಬಿಲ್ಡಿಂಗ್‌ಗಳ ಕಥೆಯನ್ನು 40 ರಿಂದ 60 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಇರುವ ಕಟ್ಟಡಗಳನ್ನು ತಾವು ಲಿಂಟಲ್ ಲೆವೆಲ್ಲಿಗೆ ನಿಲ್ಲಿಸಿಬಿಟ್ಟಿದ್ದೀರಿ. ನನ್ನ ಕ್ಷೇತ್ರದಲ್ಲಿಯ ಒಂದು ಕಾಲೇಜು ಕಟ್ಟಡದ ಒಂದು ರೂಮಿಗೆ, ಅದರ ಫೋಟೋ ತೋರಿಸೋಣ ಎಂದು ಮಾಡಿದ್ದೆ. ಆದರೆ ನೀವು ಇವತ್ತು ಕರೆಯುತ್ತೀರಿ ಎಂದು ನನಗೆ ಗೊತ್ತಾಗಲಿಲ್ಲ. ಇದಕ್ಕೆ ಹೇಳುವವರು, ಕೇಳುವವರು ಯಾರು ಇಲ್ಲವೇ? ನಿಮ್ಮ ಎಕ್ಸಿಕ್ಯುಟೀವ್ ಇಂಜಿನಿಯರ್ ಏನು ಹೇಳುತ್ತಾರೆ ಎಂದರೆ ಎಲ್‌ಒಸಿ ನನ್ನ ಜವಾಬ್ದಾರಿ ಮೇಲೆ ತರುತ್ತಾ ಇದ್ದೇನೆ. ದುಡ್ಡು ಕೊಡುವುದಕ್ಕೆ ನಮ್ಮ ಡಿಸ್ಕ್ರಿಷನ್ ಇದೆ ಎಂದು. ಈ ರಾಜ್ಯದಲ್ಲಿ ಬಿಲ್ಡಿಂಗ್ ಮಾಡುವರಿಗೆ ಆಧ್ಯತೆ ಮೇಲೆ ಕೊಡುತ್ತಾ ಇದ್ದರು. ಏಕೆಂದರೆ ವರಮಾನ ಕಡಿಮೆ, ಪಾಪ ಅವನು ಕೈಸುಟ್ಟಿಕೊಳ್ಳುತ್ತಾನೆ ಎಂದು, ಇವತ್ತು ಹಾಗೆ ಆಗಿಲ್ಲ. ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳ ಡಿಸ್‌ಕ್ರಿಷನ್ ಮೇಲೆ ಎಲ್‌ಒಸಿ ಪೇಮೆಂಟ್ ಆಗುತ್ತಾ ಇದೆ. ಶೇಕಡಾ 1 ಅಥವಾ 2 ಇದ್ದದ್ದು, ಶೇಕಡ 7 ರಿಂದ 8ಕ್ಕೆ ಹೋಗುತ್ತಾ ಇದೆ. ಕೆಲಸಗಳನ್ನು ಮಾಡದೆ ಇರುವವರ ಬಿಲ್‌ಗಳು ಆಗುತ್ತಾ ಇವೆ. ಕೆಲಸ ಮಾಡಿದವರು ಇವತ್ತು ನಿಮ್ಮ ಬಾಗಿಲುಗಳಿಗೆ ಅಲೆಯುತ್ತಾ ಇದ್ದಾರೆ. ಏನಾದರೂ ಮಾಡಿ ಈ ಇಲಾಖೆಯನ್ನು ಪುನಶ್ಚೇತನಗೊಳಿಸಲು ಆಗುತ್ತದೆಯೇ? ಏನಾದರೂ ಮಾಡಿ ಸನ್ಮಾನ್ಯ ಉದಾಸಿಯವರ ಕಾಲದಲ್ಲಿ ಈ ಇಲಾಖೆಗೆ ಹಣ ಕೊಟ್ಟು ಅರ್ಧವಾಗಿರುವ ಕೆಲಸಗಳನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ದೊಡ್ಡ ಮನಸ್ಸು ಮಾಡಿ ಉದಾರವಾಗಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎನ್. ರಾಜಣ್ಣ (ಭಾರತಿನಗರ ವಿಧಾನಸಭಾ ಕ್ಷೇತ್ರ) : ಸನ್ಮಾನ್ಯ ಗೌರವಾನ್ವಿತ ಅಧ್ಯಕ್ಷರೆ, ಸದಸ್ಯರೆ,

MR. SPEAKER : He is addressing the whole Assembly.

Sri. N. RAJANNA : Sir, there is always a slip between the cup and the lip.. Important thing is members happy. What I am going to speak is much more important. As Mr. Madhu Swamy has expressed there is problem regarding execution of works in the Government. ಬೇಡಿಕೆ ಸಂಖ್ಯೆ 48 ಭೂಕಂದಾಯ ಇತ್ಯಾದಿ.

ಬೇಡಿಕೆ ಸಂಖ್ಯೆ43 ಲೋಕೋಪಯೋಗಿ ಕಾಮಗಾರಿ. ಬೇಡಿಕೆ ಸಂಖ್ಯೆ44 ಕಟ್ಟಡಗಳು, ಬೇಡಿಕೆ ಸಂಖ್ಯೆ 55 ಗ್ರಾಮೀಣಾಭಿವೃದ್ಧಿ, ಈ ವಿಷಯಗಳ ಬಗ್ಗೆ ನಾನು ಆದಷ್ಟು ಬೇಗ ಮಾತನಾಡಿ ಮುಗಿಸಲಿದ್ದೇನೆ. ಭೂಕಂದಾಯ ಎಂದರೆ ಅದು ಭೂಕಂದಾಯ ಇರಬಹುದು, ಅರಣ್ಯ ಸಂಪತ್ತಿನಿಂದ ಬರತಕ್ಕಂತಹ ಆದಾಯ ಇರಬಹುದು, ಖನಿಜ ಸಂಪತ್ತಿನಿಂದ ಬರತಕ್ಕಂತಹ ಆದಾಯ ಇರಬಹುದು. ಸೇಲ್ಸ್‌ಟ್ಯಾಕ್ಸ್‌ನಿಂದ ಬರತಕ್ಕಂತಹ ಆದಾಯ ಇರಬಹುದು, ಅಬ್ಕಾರಿ ಇಲಾಖೆಯಿಂದ ಬರತಕ್ಕಂತಹ ಆದಾಯ ಇರಬಹುದು. ಎಲ್ಲಾ ಕಡೆಯಿಂದ ಬಂದ ಆದಾಯ ಖಜಾನೆಗೆ ಬೀಳುತ್ತದೆ. ನಾವು ನಿರ್ಣಯ ಮಾಡುತ್ತೇವೆ. ಆದರೆ ಅದನ್ನು ಖರ್ಚು ಮಾಡುವವರು ಅಧಿಕಾರಿಗಳು He may be a Class-I Officer, ಪ್ರಥಮ ವರ್ಗದ ಅಧಿಕಾರಿಗಳು ಇರಬಹುದು, ಎರಡನೇ ವರ್ಗದ ಅಧಿಕಾರಿಗಳು ಇರಬಹುದು ಅಥವಾ ಮೂರನೇ ವರ್ಗದ ಅಧಿಕಾರಿಗಳು ಇರಬಹುದು including Group (-D)ಇವರು ಬಹಳ ಮುಖ್ಯವಾದವರು. ಈಗ ವ್ಯತ್ಯಾಸವಾಗುತ್ತಿರುವುದು ಏನೆಂದರೆ, ನಾವು ಬಹಳ ಪ್ರಯತ್ನಮಾಡಿ ಒಳ್ಳೆಯ ಆಡಳಿತವನ್ನು ಕೊಡಬೇಕೆಂದು ಮಾಡುತ್ತಿದ್ದೇವೆ. We are trying our level best to give good administration. But, as I observed for the last few weeks, ನಾವು ನೋಡುತ್ತಿರುವುದು ಏನಾಗಿದೆ ಎಂದರೆ, ಕೆಲವರು ಇದನ್ನು ಮೆಚ್ಚಿಕೊಂಡರು. ಡಿ.ಆರ್.ಪಾಟೀಲರು ಮೆಚ್ಚಿಕೊಂಡರು, ಮಾಧುಸ್ವಾಮಿಯವರು ಮೆಚ್ಚಿಕೊಂಡರು. ಒಳ್ಳೆಯ ಕೆಲಸ ಮಾಡಿದಾಗ ಮೆಚ್ಚಿಕೊಳ್ಳಿ ಇದರಿಂದ ನಮಗೂ ಸಂತೋಷವಾಗುತ್ತದೆ ಮತ್ತು ಇನ್ನು ಜಾಸ್ತಿ ಕೆಲಸ ಮಾಡಲು ಸಹಾಯವಾಗುತ್ತದೆ. ನಮ್ಮ ಸರ್ಕಾರ ಭೂಕಂದಾಯದ ವಿಷಯದಲ್ಲಿ ಒಳ್ಳೆಯ ಕೆಲಸ ಮಾಡಿದೆ. ಅದನ್ನು ವರ್ಣಿಸುತ್ತೇನೆ, ಊಟ ಮಾಡುವಾಗ ಅನ್ನದಲ್ಲಿ ಕಲ್ಲು ಸಿಗಬಹುದು, ಪಲ್ಯದಲ್ಲಿ ಕಲ್ಲು ಸಿಗಬಹುದು, ಸಾರಿನಲ್ಲಿ ಸಿಗಬಹುದು, ಚಪಾತಿಯನ್ನು ಆ ಮಣೆ ಮೇಲೆ ಇಟ್ಟಾಗ ಅದರಲ್ಲಿ ಕಲ್ಲು ಸಿಗಬಹುದು. ಆದರೆ ನೀವು ಮೊಸರಿನಲ್ಲಿಯೇ ಕಲ್ಲುಗಳನ್ನು ಹುಡುಕುತ್ತಿರುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾವು ಮೊಸರಿನಲ್ಲಿ ಕಲ್ಲು ಹುಡುಕಲಿಲ್ಲ, ನೀವೇ ಹಾಕಿದ್ದೀರಿ, ಏನು ಮಾಡುವುದು ?

ಶ್ರೀ ಎನ್. ರಾಜಣ್ಣ : ಸ್ವಾಮಿ, ಕಾಮಧೇನು ಕೊಡತಕ್ಕಂತಹ ಶುದ್ದ ಅಮೃತ, ಅದರಲ್ಲಿ ಕಲ್ಲು ಸಿಕ್ಕಿಬಿಟ್ಟರೆ ದೇಶ ಉಳಿಯುವುದಿಲ್ಲ. ನೀವು ಉಳಿಯುವುದಿಲ್ಲ, ನಾವು ಉಳಿಯುವುದಿಲ್ಲ.

ಅಧ್ಯಕ್ಷರು : ಮಿಸ್ಟರ್ ರಾಜಣ್ಣನವರೆ, ಶ್ರೀರಾಮರೆಡ್ಡಿಯವರಿಗೆ ಹಸುವಿನ ವಿಚಾರ ಗೊತ್ತಿಲ್ಲ, ನೀವು ಏಕೆ ಮಾತನಾಡುತ್ತೀರಿ ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಹಾಲು, ಹಸು, ಇವುಗಳ ಬಗ್ಗೆ ನಮಗೆ ಏನು ಗೊತ್ತಿಲ್ಲ. ಇನ್ನೊಂದು ವಿಷಯವೂ ಗೊತ್ತಿಲ್ಲ ನಮಗೆ. ನಮಗೆ ಇಂಥದ್ದು ಗೊತ್ತಿದೆ ಎಂದು ತೀರ್ಮಾನ ಮಾಡಿ ಬಿಡಲಿ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಈ ಇಲಾಖೆಯಿಂದ ಬರತಕ್ಕಂತಹ ಆದಾಯವನ್ನು ಖರ್ಚು ಮಾಡುವುದು ನಮ್ಮ ಅಧಿಕಾರಿಗಳು ಅದನ್ನು ಮೇಲ್ವಿಚಾರಣೆ ಮಾಡುವುದು ನಮ್ಮ ಕರ್ತವ್ಯ.

ನಾವು ಬರುತ್ತೇವೆ 5 ವರ್ಷ. ಇದ್ದು ಹೋಗಿ ಬಿಡುತ್ತೇವೆ. ಆದರೆ, ಅಧಿಕಾರಿಗಳು ಏನು ತಿಳಿದು ಕೊಂಡಿದ್ದಾರೆ ನಾವು 30 ವರ್ಷ ಇರುತ್ತೇವೆ ಎಂದು. They are IAS officers. I.A.S. means "I am always safe." I am safe for 30- 35 years ಎಂದು. ನಾನು ಐಎಎಸ್ ಅಧಿಕಾರಿಗಳನ್ನು ಮಾತ್ರ ಟೀಕೆ ಮಾಡುತ್ತಾ ಇಲ್ಲ. ಅವರಲ್ಲಿಯೂ ಬಹಳ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅವರಿಂದ ಇವತ್ತು ನಾವು ಒಳ್ಳೆಯ ಆಡಳಿತವನ್ನು ಕೊಡುತ್ತಾ ಇದ್ದೇವೆ. There are two types of officers in this democracy. Bureaucrats with professionalism and committed professionalism. ದೇಶದಲ್ಲಿ ಮೋಜಿನ ಅಧಿಕಾರಿಗಳು, ದೇಶದ ಬಗ್ಗೆ ಚಿಂತನೆ ಮಾಡುವ ಅಧಿಕಾರಿಗಳು ಟಾಪ್‌ನಿಂದ ಬಾಟಮ್‌ವರೆಗೆ ಇದ್ದಾರೆ. There was a very good administration up to 1972-73 ಇದಕ್ಕೆ ಕಾರಣ ಏನೆಂದರೆ ನಮ್ಮ ಸೀನಿಯರ್ ಲೀಡರ್ಸ್ ಎಲ್ಲ ಎಲ್ಲಿದ್ದಾರೆ. ಇದಕ್ಕೆ ಕಾರಣ ಏನೆಂದರೆ ಪ್ರಜಾಪ್ರಭುತ್ವ ನಮಗೆ ಬರಬೇಕಾದರೆ ತ್ಯಾಗ. ದೇಶಕ್ಕೆ ತ್ಯಾಗ ಮಾಡಿದಂಥ ಹಿರಿಯರು ಎಲ್ಲ ಇದ್ದರು. ತ್ಯಾಗ ಮಾಡಿ ದೇಶಕ್ಕೆ ಸ್ವತಂತ್ರ ತರಬೇಕಾದರೆ ಗಾಂಧೀಜಿ ಎಷ್ಟು ಕಷ್ಟಪಟ್ಟಿದ್ದಾರೆ ಎಂದು ಅಧಿಕಾರಿಗಳಿಗೂ ಗೊತ್ತಿದೆ. You can expect. We have seen really 90% good administration up to 1972-73. 1973-74-75ರ ನಂತರ ಇದು ಬದಲಾವಣೆ ಆಗುವುದಕ್ಕೆ ಶುರುವಾಗಿದೆ. ಇದನ್ನು ಸರಿ ಮಾಡಬೇಕಾದರೆ it is not so easy. ಗಾಂಧೀಜಿಯವರು ನಮಗೆ ಒಂದು ಮಾತನ್ನು ಹೇಳಿದ್ದರು, ನಮಗೆ ಸ್ವಾತಂತ್ರ್ಯ ಬರುವುದು ಖಚಿತವಾಗಿದೆ we are going to get independence but ಬ್ರಿಟೀಷರು ನಮಗೆ ಅನ್ಯಾಯ ಮಾಡಿರಬಹುದು ಆದರೆ ಅವರಿಂದ ಕಲಿಯುವುದು ನಮಗೆ ಬಹಳ ಇದೆ ಎಂದು ಗಾಂಧೀಜಿ ಹೇಳಿದ್ದಾರೆ. ಅದರಲ್ಲಿ ನಂಬರ್ ಒನ್ ಶಿಸ್ತು, ಶಿಸ್ತು ಇಲ್ಲ ಎಂದರೆ ಸುಸ್ತು, ನಾವೆಲ್ಲಾ ಇವೊತ್ತು ಸುಸ್ತು i.e., discipline, seriousness, hard work, punctuality. ಅದರ ತರಹ ಬೆಳೆಯಬೇಕೆಂದು ಹೇಳಿ ಬ್ರಿಟೀಷ್ ಇಂಡಿಯಾದಲ್ಲಿ ಸ್ವತಂತ್ರ ಬರುವುದಕ್ಕೆ ಮುಂಚೆ ಕೆಲವು ಪುಸ್ತಕದಲ್ಲಿ ಹಿರಿಯರು ಬರೆದಿದ್ದನ್ನು ನಾನು ನೋಡಿದ್ದೇನೆ. ಅದು ಬ್ರಿಟೀಷರಲ್ಲಿ ನಾನು ಕಂಡಿದ್ದದು. ಅವರು ನಮ್ಮ ದೇಶಕ್ಕೆ ಹಾನಿ ಮಾಡಿರಬಹುದು ಆದರೆ, ಇದು ಅವರಲ್ಲಿ ಇತ್ತು ಎಂದು ಗಾಂಧೀಜಿ ಹೇಳಿದ್ದಾರೆ. ಈಗ 1973-74ರಿಂದ ಶಿಸ್ತು ಕಡಿಮೆಯಾಗಿಬಿಟ್ಟಿದೆ. ಇಷ್ಟೊತ್ತು ಮಾಧುಸ್ವಾಮಿಯವರು ಏನು ಹೇಳುತ್ತಿದ್ದರು ಅದು ನೂರಕಕ್ಕೆ ನೂರರಷ್ಟು ಸತ್ಯ. ಹಾಗೆಯೇ ಕಾಗೋಡು ತಿಮ್ಮಪ್ಪನವರು ವಿಲೇಜ್ ಅಕೌಂಟೆಂಟ್ ಬಗ್ಗೆ ಹೇಳಿದರು ಅದು ಕೂಡ ಸತ್ಯ ಇದೆ. ಇವೊತ್ತು ಒಬ್ಬ ರೈತ ಒಂದು ಪಹಣಿ ತರಬೇಕಾದರೆ ಗ್ರಾಮ ಲೆಕ್ಕಾಧಿಕಾರಿಗಳನ್ನು ಹುಡುಕಿಕೊಂಡು ಇಪ್ಪತ್ತು ಸಾರಿ ಹೋಗಬೇಕಾಗುತ್ತದೆ, ಪವರ್ ಹೋಗಿದ್ದರೆ ಕೆ.ಇ.ಬಿ.ಯವರನ್ನು ಹುಡುಕಿಕೊಂಡು ಇಪ್ಪತ್ತು ಸಾರಿ ಹೋಗಬೇಕೆಂದು. ಅಷ್ಟೇ ಅಲ್ಲ ಒಬ್ಬ ದಾದಿಯನ್ನು ಹುಡುಕಿಕೊಂಡು ಹೋಗಬೇಕಾದರು ಇಪ್ಪತ್ತು ಸಾರಿ ಹೋಗಬೇಕು. ಹಳ್ಳಿಯ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಪಟ್ಟಣದ ವಿಚಾರ ನಾನು ಹೇಳುತ್ತಿಲ್ಲ. ಒಬ್ಬ ವೆಟರ್‌ನರಿ ಇನ್‌ಸ್ಪೆಕ್ಟರ್‌ನ್ನು ಹುಡುಕಿಕೊಂಡು ಹೋಗಬೇಕಾದರೂ ಇಪ್ಪತ್ತು ಸಾರಿ ಹೋಗಬೇಕು. ಅಷ್ಟೊತ್ತಿಗೆ ಆ ಹಸು ಸ್ಮಾಶಾನಕ್ಕೆ ಹೋಗಿರುತ್ತದೆ ಅಥವಾ ಗರ್ಭನೇ ಕಟ್ಟುವುದಿಲ್ಲ ಆ ಪರಿಸ್ಥಿತಿ ಆಗಿ ಹೋಗಿರುತ್ತದೆ. They have to maintain the Movement Book. I request

the Hon'ble Minister.ಆತ ಯಾರೇ ಆಗಿರಲಿ, ಗ್ರಾಮ ಲೆಕ್ಕಾಧಿಕಾರಿ ಎಲ್ಲಿಯೇ ಹೋಗಲಿ, ಟ್ರೆಜರಿಗೆ ಹೋಗಲಿ, ತಹಸೀಲ್ದಾರರ ಕಛೇರಿಗೆ ಹೋಗಲಿ, ಇಲ್ಲ ಸರ್ವೇಯರ್ ಜೊತೆ ಗ್ರಾಮದ ಸರ್ವೆ ಮಾಡಲು ಹೋಗಲಿ ಇಂತಹ ಸಮಯದಲ್ಲಿ ನಾಳೆ ಸಿಕ್ಕುತ್ತೇನೆಂದು ಮೂವ್‌ಮೆಂಟ್ ಪುಸ್ತಕದಲ್ಲಿ ಬರೆದು ಹೋಗಬೇಕು. ಮೂವ್‌ಮೆಂಟ್ ಬುಕ್ ಮೈಂಟೆನ್ ಮಾಡಬೇಕು. ನೋಟೀಸ್ ಬೋರ್ಡಿನಲ್ಲಿ ಹಾಕಿರಬೇಕು. ಕ್ಲೀನಾಗಿ ಬೋರ್ಡಿನ ಮೇಲೆ ಬರೆದರು ಪರವಾಗಿಲ್ಲ. ಇನ್ನು ರೆವಿನ್ಯೂ ಇನ್‌ಸ್ಪೆಕ್ಟರ್ ವಾರಗಟ್ಟಲೆ ಬರುವುದಿಲ್ಲ. ಅದರಲ್ಲೂ ಪಟ್ಟಣದಲ್ಲಿ ಇದ್ದರೆ ಮುಗಿದು ಹೋಯಿತು. ಇವೊತ್ತು ಬೆಂಗಳೂರು ಸುತ್ತಮುತ್ತ ಇರತಕ್ಕಂಥ ರೆವೆನ್ಯೂ ಇನ್‌ಸ್ಪೆಕ್ಟ್‌ರ್, ಮತ್ತು ಗ್ರಾಮ ಲೆಕ್ಕಾಧಿಕಾರಿಗಳು they are the kings of land, except a few. ಆ ಮಟ್ಟಕ್ಕೆ ಬಂದಿದೆ ಇವೊತ್ತು. ಆದರೆ, ಇದನ್ನೆಲ್ಲಾ ಸರಿ ಮಾಡಬೇಕಾದರೆ We have to put all our efforts to set right these things one by one. ನಾವು ಈಗ ನಮ್ಮ ರೆವಿನ್ಯೂ ಇಲಾಖೆಯಲ್ಲಿ ಆದಷ್ಟು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ. I welcome the demand of Revenue and Muzrai, Survey & Settlement presented by the Hon'ble Minister for Revenue and the other Ministers. In the Survey Department, our Government has been doing good work to help the farmers to get their land surveyed. They have strengthened this Department. This Government has succeeded in getting financial assistance from the Central Government to the tune of Rs. 70 lakh during the year 1996-97. ತಮಗೆಲ್ಲ ಗೊತ್ತಿದೆ 1892ರ ಬ್ರಿಟೀಷರ ಸಮಯದಲ್ಲಿ ಈ ಸರ್ವೆ ಮಾಡಿದ್ದುದು. The paper that was used German paper. ಜರ್ಮನ್ ಪೇಪರ್ ಯೂಸ್‌ಮಾಡಿದ್ದು, ನೂರು ವರ್ಷಗಳಾದರೂ ಇನ್ನೂ ಸ್ವಲ್ಪ ಪೇಪರ್ ಹಾಗೇ ಇದೆ. ಅದನ್ನೆಲ್ಲಾ ಈಗ ಕಂಪ್ಲೀಟ್ ಚೇಂಜ್ ಮಾಡಿ ಸರ್ವೆ ಡಿಪಾರ್ಟ್‌ಮೆಂಟ್‌ನಲ್ಲಿ ಕೆಲವು ಒಳ್ಳೆಯ ಕೆಲಸಗಳು ನಡೆಯುತ್ತಿವೆ. ಆ ರೀ ಸರ್ವೆ ಮಾಡಿ ರೆಕಾರ್ಡ್ಸ್ ಎಲ್ಲ ಬಿಲ್ಡಪ್ ಮಾಡುತ್ತಿದ್ದಾರೆ. ರೈತ ಬಂದು ಅರ್ಜಿ ಬರೆದು ಕೊಟ್ಟರೆ ಒಂದು ತಿಂಗಳು ಅಥವಾ ಎಂಟು ದಿವಸಗಳಲ್ಲಿ ಅವನ ಮನೆಗೆ ರೆಕಾರ್ಡ್ಸ್ ಕಳುಹಿಸುವ ಕೆಲಸವನ್ನು ಸರ್ವೆ ಸೆಟಲ್‌ಮೆಂಟ್ ಡಿಪಾರ್ಟ್‌ಮೆಂಟ್ ಮಾಡುತ್ತಿದೆ. ಇದೊಂದು ಸಂತೋಷದ ವಿಚಾರ ಆದರೆ it must and should be continued. ಇವೊತ್ತು ಸರ್ವೆ ಸೆಟಲ್‌ಮೆಂಟ್ ಡಿಪಾರ್ಟ್‌ಮೆಂಟ್‌ನಲ್ಲಿ ಏನು ನಡೆಯುತ್ತಿದೆ ಇದು ಕಂಟಿನ್ಯೂ ಆಗಬೇಕು. ರೈತನಿಗೆ ಮೂವತ್ತು ಬಾರಿ ತಿರುಗಿಸಿ ಸರ್ವೆ ಮಾಡಿ ಕೊಡುವುದು ಹೋಗಬೇಕು. ಹೋಗಿದೆ, ಆದರೆ ಪರಮನೆಂಟಾಗಿ ಹೋಗಬೇಕು. ನಮ್ಮ ಮಾಜಿ ಪ್ರಧಾನ ಮಂತ್ರಿಗಳಾದ ದೇವೇಗೌಡರ ಕಾಲದಲ್ಲಿ ಈ ಸರ್ವೆ ಸೆಟ್ಲಮೆಂಟ್‌ಗೆ 70ಲಕ್ಷ ರೂಪಾಯಿಗಳನ್ನು ಕಳುಹಿಸಿದರು. ರೈತನು ಬಡವ, ಅವರ ಲ್ಯಾಂಡ್ ಸರ್ವೆ ಮಾಡಿಸಲಿ, ಆತನ ಭೂಮಿ ಎಷ್ಟು ಇದೆ ಎಂದು ಗೊತ್ತಾಗಲಿ ಎಂದು ಸರ್ವೆ ಡಿಪಾರ್ಟ್‌ಮೆಂಟ್ 70 ಲಕ್ಷ ರೂಪಾಯಿಗಳನ್ನು ಕಳುಹಿಸಿದರು. ಅದರಿಂದ ರೈತನಿಗೆ ಟೈಟಲ್ಸ್, ಡೀಡ್ ಎಲ್ಲಾ ಕರೆಕ್ಟಾಗಿ ಮಾಡುವಂಥ ಒಂದು ಪ್ರಯತ್ನ ನಡೆಯುತ್ತಿದೆ ನಾವು ಅವರಿಗೆ ಶುಭವನ್ನು ಕೋರುತ್ತೇವೆ. ಹಾಗೆ ಅವರಿಗೆ ಇನ್ನು ದೇವರು ಶಕ್ತಿ ಕೊಡಲಿ ಎಂದು ಹಾರೈಸುತ್ತೇನೆ. ಇನ್ನು ಈ ಸರ್ವೆ ಸೆಟ್ಲಮೆಂಟ್‌ನಲ್ಲಿ 49

ಸಬ್ ಡಿವಿಜನ್ಸ್ ಮಾಡಿದ್ದಾರೆ. ಹಾಗೆಯೇ ಒಂದೊಂದು ತಾಲ್ಲೂಕಿಗೆ ಎಲ್ಲ ಫೆಸಿಲಿಟೀಸನ್ನು ಕೊಟ್ಟಿದ್ದಾರೆ. ಅವನಿಗೆ ಜೀಪು, ಫೋನು ಎಲ್ಲ ಕೊಟ್ಟು ಸರ್ವೆ ಸೆಟಲ್‌ಮೆಂಟ್ ಡಿಪಾರ್ಟ್‌ಮೆಂಟನ್ನು ಚೆನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದೆಲ್ಲಾ ಮಾಡಬೇಕು ಅದು ಬಹಳ ಇಂಪಾರ್ಟೆಂಟ್ ಏಕೆಂದರೆ ಹಿಂದೆ ಹೊನ್ನು ಮತ್ತು ಮಣ್ಣಿಗೆ ಜಗಳ ಬರುತ್ತಿತ್ತು. ಈಗ ಹೊನ್ನಿಗೆ ಜಗಳ ಬರುವುದಿಲ್ಲ, ಜಗಳ ಬರುತ್ತಿರುವುದೇ ಮಣ್ಣಿಗೆ, ಹೊನ್ನು, ಹೆಚ್ಚು ಮಣ್ಣು ಮೂರು ಇದೆ ಆದರೆ ಅದನ್ನೇಕೆ ಹೇಳಬೇಕೆಂದು ಹೇಳಲಿಲ್ಲ ಅಷ್ಟೇ. ಈಗ ಎಲ್ಲ ಕಡೆ ಮಣ್ಣಿನದೇ ಪ್ರಾಬ್ಲಮ್. ಇದಕ್ಕೆ ಜಗಳ ಜಾಸ್ತಿಯಾಗಿದೆ. ಈಗ ಸರ್ವೆ ಸೆಟ್ಲಮೆಂಟ್ ಡಿಪಾರ್ಟ್‌ಮೆಂಟ್, ಈಗ ಇರತಕ್ಕಂಥ ಅಧಿಕಾರಿಗಳು, ಆ ಡೈರೆಕ್ಟರ್ ಯಾರು ಇದ್ದಾರೆ ಅವರೆಲ್ಲ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ, ಅವರು ಇನ್ನೂ ಈ ಸ್ಪೆಶಲೈಸ್ಡ್ ಫೋಟೋಸ್ಟ್ಯಾಟ್ ಕಾಪೀಸ್ ಎಲ್ಲ ಮಾಡುತ್ತಾರೆ ಎಂದು ಗೊತ್ತಾಗಿದೆ ಅವರಿಗೆ ನಾನು ಕೃತಜ್ಞತೆಗಳನ್ನು ತಿಳಿಸುತ್ತಿದ್ದೇನೆ. ಎರಡನೆಯದು regarding natural calamities. The State had to suffer due to heavy rain during 1996-97 and we have received Rs. 134.44 crore from the Central Government. ಸ್ವಾಮಿ ಹೋದ ವರ್ಷ ಪ್ರಕೃತಿಯ ವಿಕೋಪದಿಂದ ಮಳೆ ಬಂದು ಕೊಚ್ಚಿಕೊಂಡು ಹೋಗಿ ದನಗಳಳು ಕೊಚ್ಚಿಕೊಂಡು ಹೋಗಿ, ಕುರಿಗಳು ಕೊಚ್ಚಿಕೊಂಡುಹೋಗಿ, ಮನುಷ್ಯರು ಕೊಚ್ಚಿಕೊಂಡು ಹೋಗಿ ಎಲ್ಲಾ ಅಲೆಯುತ್ತಿರುವಾಗ ಕೇಂದ್ರಕ್ಕೆ ನಾವು ರಿಕ್ವೆಸ್ಟ್ ಮಾಡಿದ್ದಕ್ಕೆ ಮಾಜಿ ಪ್ರಧಾನಿಗಳಾದ ದೇವೇಗೌಡರು 134 ಕೋಟಿ ರೂಪಾಯಿಗಳನ್ನು ಕಳುಹಿಸಿಕೊಟ್ಟಿದ್ದಾರೆ. I want to ask the Revenue Minister whether this year they have received any amount?

ಶ್ರೀ ಹೆಚ್. ಶಿವಪ್ಪ : ಇಲ್ಲ

ಶ್ರೀ ಎನ್. ರಾಜಣ್ಣ : ಅದಕ್ಕೆ ಮಣ್ಣಿನ ಮಗ ಬೇಕು ಎಂದು ಹೇಳುವುದು.

ಶ್ರೀ ಬಿ. ಬಿ. ಚಿಮ್ಮನಕಟ್ಟಿ : ಹೋದ ವರ್ಷ 27 ಕೋಟಿ ರೂಪಾಯಿಗಳು ಬರಬೇಕಾಗಿತ್ತು ಎಂದು ಮಂತ್ರಿಗಳು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈಗಲಾದರೂ ನಮ್ಮ ರಾಜ್ಯದಲ್ಲಿ ನಾಲ್ಕೈದು ಜಿಲ್ಲೆಗಳಲ್ಲಿ ಭೀಕರವಾದ ಬರಗಾಲ ಇದೆ. ಇನ್ನು ಉಳಿದಂಥ ಕಡೆ ನಮ್ಮ ನಿರೀಕ್ಷೆ ಮೀರಿ ಮಳೆಯಾಗಿದೆ, ಜಲಾಶಯಗಳು ತುಂಬಿವೆ, ಅಷ್ಟೇ ದೊಡ್ಡ ಪ್ರಮಾಣದಲ್ಲಿ ಬೆಳೆ ಹಾಳಾಗಿದೆ, ರಸ್ತೆ ಹಾಳಾಗಿದೆ ಇದುವರೆಗೆ ನೀವು ಕೇಂದ್ರ ಸರ್ಕಾರಕ್ಕೆ ಒಂದು ಮನವಿ ಸಲ್ಲಿಸಲಿಲ್ಲ. ಲಾಸ್ಟ್ ಟೈಮ್ ನಾನು ಕೇಂದ್ರದ ಸಚಿವರಿಗೆ ಭೇಟಿಯಾದಾಗ ನಮ್ಮ ಕರ್ನಾಟಕದವರೇ ಸಚಿವರಾದವರು ಬೇರೆ ರಾಜ್ಯದವರೆಲ್ಲ ಮೆಮೊರ್ಯಾಂಡಮ್ ಸಲ್ಲಿಸಿರುತ್ತಾರೆ ಆದರೆ ನಮ್ಮ ಕರ್ನಾಟಕದಿಂದ ಇದುವರೆಗೆ ಒಂದು ಮೆಮೊರ್ಯಾಂಡಮ್ ಕೂಡ ಬಂದಿಲ್ಲ ನಾವೇನು ಮಾಡಬೇಕು ಯಡಿಯೂರಪ್ಪನವರೇ, ನಾವು ಕೊಡೋಣ ಎಂದರೆ ಯಾರೂ ಇಂಟ್ರೆಸ್ಟ್ ತೆಗೆದುಕೊಂಡಿಲ್ಲ ಎಂದು ಹೇಳಿದರು. ಅವರ ಹೆಸರನ್ನು ನಾನು ಬಹಿರಂಗ ಮಾಡುವುದಿಲ್ಲ, ನಿಮಗೆ ಅರ್ಥ ಆಗುತ್ತದೆ. ನಾವೇನಾದರೂ ಕೊಡೋಣ ಎಂದು ಅಂದರೂ

ಇಂಟರೆಸ್ಟ್ ತೆಗೆದುಕೊಳ್ಳುತ್ತಿಲ್ಲ ಯಡಿಯೂರಪ್ಪನವರೇ ಎನ್ನುವ ಮಾತನ್ನು ನಾನು ಕೇಳಿದೆ, ಯಾರು ಈ ರೀತಿ ಹೇಳಿದರು ಎನ್ನುವುದನ್ನು ಇಲ್ಲಿ ಬಹಿರಂಗ ಮಾಡುವ ಅಗತ್ಯವಿಲ್ಲ. ಈಗಲಾದರೂ ಇನ್ನು 24 ಗಂಟೆಯೊಳಗೆ ಅತಿವೃಷ್ಟಿಯಿಂದ ಏನು ನಷ್ಟವಾಗಿದೆ ಅದಕ್ಕೆ ಎಷ್ಟು ಹಣ ಬೇಕು, ಬರಗಾಲ ಪರಿಹಾರಕ್ಕಾಗಿ ಎಷ್ಟು ಹಣ ಬೇಕು ಎನ್ನುವ ಬಗ್ಗೆ ಮೆಮೊರ್ಯಾಂಡಮ್ ಕೇಂದ್ರ ಸರ್ಕಾರಕ್ಕೆ ಈಗಲಾದರೂ ಕಳುಹಿಸಿಕೊಡುತ್ತೀರಾ?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಬರಗಾಲದಿಂದ ಸುಮಾರು 150 ಕೋಟಿ ರೂಪಾಯಿಗಳಷ್ಟು ಹಾನಿ ರಾಜ್ಯದ ಜನರಿಗೆ ಆಗಿದೆಯೆಂದು ಆ ಸಲುವಾಗಿ 130 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಾವು ಕೇಂದ್ರ ಸರ್ಕಾರಕ್ಕೆ ಮೆಮೊರ್ಯಾಂಡಮನ್ನು ಕೊಟ್ಟಿದ್ದೇವೆ. ಇದನ್ನು ಸರಿಯಾದ ಸಮಯಕ್ಕೆ ಕೊಟ್ಟಿದ್ದೇವೆ. ಇದಾದಮೇಲೆ ಇದರ ಸಲುವಾಗಿ ಮೂರು ಭಾರಿ ಸಭೆಗಳನ್ನು ಕರೆದಾಗ ಆ ಮೂರು ಬಾರಿಯೂ ಆ ಸಭೆಗೆ ಹೋಗಿ ಪುನಃ ಮೆಮೊರ್ಯಾಂಡಮನ್ನು ಕೊಟ್ಟು ಬಂದೆ. ನಾವು ಏನು 130 ಕೋಟಿ ರೂಪಾಯಿಗಳನ್ನು ಕೇಳದ್ದೆವು ಅದರಲ್ಲಿ ಇನ್ನೂ ಒಂದು ಪೈಸೆಯನ್ನೂ ಬಿಡುಗಡೆ ಮಾಡಿಲ್ಲ. ಮೊನ್ನೆ ನಡೆದ ಸದನದಲ್ಲಿ ಈ ಬಾರಿ ಮೆಮೊರ್ಯಾಂಡಮನ್ನು ಕಳುಹಿಸಿ ಎಂದು ಮಾನ್ಯ ಸದಸ್ಯರುಗಳು ಒತ್ತಾಯ ಮಾಡಿದರು. ನಾನು ಪುನಃ ಮೊಮೊರ್ಯಾಂಡಮನ್ನು ಈ ಬಗ್ಗೆ ಕಳುಹಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಇನ್ನು ಬಡಬಗ್ಗರಿಗೆ, ಅಂದರೆ ಇವರಲ್ಲಿ, ರೈತರು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದವರು ಎಲ್ಲರೂ ಬರುತ್ತಾರೆ.

ಶ್ರೀ ಹೆಚ್. ಶಿವಪ್ಪ : ಬ್ರಾಹ್ಮಣ ಯಾರು?

ಶ್ರೀ ಎನ್. ರಾಜಣ್ಣ : ಬ್ರಹ್ಮ ಜ್ಞಾನ ಇರುವವನಿಗೆ ಬ್ರಾಹ್ಮಣ ಎನ್ನುವುದು.

ಶ್ರೀ ಹೆಚ್. ಶಿವಪ್ಪ : ನಮಗೆ ಬ್ರಹ್ಮ ಜ್ಞಾನ ಇದ್ದರೆ?

ಶ್ರೀ ಎನ್. ರಾಜಣ್ಣ : ನಿಮಗೂ ಬ್ರಹ್ಮ ಜ್ಞಾನ ಇದ್ದರೆ ನೀವು ಬ್ರಾಹ್ಮಣ. ಬ್ರಹ್ಮ ಜ್ಞಾನ ಇದ್ದರೆ ಅವನೇ ಬ್ರಾಹ್ಮಣ. ಬ್ರಹ್ಮ ಜ್ಞಾನ ಇಲ್ಲ ಎಂದರೆ ಆತನೇ ಕೆಳಮಟ್ಟದವ ಎಂದು. ಇದರಲ್ಲಿ ಜಾತಿ ಏನೂ ಇಲ್ಲ, ಇರುವುದೇ ಎರಡು ಜಾತಿ, ಅದು ಗಂಡು ಮತ್ತು ಹೆಣ್ಣು. Sir, our Government has regularised the unauthorised cultivation. The farmers are happy as their unauthorised cultivation has been regularised. The Government has also sanctioned land to 92,902 SC/STs to the extent of 1,75,466 acres. ಇದರಲ್ಲಿ 22,824 SC/STs have been conferred with pattas of land by the Government. Our Government has sanctioned land to landless agricultural labourers. ಅವನು ಯಾರೇ ಆಗಿರಲಿ ಅವನಿಗೆ ಕೊಡಬೇಕಾದದ್ದನ್ನು ಮಾಡಿದ್ದಾರೆ. I heard the submission of the Hon. Leader of the Opposition on 28th at 3.33 PM. Then I got these details at

3.43 PM that these are the details of the land we have given to poor people and SC/ST people, those who were landless and those who were cultivating the land for many years. ಇವೊತ್ತು ಮತ್ತೊಂದು ವಿಷಯ ಬಹಳ ನೊಂದು ಹೇಳುತ್ತಿದ್ದೇನೆ. ಇಂದು ನಾವು ಅರಣ್ಯ ಸಂಪತ್ತನ್ನು ಕಳೆದುಕೊಳ್ಳುತ್ತಿದ್ದೇವೆ. ಈ ಕಾಡನ್ನು ನಾವು ನಾಶ ಮಾಡುವತ್ತ ಹೋಗುತ್ತಿದ್ದೇವೇನೋ ಎನಿಸುತ್ತದೆ. ಈ ಕಾಡನ್ನು ನಾವು ಬೆಳಸದೇ ಹೋದರೆ ಪ್ರಾಣಿ ಸಂಪತ್ತು, ಅರಣ್ಯ ಸಂಪತ್ತು, ಪಕ್ಷಿ ಸಂಪತ್ತು ಹೊರಟು ಹೋಗಿ ಕೇವಲ ಮನುಷ್ಯ ಸಂಪತ್ತು ಮಾತ್ರ ಉಳಿದುಕೊಂಡಿದೆ. ಬರೇ ಮನುಷ್ಯ ಸಂಪತ್ತು. ಇಂದು ಅರಣ್ಯ ಸಂಪತ್ತು ನಾಶವಾಗಿ ಹೋಗುತ್ತಿದೆ. ಕಾಡನ್ನು ಉಳಿಸುವುದು ನಿಮ್ಮ ಮತ್ತು ನಮ್ಮ ಜವಾಬ್ದಾರಿಯುತ ಕರ್ತವ್ಯಾವಾಗಿರುತ್ತದೆ. ಇನ್ನು ಮುಂದೆ ಯಾರೇ ಕಾಡನ್ನು ಎನ್‌ಕ್ರೋಚ್‌ಮೆಂಟ್ ಮಾಡಿಕೊಂಡರೆ ಅವರಿಗೆ ಗ್ರ್ಯಾಂಟ್ ಮಾಡಬಾರದು. ಏಕೆಂದರೆ ಕಾಡನ್ನು ಉಳಿಸಬೇಕು. ಕಾಡು ಉಳಿದರೆ ಮಾತ್ರ ಪ್ರಾಣಿ, ಪಕ್ಷಿ,ಕಾಡು. ಕಾಡು ಇದ್ದರೆ ಮಾತ್ರ ಮರ ಇರುತ್ತದೆ, ಮರ ಉಳಿದರೆ ಕಾಡು, ಕಾಡು ಇದ್ದರೆ ಮಾತ್ರ ಮೋಡ, ಮೋಡ ಇದ್ದರೆ ಮಾತ್ರ ಮಳೆ, ಮಳೆ ಇದ್ದರೆ ಮಾತ್ರ ಹೊಳೆ, ಹೊಳೆ ಇದ್ದರೆ ಮಾತ್ರ ನೀರು, ನೀರು ಇದ್ದರೆ ಜೀವ ಇರುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕಾಡು ಇದ್ದರೆ ಮಾತ್ರ ವೀರಪ್ಪನ್.

ಶ್ರೀ ಎನ್. ರಾಜಣ್ಣ : ಅದನ್ನು ಬಿಡಿ ಮೇಡಂ. ಅದು ದಿನ ಇದ್ದೇ ಇರುತ್ತದೆ. ಬಹಳ ವೀರಪ್ಪನ್‌ಗಳು ನಮ್ಮ ಜೊತೆಯಲ್ಲೇ ಇರುತ್ತಾರೆ, ಅವರನ್ನು ಹಿಡಿದುಕೊಂಡುಬಿಟ್ಟರೆ ಸರಿ ಹೋಗುತ್ತದೆ. ನಮ್ಮ ಹಿಂದೆ ಇರುವ ವೀರಪ್ಪನ್‌ಗಳನ್ನು ಹಿಡಿದುಕೊಳ್ಳಬೇಕು.

MR.SPEAKER : He is telling something very relevant.

SRI N. RAJANNA : Sir, the encroachment over the forest land must and should be stopped, otherwise, this forest land will be utilised by the landlords and those who are grabbing the lands. ಇನ್ನೊಂದು ಮುಖ್ಯ ವಿಷಯವೆಂದರೆ, ಬೆಂಗಳೂರಿನ ಸುತ್ತಮುತ್ತ ನಾಲ್ಕು ಕೆಂಪೇಗೌಡ ಟೌವರ್ ಇತ್ತು. ಆ ಟೌವರ್‌ನಿಂದ ಆಚೆ 30 ಕಿ.ಮೀ. ಇಂದು ಬೆಳೆದುಬಿಟ್ಟಿದೆ, ಇತ್ತ ಕಡೆ ಹೊಸಕೋಟೆಯಿಂದ ಆಚೆಗೆ ರೀಚ್ ಆಗಿಬಿಟ್ಟಿದೆ. ಇತ್ತ ಕಡೆ ನೆಲಮಂಗಲ ರೀಚ್ ಆಗಿದೆ, ಅತ್ತ ಕಡೆ ಆನೇಕಲ್ ರೀಚ್ ಆಗಿದೆ, ಮತ್ತೊಂದು ಕಡೆ ಮಾಗಡಿ ರೀಚ್ ಆಗಿದೆ. ಈ ಸುತ್ತಮುತ್ತಲೂ 30ಕಿ.ಮೀ ವ್ಯಾಪ್ತಿಯಲ್ಲಿ ಸಾವಿರಾರು ರೈತ ಕುಟುಂಬದವರು ಏನಿದ್ದರು ಅವರಿಗೆ ಇದ್ದ ಭೂಮಿಯನ್ನು ಮಾರಿ ಕಳೆದುಕೊಂಡಿದ್ದಾರೆ. ಆ ಭೂಮಿಯನ್ನು ಮಾರಿದ ಹಣದಲ್ಲಿ ಒಂದು ಸಣ್ಣ ಮನೆ ಕಟ್ಟಿಕೊಂಡು ಒಂದು ಸಣ್ಣ ಮೋಟಾರ್ ಸೈಕಲ್ ತೆಗೆದುಕೊಂಡುಬಿಡುತ್ತಾರೆ, ಇನ್ನು ಕೆಲವರು ಹಣವನ್ನು ಕಳೆದುಕೊಂಡಾದ ಮೇಲೆ ಭಿಕಾರಿಗಳಾಗಿ ಕಡ್ಲೇಕಾಯಿ ಮಾರುವುದಕ್ಕೆ ಬೆಂಗಳೂರಿನ ಕಬ್ಬನ್ ಪಾರ್ಕ್‌ಗೆ ಬರಬೇಕಾದ ಸ್ಥಿತಿ ಬಂದಿದೆ. ಈ ಬೆಂಗಳೂರಿನ ಸುತ್ತ ಮುತ್ತ 30 ಕಿ.ಮೀ ವ್ಯಾಪ್ತಿಯಲ್ಲಿರುವ ರೈತನ ಸ್ಥಿತಿ ಇವೊತ್ತು ಚಿಂತಾಜನಕವಾಗಿದೆ. ಈ 30 ಕಿ.ಮೀ. ವ್ಯಾಪ್ತಿಯಲ್ಲಿ ಸಾವಿರಾರು ಎಕರೆ ಭೂಮಿಯನ್ನು ಕಳೆದುಕೊಂಡಿದ್ದಾರೆ. ಇಂಥವರಲ್ಲಿ 5 ರಿಂದ 10 ಪರ್ಸೆಂಟ್ ಜನರು ಲಾರಿಯನ್ನೋ,

ಯಾವುದಾದರು ವಾಹನವನ್ನು ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ. ನನ್ನ ಸ್ವಂತ ಬಳಗದವನೊಬ್ಬ 1000 ಎಕರೆ ಭೂಮಿಯನ್ನು ಕಳೆದುಕೊಂಡು ಇಂದು ಸೈಕಲ್ ರಿಕ್ಷಾ ಹೊಡೆಯುತ್ತಿದ್ದಾರೆ. ಆ ಮಟ್ಟಕ್ಕೆ ಬೆಂಗಳೂರು ಸುತ್ತಮುತ್ತ ಬಂದಿದೆ. ಇದು ಯಾವಾಗ ನಿಲ್ಲುತ್ತದೆ? ಇದನ್ನು ನಿಲ್ಲಿಸುವುದಕ್ಕೆ ನಮ್ಮ ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದೆ. ನಾವು ಅದಕ್ಕೆ ಅಪ್ರಿಶಿಯೇಟ್ ಮಾಡಬೇಕು. ಒಂದು ಕಡೆ ರೈತ ಸಾವಿರಾರು ಎಕರೆ ಭೂಮಿಯನ್ನು ಕಳೆದುಕೊಂಡು ಚಿಂತಾಜನಕ ಸ್ಥಿತಿಯಲ್ಲಿ ಕಡ್ಲೇಕಾಯಿ ಮಾರುವುದಕ್ಕೆ ಕಬ್ಬನ್ ಪಾರ್ಕ್‌ಗೆ ಬರುತ್ತಿದ್ದಾನೆ. ಇನ್ನೊಂದು ಕಡೆ ನೀವು ಇಲ್ಲಿ ಫ್ಯಾಕ್ಟರಿ ತೆಗೆಯಿರಿ ನಿಮಗೆ ನೀರು ಕೊಡುತ್ತೇವೆ, ಕರೆಂಟ್ ಕೊಡುತ್ತೇವೆ ಎಂದು 1973ರಲ್ಲಿ ಕೈಗಾರಿಕೋಧ್ಯಮಿಗಳನ್ನು ಕರೆಯಲು ಪ್ರಾರಂಭಸಿದಿರಿ. ಆಗ ಇವರುಗಳು ಬಂದರು, ಬಂದರು, ಬಂದರು, ಬಂದರು, ಅಂದು 10 ಲಕ್ಷ ಜನಸಂಖ್ಯೆ ಇದ್ದದ್ದು ಇಂದು ಬೆಂಗಳೂರಿನ ಜನಸಂಖ್ಯೆ ಒಂದು ಕೋಟಿಗೂ ಹೆಚ್ಚಾಗಿದೆ. ಇಲ್ಲೇ ವಾಸವಾಗಿದ್ದ ಪರ್ಮನೆಂಟ್ ಜನರ ಸ್ಥಿತಿ ಇಂದು ಚಿಂತಾಜನಕವಾಗಿದೆ. ಅಂದು ಫ್ಯಾಕ್ಟರಿಗಳನ್ನು ಯಾರು ತೆಗೆದರೋ ಅವರು ಮೊದಮೊದಲು ಈ ಜನರಿಗೆ ಕೆಲಸ ಕೊಟ್ಟರು, ಆಮೇಲೆ ಕಳೆದ 5-6 ವರ್ಷಗಳಿಂದ ವಿ.ಆರ್‌ನಲ್ಲಿ ಮನೆಗೆ ಇವರನ್ನು ಕಳುಹಿಸಿದರು. ವಿ.ಆರ್. ಎಂದರೆ ಶೇಕ್ ಹ್ಯಾಂಡ್ ಗೋಲ್ಡ್ ಬಿಸ್ಕತ್, ಶೇಕ್ ಹ್ಯಾಂಡ್ ಗೋಲ್ಡ್ ಬಿಸ್ಕತ್, ಇದರಿಂದ 1 ರಿಂದ 1½ ಲಕ್ಷ ರೂಪಾಯಿಗಳು ಅವನಿಗೆ ಬಂತು. ಅವನಿಗೆ ಒಂದು ಲಕ್ಷ ಕೊಟ್ಟುಬಿಡುತ್ತಾರೆ, ಅದನ್ನು ಅವನು ತೆಗೆದುಕೊಂಡು ಇರುವ ಸಾಲವನ್ನು ತೀರಿಸಿಕೊಂಡು ಫುಟ್‌ಪಾತ್‌ಗೆ ಬರುತ್ತಾನೆ. ಇವೊತ್ತು ಬೆಂಗಳೂರು ಸುತ್ತಮುತ್ತಲೂ ಇರುವ ರೈತರಿಗೆ ಅವರ ಭೂಮಿಯನ್ನು ಪಡೆದು ಅವರಿಗೆ ಕೆಲಸ ಕೊಡುತ್ತೇನೆ ಎನ್ನುತ್ತಾರೆ, ಒಬ್ಬರಿಗೋ ಅಥವಾ ಇಬ್ಬರಿಗೋ ಕೆಲಸ ಕೊಡುತ್ತಾರೆ, ಅವನು ಮತ್ತೆ ಫುಟ್‌ಪಾತ್‌ಗೆ ಬರುವ ಪರಿಸ್ಥಿತಿ ಬಂದಿದೆ. ಬೆಂಗಳೂರು ಬೆಳೆಯುವುದು ಇನ್ನು ಮುಂದೆ ಬೇಡ. ಬೆಂಗಳೂರು ಸುತ್ತಮುತ್ತಲೂ ಇರತಕ್ಕಂಥ ಜಾಗವನ್ನು ಕಾಪಾಡುವುದಕ್ಕೆ ನಾವುಗಳು ಪ್ರಯತ್ನ ಮಾಡಬೇಕು. ಇನ್ನು ರೈತರಿಗೋಸ್ಕರ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ the sale of agricultural land has been stopped vide Notification No. RD/EMS/93 dated 23.3.1996. ಇದು ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅವನು ಭೂಮಿಯನ್ನು ಮಾರಿಕೊಂಡು ಫುಟ್‌ಪಾತ್‌ಗೆ ಬರುವುದನ್ನು ರೈತ ನಿಲ್ಲಿಸುತ್ತಾನೆ. ರೈತ ಭೂಮಿ ಮಾರಿಕೊಂಡು ಫುಟ್‌ಪಾತ್‌ಗೆ ಬರುವುದು ನಿಂತುಹೋಯಿತು. ಆದರೆ ಯಾರು ರೈತರನ್ನು ವಂಚಿಸಿ ಹಣ ಮಾಡುತ್ತಿದ್ದರೋ ಅವರು ಅಪಪ್ರಚಾರ ಮಾಡುತ್ತಿದ್ದಾರೆ. ಅವರು ಅಪಪ್ರಚಾರ ಮಾಡಿದರೂ ರೈತ ಜಾಗ ಉಳಿಸಿಕೊಂಡು ರೈತನಾಗಿದ್ದರೆ ಮಾತ್ರ ಆತ ಜೀವನ ನಡೆಸುತ್ತಾನೆ. ಪರವಾಗಿಲ್ಲ.

4.10 ಪಿ.ಎಂ.

ಜಮೀನು ಕಳೆದುಕೊಂಡ ರೈತನ ಗತಿ ಇವತ್ತು ಬೆಂಗಳೂರಿನ ಸುತ್ತಮುತ್ತ ಏನಿದೆ ಗೊತ್ತೆ, ಅವನು ಫುಟ್‌ಪಾತ್‌ಗೆ ಬರಬೇಕು, ಇಲ್ಲವೆ ಕಬ್ಬನ್ ಪಾರ್ಕಿನಲ್ಲಿ ಕಡಲೆಕಾಯಿ ಮಾರುವುದಕ್ಕೆ ಬರಬೇಕು. ಅಂಥ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಈ ಆಕ್ಟ್ ಒಳ್ಳೆಯ ಕೆಲಸ ಮಾಡಿದೆಯೆಂದು ನಾನು ಸರ್ಕಾರವನ್ನು ಅಪ್ರಿಷಿಯೇಟ್ ಮಾಡುತ್ತೇನೆ.

ಶ್ರೀ ಜಿ. ವಿ..ಶ್ರೀರಾಮರೆಡ್ಡಿ : ಲ್ಯಾಂಡ್ ರಿಫಾರ್ಮ್ಸ್ ಬಿಲ್ ಅಮೆಂಡ್‌ಮೆಂಟ್ ಮಾಡಿ ಭೂಮಿ ಮಾರಿಕೊಳ್ಳಲು ಅವಕಾಶ ಕೊಟ್ಟವರ್ಯಾರೆಂದು ಹೇಳಿಬಿಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಆ ಕಾನೂನನ್ನು ಯಾರು ಮಾಡಿದ್ದು ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಎನ್. ರಾಜಣ್ಣ : 1996ರಲ್ಲಿ ಕಾನೂನು ಜಾರಿಗೆ ಬಂದಿದ್ದು. ನಾವು ತಾನೇ ಇದ್ದಿದ್ದು, ಆಗ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಂದರೆ, ಬಹುಶಃ ಅವರು ಹೇಳುತ್ತಿರತಕ್ಕ ಗಾಂಧಿಯವರ ಟೋಪಿಯನ್ನು ಶ್ರೀ ರಮೇಶ್ ಸಿ. ಜಿಗಜಿಣಗಿಯವರು ಹಾಕಿಕೊಂಡಿರುವುದರಿಂದ ಹೇಳುತ್ತಿರಬಹುದು, ಪಾಪ ಅವರಲ್ಲ ಮಾಡಿದ್ದು, ಅವರ ಕಾಲದಲ್ಲಿ ಅಲ್ಲ ಲ್ಯಾಂಡ್ ರಿಫಾರ್ಮ್ಸ್ ಬಿಲ್ ಅಮೆಂಡ್ ಆಗಿದ್ದು.

ಅಧ್ಯಕ್ಷರು : ಅವರು ಹೇಳಿದ್ದು, ಆ ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿ, ಅಮೆಂಡ್‌ಮೆಂಟ್ ಮಾಡಿದವರು ಶ್ರೀ ಜಾಲಪ್ಪನವರು. ಅವರು ಲೋಕಸಭೆಗೆ ಹೋಗುವಾಗ ಅವರ ಹತ್ತಿರ ಇದ್ದಿದ್ದನ್ನು ಶ್ರೀ ರಮೇಶ್ ಸಿ. ಜಿಗಜಿಣಗಿಯವರಿಗೆ ಕೊಟ್ಟುಹೋಗಿದ್ದಾರೆಂದು.

ಶ್ರೀ ಎನ್. ರಾಜಣ್ಣ : ಏನಾದರೂ ಒಳ್ಳೆಯ ಕೆಲಸ ಮಾಡಿದ್ದಾರೆ. Hazardous growth has been stopped ಇವತ್ತು ಸಿಟಿಯಲ್ಲಿ ಕಂಜೆಸ್ಟೆಡ್ ಆಗಿ ಸಿಕ್ಕಾಪಟ್ಟೆ ಬೆಳೆದು, ಹಿಂದೆ ಒಂದು ಗಾದೆ ಹೇಳುತ್ತಿದ್ದರೆ ವಿಥ್ ದಿ ಪರ್ಮಿಷನ್ ಆಫ್ ದಿ ಛೇರ್, ತೆಲುಗಿನಲ್ಲಿ ಒಂದು ಗಾದೆ ಹೇಳುತ್ತಿದ್ದರು.

(ಮಾನ್ಯ ಸದಸ್ಯರು ತೆಲುಗಿನಲ್ಲಿ ಗಾದೆಯೊಂದನ್ನು ಹೇಳಿದರು.)

ಶ್ರೀ ಹೆಚ್. ಎಸ್. ಮಹಾದೇವ ಪ್ರಸಾದ್ : ಅಧ್ಯಕ್ಷರೇ ಕನ್ನಡದಲ್ಲಿ ಹೇಳಬೇಕು.

ಅಧ್ಯಕ್ಷರು : ನನಗೆ ಕನ್ನಡ ಬಿಟ್ಟು ಬೇರೆ ಭಾಷೆ ಬರುವುದಿಲ್ಲ.

ಶ್ರೀ ಎನ್. ರಾಜಣ್ಣ : ಹಿಂದೆ ಒಂದು ಕಾಲದಲ್ಲಿ ಹೇಳುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಕ್ರಿಯಾಲೋಪ ನನ್ನದು. ರಾಜ್ಯದ ಆಡಳಿತ ಭಾಷೆ ಕನ್ನಡ. ಮಾನ್ಯ ಶ್ರೀ ರಾಜಣ್ಣನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಷಯ ಸಮಿತಿ ಅಧ್ಯಕ್ಷರನ್ನಾಗಿ ತಾವು ಮಾಡಿದ್ದೀರಿ. ಅವರೇ ಇಂತಹ ಅಪರಾಧವನ್ನು ಈ ಶಾಸನಸಭೆಯಲ್ಲಿ ಮಾಡುವುದಾದರೆ, ಬಹುಶಃ ನನಗನ್ನಿಸುತ್ತದೆ ತಾವು ಸೂಕ್ತವಾದ ತೀರ್ಪನ್ನು ಕೊಡಬೇಕು. ಅವರ ಸದಸ್ಯತ್ವ ಉಳಿಯಬೇಕು, ಇಲ್ಲ ಹೋಗಬೇಕು. ನೀವು ತೀರ್ಪು ಕೊಡಲೇಬೇಕು.

ಅಧ್ಯಕ್ಷರು : ತೀರ್ಪು ಕೊಡುತ್ತೇನೆ, ಅವರ ಸದಸ್ಯತ್ವವನ್ನೂ ಉಳಿಸುತ್ತೇನೆ. ಅವರು ಮಾತನಾಡುವಾಗ ಒಂದು ಗಾದೆಯನ್ನು ಬೇರೆ ಭಾಷೆಯಲ್ಲಿ ಹೇಳಿದರು. ಭಾಷಣವನ್ನು ಆ ಭಾಷೆಯಲ್ಲಿ ಮಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಗಾದೆ ನಮಗೆ ಅರ್ಥವೇ ಆಗುತ್ತಿಲ್ಲ. ಯಾವ ಗಾದೆ? ನಮಗೆ ಅರ್ಥವಾಗುವ ಗಾದೆ ಹೇಳಿದರೆ ಪರವಾಗಿಲ್ಲ.

ಅಧ್ಯಕ್ಷರು : ನನಗೂ ಗೊತ್ತಾಗಲಿಲ್ಲವಲ್ಲಾ!

ಶ್ರೀ ವಾಟಾಳ್ ನಾಗರಾಜ್ : ನಮಗೆ ಅರ್ಥವಾಗುವ ಹಾಗೆ ಗಾದೆ ಹೇಳಿದರೆ, ಒಳ್ಳೆಯದು, ಇಲ್ಲದಿದ್ದರೆ ನಮ್ಮನ್ನು ಅವರು ಬೈಯ್ದಿದ್ದರೆ?

ಅಧ್ಯಕ್ಷರು : ಒಂದು ವೇಳೆ ಯಾರಾದರೂ ನಿಮ್ಮನ್ನು ಬೈಯ್ದಿದ್ದರೆ ಬೇಸರಪಟ್ಟುಕೊಂಡು ಹಿಂದೆ ಬಯ್ಯುತ್ತಾರೆಯೇ ಹೊರತು, ಎದುರಿಗೆ ಯಾರೂ ಬಯ್ಯುವುದಿಲ್ಲ. ಏಕೆಂದರೆ, ನಿಮ್ಮ ಬಾಯಿಗೆ ಹೆದರುತ್ತಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರು, ಅನುಮತಿ ಕೊಟ್ಟಿದ್ದಾರೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಹೆಚ್. ಎನ್. ನಂಜೇಗೌಡ : ವಾಟಾಳ್ ನಾಗರಾಜ್‌ರವರೇ, ಅವರು ಇಂಗ್ಲಿಷ್‌ನಲ್ಲಿ ಹೇಳಿದ್ದು, ಇವರಿಗೆ ಹೇಗೆ ಗೊತ್ತಾಯಿತು?

ಶ್ರೀ ವಾಟಾಳ್ ನಾಗರಾಜ್ : ಕೇಳಿ ಎಂದು ಇವರೇ ನನಗೆ ಹೇಳಿದ್ದುದು. ನಾನು ತಮಗೆ ಹೇಳುತ್ತಿದ್ದೇನೆ, ಇದು ಲಘುವಾಗಿ ತೀರ್ಮಾನವಾಗತಕ್ಕದ್ದಲ್ಲ. ಬಹಳ ತೀವ್ರವಾಗಿ ಇದನ್ನು ತೆಗೆದುಕೊಳ್ಳಬೇಕಾಗಿದೆ. ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವಿಷಯ ಸಮಿತಿಯ ಅಧ್ಯಕ್ಷರು ಮತ್ತು ಈ ರಾಜ್ಯದ ಭಾಷೆ ಕನ್ನಡ, ರಾಜ್ಯ ಸರ್ಕಾರದ ನೀತಿ ಕನ್ನಡ, ಆದರೆ ಅವರು ತೆಲುಗಿನಲ್ಲಿ ಗಾದೆ ಹೇಳಲು ಶುರು ಮಾಡಿದರೆ, ಪರಿಸ್ಥಿತಿ ಏನು?

ಅಧ್ಯಕ್ಷರು : ಶ್ರೀಮಾನ್ ರೆಡ್ಡಿಯವರೆ, ಅವರು ಹೇಳಿದ್ದು ಮನೆಯ ವಿಚಾರ, ಮದುವೆ ವಿಚಾರಕ್ಕೊಂದು ಗಾದೆ. ಭಾಷಣವೆಲ್ಲಾ ಕನ್ನಡದಲ್ಲೇ ಮಾಡಿದ್ದಾರೆ. ಎಂಥ ಉತ್ಕೃಷ್ಟ ಕನ್ನಡ, ಏನು ಕತೆ? ನೀವು ಇರಲಿಲ್ಲ. ಅಪಾರವಾದ ತಿಳುವಳಿಕೆ ಇದೆ. ಎಲ್ಲ ವಿಚಾರವನ್ನೂ ಸಂಗ್ರಹ ಮಾಡಿ ಮಾತನಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ಕನ್ನಡ ಬಿಟ್ಟು ಬೇರೆ ಭಾಷೆ ಬರುವುದಿಲ್ಲವೆಂದ ಮೇಲೆ ಅವರು ಹೇಳಿದ್ದು ನಿಮಗೆ ಹೇಗೆ ಅರ್ಥವಾಯಿತು?

ಅಧ್ಯಕ್ಷರು : ಒಂದು ಅಂದಾಜು.

ಶ್ರೀ ಎನ್. ರಾಜಣ್ಣ : ಕರ್ನಾಟಕ ರಾಜ್ಯಪತ್ರದ No.RD 80 EST/P dated 23-3-96 - General power of Attorney ಇದನ್ನು ಮಾಡಿರುವುದರಿಂದ ಏನಾಗಿದೆಯೆಂದರೆ, ಬೆಂಗಳೂರಿನ ಸುತ್ತಲೂ ಯಾರೇ ಲ್ಯಾಂಡ್ ಕೊಂಡುಕೊಂಡವರಿದ್ದರೂ ಇದರಲ್ಲಿ ಖಾತಾ ಟ್ರಾನ್ಸ್‌ಫರ್ ಆಗುವುದಿಲ್ಲ. ಇದೊಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಇಷ್ಟು ಮಾಡುತ್ತಿರುವುದು ರೈತನಿಗೆ ಒಳ್ಳೆಯದಾಗಲೆಂದು. ವ್ಯವಸಾಯ ಮಾಡಿಕೊಂಡು ಹೋಗುತ್ತಿರುವ ರೈತ ಜೀವನ ಮಾಡಿಕೊಂಡು ಹೋಗಲಿ ಎನ್ನುವ ಕಾರಣಕ್ಕಾಗಿ. ರೈತನ ಆ ಜಮೀನಿಗೆ ಒಂದು ಒಂದೂವರೆ ವರ್ಷಗಳ ಹಿಂದೆ ಬೆಂಗಳೂರಿನ ಸುತ್ತಲೂ 10 ಲಕ್ಷದಿಂದ 20 ಲಕ್ಷ ರೂಪಾಯಿಗಳು ಒಂದು ಎಕರೆಗೆ ಹೋಗುತ್ತಿತ್ತು. ಇವತ್ತು 5 ಲಕ್ಷ ರೂಪಾಯಿ

ಕಡಿಮೆ ಬೆಲೆಗೆ ಬಂದಿದೆ. ಇದಕ್ಕೆ ಯಾರು ಕಾರಣ? ನಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ಆದ್ದರಿಂದ, ಬೆಲೆಯೂ ಕಡಿಮೆಯಾಯಿತು, ರೈತನ ಜಮೀನೂ ಉಳಿದುಕೊಂಡು ಹೋಗುವಂತಾಯಿತು. ಮೂರನೆಯದಾಗಿ, ಮಧ್ಯದಲ್ಲಿರತಕ್ಕ ಡೀಲರ್‌ಗಳು ರೈತರಿಗೆ ಬಹಳ ತೊಂದರೆ ಕೊಡುತ್ತಿದ್ದರು. ಎಲ್ಲವೂ ತಪ್ಪಿದೆ. ಇದು ತಪ್ಪಿರುವುದರಿಂದ ಒಳ್ಳೆಯ ಕೆಲಸ ಮಾಡಿದ್ದಾರೆಂದು ನಾನು ಹೇಳುವುದಕ್ಕೆ ಯೋಚಿಸುತ್ತಿದ್ದೇನೆ. ಬೆಂಗಳೂರಿನ ಸುತ್ತಲೂ ಏನಾಗಿದೆಯೆಂದರೆ, ಬೆಂಗಳೂರು ಸಿಟಿ ಕಾರ್ಪೋರೇಷನ್‌ಗೆ ಹಿಂದೆ 87 ವಾರ್ಡ್‌ಗಳಿದ್ದು, ಈಗ 100 ವಾರ್ಡ್‌ಗಳನ್ನು ಮಾಡಿದ್ದಾರೆ. 100 ವಾರ್ಡ್‌ಗಳು ಎಂದರೆ ಅದನ್ನು 67 ವಾರ್ಡ್‌ಗಳನ್ನು ಮತ್ತು 33 ವಾರ್ಡ್‌ಗಳನ್ನು ಬೇರೆ ಮಾಡಿ ಬೆಂಗಳೂರು ರೂರಲ್, ಬೆಂಗಳೂರು ಅರ್ಬನ್‌ಗೆ ಸೇರಿಸಿದ್ದೀರಿ. ಈ ಅರ್ಬನ್‌ಗೆ ಸೇರಿರೋದ್ರಲ್ಲಿ ರೈತರ ಜಾಗ ನಮ್ಮ ಸಿಟಿಯನ್ನು ಸೇರುತ್ತಿದೆ. ಇಲ್ಲಿ ಬಹಳ ಮಿಸ್‌ಯೂಸ್ ಆಗುತ್ತಿತ್ತು. ಅಂಥದ್ದರಲ್ಲಿ ಈಗ ನಮ್ಮ ಸರ್ಕಾರದವರು 2 ಸಾವಿರ ಎಕರೆಯನ್ನು ಐಡೆಂಟಿಫೈ ಮಾಡಿದ್ದಾರೆ. ಅದರಲ್ಲಿ 500 ಎಕರೆಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ.

SRI C.R. SAGIR AHMED : Including IAS Officers.

SRI N. RAJANNA : There are good officers Mr. Sagir. ಆದರೆ, ಈಗ ನಾನು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಎಚ್ಚರಿಕೆ ಕೊಡಬೇಕೆಂದು ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ನೀವೇನೇ ಮಾಡಿ, ಹೊಸ ಲ್ಯಾಂಡ್ ಯಾವ್ಯಾವು ಸೇರಿದೆ, ಅದು ಖರಾಬ್, ಗೋಮಾಳ, ಗುಂಡು ತೋಪು, ಕೆರೆ-ಕುಂಟೆ ಲ್ಯಾಂಡ್ ಇರಬಹುದು, ಕರೆಕ್ಟಾಗಿ ಮೆಜರ್ ಮಾಡಿ, ಸರ್ಕಾರದ ಕಡೆ ಬರಬೇಕು. ಮೊದಲ ರೆಕಾರ್ಡ್ ಆರ್ಕೀವ್ಸ್‌ನಿಂದ ಬರಬೇಕು.

ಅಧ್ಯಕ್ಷರು : ಈಗ ಸಂಸದೀಯ ವ್ಯವಹಾರ ಕಲಾಪಗಳ ಸಮಿತಿ ಇದೆ. ಸಿಎಂರವರು ಬಂದಿದ್ದಾರೆ. 10 ನಿಮಿಷ ಹೋಗಿ ಬಂದು ಬಿಡುತ್ತೇನೆ.

(ಈ ಹಂತದಲ್ಲಿ ಶ್ರೀ ಶಿವನಂಜಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು.)

ಶ್ರೀ ಎನ್ ರಾಜಣ್ಣ : ಅವರು ಸೀನಿಯರ್ ಲೀಡರ್ ಕುಳಿತಿರುವಾಗ, I also respect the chair. ಬೆಂಗಳೂರು ಸಿಟಿಗೆ ಅರ್ಬನ್‌ನಿಂದ ಸೇರತಕ್ಕ ಹೊಸದಾಗಿ 33 ಡಿವಿಜನ್‌ಗಳು surrounding Bangalore City -10 ಕಿ.ಮೀ. ಒಳಗೆ ಬರತಕ್ಕವುಗಳನ್ನು ಹೊಸದಾಗಿ ಸೇರಿಸಿದ್ದೀರಿ. ಅಧ್ಯಕ್ಷರ ಮೂಲಕವಾಗಿ ನಾನು ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುವುದೇನೆಂದರೆ, ಖರಾಬ್ ವೇಕೆಂಟ್ ಗೋಮಾಳ, ಗುಂಡುತೋಪು ಏನೇನು ಲ್ಯಾಂಡ್ ಇದೆ ಇವೆಲ್ಲಕ್ಕೂ ವಿಕಾಸ ಮಾಡಿ, ಮೊದಲನೆಯದಾಗಿ ಆರ್ಕೈವ್‌ನ್ನು ಸಿದ್ಧಪಡಿಸಿ ಡಿ.ಸಿ. ಆಫೀಸ್‌ನಲ್ಲಿ ಒಂದು ಕಾಪಿ ಇಟ್ಟುಕೊಳ್ಳಬೇಕು. ಮೂರನೆಯದು, ತಾಲ್ಲೂಕು ಆಫೀಸ್‌ನಲ್ಲಿ ಒಂದು ಕಾಪಿ ಇಡಬೇಕು. ನಾಲ್ಕನೆಯದು, ಕಾರ್ಪೊರೇಷನ್‌ಗೆ ಕಳುಹಿಸಿ ಕೊಡಬೇಕು. ಇಲ್ಲಾಂದರೆ, ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ, ಬೆಂಗಳೂರಿನಲ್ಲಿ ಏನಾಗಿದೆಯೆಂದರೆ, ಇದನ್ನು ನೀವು ಸ್ವಲ್ಪ ನೋಡಿ. ಬೆಂಗಳೂರಿನಲ್ಲಿ ಲ್ಯಾಂಡ್

ಲೇಬರರ್ಸ್ ಯಾವ ತರಹ ಇದ್ದಾರೆನ್ನುವುದನ್ನು ನೀವು ತಿಳಿದುಕೊಳ್ಳಬೇಕು. ನಾನು 1951ರಲ್ಲಿ ಬ್ರಿಟೀಷ್ ಇಂಡಿಯಾ ಇದ್ದಾಗ, ಬ್ರಿಟಿಷರು ಹೋಗುತ್ತಿದ್ದರು. ಅವರು ಏನು ಒಂದು ಪಾರ್ಕ್ ಆಗಿ ಇಟ್ಟುಕೊಂಡಿದ್ದರು, ಆ ಪಾರ್ಕ್‌ಗೆ ಖಾತಾ ಮಾಡಿ ಸೇಲ್ ಮಾಡಿದ್ದಾರೆ. ಬೆಂಗಳೂರು ನಗರ ಆ ಮಟ್ಟಕ್ಕೆ ಬಂದಿದೆ. ಹಿಂದೆ ಆಗಿತ್ತು, ಇದು 1993ರಲ್ಲಿ ಆಗಿರುವುದು ಶ್ರೀನಿವಾಸ್‌ರವರೆ, ನಮ್ಮ ಸರ್ಕಾರ 10 ಕೋಟಿ ರೂಪಾಯಿಗಳ ಆಸ್ತಿಯನ್ನು ಉಳಿಸಿದೆ. 1951ರಲ್ಲಿ ನನಗೆ 11 ವರ್ಷ ಈಗ 58 ವರ್ಷಗಳು.

ಛೇರ್ಮನ್ : ಡಿಸ್ಟರ್ಬ್ ಮಾಡಬೇಡಿ. ಫ್ಲೋ ಆಫ್ ಥಾಟ್ಸ್ ಹೋಗುತ್ತದೆ.

ಶ್ರೀ ಎನ್. ರಾಜಣ್ಣ : ಬ್ರಿಟೀಷರು ನಮ್ಮ ದೇಶ ಬಿಟ್ಟು ಹೋಗುವಾಗ ನಾನು ಆಗ 11 ವರ್ಷದ ಹುಡುಗ ಎಂದರೆ ಆ ಜಾಗ ಪಾರ್ಕ್ ಆಗಿತ್ತು. ನಾನು ಓದಿದ್ದು, ವಿದ್ಯೆ ಕಲಿತಿದ್ದು ದನದ ಕೊಟ್ಟಿಗೆಯಲ್ಲಿ. ಆದರೆ ಬುದ್ಧಿವಂತನಾದೆ. ವಿದ್ಯಾವಂತನಾಗಲಿಲ್ಲ, ವಿಚಾರವಂತನಾಗಿದ್ದೇನೆ. ಯಾರೋ ಒಬ್ಬರು ಗುರುಗಳು ಕರೆದುಕೊಂಡು ಹೋಗಿ ನನಗೆ ಎಸ್‌ಎಸ್‌ಎಲ್‌ಸಿ ಮಾಡಿಸಿದ್ದರಿಂದ ಪಾಸ್ ಮಾಡಿದ್ದೇನೆ. ಕನ್ನಡದಲ್ಲಿ ನಿಪುಣನಾಗಿಲ್ಲ. ಕನ್ನಡ ಚೆನ್ನಾಗಿ ಅರ್ಥವಾಗುತ್ತದೆ. ಎಸ್.ಎಸ್.ಎಲ್.ಸಿ. ಪಾಸ್ ಮಾಡಿದ್ದು ಇಂಗ್ಲೀಷ್‌ನಲ್ಲಿ. ಇದು ಏಕೆ ಹೇಳುತ್ತೇನೆಂದರೆ ಇದು ಬಹಳ ಮುಖ್ಯವಾದುದು. ಈ ಜಾಗ ಸರ್ವೆ ಮಾಡಿ ಕರೆಕ್ಟಾಗಿ ನೋಟಿಫೈ ಮಾಡಿ ಇದರ ಬಗ್ಗೆ ನಾವು ಕಾಳಜಿ ವಹಿಸಿಲ್ಲ ಎಂದರೆ ಬೆಂಗಳೂರು ಸುತ್ತಲೂ ಇರತಕ್ಕಂಥ ಜಾಗವನ್ನು ಕಬಳಿಸುವವರು ಇದಕ್ಕೆ ಡಾಕ್ಯುಮೆಂಟ್ಸ್‌ನ್ನು ಸೃಷ್ಟಿ ಮಾಡುತ್ತಾರೆ.

ಶ್ರೀ ಕೆ. ಸುರೇಶ್‌ಕುಮಾರ್ : ಮಾನ್ಯ ಚೇರ್‌ಮನ್‌ರವರೆ, ಮಾನ್ಯ ರಾಜಣ್ಣನವರು ಬಹಳ ಗಂಭೀರವಾದಂತಹ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಛೇರ್ಮನ್ : ಅವರು ಯೀಲ್ಡ್ ಆಗಿಲ್ಲ.

ಶ್ರೀ ಕೆ. ಸುರೇಶ್‌ಕುಮಾರ್ : ಈ ಸರ್ಕಾರಿ ಗೋಮಾಳದ ಬಗ್ಗೆ ಅದರಲ್ಲೂ ವಿಶೇಷವಾಗಿ ಬೆಂಗಳೂರು ಸುತ್ತಮುತ್ತ ಇರುವ ಜಮೀನಿನ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಸನ್ಮಾನ್ಯ ಕಂದಾಯ ಸಚಿವರು ಇಲ್ಲಿದ್ದಾರೆ. ಕೆಂಗೇರಿ ಹೋಬಳಿ ನೊಣ್ಣೇನಹಳ್ಳಿ ಗ್ರಾಮದಲ್ಲಿ ಸುಮಾರು 70ಎಕರೆ ಗೋಮಾಳ ಪ್ರದೇಶವನ್ನು ಖಾಸಗಿ ವ್ಯಕ್ತಿಗಳು ಖೋಟಾ ಹಕ್ಕುಪತ್ರ ಪ್ರಿಂಟ್ ಮಾಡಿ ಮನಬಂದಂತೆ ಮಾರಾಟ ಮಾಡಿದ್ದಾರೆ. ಈ ಬಗ್ಗೆ ಸ್ಥಳೀಯ ಗ್ರಾಮಸ್ಥರು ಸರ್ಕಾರದ ವಿವಿಧ ಹಂತದಲ್ಲಿ ಎಲ್ಲಾ ಮಾಹಿತಿ ಕೊಟ್ಟರೂ ಕೂಡ ಇದುವರೆಗೂ ಏನು ಕ್ರಮ ತೆಗೆದುಕೊಂಡಿಲ್ಲ. ಅದೇರೀತಿ ಕೆಂಗೇರಿ ಹೋಬಳಿ ಭೀಮನಕೊಪ್ಪ ದಾಖಲೆ ಬೆಟ್ಟನಪಾಲಿಯ ಗ್ರಾಮ 180ನೇ ಸರ್ವೆ ನಂಬರ್‌ನಲ್ಲಿ ಸುಮಾರು 25ಎಕರೆ ಸರ್ಕಾರಿ ಜಮೀನಿನ ಗೋಮಾಳಕ್ಕೆ ಬೇಲಿ ಹಾಕಿದ್ದಾರೆ. ಈ ಬಗ್ಗೆ ಮೇಲ್ಮನೆಯಲ್ಲಿ ತಮ್ಮ ಗಮನಕ್ಕೆ ತಂದಾಗ ಸರ್ಕಾರ ಕೂಡಲೇ ಕ್ರಿಮಿನಲ್ ಮೊಕ್ಕದ್ದಮೆ ಹೂಡುತ್ತೇವೆಂದು ಆಶ್ವಾಸನೆ ಕೊಟ್ಟರು. ಆದರೆ ಈಗಲೂ ಕೂಡ ಬೇಲಿ ಹಾಕುವಂತಹ ಕೆಲಸ, ಲಪಟಾಯಿಸುವಂತಹ ಕೆಲಸ ಇವತ್ತು ನಡೆಯುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಹೇಳಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಬೇಲಿ ಹಾಕುತ್ತಿದ್ದರೆ ನಾಳೆ ಅದನ್ನು ಬಂದ್ ಮಾಡಿಸುತ್ತೇನೆ. ಅವರು ಹೆಸರು ಬರೆದುಕೊಡಲಿ, ನನಗೆ ಎಷ್ಟು ಕೆಟ್ಟದು ಅನಿಸುತ್ತದೆ ಎಂದರೆ ಮಂತ್ರಿಯಾಗಿ ನಾನು ಹೇಳುವುದಾದರೆ ಇವರು ಹೇಳುವುದೆಲ್ಲಾ ನಿಜ. ಬೆಂಗಳೂರು ಸುತ್ತಮುತ್ತ ಸರ್ಕಾರಿ ಜಮೀನು ಏನಿದೆ, ಅದರ ವಿಚಾರದಲ್ಲಿ ಅಧಿಕಾರಿಗಳ ಕುಮ್ಮಕ್ಕು ಇದೆ. ಇನ್ನು ಕೆಲವರು ಏನು ಮಾಡುತ್ತಾರೆಂದರೆ ನಮ್ಮ ಅಧಿಕಾರಿಗಳು ರಿಟೈರ್ಡ್ ಆಗಿ ಒಂದೆರಡು ವರ್ಷಗಳಾಗಿವೆ. ಆದರೆ ತಾವು ಇದ್ದಂತಹ ಡ್ಯೂಟಿ ಡೇಟ್‌ಗೆ ಇವತ್ತು ಡಾಕ್ಯುಮೆಂಟ್ಸ್‌ಗೆ ಸಹಿ ಹಾಕಿ ಕೊಡುತ್ತಿದ್ದಾರೆ, ಎಂತಹ ಕೆಟ್ಟ ಸಮಾಜ ಇದು. ಇದನ್ನೆಲ್ಲಾ ಪತ್ತೆ ಹಚ್ಚಿದ್ದೇವೆ. ಯಾರ್‍ಯಾರು ಈ ವಿಷಯದಲ್ಲಿ, ಅಧಿಕಾರದಲ್ಲಿ ಇದ್ದವರು ಇಂತಹ ರೆಕಾರ್ಡ್ಸ್ ತಿದ್ದಿದ್ದಾರೆ. ಅಂತಹವರನ್ನು ನಿಯಮ 285ರಲ್ಲಿ ಕಳುಹಿಸಬೇಕೆಂದು ತೀರ್ಮಾನ ಮಾಡಿದ್ದೇನೆ. ಅದರ ಬಗ್ಗೆ ಯಾವ ದಾಕ್ಷಿಣ್ಯನೂ ಬೇಡ. ಮೊನ್ನೆ ಕೂಡ ಒಬ್ಬ ತಹಸೀಲ್ದಾರ್ ಮೂರು ಎಕರೆ ಜಮೀನನ್ನು ಹೊಸ ಎಕ್ಸ್‌ಟೆನ್‌ಷನ್‌ನಲ್ಲಿ ಒಬ್ಬ ಮನುಷ್ಯನ ಹೆಸರಿನಲ್ಲಿ ಬರೆದು ಕೊಟ್ಟಿದ್ದಾರೆ. ಅದು ಗೋಮಾಳ. ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಮಾಡಿ ಕೊಟ್ಟಿದ್ದಾನೆ. ಅವರಿಗೆ ಡಿಸ್‌ಮಿಸ್ ಮಾಡುವುದಕ್ಕೆ ಕ್ಯಾಬಿನೆಟ್ ಮೀಟಿಂಗ್‌ಗೋಸ್ಕರ ಕಾಯುತ್ತಿದ್ದೇವೆ. ಎಲ್ಲೆಲ್ಲಿ ಇಂಥ ವಿಷಯಗಳು ನಮ್ಮ ಗಮನಕ್ಕೆ ಬಂದಿದೆ, ಅಲ್ಲಿ ನಾವು ಯಾವುದೇ ದಾಕ್ಷಿಣ್ಯ ಇಲ್ಲದೆ ಆಕ್ಷನ್ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಬಗ್ಗೆ ಸಂದೇಹ ಪಡುವುದು ಬೇಡ. ಎಲ್ಲಾ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತೇನೆ. ನಿಮ್ಮಲ್ಲಿ ಇಂತಹ ಘಟನೆಗಳು ಆಗಿರುವುದಿದ್ದರೆ ದಯವಿಟ್ಟು ಅದನ್ನು ನಮ್ಮ ಗಮನಕ್ಕೆ ತನ್ನಿ. ನಾವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ಎಷ್ಟೇ ಒತ್ತಡ ಬರಲಿ, ಎಷ್ಟೇ ದೊಡ್ಡವರಾಗಿರಲಿ ಅದಕ್ಕೆ ನಾವು ಹಿಂಜರಿಯುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಕಳೆದ ಅಧಿವೇಶನದಲ್ಲಿ ಕೂಡ ಮಾನ್ಯ ಮಂತ್ರಿಗಳು ಗೋಮಾಳದ ಸರ್ಕಾರಿ ಜಾಗವನ್ನು ಎಲ್ಲಿ ಒತ್ತುವರಿ ಮಾಡುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಅಧಿಕಾರಿಗಳಿಗೆ ನಿರ್ದೇಶನ ಕೊಡುತ್ತೇವೆಂದು ತಿಳಿಸಿದ್ದರು. 25 ಎಕರೆ ಐವತ್ತು ಎಕರೆ ನೂರು ಎಕರೆಗೆ ಬೇಲಿ ಹಾಕಿರತಕ್ಕಂಥ ಮತ್ತು ಅನಂತರದ್ದು ಯಾವುದೂ ಕೂಡ ಎರೆಕ್ಷನ್ ಮಾಡುವುದಿಲ್ಲ ನಿಮ್ಮ ಅಧಿಕಾರಿಗಳು. ನಿಮ್ಮ ಅಧಿಕಾರಿಗಳು ಕೂಡ ಸೇರಿ ಇದನ್ನು ಮಾಡುತ್ತಿದ್ದಾರೆ. ಯಾರಾದರೂ ಬಡವರು ಗುಡಿಸಲು ಕಟ್ಟಿದ್ದರೆ, ಅಧಿಕಾರಿಗಳು ಹೋಗಿ ಅಂತಲ್ಲಿ ಕಿತ್ತು ಹಾಕುತ್ತಾರೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಲ್ಲ ನಾನೇನು ಮುಚ್ಚಿಟ್ಟನೇ? ನಾನು ಇಲ್ಲಿ ಅದನ್ನು ಒಪ್ಪಿಕೊಳ್ಳಲಿಲ್ಲವೇ? ಅಧಿಕಾರಿಗಳು ಮಾಡುತ್ತಾರೆಂದು ಹೇಳಿದ್ದೇನೆ. ಇದನ್ನೆಲ್ಲಾ ಕೂಡ ಬೆಂಗಳೂರು ಮೆಟ್ರೊಪಾಲಿಟನ್ ಟಾಸ್ಕ್‌ಫೋರ್ಸ್ ಏನಿದೆ ಅದಕ್ಕೆ ಇದೆಲ್ಲವನ್ನೂ ವಹಿಸಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಬಗ್ಗೆ ಸರ್ಕಾರಿ ಆಜ್ಞೆಯನ್ನು ಕೂಡ ಹೊರಡಿಸಿದ್ದೇನೆ.

ಶ್ರೀ ಎನ್. ರಾಜಣ್ಣ : I request all my colleagues not to disturb me. ಡಿಸ್ಟರ್ಬ್ ಮಾಡಿ. ಆದರೆ ಒಂದು ಸೆಕೆಂಡ್ ಮಾಡಿ. ಜಾಸ್ತಿ ಮಾಡಿದರೆ ನನಗೆ ಮಾತನಾಡಲಿಕ್ಕೆ ಕಟ್ ಆಗುತ್ತದೆ. ನಾನು ಹೇಳಿದ ಹಾಗೆ ಬೆಂಗಳೂರು ಸುತ್ತಮುತ್ತ ಇರತಕ್ಕಂಥ ಖರಾಬ್ ಲ್ಯಾಂಡ್, ಗೋಮಾಳ

ಗುಂಡುತೋಪು, ಕೆರೆಕುಂಟೆಗಳನ್ನು ಪರ್ಫೆಕ್ಟ್ ಆಗಿ ಸರ್ವೆ ಮಾಡಬೇಕು. ಸರ್ವೆ ಮಾಡಿ ಒಂದು ಒರಿಜಿನಲ್ ಆರ್ಕೈವ್‌ನ್ನು ಸಿದ್ಧಪಡಿಸಿ ಎರಡನೆಯದು ಡಿ.ಸಿ.ಆಫೀಸ್‌ನಲ್ಲಿ, ಮೂರನೆಯದು ತಹಶೀಲ್ದಾರ್ ಆಫೀಸ್, ನಾಲ್ಕನೆಯದು ಕಾರ್ಪೋರೇಷನ್‌ನಲ್ಲಿ ಇನ್ನು ಒಂದು ಇದ್ದರೆ ಎಲ್ಲಾದರೂ ಸೇಫ್ ಲಾಕರ್‌ನಲ್ಲಿ ಹಾಕಿಬಿಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಸೃಷ್ಟಿ ಪತ್ರಗಳನ್ನು ರೆಡಿ ಮಾಡುತ್ತಾರೆ. ಈ ಪತ್ರ ಮಾಡಿ 10 ಕೋಟಿ ರೂಪಾಯಿ ಆಸ್ತಿ ಮಾಡುತ್ತಾರೆ. ನಾನು ದನ ಮೇಯಿಸುವಾಗ 1951ರಲ್ಲಿ ಹೋವಾಗಿತ್ತು. ನಾನು ಕಣ್ಣಾರೆ ಕಂಡಿದ್ದು. ಅದರ ಪಕ್ಕದಲ್ಲಿ ಗುಡ್ಡಗಳು ಇದೆ. ಇದಕ್ಕೆ ಕರಾಬ್ ಎಂದರೆ 1992ರಲ್ಲಿ ಕೊಟ್ಟಿರತಕ್ಕಂಥ ಪದ ಇದಕ್ಕೆ. ಆಗ ಕರಾಬ್ ಎಂದು ಇದೆ, ಅದಕ್ಕೆ ಡಾಕ್ಯುಮೆಂಟ್ ರೆಡಿ ಮಾಡಿದ್ದಾರೆ. ಯಾವಾಗ ಮಾಡಿದ್ದಾರೆಂದರೆ 1949ನೇ ಇಸವಿಯಲ್ಲಿ ಡಾಕ್ಯುಮೆಂಟ್ ರೆಡಿ ಮಾಡಿದ್ದಾರೆ. 1949ಕ್ಕೆ ಡಾಕ್ಯುಮೆಂಟ್ ರೆಡಿ ಮಾಡಿ ಅದನ್ನು ಯಾರು ಮಾಡುತ್ತಾರೆ ಗೊತ್ತಾ? ರೋಡ್‌ನಲ್ಲಿ ಓಡಾಡುತ್ತಾನಲ್ಲ ವಿದ್ಯೆನೇ ಇಲ್ಲದೆ ಇರುವ ಭಿಕಾರಿ ಅವನು ಮಾಡುವುದಿಲ್ಲ. ಕೆಲಸ ಇಲ್ಲದೆ ಎಂ.ಎ. ಓದಿರುವವನು ಅವನು ಮಾಡುವುದಿಲ್ಲ. ಇನ್ನು ಹೇಳಬೇಕಾದರೆ ಹೊಟ್ಟೆಗೆ ಇಲ್ಲದೆ ದೇಶದ ಬಗ್ಗೆ ಚಿಂತನೆ ಮಾಡುವವನು ಇವತ್ತು ಮಾಡುವುದಿಲ್ಲ. ಇದನ್ನು ಯಾರು ಮಾಡುವುದು ಗೊತ್ತಾ? ಒಬ್ಬ ಎಂ.ಎ, ಎಲ್.ಎಲ್.ಬಿ. ಲಾಯರ್, ಅವರು ಪ್ರಿನ್ಸಿಪಲ್ ಆಗಿದ್ದರು. ಇದನ್ನು ನಾನು ಎಲ್ಲರಿಗೂ ಹೇಳುವುದಿಲ್ಲ, ಆತ ರೆಕಾರ್ಡ್ ಬಿಲ್ಡಪ್ ಮಾಡಿ ತೆಗೆದುಕೊಂಡು ಬಂದ. ಅದನ್ನು ನನ್ನ ಹತ್ತಿರ ತೆಗೆದುಕೊಂಡು ಬಂದರು. ಅದನ್ನು ನಾನು ಇದು ದನ ಮೇಯಿಸುವ ಖರಾಬ್ ಲ್ಯಾಂಡ್ ಆಗಿತ್ತಲ್ಲ, ಇದನ್ನು ಹೇಗೆ ಡಾಕ್ಯುಮೆಂಟ್ ರೆಡಿ ಮಾಡಿದ್ದಾರೆ ಎಂದು ಚಿಂತನೆ ಮಾಡಿದೆ. ಎರಡನೆಯದು 1962ರಲ್ಲಿ ಆ ಪಾರ್ಕ್ ಬೈಫರ್‌ಕೇಟ್ ಆಯಿತು. ಅದು ರೋಡ್ ಮಧ್ಯದಲ್ಲಿ ಇತ್ತು. ಕಟ್ ಆದಮೇಲೆ ಒಂದು ಕಡೆ 12 ಸಾವಿರ ಅಡಿ, ಇನ್ನೊಂದು ಕಡೆ ಒಂದು ಎಕರೆ ಚಿಲ್ಲರೆ, ಪಾರ್ಟ್ ಆಗಿ ಹೋಯಿತು. ಎರಡು ಸೆಪರೇಟ್ ರೆಕಾರ್ಡ್ ಮಾಡಿದ್ದಾರೆ. ಒಂದು ಮೊದಲನೆಯದು 1949ರಲ್ಲಿ ಮಾಡಿದರು. ಇನ್ನು ಎರಡನೆಯದು 1954ರಲ್ಲಿ, ಇನ್ನೊಬ್ಬರಿಗೆ ಮಾರಿದರು. ಮೂರನೆಯದು 1962ರಲ್ಲಿ ಮಾಡಿದರು. 1963ರಲ್ಲಿ ನಾಲ್ಕನೆ ಪಾರ್ಟಿಗೆ ಮಾಡಿದರು. ಆದರೆ ಇಷ್ಟೆಲ್ಲಾ ಟ್ರಾನ್ಸಾಕ್ಷನ್ ಮಾಡಿದ್ದಾರೆ. ಸ್ವಾಮಿ, ನನಗಿಂತ ನಿಮಗೆ ವಯಸ್ಸು ಜಾಸ್ತಿ, ನಮ್ಮ ಸೀನಿಯರ್ ಲೀಡರ್ ಇದ್ದಾರೆ. 1955ರಲ್ಲಿ ಸ್ಟ್ಯಾಂಪ್ ಪೇಪರ್ ಯಾವ ರೀತಿ ಇತ್ತು? ಏಕೆಂದರೆ ಸ್ಟ್ಯಾಂಪ್ ಪೇಪರ್ ಮಹಾರಾಜರ ಕಾಲದಲ್ಲಿ ಯಾವ ರೀತಿ ಇತ್ತು ಎಂದು ಚಿಂತನೆ ಮಾಡಬೇಕು. ಯಾವ ಮಟ್ಟಕ್ಕೆ ಹೋಗಿದ್ದಾರೆ? How to save the Bangalore City Corporation or Government? We have take very serious action. Otherwise we may not be in a position to save even a little place for the use of public. ಅದು ಮಹಾರಾಜರು ಇದ್ದಂತಹ ಕಾಲದಲ್ಲಿ ಇರುವಂತಹ ಸ್ಟ್ಯಾಂಪ್ ಪೇಪರ್ ಇರಬೇಕು. ಆದರೆ 1939ರದ್ದು ಯಾವ ಸ್ಟ್ಯಾಂಪ್ ಪೇಪರ್‌ನಲ್ಲಿ ಡಾಕ್ಯುಮೆಂಟ್ ರಿಜಿಸ್ಟರ್ ಮಾಡಿದ್ದಾನೆ ಗೊತ್ತಾ? ಪ್ರಸೆಂಟ್ ಡಾಕ್ಯುಮೆಂಟ್‌ನಲ್ಲಿ ರಿಜಿಸ್ಟರ್ ಮಾಡಿದ್ದಾನೆ. ಏಕೆಂದರೆ ಬೆಂಗಳೂರು ಸಿಟಿ ಕಾರ್ಪೋರೇಷನ್ ಲೀಗಲ್ ಸೆಲ್‌ನಲ್ಲಿ ಕೆಲವರು ಒಳ್ಳೆಯವರು ಇದ್ದಾರೆ. ಅಂತಹ ಲೀಗಲ್ ಆಫೀಸರ್ ಮಾರಯ್ಯ ಇದನ್ನು ಹಿಡಿದ. ಹಿಡಿದಿದ್ದಕ್ಕೋಸ್ಕರ ನಮ್ಮ ಸರ್ಕಾರ ಬಂದಿದ್ದಕ್ಕೋಸ್ಕರ ಅವರನ್ನು

ತೆಗೆದುಕೊಂಡು ಬೇಡಿ ಹಾಕಿದ್ದಕ್ಕೋಸ್ಕರ 10 ಕೋಟಿ ರೂಪಾಯಿಗಳಷ್ಟು ಆಸ್ತಿ ಉಳಿಯಿತು. Khatha has been now revoked I want most of the officers to think, ಸ್ವಾಮಿ 10 ಕೋಟಿ ರೂಪಾಯಿ ಆಸ್ತಿ ಸಿಗುವಾಗ ಏನು ಮಾಡುತ್ತಾರೆ? ಟೇಬಲ್ ಕೆಳಗಡೆ ಬಂಡಲ್ ತಂದಿಡುತ್ತಾರೆ. ಕಚೇರಿಯಲ್ಲಿ, ಗಾಂಧಿ, ಹನುಮಂತಯ್ಯನ ಫೋಟೋ ಹಾಕಿದ್ದಾರೆ. ಫೋಟೋ ಮೇಲೆ, ಕೆಳಗಡೆ ಟೇಬಲ್ ತೆಗೆಯುವುದು, ಹೊಸ ನೋಟು ಇಡಿಸಿಕೊಳ್ಳುವುದು. ಸ್ವಾಮಿ ನೋಡುವುದು ಏನು? Khatha has been revoked on 26.11.1996 ಹತ್ತು ಕೋಟಿ ರೂಪಾಯಿ, ಯಾವ ತರಹ ಖರಾಬ್ ಲ್ಯಾಂಡಿಗೆ ಪತ್ರ ಸೃಷ್ಟಿ ಮಾಡಿದ್ದಾರೆ ಎಂದರೆ ಹಿಂದೆ 1993ರಲ್ಲಿ ಖಾತಾ ಮಾಡಿದರು. ಅದರಲ್ಲಿ ಕೆಲವು ರಾಜಕಾರಣಿಗಳು ಸೇರಿಕೊಂಡಿದ್ದಾರೆ, ನಾನು ಅವರ ಹೆಸರುಗಳನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನಾನು ದನದ ಕೊಠಡಿಯಲ್ಲಿ ಜೀವನ ಮಾಡುವವನು ನಾನೇಕೆ ಸೇರಲಿ? I try to lead a contended life with hard work ಅವರು ಕೇಳಿದ್ದಕ್ಕೆ ಉತ್ತರ ಹೇಳಬೇಕು. ಈ ತರಹ ಈ ಲ್ಯಾಂಡ್‌ಗಳೆಲ್ಲ ಬಹಳ ಅಧೋಗತಿಯಾಗುತ್ತಿದೆ. ಇದನ್ನು ಉಳಿಸುವುದಕ್ಕೆ our hon'ble Minister is very clever. I think our Revenue Minister will safeguard the properties of the Government as well as Corporation properties. I request him to take special care to save crores and crores worth of property ಇದನ್ನು ಹೇಳುತ್ತಾ, ಕೊನೆಯದಾಗಿ ಈ ಬೆಂಗಳೂರು ಸುತ್ತಮುತ್ತಲೂ ಇರತಕ್ಕಂಥ ಆಸ್ತಿಯಲ್ಲಿ he should try to preserve water tanks ಕೆರೆಕುಂಟೆಯನ್ನು ಉಳಿಸಿ, ಎರಡನೆಯದು, ಮಕ್ಕಳಿಗೆ ಹಳ್ಳಿಗಳಲ್ಲಿ ಆಟದ ಮೈದಾನ ಉಳಿಸಿ, ಮೂರನೆಯದು, ಗುಂಡುತೋಪು ಎಲ್ಲೆಲ್ಲಿ ಇದೆ ಅದನ್ನು ಬೆಂಗಳೂರಿಗೆ ಉಳಿಸುವುದಕ್ಕೆ ಪ್ರಯತ್ನ ಮಾಡಿ. ಈಗ ನಿಮಗೆ ಗೊತ್ತಿದೆ, ಬೆಂಗಳೂರು ಸುತ್ತಲೂ ಅಂದರೆ 50 ಕಿ.ಮೀ. ಸುತ್ತಲೂ ಮಳೆಯಿಲ್ಲ. ಅರಣ್ಯ ಪ್ರದೇಶದಲ್ಲಿ ಅಂದರೆ ನಮ್ಮ ಅದೃಷ್ಟ, ನಿಮ್ಮೆಲ್ಲರ ಸಹಕಾರ ನಮ್ಮ ಸರ್ಕಾರ ಇರುವುದರಿಂದ ಎಲ್ಲಾ ಕಡೆ ಟ್ಯಾಂಕ್ ತುಂಬಿಬಿಟ್ಟಿದೆ, ಬೆಂಗಳೂರಿನ ಸುತ್ತಮುತ್ತಲೂ ಹೊರತುಪಡಿಸಿ ಕರ್ನಾಟಕದಾದ್ಯಂತ ಒಳ್ಳೆಯ ಮಳೆಯಾಗಿದೆ. ಪರವಾಗಿಲ್ಲ ನಾವು ಪಾಪ ಮಾಡಿದರೂ ರೈತರಿಗೆ ಒಳ್ಳೆಯ ಮಳೆಯಾಗಿದೆ.

ಶ್ರೀ ಕೆ. ಶ್ರೀನಿವಾಸ್ : ದಯವಿಟ್ಟು ಎಲ್ಲಾ ಕಡೆ ಮಳೆಯಾಗಿದೆ ಎಂದು ಹೇಳಬೇಡಿ, ಕೋಲಾರ, ಚಿತ್ರದುರ್ಗ ಈ ಕಡೆ ಮಳೆ ಇಲ್ಲ.

ಶ್ರೀ ಹೆಚ್. ಡಿ. ಬಸವರಾಜು : ನಿಮ್ಮ ಪಾರ್ಟಿಯವರನ್ನೇ ನೀವು ಸ್ಯಾಟಿಸ್‌ಫೈ ಮಾಡುವುದಿಲ್ಲ ಸುಳ್ಳು ಏಕೆ ಹೇಳುತ್ತೀರಾ?

ಶ್ರೀ ಎನ್. ರಾಜಣ್ಣ : ಬೆಂಗಳೂರು ಸುತ್ತಮುತ್ತ, ಕೋಲಾರದ್ದೆಲ್ಲ ಇಲ್ಲ. 60 ಕಿ.ಮೀ. ಡಯಾಮೀಟರ್‌ನಲ್ಲಿ ಮಳೆ ಇಲ್ಲ, ನಿಮಗೂ ಇಲ್ಲದಿದ್ದರೆ ಅದನ್ನೂ ಸೇರಿಸಿಕೊಳ್ಳಿ. ಅದಕ್ಕೋಸ್ಕರ ನಾನು ಛೇರ್‌ಮನ್‌ರವರಲ್ಲಿ ಮನವಿ ಮಾಡಿಕೊಳ್ಳುವುದು, ನಮ್ಮ ಬೆಂಗಳೂರು ಉತ್ತರದಲ್ಲಿ ಇರುವಂಥ ಬೆಳ್ಳಂದೂರು ಟ್ಯಾಂಕ್‌ನಲ್ಲಿ ಹಿಂದೆ ಮೀನು ಸಿಗುತ್ತಾ ಇತ್ತು. ಈಗ ಬರೀ ವಿಶ್ವಭಾರತಿಯಲ್ಲಿನ

ನೀರೇ ಅಲ್ಲಿಗೆ ಹೋಗುತ್ತಿದೆ, ಅದರಲ್ಲೂ ಅದೂ ಅಧ್ವಾನ ಆಗಿಹೋಗಿಬಿಟ್ಟಿದೆ, ಈ ಬೆಳ್ಳಂದೂರು ಟ್ಯಾಂಕ್ ಮತ್ತು ಭೈರಮಂಗಲ ಟ್ಯಾಂಕ್ ಇವೆರಡನ್ನೂ ಉಳಿಸಬೇಕೆಂದು ನಾನು ಸನ್ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ. ಇದನ್ನು ಉಳಿಸಿ ಅಲ್ಲಿ ಕಸದಿಂದ ರಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಆ ಟ್ಯಾಂಕ್‌ನಲ್ಲಿ ಕೊಳೆತ ನೀರು ಹೋಗಿ ಸೇರಿಕೊಂಡಿದ್ದು ಅದನ್ನು ಏನಾದರೂ ಶುದ್ಧ ಮಾಡಿದರೆ ಬೇರೆಯದಕ್ಕೆ ಉಪಯೋಗಿಸುವುದಕ್ಕೆ ಆಗುತ್ತದೆ. ಅದನ್ನೇ ಕಸದಿಂದ ರಸ ಎಂದು ಹೇಳುವುದು.

ಶ್ರೀ ಸಿ. ಎಂ. ಲಿಂಗಪ್ಪ : ರಾಜಣ್ಣನವರೆ ಒಂದು ನಿಮಿಷ ಮಾನ್ಯ ಛೇರ್‌ಮನ್‌ರವರೆ, ಶ್ರೀಮಾನ್ ರಾಜಣ್ಣನವರು ಬಹಳ ಸ್ವಾರಸ್ಯಕರವಾದ ರೀತಿಯಲ್ಲಿ ತಮ್ಮ ಭಾಷಣದ ಅವಧಿಯಲ್ಲಿ ಆ ಭೈರಮಂಗಲ ಕೆರೆಯ ಬಗ್ಗೆ ಮಾತನಾಡಿದ್ದಾರೆ. ಭೈರಮಂಗಲ ಕೆರೆ ನೇರವಾಗಿ ನಮಗೆ ಸಂಬಂಧ ಪಡತಕ್ಕಂಥದ್ದು, ಅವರು ಹೇಳಿದಹಾಗೆ ಇತ್ತೀಚೆಗೆ ಅದು ಬಹಳ ಕೆಟ್ಟಿದೆ, ಇವೊತ್ತು, ಅಲ್ಲಿ ಬಹಳಷ್ಟು ಕಲುಷಿತ ನೀರು ಹರಿದುಬಂದಿದೆ. ಅಲ್ಲಿ ಹಿಂದೆ ಸಾಕಷ್ಟು ಮೀನುಗಳ ಉತ್ಪತ್ತಿಯಾಗುತ್ತಿತ್ತು ಬೆಂಗಳೂರಿಗೆ ಒಂದು ದಿವಸಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಅರ್ಧ ಟನ್, ಮುಕ್ಕಾಲು ಟನ್, ಒಂದು ಟನ್ ಮೀನು ಸರಬರಾಜಾಗುತ್ತಿತ್ತು. ಆದರೆ ಈಗ ಆ ಮೀನಿನ ಮರಿಗಳು ಅಭಿವೃದ್ಧಿಯಾಗುತ್ತಿಲ್ಲ. ಹೀಗಾಗಿ ಅದನ್ನು ಉಳಿಸಬೇಕು ಎಂಬ ಮಾತನ್ನು ಅವರು ಹೇಳಿದ್ದರಿಂದ ಈ ಬಗ್ಗೆ ಈ ಸಭೆಯಲ್ಲಿ ಹೆಚ್ಚಿನ ಬೆಳಕನ್ನು ಚೆಲ್ಲಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಛೇರ್‌ಮನ್‌ರವರೆ, ರಾಜಣ್ಣನವರು ಮಾತನಾಡುತ್ತಾ ಬೆಂಗಳೂರು ಸುತ್ತಮುತ್ತಲೂ ಇರತಕ್ಕಂಥ ಹಳೆಯ ಕೆರೆಗಳು ಏನಿದ್ದಾವೆ ಅವುಗಳನ್ನು ಸರ್ಕಾರ ಉಳಿಸಿ ಕೊಳ್ಳಬೇಕು ಎಂದು ಹೇಳಿದ್ದಾರೆ. ಆ ಕೆರೆಗಳನ್ನು ಉಳಿಸಬೇಕೆಂದು ನಾವು ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದೇವೆ. ಬೆಂಗಳೂರು ನಗರದಲ್ಲಿರತಕ್ಕಂಥ ಕೆಲವೊಂದು ಕೆರೆಗಳು ಮುಚ್ಚಿ ಹೋಗಿವೆ. ಅಲ್ಲಿ ನೀರು ಇರುವುದಿಲ್ಲ. ಆದರೆ ಅದನ್ನು ಎನ್‌ಕ್ರೋಚ್‌ಮೆಂಟ್ ಮಾಡಲಿಕ್ಕೆ ಹತ್ತಿದ್ದಾರೆ. ಅದಕ್ಕೆ ಸರ್ಕಾರ ಒಂದು ತೀರ್ಮಾನ ಮಾಡಿ ಅರಣ್ಯ ಇಲಾಖೆಯವರಿಗೆ ಆ ಕೆರೆಗಳನ್ನು ವಹಿಸಿಕೊಟ್ಟಿದ್ದೇವೆ. ಆ ಅರಣ್ಯ ಇಲಾಖೆಯವರು ಫೆನ್ಸಿಂಗ್ ಹಾಕಿಕೊಂಡು ಅಲ್ಲಿ ಗಿಡ ನೆಡಬೇಕು ಎಂದು ಹೇಳಿ ನಾವು ಈಗಾಗಲೇ ತೀರ್ಮಾನ ಮಾಡಿ ಅವರಿಗೆ ಕೆಲವೊಂದು ಕೆರೆಗಳನ್ನು ಈಗಾಗಲೇ ವಹಿಸಿಕೊಟ್ಟಿದ್ದೇವೆ. ಆದರೆ,ಛೇರ್‌ಮನ್‌ರವರೆ ಇನ್ನೊಂದು ಏನಾಗುತ್ತದೆ ಬೆಂಗಳೂರು ಸುತ್ತಮುತ್ತಲೂ ಮತ್ತು ಬೆಂಗಳೂರು ನಗರದಲ್ಲಿ ಸರ್ಕಾರಿ ಜಮೀನುಗಳನ್ನು ಕಬಳಿಸಿದ ಮೇಲೆ ನಾವು ಬಿಡಿಸುತ್ತೇವೆ, ನಾವೇನೊ ಪ್ರಯಾಸ ಮಾಡಿ ಪೋಲೀಸರಿಂದ ಎನ್‌ಕ್ರೋಚ್‌ಮೆಂಟ್ ಆಗಿದ್ದನ್ನು ತೆಗಿಸಿ ಬಂದಮೇಲೆ ಮರುದಿವಸ ಅಲ್ಲೆಲ್ಲ ಬಡವರ ಹೆಸರಿನಲ್ಲಿ ಎಲ್ಲಾ ಒಂದೇ ದಿವಸದಲ್ಲಿ ಜೋಪಡಿ ಹಾಕಿ ಬಿಡುತ್ತಾರೆ. ಆದರೆ, ಅಲ್ಲಿ ನಿಜವಾಗಿಯೂ ಇರುವವರು ಬಡವರಲ್ಲ. ಹಾಕಿಸುವವರು ಯಾರು ಎಂದರೆ ಹಣವಂತರು. ಶ್ರೀಮಂತರು ಆ ಜಮೀನುಗಳನ್ನು ಕಬಳಿಸಲಿಕ್ಕೆ ಇಂತಹ ಪ್ರಯಾಸ ಮಾಡುತ್ತಿದ್ದಾರೆ. ಅದಕ್ಕೆ ರಾಜಣ್ಣನವರು ಈ ಮನೆಯ ಸದಸ್ಯರು, ಸಲಹೆ ಮಾಡಿ ಇಂತಹ ಉಳಿದಿರತಕ್ಕ ಸರ್ಕಾರಿ ಜಮೀನನ್ನು ಯಾವರೀತಿ ಮಾಡಿದರೆ ಉಳಿಸಿಕೊಳ್ಳಲಿಕ್ಕೆ ಸಾಧ್ಯ ಇದೆ ಎಂಬ ಬಗ್ಗೆ ಚಿಂತನೆ ಮಾಡಲಿ, ಸಲಹೆಗಳನ್ನು ಕೊಡಲಿ ನಾನು ಉಳಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಮಾನ್ಯ ಸದಸ್ಯರು : ಕೆರೆಗಳನ್ನು ಅಭಿವೃದ್ಧಿ ಮಾಡುತ್ತೇವೆ ಎಂದು ಸನ್ಮಾನ್ಯ ಸಚಿವರು ಹೇಳಿದರು. ನಮ್ಮ ತಾಲ್ಲೂಕಿನಲ್ಲಿ ಸುಮಾರು ಕೆರೆಗಳು ಇರತಕ್ಕಂಥ ಜಾಗದಲ್ಲಿ ಒಂದು ಎಕರೆ, ಎರಡು ಎಕರೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದಾರೆ ಅದಕ್ಕೆ ಏನು ಮಾಡುತ್ತೀರಿ ಎಂದು ಹೇಳಬೇಕು?

ಶ್ರೀ ರಮೇಶ್ ಸಿ. ಜಿಗಜಿಣಗಿ : ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರಿಗೆ ಕೊಟ್ಟಿರುತ್ತೇವೆ, ಅವರು ಇಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ, ಇದನ್ನು ತೆಗೆಸಿರಿ ಎಂದು ಬರೆಯಲಿ, ಬೇಕಾದರೆ ನಾನು ಅದನ್ನು ತೆಗೆಸಿಕೊಡುತ್ತೇನೆ.

ಶ್ರೀ ಆರ್. ನಾರಾಯಣ್ (ಬೆಳ್ಳಾವಿ) : ಮಾನ್ಯ ಛೇರ್‌ಮನ್‌ರವರೆ, ಕೆರೆಗಳು ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆಗಳಲ್ಲೂ ಸಹ ಒತ್ತುವರಿಯಾಗಿದೆ. ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಸುಲಭವಾಗಿಲ್ಲ. ಇದಕ್ಕೆ ಏನಾದರೂ ಒಂದು ಕಾನೂನನ್ನು ಮಾಡಿದರೆ ಮಾತ್ರ ಕೆರೆಗಳು ಉಳಿಯುತ್ತವೆಯೇ ವಿನಃ ಯಾವುದೇ ಕಟ್ಟಳೆಯಿಂದ ಇದು ಉಳಿಯುವುದಕ್ಕೆ ಸಾಧ್ಯವಿಲ್ಲ. ಇವೊತ್ತು ನಾವೆಲ್ಲಾ ಕೋಲಾರ ಜಿಲ್ಲೆಯಲ್ಲಿ ಉಳಿದಿದ್ದೇವೆ ಎಂದರೆ ಆ ಕೆರೆಗಳಲ್ಲಿ ಏನಾದರೂ ನೀರು ಬಂದು ನಿಂತರೆ ಉಳಿಯುತ್ತೇವೆ. ಈ ಪರಿಸ್ಥಿತಿ ಇವೊತ್ತು ಹೆಚ್ಚಾಗಿ, ಅನಧಿಕೃತವಾಗಿ ಉಳುಮೆ ಜಾಸ್ತಿಯಾಗಿದೆ. ಇದಕ್ಕೆ ಏನಾದರೂ ಕಾನೂನು ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಎರಡನೆಯದಾಗಿ, ಎಲ್ಲಾ ಕೆರೆಗಳನ್ನು ಸರ್ವೆ ಮಾಡಿ ಅದಕ್ಕೆ ಹದ್ದುಬಸ್ತುಗಳನ್ನು ಮಾಡಿದರೆ ಮಾತ್ರ ಆ ಕೆರೆಗಳನ್ನು ಉಳಿಸಲಿಕ್ಕೆ ಅವಕಾಶ ಇದೆ. ಇಲ್ಲದಿದ್ದರೆ ಬಹಳಷ್ಟು ಕಷ್ಟವಾಗುತ್ತದೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎನ್. ತಿಪ್ಪೇಸ್ವಾಮಿ : ಮಾನ್ಯ ಛೇರ್‌ಮನ್‌ರವರೆ, ಸನ್ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯವನ್ನು ನಾನು ಒಪ್ಪುತ್ತೇನೆ. ಈಗ ಏನಾಗಿದೆ ನಮಗೆ ಸಾಕಷ್ಟು ವರ್ಷಗಳು ಮಳೆಬಾರದೆ, ಕೆರೆಗಳು ತುಂಬದೆ ಇದ್ದುದರಿಂದ, ಕೆಲವು ಕೆರೆಗಳ ಅಚ್ಚುಕಟ್ಟಿನಲ್ಲಿ ಒತ್ತುವರಿಯನ್ನು ಮಾಡಿಕೊಂಡಿದ್ದಾರೆ. ಈಗ ನಾನು ನನ್ನ ಎಲ್ಲಾ ಜಿಲ್ಲಾ ಎಕ್ಸಿಕ್ಯುಟೀವ್ ಎಂಜಿನಿಯರ್‌ಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿದ್ದೇನೆ. ನಮ್ಮ ಸಣ್ಣನೀರಾವರಿ ಇಲಾಖೆಯ ವ್ಯಾಪ್ತಿಗೆ ಬರತಕ್ಕಂಥ ಎಲ್ಲಾ ಕೆರೆಗಳನ್ನು ಸರ್ವೆ ಮಾಡಬೇಕು, ಈ ಸರ್ವೆಯರನ್ನು ಕಳುಹಿಸಿಕೊಡಿ ಎಂದಿದ್ದಕ್ಕೆ ನನಗೆ ಒಂದು ಸಮಸ್ಯೆ ಎದುರಾಗಿದೆ. ಈಗ ನನ್ನ ಅಧಿಕಾರ ವ್ಯಾಪ್ತಿಯೊಳಗೆ ಸಾಕಷ್ಟು ಸರ್ವೆಯರ್‌ಗಳಿಲ್ಲ. ಅದಕ್ಕೆ ರೆವಿನ್ಯೂ ಇಲಾಖೆಯವರು ನನಗೆ ಸಹಾಯ ಮಾಡಬೇಕು. ನಮ್ಮ ಜಿಗಜಿಣಗಿ ಸಾಹೇಬರು ಆದಷ್ಟು ಬೇಗ ನನಗೆ ಸರ್ವೆಯರನ್ನು ಕೊಟ್ಟರೆ ನಾನು ಆದಷ್ಟು ಜಾಗ್ರತೆ ನನ್ನ ಸಣ್ಣ ನೀರಾವರಿ ಖಾತೆಯೊಳಗೆ ಬರತಕ್ಕಂಥ ಕೆರೆಗಳನ್ನು ಸರ್ವೆ ಮಾಡಿಸಿ ಎಲ್ಲೆಲ್ಲಿ ಒತ್ತುವರಿಯಾಗಿದೆಯೋ, ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈಗಾಗಲೇ ನಮಗೆ ಕಾನೂನಿನ ಅಡಿಯಲ್ಲಿ ಅಧಿಕಾರ ಇದೆ. ಆ ದಿಸೆಯಲ್ಲಿ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನನಗೆ ಆದಷ್ಟು ಬೇಗ ಜಿಗಜಿಣಗಿ ಸಾಹೇಬರು ಸರ್ವೆಯರನ್ನು ಕೊಟ್ಟರೆ ನಾನು ಈ ಕಾರ್ಯದಲ್ಲಿ ಪರಿಪೂರ್ಣನಾಗುತ್ತೇನೆ ಎಂದು ತಮ್ಮ ಮುಖೇನ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ. ನಂಜಾಮರಿ : ಇವೊತ್ತು ನಮ್ಮ ತಿಪಟೂರು ನಗರಕ್ಕೆ ಸೇರಿರತಕ್ಕ ಕೆರೆಯಲ್ಲಿ ಒಬ್ಬ ಲೆಕ್ಕರ್‌ಲಾಬಿ ಮಾಡತಕ್ಕಂಥ ಪುರಸನಗೌಡ ಎನ್ನತಕ್ಕವನಿಗೆ ಅರ್ಧ ಎಕರೆಯನ್ನು ನಮ್ಮ ಅಸಿಸ್ಟೆಂಟ್

ಕಮಿಷನರ್‌ರವರು ಪುರಸಭೆಯಿಂದ ಖಾತೆಯನ್ನು ಮಾಡಿ ಕೊಟ್ಟಿದ್ದಾರೆ. ಅದರ ಬಗ್ಗೆ ಡಿ.ಸಿ.ಯವರಿಗೆ ಫೈಲನ್ನೆಲ್ಲಾ ಕೊಟ್ಟಿದ್ದರೂ ಸಹ ಯಾವುದೇ ವಿಚಾರಣೆಯಾಗಿಲ್ಲ. ಅದು ತಿಪಟೂರಿನಲ್ಲಿರತಕ್ಕಂಥದ್ದು, ಬೆಂಗಳೂರು ತುಮಕೂರು ಲೆಕ್ಕದಲ್ಲಿ ಅಲ್ಲಿನ ಜಮೀನುಗಳ ರೆವಿನ್ಯೂ ಕೂಡ ಜಾಸ್ತಿಯಾಗಿದೆ. ಆದರೂ ಅದನ್ನು ಇಲ್ಲಿಯವರೆಗೆ ವಿಚಾರಣೆ ಮಾಡಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಇದರ ವಿಚಾರಣೆಯನ್ನು ತುರ್ತಾಗಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎನ್. ತಿಪ್ಪೇಸ್ವಾಮಿ : ಅದನ್ನು ತಿಳಿಸಿದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಶ್ರೀನಿವಾಸ್ : ಕೆರೆಗಳ ಬಗ್ಗೆ ಬರೀ ಕಾನೂನನ್ನು ಮಾಡಿದರೆ ಖಂಡಿತವಾಗಿ ಏನೂ ಮಾಡುವುದಕ್ಕಾಗುವುದಿಲ್ಲ. ಈ ಕಾನೂನನ್ನು ನಾವು ಅನುಷ್ಠಾನಕ್ಕೆ ತಂದು ಬಹಳ ದಿನ ಆಗಿದೆ. ಆದರೆ ಕಾರ್ಯಗತ ಆಗಲಿಲ್ಲ. ಆದ್ದರಿಂದ ಇದರ ಬಗ್ಗೆ ಸುಗ್ರೀವಾಜ್ಞೆಯನ್ನು ಮಾಡಿ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಂಡಾಗ ಮಾತ್ರ ಇದನ್ನು ಬಿಡುಗಡೆ ಮಾಡಿಸುವುದಕ್ಕೆ ಆಗುತ್ತದೆಯೋ ಹೊರತು ಇಲ್ಲದಿದ್ದರೆ ಯಾವ ಕೆರೆಯನ್ನು ಉಳಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ, ದಯವಿಟ್ಟು ಈ ಸದನದಲ್ಲಿ ಒಂದು ಕಾನೂನನ್ನು ತಂದು ಕಟ್ಟುನಿಟ್ಟಿನ ಒಂದು ಆಜ್ಞೆಯನ್ನು ಹೊರಡಿಸಲಿ.

4.40 ಪಿ.ಎಂ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಈ ಕೆರೆಕುಂಟೆಗಳನ್ನು ಏಕೆ ಸುತ್ತಲೂ ಉಳಿಸಬೇಕೆಂದರೆ, ಇದರಲ್ಲಿ ನೀರು ಇದ್ದರೆ ಬೋರ್‌ವೆಲ್‌ಗಳಲ್ಲಿ ಮತ್ತು ಬಾವಿಗಳಲ್ಲಿ ನೀರು ಇರುತ್ತದೆ. ಎರಡನೆಯದಾಗಿ ಮಾನ್ಯ ಮಂತ್ರಿಗಳು ಹೇಳಿದ ಹಾಗೆ ದೊಡ್ಡ ದೊಡ್ಡ ಕೆರೆಗಳಲ್ಲಿ ಮೀನು ಸಿಗುತ್ತಾ ಇತ್ತು. ಆ ಮೀನುಗಳು it is a non-vegetarian food and it is good for health ಹಿಂದೆ ಒಂದು ಕೆ.ಜಿ. ಮೀನು ಐದು ರೂಪಾಯಿಗಳಿಗೆ ಸಿಗುತ್ತಾ ಇತ್ತು. ಈಗ ಮಿನಿಮಮ್ ಎಂದರೆ 200 ರೂಪಾಯಿಗಳಿಂದ 400 ರೂಪಾಯಿಗಳವರೆಗೆ ಇದೆ. ಇದನ್ನು ಕೇವಲ ಹಣವಂತರೂ ಮಾತ್ರ ತಿನ್ನಬಹುದು. ಇವತ್ತು ಬೆಂಗಳೂರಿನಲ್ಲಿ ಏನಾಗಿದೆ ಎಂದರೆ ಫುಟ್‌ಬಾತ್‌ನಲ್ಲಿ ನಾಲ್ಕು ರೂಪಾಯಿಗಳನ್ನು ಕೊಟ್ಟರೆ ಚಿತ್ರಾನ್ನ ಕೊಡುತ್ತಾರೆ. ನಲವತ್ತು ರೂಪಾಯಿಗಳನ್ನು ಕೊಟ್ಟರೆ ಬಾಳೆ ಎಲೆಯಲ್ಲಿ ಉಟ ಕೊಡುತ್ತಾರೆ. ನಾಲ್ಕು ನೂರು ರೂಪಾಯಿಗಳನ್ನು ಕೊಟ್ಟರೆ ಪ್ಲೇಟ್ ಊಟ ಕೊಡುತ್ತಾರೆ, ಅಂದರೆ ನಾಲ್ಕು ನೂರು ರೂಪಾಯಿಗಳನ್ನು ಕೊಡುವವರು ಮಾತ್ರ ತಿನ್ನುವುದಕ್ಕಾಗುತ್ತದೆ. ಇದನ್ನು ಬಡವರು ತಿನ್ನುವುದಕ್ಕಾಗುವುದಿಲ್ಲ. ಬಡವರು ಸಹ ಮೀನು ತಿನ್ನಬೇಕು, ಅವರಿಗೂ ಮೈಂಡ್ ಚೆನ್ನಾಗಿರಬೇಕು. ಫ್ರಾನ್ಸ್ 400 ರೂಪಾಯಿಗಳಿದೆ, ಕೆರೆ ಮೀನು ಸೀ, ಫಿಷ್‌ಗೆ ಬೆಲೆ ಕಡಿಮೆಯಾಗುತ್ತದೆ. ಯಾವಾಗ ಕೆರೆ ಮೀನುಗಳು ಇರುವುದಿಲ್ಲ. ಆಗ ಸಮುದ್ರದ ಮೀನುಗಳ ಬೆಲೆ ಜಾಸ್ತಿಯಾಗುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಇದು ಯಾವ ಡಿಮಾಂಡ್ ಎಂದು ಗೊತ್ತಾಗುತ್ತಿಲ್ಲ.

ಛೇರ್ಮನ್ : ಕೆರೆಗಳಿದ್ದರೆ ಮಾತ್ರ ಮೀನು ಎಂದು ಹೇಳುತ್ತಿದ್ದಾರೆ.

ಶ್ರೀ ಎನ್. ರಾಜಣ್ಣ : ಶಿವಾಜಿ ನಗರದಲ್ಲಿ ಕೆ.ಜಿ. 200 ರೂಪಾಯಿಗಳಿವೆ.

(ಗೊಂದಲ)

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಮೀನು ಬೇರೆ, ಸೀಗಡಿ ಬೇರೆ, ಮಾನ್ಯ ರಾಜಣ್ಣನವರು ಸೀಗಡಿ ಬೆಲೆಯನ್ನು ತಂದು ಮೀನಿಗೆ ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಇನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ದೊಡ್ಡ ಕೆಲಸವನ್ನು ಮಾಡಿದ್ದಾರೆ. ದೇವಿಕಾರಾಣಿಯವರ ರೋರಿಚ್ ಎಸ್ಟೇಟ್ ಇದನ್ನು ಸರ್ಕಾರ ಉಳಿಸುವುದಕ್ಕೆ ಇದೆ. ಇಲ್ಲಿ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಸೇರಿ ಇಲ್ಲಿ ಹೊರಡಿಸಿದಂತಹ ಆಜ್ಞೆ ಜಾರಿಗೆ ಬಂದಿದೆ.

> "Regarding Roerich and Devikarani estate, our Government has succeeded to get the assent of the President to the Roerich and Devikarani Estate Acquisition Act passed by this august House."

This Act has come into force for the past three years. I think, our hon'ble former Prime Minister Sri. H.D. Devegowda was instrumental in helping our State to get the assent of the President at the Government of India level. Our Government has appointed a senior officer to look after the Roerich and Devikarani Trust. ಇದರ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇದನ್ನು ಏನಾದರೂ ಮಾಡಿ ಸೇಫ್ ಗಾರ್ಡ್ ಮಾಡಬೇಕು. ಇದನ್ನು ಹೇಗೆ ಉಳಿಸಬೇಕು ತಮಗೆ ಸೂಚಿಸುತ್ತೇನೆ. Our Government is able to get the assent of the President for the Bangalore Palace Acquisition Act also." Our former Prime Minister Sri H.D. Devegowda when he was the Chief Minister has taken a bold step and got the Bill passed here. When he was the Prime Minister, he helped to get the President's assent. The Act is upheld in the High Court of Karnataka. But the matter is in the Supreme Court and there is a stay order. Our Government has to take steps to see that stay is vacated early. If this is done, Bangalore will get lung space. ಇದನ್ನು ಏನಾದರೂ ಮಾಡಿ ಉಳಿಸಿಕೊಳ್ಳಬೇಕು. ನಾವು ಇದಕ್ಕೆ 18 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಗಾರ್ಡನ್ ಸಿಟಿಯಲ್ಲಿ ಇದು ಮಹಾರಾಜರ ಗಾರ್ಡನ್ ಇದ್ದಹಾಗೆ ಇರುತ್ತದೆ. ಇದರ ಮಧ್ಯೆ ಕಾಂಕ್ರಿಟ್ ಜಂಗಲ್ ಬರಬಾರದು ಎಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಮನವಿ ಮಾಡುತ್ತಿದ್ದೇನೆ. ಇನ್ನು ಫಾರ್ಮರ್ಸ್ ಪಿ.ಎಲ್.ಡಿ. ಬ್ಯಾಂಕ್ ಮತ್ತು ನ್ಯಾಷನಲ್ ಬ್ಯಾಂಕ್‌ಗಳಿಗೆ ಸಾಲಕ್ಕೆ ಹಿಂದೆ ಸ್ಟಾಂಪ್ ಡ್ಯೂಟಿ

ಎಂದು ಕೊಡುತ್ತಿದ್ದರು. ಈಗ ನಮ್ಮ ಸರ್ಕಾರ ಬಂದಮೇಲೆ ಅವರು ಎಲ್ಲಾದರೂ ಸಾಲ ತೆಗೆದುಕೊಳ್ಳಬಹುದು. ಅವರಿಗೆ ಸ್ಟ್ಯಾಂಪ್ ಡ್ಯೂಟಿ ಇಲ್ಲ. If they had taken loan from PLD Bank and Nationalised Bank, that is exempted from stamp duty. ನಾವು ಅದಷ್ಟು ರೈತರಿಗೆ ಒಳ್ಳೆಯ ಕೆಲಸವನ್ನು ಮಾಡುವಂಥವರು, ಬರೀ ಭಾಷಣವನ್ನು ಮಾಡುವವರಲ್ಲ. ರೈತರು ನಮ್ಮ ದೇಶದ ಬೆನ್ನೆಲುಬು, ಶೇಕಡ 70ರಷ್ಟು ಹಳ್ಳಿಗಳಲ್ಲಿ ರೈತರು, ಶೇಕಡ 30ರಷ್ಟು ನಗರಗಳಲ್ಲಿ ಇದ್ದಾರೆ. ಶೇಕಡ 70ರಷ್ಟು ಏನು ಇದ್ದಾರೆ. ಇವರು ನಮ್ಮ ತಲೆ ಮೇಲೆ ಭಾರವೆಂದು ನಾವು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದೇವೆ. ಅದಕ್ಕೋಸ್ಕರ ಮಣ್ಣಿನ ಮಕ್ಕಳು ಮಣ್ಣಿನ ಮಕ್ಕಳಿಗೆ ಕೆಲಸ ಮಾಡುವರು, ಅಂಥವರ ಕಾಲನ್ನು ಇವರು ಎಳೆದು ಬಿಟ್ಟರು. ಮಾನ್ಯ ದೇವೇಗೌಡರು ಎಲ್ಲ ಕೆಲಸವನ್ನು ಅವರು ಎಷ್ಟು ಸುಲಭವಾಗಿ ಮಾಡಿದರು. ಅವರು ರೈತರ ಬಗ್ಗೆ ಬಹಳ ಚಿಂತನೆ ಮಾಡತಕ್ಕಂಥ ಒಬ್ಬ ವ್ಯಕ್ತಿಯಾಗಿದ್ದಾರೆ. ಅವರು ಬಡವರ ಬಗ್ಗೆ ಚಿಂತನೆ ಮಾಡತಕ್ಕಂಥವರು ಆಗಿದ್ದಾರೆ. ಅವರನ್ನು ಹೊಗಳಿ ನಾನು ಏನು ಮಿನಿಸ್ಟರ್ ಆಗಬೇಕೆಂದು ಮಾತನಾಡುವುದಿಲ್ಲ. ಅವರಿಗೆ ನಲವತ್ತು ವರ್ಷಗಳ ಅನುಭವವಿದೆ. ಜಿಲ್ಲಾ ಪರಿಷತ್ತಿನ ಸದಸ್ಯರಾಗಿ, ಜಿಲ್ಲಾ ಪರಿಷತ್ತಿನ ಪ್ರೆಸಿಡೆಂಟರಾಗಿ, ಎಂ.ಎಲ್.ಎ ಆಗಿ, ವಿಧಾನಮಂಡಲದಲ್ಲಿ ವಿರೋಧಪಕ್ಷದನಾಯಕರಾಗಿ, ರೂಲಿಂಗ್ ಪಾರ್ಟಿಯ ಎಂ.ಎಲ್.ಎ ಆಗಿ, ರೂಲಿಂಗ್ ಪಾರ್ಟಿಯ ಮಿನಿಸ್ಟರ್ ಆಗಿ, ಚೀಫ್ ಮನಿಸ್ಟರ್ ಆಗಿ, ಕೊನೆಗೆ ಅವರು ಪ್ರಧಾನಮಂತ್ರಿಯಾಗಿ ಬಂದರು. ಅವರು ಹತ್ತು ತಿಂಗಳುಗಳ ಕಾಲ ಪ್ರಧಾನಮಂತ್ರಿಯಾಗಿ ಕೆಲಸ ಮಾಡಿದರು. ಈ ಹತ್ತು ತಿಂಗಳಲ್ಲಿ 1,200 ಕೋಟಿ ರೂಪಾಯಿಗಳನ್ನು ಕೊಟ್ಟರು. ನೀವು ಅಷ್ಟರಲ್ಲಿ ಅವರ ಕಾಲು ಎಳೆದಿರಿ.

ಶ್ರೀ ಬಿ. ನಂಜಾಮರಿ : ನೀವೆ ಕಾಲು ಎಳೆದು ನಮ್ಮ ಮೇಲೆ ಹೇಳುತ್ತೀರಲ್ಲಾ!

ಶ್ರೀ ಎನ್. ರಾಜಣ್ಣ : ನಾನು ನಿಮ್ಮ ಹೆಸರು ಹಿಡಿದು ಹೇಳಿದ್ದೇನೆಯೇ?

(ಗೊಂದಲ)

ಶ್ರೀ ಸಿ. ಆರ್. ಸಗೀರ್ ಅಹಮದ್ : ನೀವು ನಮ್ಮ ಹೆಸರನ್ನು ಹೇಳದಿದ್ದರೂ ಚಿಂತೆ ಇಲ್ಲ. ನೀವೇನು ಹೇಳಿದ್ದೀರಿ, ತಾಕತ್ತು ಪ್ರದರ್ಶನ ಮಾಡಿ ಎಂದು ಹೇಳಿದ್ದೀರಿ, ನಾವು ತಾಕತ್ತು ಪ್ರದರ್ಶನ ಮಾಡಿದ್ದೇವೆ. ನೀವು ಬಿ.ಜೆ.ಪಿ.ಯವರ ಬಗ್ಗೆ ಏಕೆ ಹೇಳುವುದಕ್ಕೆ ಹೋಗುತ್ತೀರಿ?

ಶ್ರೀ ಎನ್. ರಾಜಣ್ಣ : ಅಲ್ಲಿ ನೀವು ಕಾಲು ಎಳೆದುಬಿಟ್ಟಿರಲ್ಲಾ, ಈಗಲೂ ನಮ್ಮ ಸರ್ಕಾರವೇ ಇದೆ. ಆದರೆ, ಮಾನ್ಯ ದೇವೇಗೌಡರು ಇದ್ದಿದ್ದರೆ ಅನುಕೂಲವಾಗುತ್ತಿತ್ತು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಈಗ ಯಾವ ಸರ್ಕಾರವಿದೆ?

ಶ್ರೀ ಎನ್. ರಾಜಣ್ಣ : ಈಗಲೂ ನಮ್ಮ ಸರ್ಕಾರವೇ ಇದೆ. ಬಡ ರೈತರಿಗೆ ಪ್ರಕೃತಿ ವಿಕೋಪದಲ್ಲಿ ಯಾರ್‍ಯಾರಿಗೆ 1996-97ರಲ್ಲಿ ಅನ್ಯಾಯವಾಯಿತು. ಅವರಿಗೆ ರೆವಿನ್ಯೂ ಕಲೆಕ್ಟ್ ಮಾಡಲಿಲ್ಲ. ಅದು ಇಪ್ಪತ್ತೆಂಟು ಲಕ್ಷದ ಹದಿನಾಲ್ಕು ಸಾವಿರದ ಒಂಭೈನೂರು ಹದಿನೆಂಟು ರೂಪಾಯಿಗಳು ಅದರಲ್ಲೂ ರೈತರಿಗೆ ರಿಯಾಯಿತಿಯನ್ನು ನೀಡಲಾಯಿತು. ನಮ್ಮ ಸ್ನೇಹಿತರು, ನೀವು ಸಿಟಿಯವರು ರೈತರ ಬಗ್ಗೆ

ಏನು ಗೊತ್ತು ಎಂದು ಕೇಳಿದರು. ನಾನು ಸಿಟಿಯಲ್ಲೇ ಇದ್ದರೂ ರೈತರ ಜೀವವನ್ನೇ ಮಾಡುತ್ತಿರುವುದು. ಅದರಲ್ಲಿರುವಂತಹ ಚಾರ್ಮ್ ಈ ಸಿಟಿ ಜೀವನದಲ್ಲಿ ಇಲ್ಲ. Our Government has introduced computers with the help of Government of India. Our Government has shown remarkable progress in land acquisition. Our Government proposes to provide photocopying machines to sub-registrars office"

It will help the public to get their documents at the earliest possible time. ಬೆಂಗಳೂರು ಸಬ್‌ರಿಜಿಸ್ಟ್ರಾರ್ ಆಫೀಸ್ ಇದೆ. ಇದರ ಬಗ್ಗೆ ಉದಾಹರಣೆಗೆ ಬೆಂಗಳೂರಿಗೆ ಸೌತ್ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ರಿಜಿಸ್ಟರ್ ಮಾಡಿದರೆ ಡಾಕ್ಯುಮೆಂಟ್‌ಗೆ ಮೂರು ವರ್ಷಗಳು ಕಾಯಬೇಕಾಗುತ್ತದೆ. ಅವನು ಸ್ಟೇಟ್ ಗೌವರ್ನಮೆಂಟ್ ಎಂಪ್ಲಾಯ್ ಅಥವಾ ಸೆಂಟ್ರಲ್ ಗೌವರ್ನಮೆಂಟ್ ಎಂಪ್ಲಾಯ್ ಆಗಿದ್ದನೆಂದರೆ ಅವನು ಒಂದು ಮನೆಯನ್ನು ಕಟ್ಟಬೇಕಾದರೆ ರಿಜಿಸ್ಟರ್ ಮಾಡಿಕೊಂಡು ಮೂರು ವರ್ಷಗಳು ಬಕ ಪಕ್ಷಿಯಂತೆ ಕಾಯಬೇಕಾಗುತ್ತಿತ್ತು. ಆದರೆ ಅದನ್ನು ಇವತ್ತು ತಪ್ಪಿಸಿದ್ದೀವಿ. ಒಂಭತ್ತು ಸಾವಿರ ಅಪ್ಲಿಕೇಶನ್‌ಗಳ ಬ್ಯಾಲೆನ್ಸ್ ಇದೆ, ಅಂಥದ್ದನ್ನು ಕ್ಲಿಯರ್ ಮಾಡುವುದಕ್ಕೆ So, our Government has introduced micro photo copying machines and micro filming facility. ಈಗ ತಿಂಗಳೊಳಗೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಏನು ಮಾಡುವುದಕ್ಕಾಗುತ್ತದೆ ಸ್ವಾಮಿ, ಮೊಸರಿನಲ್ಲಿ ಕಲ್ಲು ಹುಡುಕಬೇಕಾಗುತ್ತದೆ, ಇದು ಸಹಜವೆಂದು ನಾನು ಆಗಲೇ ಹೇಳಿದನಲ್ಲ. Regarding Sub-Registrar's Office, things have improved after our Government came into power. But, Still lot more is to be done. There should be Vigilant squad to check Sub-Registrar's Office at a frequent interval. Now that the Tahsildar has been poted as Sub-Registrar, this has not yielded any good result. Instead of this, only Sub-registrars should be posted and Tahsildars are to be posted for the Sub-Divisional work.

ಶ್ರೀ ಜಗದೀಶ್ ಶೆಟ್ಟರ್ : ರಾಜಣ್ಣನವರೆ, ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ಭ್ರಷ್ಟಾಚಾರವನ್ನು ನಿಲ್ಲಿಸಿದರೆ ಚೆನ್ನಾಗಿರುತ್ತದೆ.

ಛೇರ್ಮನ್ : ರಾಜಣ್ಣನವರೆ, ಅವರಿಗೆ ನೇರವಾಗಿ ಉತ್ತರವನ್ನು ಕೊಡಬೇಡಿ ತಮ್ಮ ಭಾಷಣ ಪೂರೈಸಿಬಿಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) : ಅಧ್ಯಕ್ಷರೆ, ಅವರಿಗೆ ಒಳ್ಳೆಯ ಕೆಲಸ ಮಾಡುವುದು ಅವರ ಕಣ್ಣಿಗೆ ಕಾಣುವುದಿಲ್ಲ ಹಾಗೂ ಹೇಳುವುದಿಲ್ಲ. ಸರ್ಕಾರದ್ದು ಏನಾದರೂ ಚೂರು ತಪ್ಪು ಇತ್ತೆಂದರೆ ಬಹಳ ಗುಡ್ಡ ಮಾಡಿ ಅಲ್ಲಿ ಕುಳಿತಿರುವ ನಮ್ಮ ಸ್ನೇಹಿತರಾದ ಸಗೀರ್ ಅಹಮ್ಮದ್ ರವರು ಹೇಳುತ್ತಾರೆ. ಅಧ್ಯಕ್ಷರೆ, ನಾನೇನು ಮಂತ್ರಿಯಾದ ಮೇಲೆ ನನ್ನ ಇಲಾಖೆಯಲ್ಲಿ ಭ್ರಷ್ಟಾಚಾರ ಹೋಗಿದೆ ಬಹಳ ಸ್ವಚ್ಛವಾಗಿದೆ ಎಂದು ನಾನು ಹೇಳುವುದಿಲ್ಲ. ಆದರೆ ಎಷ್ಟು ಸಾಧ್ಯವೊ ಅಷ್ಟು ಸ್ವಚ್ಛ ಮಾಡುವುದಕ್ಕೆ ನಾನು ಪ್ರಾಮಾಣಿಕವಾದಂಥ ಪ್ರಯತ್ನವನ್ನು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ

ಮಾಡುತ್ತಿದ್ದೇನೆ. ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಲಂಚವನ್ನು ಕಡಿಮೆ ಮಾಡಬೇಕು, ಜನಗಳಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ಬೆಂಗಳೂರು ನಗರದಲ್ಲಿ, ಬೇರೆ ಬೇರೆ ಜಿಲ್ಲೆಗಳಲ್ಲಿ ಇಂಥಿಂಥಾದ್ದಕ್ಕೆ ಇಷ್ಟೇ ಮೊತ್ತವೆಂದು ನಾವು ನಿಗದಿ ಮಾಡಿದ್ದೆವು. ಬೆಂಗಳೂರು ನಗರದಲ್ಲಿ ಸ್ವಲ್ಪ ಹೆಚ್ಚಾಗಿದೆ ಎಂದು ಈಗ ಹೇಳುತ್ತಿದ್ದಾರೆ, ಅದನ್ನು ಮರುಪರಿಶೀಲನೆ ಮಾಡಬೇಕೆಂದು ಆಲೋಚಿಸಿದ್ದೇವೆ. ಆ ರೀತಿ ಮಾಡಿದ ಉದ್ದೇಶವೇನೆಂದರೆ, ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಒಬ್ಬ ರೈತನ ಜಮೀನಿಗೂ ಅಥವಾ ನಿವೇಶನಕ್ಕು ಬೆಲೆಯನ್ನು ನಾವು ನಿಗದಿಪಡಿಸಿದರೆ, ಅವನು ಆ ಟೇಬಲ್ ಕೆಳಗಿನ ಕೆಲಸವನ್ನು ಮಾಡುವುದಿಲ್ಲ. ಏಕೆಂದರೆ ಅವನ ಜಮೀನಿಗೆ, ನಿವೇಶನಕ್ಕೆ ನಾವು ನೂರು ರೂಪಾಯಿ ಎಂದು ನಿಗದಿ ಮಾಡಿದರೆ ಸರ್ಕಾರದವರು, ಅವನು ಆ ನೂರು ರೂಪಾಯಿಗೆ ಸ್ಟ್ಯಾಂಪ್ ಡ್ಯೂಟಿ ಖರೀದಿ ಮಾಡಿ ಹಾಕಿಕೊಂಡು ಹೋಗುತ್ತಾನೆ. ಆದರೆ ನಾವು ಈ ಯಾವುದೇ ಬೆಲೆ ನಿಗದಿ ಮಾಡದೆ ಹೋದರೆ, ಅವರಿಗೆ ಬೆದರಿಕೆ ಹಾಕುವುದು, ತಿಮ್ಮಪ್ಪಣ್ಣನವರೆ, ನಿನ್ನ ಜಮೀನಿಗೆ ಹತ್ತು ಸಾವಿರ ಕಿಮ್ಮತ್ತಾಗುತ್ತದೆಂದು ಹೇಳುವುದು, ನಿಜವಾಗಿ ಅದರ ಕಿಮ್ಮತ್ತು ಐದು ಸಾವಿರ ರೂಪಾಯಿಗಳಾಗಿರುತ್ತದೆ. ಅಲ್ಲಿ ಹೇಗೆ ವ್ಯವಹಾರಗಳು ನಡೆಯುತ್ತದೆ ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತಿದೆ. ಆದರೆ ಅದನ್ನು ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ ಸರ್ಕಾರ, ನಾವು ಅದನ್ನು ನಿಗದಿ ಮಾಡಿದ್ದೇವೆ, ಸ್ವಲ್ಪ ಹೆಚ್ಚಾಗಿದೆ ಎಂದು ಸಾರ್ವಜನಿಕರು, ಸದಸ್ಯರು ಹೇಳಿದ್ದಾರೆ, ಅದನ್ನು ಸ್ವಲ್ಪ ಪುನರ್ ಪರಿಶೀಲನೆ ಮಾಡಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ.

SRI. N. RAJANNA : Still there is lot of improvement you have to do in the Sub-Registrar's Office. ಬಹಳ ಕೆಲಸ ಮಾಡಬೇಕಾಗುತ್ತದೆ. ಅಲ್ಲಿ ಏನಾಗಿದೆ ಎಂದರೆ, It is a bank of money pouring centre. ಹಣ ಕೋಟ್ಯಾಂತರ ರೂಪಾಯಿಗಳು ಬಂದು ಬೀಳುತ್ತಿರುತ್ತದೆ. ಯಾವಾಗ ಕೋಟ್ಯಾಂತರ ರೂಪಾಯಿಗಳು ಅಲ್ಲಿ ಬೀಳುತ್ತಿರುತ್ತದೆಯೋ ಅಲ್ಲಿರುವ ಹೆಬ್ಬೆಟ್ಟು ಒತ್ತುವವನಿಗೂ ಕೂಡ ಮಿನಿಮಂ ನೂರು ರೂಪಾಯಿಗಳ ನೋಟು ಕೊಡಲಿಲ್ಲ ವೆಂದರೆ ಅವನು ಹೆಬ್ಬೆಟ್ಟನ್ನು ಹಿಡಿದುಕೊಳ್ಳುವುದೇ ಇಲ್ಲ. ಹಾಗೆ ಅಲ್ಲಿ ಅಭ್ಯಾಸ ಬಂದುಬಿಟ್ಟಿದೆ, ಅದು ಇವತ್ತು ಬಂದಿದ್ದಲ್ಲ, ಇಪ್ಪತ್ತೈದು ವರ್ಷಗಳ ಹಿಂದಿನಿಂದ ಬಂದಿರುವುದು, ಅದಕ್ಕಿಂತ ಹಿಂದೆ ತ್ಯಾಗಿಗಳ ಸರ್ಕಾರ, ಆಮೇಲೆ ಈ ಬೋಗಿಗಳು ಬಂದು ಈ ಮಟ್ಟಕ್ಕೆ ಬಂದಿದೆ. ಅದನ್ನು ನಾವು ಒಂದೇ ದಿವಸದಲ್ಲಿ ಸರಿಪಡಿಸುವುದಕ್ಕಾಗುವುದಿಲ್ಲ, ಅದನ್ನು ಸರಿಪಡಿಸುತ್ತಿದ್ದೀರಿ, ಡ್ಯಾಕ್ಯುಮೆಂಟ್ಸ್ ಎನ್‌ಕಂಬರೆನ್ಸ್ ಸುಲಭವಾಗಿ ದೊರೆಯುವಂತೆ ಮಾಡಬೇಕು. ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಯಾವುದೇ ಸರ್ಟಿಫಿಕೇಟ್ ಕೇಳಿದರೆ, ಜನರು ಬಂದ ತಕ್ಷಣ, ಅವರಿಗೆ ಒಬ್ಲೈಸ್ ಮಾಡಿ ಅವರಿಗೆ ಸಹಾಯ ಮಾಡುವಂಥ ಪದ್ಧತಿಯನ್ನು ಜಾರಿಗೆತರಬೇಕು. ಆಮೇಲೆ ಯಾವ್ಯಾವ ಬಡಾವಣೆಗಳಲ್ಲಿ ಬೆಲೆಗಳು ಏನಿವೆ, ಅವತ್ತಿನದು ಅವತ್ತೇ ನೋಟೀಸ್ ಬೋರ್ಡಿನಲ್ಲಿ ಹಾಕಬೇಕು. ನಿರ್ದಿಷ್ಟ ಏರಿಯಾದಲ್ಲಿ ಜಮೀನಿನ ಬೆಲೆ, ರಿಜಿಸ್ಟರ್ ಫೀ ಎಷ್ಟು ಎಂದು ಆ ಎಲ್ಲಾ ವಿವರಗಳನ್ನು ಅವತ್ತಿನ ದಿವಸದ್ದನ್ನು ಅವತ್ತೇ ನೋಟೀಸ್ ಬೋರ್ಡಿನಲ್ಲಿ ಹಾಕಿದರೆ ಜನಗಳಿಗೆ ಅನುಕೂಲವಾಗುತ್ತದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಈ ಸ್ಟ್ಯಾಂಪ್ ಪೇಪರ್ಸ್ ಇದ್ದರೂ ಕೊರತೆಯನ್ನುಂಟು ಮಾಡುತ್ತಾರೆ. ನೂರು ರೂಪಾಯಿಗಳ ಸ್ಟ್ಯಾಂಪ್

ಪೇಪರ್‌ಗೆ ನೂರ ಇಪ್ಪತ್ತೈದು, ನೂರ ಇಪ್ಪತ್ತು ರೂಪಾಯಿಗಳನ್ನು ಕೊಟ್ಟರೆ ಮಾತ್ರ ಸ್ಟ್ಯಾಂಪ್ ಪೇಪರ್ ಕೊಡುತ್ತಾರೆ, ಇದನ್ನು ಕೂಡ ಸರಿಪಡಿಸಬೇಕೆಂದು ನಾನು ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಚಿಪಡುತ್ತಿದ್ದೇನೆ.

ಛೇರ್‌ಮನ್ : ರಾಜಣ್ಣನವರೆ, ಈಗಾಗಲೇ ಒಂದೂ ಕಾಲು ಗಂಟೆಯಾಗಿದೆ, ತಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಎನ್. ರಾಜಣ್ಣ : ನನಗೆ ಇನ್ನು ಅರ್ಧ ಗಂಟೆ, ಶ್ರೀನಿವಾಸ್‌ರವರನ್ನು ಬಿಟ್ಟು, ನಮ್ಮ ಎಲ್ಲಾ ಸ್ನೇಹಿತರು ಮಾತನಾಡಿ ಎಂದು ಹೇಳುತ್ತಿದಾರೆ, ಶ್ರೀನಿವಾಸ್‌ರವರು ಅರ್ಜೆಂಟ್ ಮಾಡುತ್ತಿದ್ದಾರೆ, ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. I must be thankful to Mr. Srinivas. ಬೆಂಗಳೂರು ನಗರದಲ್ಲಿ within the city. ಮುಜರಾಯಿ ಲ್ಯಾಂಡಿಗೆ ಕೋಟ್ಯಾಂತರ ರೂಪಾಯಿಗಳು ಆಗುತ್ತದೆ. ಈ ಮುಜರಾಯಿ ಲ್ಯಾಂಡ್ ಅನ್ನು ಒತ್ತುವರಿ ಮಾಡಿರುತ್ತಾರೆ ಇಲ್ಲವೇ ಗೋಡನ್ ಮಾಡಿಕೊಂಡಿರುತ್ತಾರೆ, ಇಲ್ಲವೇ ಡಾಕ್ಯುಮೆಂಟ್ ತಯಾರು ಮಾಡಿ ದೇವಾಲಯದ ಆಸ್ತಿಗಳು ಬಹಳ ಮಾರಾಟವಾಗುತ್ತಿವೆ, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಉಳಿಸಲಿಲ್ಲವೆಂದರೆ, ದೇವಾಲಯಗಳ ಆಸ್ತಿಗಳು ಒಂದೂ ಉಳಿಯುವುದಿಲ್ಲ. ಈ ಮುಜರಾಯಿ ಇಲಾಖೆಯಲ್ಲಿ ದೇವಾಲಯಗಳಿಗೆ ಏನು ಹಣವನ್ನು ಕೊಡುತ್ತೀರಾ ಅದನ್ನು ಸ್ಥಳೀಯ ಶಾಸಕರನ್ನು ಸಂಪರ್ಕಿಸಿ ಕೊಡಬೇಕೇ ಅಥವಾ ಬೇಡವೇ ಎಂದು ತಿಳಿದುಕೊಂಡು ಕೊಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಕೊನೆಯದಾಗಿ ಈ ರೆವಿನ್ಯೂ ಇಲಾಖೆಯ ಬಗ್ಗೆ ಹೇಳುವುದಾದರೆ, ಇಷ್ಟೆಲ್ಲಾ ತೊಂದರೆಗಳಿದ್ದಾಗ್ಯೂ ವರ್ಷಾನುಗಟ್ಟಲೆ ಪೆಂಡಿಂಗ್ ಇದ್ದಂಥ ಹೊಸ ಏಳು ಜಿಲ್ಲೆಗಳನ್ನು ನಮ್ಮ ಸರ್ಕಾರ ನಿಮ್ಮೆಲ್ಲರ ಸಹಕಾರದೊಡನೆ ಮಾಡಿದಕ್ಕೋಸ್ಕರ, I am very grateful to our Government and also to the Hon'ble Opposition Member. ಇನ್ನು ಈ ಟೆನೆಂಟ್ ಓನರ್ ಪ್ರಾಬ್ಲಂ ಬಹಳ ಇತ್ತು. ಟೆನೆಂಟ್‌ಗೂ ತೊಂದರೆ ಇದೆ ಓನರ್‌ಗೂ ತೊಂದರೆ ಇದೆ, ವಯಸ್ಸಾಗಿರುವ ಎಷ್ಟೋ ಜನ ಓನರ್ಸ್ ಮನೆಗಳನ್ನು ಬಿಡಿಸುವುದಕ್ಕಾಗಲಿಲ್ಲವೆಂದು ಹೃದಯಾಘಾತದಿಂದ ಸತ್ತುಹೋಗಿದ್ದಾರೆ. ಮನೆ ಖಾಲಿ ಮಾಡಿಸುವುದಕೋಸ್ಕರ ಓನರ್ ಸತ್ತು ಹೋದ ಮೇಲೆ, ಆತನಿಗೆ ಒಬ್ಬನೋ ಇಬ್ಬರೋ ಗಂಡು ಮಕ್ಕಳಿರುತ್ತಾರೆ, ಮಗಳು ಮತ್ತು ಮಗ ಕಿತ್ತಾಡುತ್ತಾರೆ, ಈ ರೀತಿ ಬಹಳ ತೊಂದರೆ ಇತ್ತು. ಅಂಥದ್ದನ್ನು ಹಿಂದೆ ಜಾಲಪ್ಪನವರು ಸರಿಮಾಡಿದ್ದಾರೆ, ಇನ್ನು ಸ್ವಲ್ಪ ಸರಿ ಮಾಡಲು to help both the tenant and the landlord, our Government should introduce a new rent control act on the model of the rent control act of the Govenrment of India.

ಶ್ರೀ ರಮೇಶ್ ಸಿ. ಜಿಗಜಿಣಗಿ : ಈಗ ನಾವು ಸಾರ್ವಜನಿಕರಿಗೆ ಹಾಗೂ ಮನೆಯ ಮಾಲೀಕರಿಗೆ ತೊಂದರೆಯಾಗಬಾರದೆಂದು ಸದ್ಯಕ್ಕೆ ಅದನ್ನು ಸ್ಥಗಿತಗೊಳಿಸಿದ್ದೇವೆ. ಇವರಿಗೆ ಒಳ್ಳೆಯದಾಗಲಿ, ಅನುಕೂಲವಾಗಲೆಂಬ ಹಿತದೃಷ್ಟಿಯಿಂದ ಕೇಂದ್ರ ಸರ್ಕಾರದಲ್ಲಿ ಮಾಡಿರುವ ಡೆಲ್ಲಿ ಬೇಸ್ಡ್ ರೆಂಟ್ ಕಂಟ್ರೋಲ್ ಆಕ್ಟ್ ಇದೇ ಸದನದಲ್ಲಿ ನಾನು ತರಬೇಕೆಂದು ಮಾಡಿದ್ದೆ, ಸ್ವಲ್ಪ ಕಾನೂನಿನ

ತೊಡಕಿರುವುದರಿಂದ ಮುಂದಿನ ಸದನದಲ್ಲಿ ಆ ಬಿಲ್ಲನ್ನು, ಡೆಲ್ಲಿ ಬೇಸ್ಡ್ ರೆಂಟ್ ಕಂಟ್ರೋಲ್ ಆಕ್ಟ್ ಅನ್ನು ತಂದು ಒಳ್ಳೆಯದನ್ನು ಮಾಡಲು ಪರಿಚಯಿಸುತ್ತೇವೆ.

ಶ್ರೀ ಎನ್. ರಾಜಣ್ಣ : ಏನೇ ಮಾಡಿ, ಟೆನೆಂಟ್, ಓನರ್ ಪ್ರಾಬ್ಲಂ ಅರ್ಧ ಪರಿಹಾರವಾಗಿದೆ, ಅದರಲ್ಲೂ ವಯಸ್ಸಾಗಿರುವ ಮಾಲೀಕರೆಲ್ಲಾ ಹೃದಯಾಘಾತವಾಗಿ ಓಡಿಬಿಡುತ್ತಾರೆ, ಇರುವ ಅವರ ಒಬ್ಬರೂ ಇಬ್ಬರೋ ಮಕ್ಕಳನ್ನು ಪೋಲೀಸ್‌ನವರು ಪೋಲೀಸ್ ಠಾಣೆಯಲ್ಲಿ ಹಾಕಿಬಿಟ್ಟು ಅವನನ್ನೂ ಜೈಲಿಗೆ ಕಳುಹಿಸಿಬಿಡುತ್ತಾರೆ. ಪಾಪ ಮನೆ ಕಟ್ಟಿದವನ ಬಗ್ಗೆ ಇಂಗ್ಲಿಷ್‌ನಲ್ಲಿ ಒಂದ ಗಾದೆಯನ್ನು ಹೇಳುತ್ತಾರೆ, with the permission of Chair, I want to quote it. "Foolish man builds house and wise man live in it". ಈ ರೀತಿಯಾಗಿ ಬಿಟ್ಟಿದೆ ಈಗ. ಬುದ್ಧಿ ಇಲ್ಲದವನು ಮನೆ ಕಟ್ಟುತ್ತಾನೆ, ಬುದ್ಧಿ ಇರುವವನು ಮನೆಗೆ ಹೋಗಿ ಸೇರಿಕೊಳ್ಳುತ್ತಾನೆ. ಇದು ಬಹಳ ಮುಖ್ಯವಾದುದು, ಇದನ್ನು ತಡೆಗಟ್ಟಬೇಕು, ಜನಗಳು ನೆಮ್ಮದಿಯಿಂದ ಇರಬೇಕು. ಪ್ರಜಾಪ್ರಭುತ್ವ ಬಂದು ನಮಗೆ ಐವತ್ತು ವರ್ಷಗಳಾಗಿವೆ, ಆದರೆ ನಮ್ಮ ಪ್ರಜಾಪ್ರಭುತ್ವದಲ್ಲಿ ಅನ್ಯಾಯಗಳು ಬಹಳವಾಗುತ್ತಿವೆ, ಇವನ್ನೆಲ್ಲಾ ನಮ್ಮ ಸರ್ಕಾರ ತಡೆಯುತ್ತಿದೆ, ಇದನ್ನು ತಡೆದು ನಾವು ಒಳ್ಳೆಯ ರೀತಿಯಲ್ಲಿ ಮಾಡೋಣವೆಂದು ನಾನು ಅಧ್ಯಕ್ಷರ ಮೂಲಕ ಕೇಳಿ ಕೊಳ್ಳುತ್ತಿದ್ದೇನೆ. ರೆವಿನ್ಯೂ ಬಗ್ಗೆ ಇಷ್ಟು ಹೇಳುತ್ತಾ ಎರಡನೆಯದಾಗಿ, I wanted to bring it to the notice of the Hon'ble Minister for PWD.

ಛೇರ್ಮನ್ : ರಾಜಣ್ಣನವರೆ, ತಾವು ಮಾತನಾಡಲು ಪ್ರಾರಂಭ ಮಾಡಿ ಒಂದೊವರೆ ಗಂಟೆಯಾಯಿತು ಇನ್ನು ಎಷ್ಟು ನಿಮಿಷಗಳು ಬೇಕು?

ಶ್ರೀ ಎನ್. ರಾಜಣ್ಣ : ಇನ್ನು ಅರ್ಧಗಂಟೆ ಬೇಕು ಸರ್.

ಛೇರ್ಮನ್ : ಅರ್ಧ ಗಂಟೆಯಾಗುವುದಿಲ್ಲ. ಇನ್ನು ಹತ್ತು ನಿಮಿಷ ಮಾತ್ರ ಕೊಡುತ್ತೇನೆ, ಇತರೆ ಸದಸ್ಯರು ಕೂಡ ಮಾತನಾಡಬೇಕಾಗಿದೆ.

ಶ್ರೀ ಎನ್. ರಾಜಣ್ಣ : ಆಯಿತು ಸರ್ ನಾನು ಪ್ರಯತ್ನ ಮಾಡುತ್ತೇನೆ. I will try my level best. ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಬೇಡಿಕೆ ಸಂಖ್ಯೆ : (43) - ಕಟ್ಟಡಗಳು ಮತ್ತು ರಸ್ತೆಗಳು. ಈ ಲೋಕೋಪಯೋಗಿ ಇಲಾಖೆಯಲ್ಲಿ ಬೈಪಾಸ್ ರೋಡ್ Yelahanka by pass road was sanctioned by the Minsitry of Surface Transport, New Delhi for Rs. 7,78,000. ಯಾವಾಗ ಎಂದರೆ, ಇದು ಈಗಲ್ಲ, ಇದನ್ನು ಮಾಡಿದ್ದು ಇಪ್ಪತ್ತು ವರ್ಷಗಳ ಹಿಂದೆ. ಶ್ರೀ ದೇವರಾಜ್ ಅರಸ್‌ರವರ ಸರ್ಕಾರವಿತ್ತು, ಆಗ ಕಾಂಗ್ರೆಸ್ ಸರ್ಕಾರವಿತ್ತು, ಆಗ ಏಳು ಲಕ್ಷ ಎಪ್ಪತ್ತೆಂಟು ಸಾವಿರ ರೂಪಾಯಿಗಳಿಗೆ ಮಂಜೂರು ಮಾಡಿದರು, during 1979-80, required lands have been acquired by paying compensation to the land owners. The land is in national highway. What is the cost required now for the bypass road. ಈಗ ಅದೇ ರಸ್ತೆಯನ್ನು ಮಾಡಬೇಕಾದರೆ 25 ಕೋಟಿ ರೂಪಾಯಿಗಳು ಬೇಕಾಗುತ್ತದೆ. 1978ರಲ್ಲಿ ಆಗಿದ್ದರೆ 8 ಲಕ್ಷ

ರೂಪಾಯಿಗಳಲ್ಲಿ ಕೆಲಸವಾಗುತ್ತಿತ್ತು. ಅಂದರೆ 8 ಲಕ್ಷ ರೂಪಾಯಿಗಳಲ್ಲಿ ಮುಗಿದು ಹೋಗುತ್ತಿದ್ದ ಕೆಲಸಕ್ಕೆ ಈಗ ನಾವು 25 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಯಲಹಂಕ ಬಳಿ ಮುಂಬೈಗೆ ರೈಲು ಹೋಗತಕ್ಕ ಸಮಯದಲ್ಲಿ ಅಲ್ಲಿರುವ ಲೆವೆಲ್ ಕ್ರಾಸ್ ಕ್ಲೋಸ್ ಮಾಡಿದರೆ ಸುಮಾರು 2-3 ಕಿ.ಮೀ. ವರೆಗೆ ವಾಹನಗಳು ನಿಲ್ಲುತ್ತವೆ. ಇದು ಮಾನ್ಯ ಶಿವರಾಜ್‌ರವರ ಕ್ಷೇತ್ರಕ್ಕೆ ಬರುತ್ತದೆ. 20 ವರ್ಷಗಳ ಹಿಂದೆ 8 ಲಕ್ಷ ರೂಪಾಯಿಗಳಿಗೆ ಆಗುತ್ತಿದ್ದ ಕೆಲಸ ಈಗ 25 ಕೋಟಿ ರೂಪಾಯಿ ಗಳಾಗುತ್ತದೆ. ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳ್ಯಾರು ? Who is the Officer responsible for this? ಯಾವುದೇ ಒಂದು ಕೆಲಸ ಮಾಡಬೇಕಾದರೆ 'ದಿಲ್' ಮತ್ತು 'ವಿಲ್' ಬೇಕು. ಆಗಲೇ ಕೆಲಸ ಸುಗಮವಾಗಿ ಆಗುತ್ತದೆ. ಒಳ್ಳೆಯ ಕೆಲಸ ಮಾಡುವಾಗ ಅಡ್ಡ ಹಾಕಬೇಡಿ. ನಾವು ಯಾವುದೇ ಒಂದು ಒಳ್ಳೆಯ ಕೆಲಸ ಮಾಡುವಾಗ ಎನ್‌ಕರೇಜ್ ಮಾಡಿದ್ದರೆ ಅವತ್ತು 8 ಲಕ್ಷ ರೂಪಾಯಿಗಳಿಗೆ ಮುಗಿಯುತ್ತಿದ್ದ ಕೆಲಸ ಇವತ್ತು25 ಕೋಟಿ ರೂಪಾಯಿಗಳ ವೆಚ್ಚದ್ದಾಗುತ್ತಿರಲಿಲ್ಲ. ಮಾನ್ಯ ಲಕ್ಷ್ಮಯ್ಯನವರು ದೊಡ್ಡಬಳ್ಳಾಪುರಕ್ಕೆ ಹೋಗುವಾಗ ಆ ಕಡೆಗೆ ಹೋಗುತ್ತಾರೆ. ಆಗ ಅವರು ಅಲ್ಲಿ 3 ಕಿ.ಮೀ. ಗಳವರೆಗೆ ವಾಹನಗಳು ನಿಂತಿರುವುದನ್ನು ನೋಡಿರಬಹುದು. ನಾನು ನಿಮಗೆ ಒಂದು ಉದಾಹರಣೆ ಕೊಡುತ್ತೇನೆ. ಲೇಟ್ ಕೆಂಗಲ್ ಹನುಮಂತಯ್ಯನವರು ಹಿಂದೆ 2 ಕೋಟಿ ರೂಪಾಯಿಗಳಿಗೆ ವಿಧಾನ ಸೌಧ ಕಟ್ಟಿದರು. ಅವರು ಅವತ್ತು 2 ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಿಧಾನ ಸೌಧವನ್ನು ಕಟ್ಟಿರದಿದ್ದರೆ ಇವತ್ತು ನಮ್ಮ ಪರಿಸ್ಥಿತಿ ಏನಾಗಬೇಕಾಗಿತ್ತು? ನಾವು ಎಲ್ಲಿ ಕುಳಿತುಕೊಳ್ಳಬೇಕಾಗಿತ್ತು? ಇವತ್ತು ನಾವು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಇಂತಹ ಒಂದು ಕಟ್ಟಡವನ್ನು ಕಟ್ಟಲಿಕ್ಕೆ ಸಾಧ್ಯವಿಲ್ಲ. ಈ ಕಟ್ಟಡದ ಒಂದೊಂದು ಕಲ್ಲೂ ಸಹ ಮಾನ್ಯ ಹನುಮಂತಯ್ಯನವರ ಹೆಸರು ಹೇಳುತ್ತದೆ. ನಾವು ಹತ್ತುವ ಒಂದೊಂದು ಮೆಟ್ಟಿಲು ಅವರ ಹೆಸರು ಹೇಳುತ್ತದೆ, ನಾವು ಕುಳಿತಿರುವ ಈ ಕುರ್ಚಿ ಕೂಡ ಅವರ ಹೆಸರನ್ನೇ ಹೇಳುತ್ತದೆ. ಅದಕ್ಕೇ ನಾನು ಹೇಳುವುದು. 'ದಿಲ್' ಮತ್ತು 'ವಿಲ್' ಬೇಕು ಎಂದು, 'ದಿಲ್' ಮತ್ತು 'ವಿಲ್' ಇದ್ದರೆ ಕೆಲಸವಾಗುತ್ತದೆ. ಆಗಲೂ ಕೂಡ ಮಾನ್ಯ ಹನುಮಂತಯ್ಯನವರಿಗೆ, the first Prime Minister of India Pandit Jawaharalal Nehru said : 'Mr. Hanumanthaiah, why you are spending Rs. 2 Crores for the construction of such a huge building ಎಂದು ಕೇಳಿದರು. ಅದಕ್ಕೆ ಮಾನ್ಯ ಹನುಮಂತಯ್ಯನವರು 'No, my dear Prime Minister, I am going to construct this building, it is for the cause of the Karnataka people and the elected Representatives. ಎಂದು ಹೇಳಿ ಅವತ್ತು ಚಾಲೆಂಜ್ ಮಾಡಿ ವಿಧಾನ ಸೌಧ ಕಟ್ಟಿದಂತಹ ಧೀರ, ಧೀಮಂತ ನಾಯಕ ಮಾನ್ಯ ಕೆಂಗಲ್ ಹನುಮಂತಯ್ಯನವರು. ಕೆ.ಆರ್. ಪುರದಲ್ಲಿರುವ ರೈಲ್ವೆ ಓವರ್ ಬ್ರಿಡ್ಜ್ ಹತ್ತಿರ ಕೂಡ 4-5 ಕಿ.ಮೀ.ವರೆಗೆ ವಾಹನಗಳು ನಿಲ್ಲುತ್ತವೆ. ಈ ಓವರ್ ಬ್ರಿಡ್ಜ್ ಅನ್ನು 1902 ಅಥವಾ 1904ರಲ್ಲಿ ಬ್ರಿಟಿಷ್‌ನವರು ಕಟ್ಟಿದ್ದರು. ಅದಕ್ಕೆ ಎಸ್ಟಿಮೇಟ್ ಆಗಿ ಈಗಾಗಲೇ 5-6 ವರ್ಷಗಳಾಗಿವೆ. ಮಾನ್ಯ ಜಾಫರ್ ಷರೀಫ್‌ರವರು ಅದಕ್ಕೆ ಗುದ್ದಲಿ ಪೂಜೆ ಮಾಡಿದರು, ಫೌಂಡೇಶನ್ ಸ್ಟೋನ್ ಹಾಕಿದ್ದರು. ಹಾಗಿದ್ದರೂ ಇನ್ನೂ ಇಲ್ಲಿ ಕೆಲಸ ಶುರುವಾಗಿಲ್ಲ. ಇನ್ನು ಯಾವಾಗ ಕೆಲಸ ಶುರುವಾಗುತ್ತದೆ? ನಮ್ಮ

ಸರ್ಕಾರವೇ ಆ ಕೆಲಸವನ್ನು ಶುರು ಮಾಡಬೇಕು. ಅದಕ್ಕೆ ಒಳ್ಳೆಯ ಕಾಲ ಬರುತ್ತದೆ. ಈ ಕೆಲಸವನ್ನು ಆದಷ್ಟು ಬೇಗನೆ ಮಾಡಬೇಕೆಂದು ಕೋರುತ್ತೇನೆ. I request the Hon'ble Minister to start this work, as early as possible. ಇನ್ನೊಂದು ಬಹಳ ಮುಖ್ಯವಾದ ವಿಷಯವನ್ನು ನಾನು ಹೇಳಬಯಸುತ್ತೇನೆ. ಬಳ್ಳಾರಿ ರೋಡ್‌ನಲ್ಲಿ ಆ ರೋಡ್ ವಿಡ್ತ್ ಬಹಳ ಕಡಿಮೆ ಇದೆ. ಈಗಲೇ ಅಲ್ಲಿ ಬಹಳಷ್ಟು ಅಪಘಾತಗಳಾಗುತ್ತಿವೆ. ಅಲ್ಲಿ 538-539ನೇ ಕಿ.ಮೀ.ನಲ್ಲಿ ಒಂದು ಖಾಸಗಿ ಸಂಸ್ಥೆಯವರು ತಮ್ಮ ಕಾಂಪೌಂಡ್ ವಾಲ್ ಅನ್ನು ದೊಡ್ಡದಾಗಿ ರಸ್ತೆ ಪಕ್ಕಕ್ಕೇ ಹಾಕುತ್ತಿದ್ದಾರೆ. ಅದನ್ನು ಸರ್ಕಾರದವರು ತಕ್ಷಣವೇ ರೋಡ್ ಸೆಂಟರ್‌ನಿಂದ40 ಮೀಟರ್ಸ್ ಒಳಗಡೆ ಹಾಕಿಸಬೇಕು, ಈಗಾಗಲೇ ಕಟ್ಟಿರುವುದನ್ನು ರಿಮೂವ್ ಮಾಡಬೇಕೆಂದು ಕೋರುತ್ತೇನೆ. ಅದನ್ನು ತಕ್ಷಣವೇ ಒಡೆಸಿ ಹಾಕಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. The unauthorised construction is going on at the Highway boundary at 538-539 k.m. near Meenakunte-Hosur compound wall. ಅದನ್ನು ಆದಷ್ಟು ಬೇಗ 40 ಮೀಟರ್ಸ್ ಒಳಗಡೆ ಹಾಕಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಎರಡನೆಯದಾಗಿ, ಅಲ್ಲಿಂದ ಮುಂದಕ್ಕೆ ಅದೇ ರಸ್ತೆ ಪಕ್ಕದಲ್ಲಿ ದೇವಸ್ಥಾನವೊಂದು ಇದೆ. ದೇವಸ್ಥಾನವನ್ನು ಕಟ್ಟಿದ ಮೇಲೆ ಒಡೆಯುವುದಕ್ಕಾಗುವುದಿಲ್ಲ. ರಸ್ತೆಗಳಲ್ಲಿ ಅಪಘಾತಗಳು ಹೆಚ್ಚಾಗುತ್ತಿರುವುದು ತಮಗೇ ಗೊತ್ತಿದೆ. ಆ ದೇವಸ್ಥಾನವನ್ನೂ ಕೂಡ ಅಲ್ಲಿಂದ40 ಮೀಟರ್ಸ್ ಒಳಗಡೆ ಹಾಕಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜಿ. ಚಂದ್ರಣ್ಣ : ಮಾನ್ಯ ರಾಜಣ್ಣನವರೇ, ಒಂದು ನಿಮಿಷ. ಮಾನ್ಯ ಅಧ್ಯಕ್ಷರೇ, ಮೀನುಕುಂಟೆ-ಹೊಸೂರು ಹತ್ತಿರ ಐ.ಟಿ.ಸಿ. ಯವರು ಕಾಂಪೌಂಡ್ ವಾಲ್ ಕಟ್ಟುತ್ತಿದ್ದಾರೆ. ಅದು ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ನಾನು ಈಗಾಗಲೇ ಅದನ್ನು ಸಂಬಂಧಪಟ್ಟವರ ಗಮನಕ್ಕೆ ತಂದಿರುತ್ತೇನೆ. ಮಾನ್ಯ ಮಂತ್ರಿಗಳು ಅಲ್ಲಿ ಈ ರೀತಿಯಾಗಿ ನಡೆಯುತ್ತಿರತಕ್ಕಂತಹ ಕಾಮಗಾರಿ ಬಗ್ಗೆ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳಬೇಕು. ನಿಜವಾಗಿಯೂ ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಮಾನ್ಯ ರಾಜಣ್ಣನವರು ಪ್ರಸ್ತಾಪಿಸಿರತಕ್ಕಂತಹ ಈ ವಿಷಯ ನಿಜವಾಗಿಯೂ ಬಹಳ ಗಮನಾರ್ಹವಾದುದು. ತಾವು ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಇನ್ನು ಕಟ್ಟಡಗಳ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಬರುವ 1914 ರಲ್ಲಿ ಬ್ರಿಟೀಷರು ಕಟ್ಟಿದಂತಹ ಸರ್ಕಾರಿ ಸ್ಕೂಲ್ ಬಿಲ್ಡಿಂಗ್‌ಗಳಿಗೆ ಇವತ್ತಿಗೂ ಸಹಾ ಅದೇ ರೂಫ್ ಇದೆ. ಅದನ್ನು ಬದಲಾಯಿಸಿಲ್ಲ. ಈ ಕಟ್ಟಡಗಳನ್ನು ಕಟ್ಟಿ ಸುಮಾರು 80-83 ವರ್ಷಗಳಾಗಿವೆ. ಆ ಶಾಲೆಗಳ ಸುತ್ತಲೂ ಇರುವ ಗೋಡೆಗಳನ್ನು ಇದುವರೆಗೂ ರಿಪೇರಿ ಮಾಡಿಲ್ಲ. ದಯವಿಟ್ಟು ನನ್ನ ಕ್ಷೇತ್ರದಲ್ಲಿ ಬರತಕ್ಕಂತಹ ಎಲ್ಲಾ ಸರ್ಕಾರಿ ಸ್ಕೂಲ್ ಬಿಲ್ಡಿಂಗ್‌ಗಳನ್ನು ಒಂದು ಕಡೆಯಿಂದ ರಿಪೇರಿ ಮಾಡಿಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ. ಇಂತಹದ್ದೆಲ್ಲಾ ಮಾಡುವಂತಹ ಮೇಜರ್ ವರ್ಕ್ಸ್ ಇನ್ನೂ ಬಹಳ ಇದೆ. ಇನ್ನು ಗ್ರಾಮೀಣಾಭಿವೃದ್ಧಿ ಬಗ್ಗೆ ಎರಡೇ ಎರಡು ಮಾತುಗಳನ್ನು ಆಡಬಯಸುತ್ತೇನೆ

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಬೋರ್‌ವೆಲ್‌ಗಳನ್ನು ಕೊರೆಯಬೇಕಾದರೆ ಬಹಳ ಎಚ್ಚರಿಕೆಯಿಂದ ಕೊರೆಯಬೇಕು. ಹಳ್ಳಿಗಳ ಮಧ್ಯದಲ್ಲಿ ಬೋರ್‌ವೆಲ್‌ಗಳನ್ನು ಕೊರೆಯಬಾರದು. ಹಳ್ಳಿಗಳ ಮಧ್ಯದಲ್ಲಿ ಬೋರ್‌ವೆಲ್ಸ್ ಕೊರೆದರೆ ಶುದ್ಧ ನೀರು ಸಿಗುವುದಿಲ್ಲ. ತಿಪ್ಪೇಗುಂಡಿ, ಕೊಳಕು ನೀರು ಎಲ್ಲಿ ನಿಲ್ಲುತ್ತದೆಯೋ ಅಲ್ಲಿ ಬೋರ್‌ವೆಲ್ಸ್ ಕೊರೆಯಬಾರದು. ತಿಪ್ಪೇಗುಂಡಿ ಅಥವಾ ಕೊಳಕು ನೀರು ಬೋರ್‌ವೆಲ್‌ನಿಂದ 50-100 ಅಡಿ ದೂರದಲ್ಲಿ ನೀರಿದ್ದರೂ ಅದು ಸೋಕ್ ಆಗಿ, ಅದರಿಂದ ಮಕ್ಕಳಿಗೆ ಜನಗಳಿಗೆ ಖಾಯಿಲೆ ಬರುತ್ತದೆ. ಈಗ ಆರು ತಿಂಗಳ ಹಿಂದೆ ದೇವನಹಳ್ಳಿಯಲ್ಲಿ ಜನಗಳಿಗೆ ಖಾಯಿಲೆ ಬಂದು ಸಫರ್ ಆಗಿದ್ದಾರೆ. ಏನೇ ಇದ್ದರೂ ಬೋರ್‌ವೆಲ್‌ಗಳನ್ನು ಊರಿನಿಂದ ಹೊರಗಡೆ ಶುದ್ಧವಾಗಿ ಇರುವ ಕಡೆ ಕೊರೆಯಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ನೀವು ಇನ್ನು ಐದು ನಿಮಿಷದಲ್ಲಿ ತಮ್ಮ ಭಾಷಣ ಮುಗಿಸಬೇಕಾಗುತ್ತದೆ.

ಶ್ರೀ ಎನ್. ರಾಜಣ್ಣ : ಮಾನ್ಯ ಅದ್ಯಕ್ಷರೇ, ನಾನು ಬೇಗ ಮುಗಿಸುತ್ತೇನೆ. ಮಧ್ಯದಲ್ಲಿ ಬಹಳಷ್ಟು ಅಡಚಣೆಗಳು ಬಂದಿದ್ದರಿಂದ, ಅಲ್ಲೇ ಅರ್ಧ ಗಂಟೆ ಸಮಯ ಹಾಳಾಯಿತು.

ಅಧ್ಯಕ್ಷರು : ನಾನಿಲ್ಲದೇ ಹೋದರೆ ಅವರೆಲ್ಲರೂ ನಿಮಗೆ ಭಾಷಣ ಮಾಡುವುದಕ್ಕೆ ತೊಂದರೆ ಕೊಡುತ್ತಾರೆ ಎಂದು ನನಗೆ ಗೊತ್ತಿತ್ತು ಇನ್ನು ಐದು ನಿಮಿಷದಲ್ಲಿ ನಿಮ್ಮ ಭಾಷಣ ಕನ್‌ಕ್ಲೂಡ್ ಮಾಡಿ. ನಮ್ಮ ರಾಜಣ್ಣನವರು ಬಹಳ ಡಿಸಿಪ್ಲೀನ್ಡ್ ಮ್ಯಾನ್. ಐದೇ ನಿಮಿಷ ಅಂದರೆ ಸರಿಯಾಗಿ ಐದೇ ನಿಮಿಷದಲ್ಲಿ ತಮ್ಮ ಭಾಷಣ ಮುಗಿಸಿಬಿಡುತ್ತಾರೆ. ನಾನು ಮರೆತರೂ ಅವರು ಕುಳಿತುಕೊಂಡು ಬಿಡುತ್ತಾರೆ.

ಶ್ರೀ ಎನ್. ರಾಜಣ್ಣ : ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೇ ನನ್ನ ಭಾಷಣವನ್ನು ಮುಗಿಸಿ ಬಿಡುತ್ತೇನೆ. ಕೊಳವೆ ಬಾವಿಗಳಿಗೆ ಅಳವಡಿಸಲಾಗುವ ಪಂಪ್‌ಗಳನ್ನು ಮೊದಲನೇ ಬಾರಿಗೆ ಹೊಸದಾಗಿ ತಂದು ಹಾಕುತ್ತಾರೆ, ಸ್ವಲ್ಪ ದಿನದಲ್ಲೇ ಹೊಸದನ್ನು ತೆಗೆದುಕೊಂಡು ಹೋಗಿ ಹಳೆಯದನ್ನು ತಂದು ಹಾಕಿ ಬಿಡುತ್ತಾರೆ. ಅದನ್ನು ಸರಿಪಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಕೊನೆಯದಾಗಿ, ಶೌಚಾಲಯಗಳನ್ನು ಕಟ್ಟಿಕೊಡುವುದರ ಬಗ್ಗೆ ಹೇಳುವುದಾದರೆ, ಬೆಳಿಗ್ಗೆ ನನ್ನ ಗೆಳೆಯರು 5-6 ಕುಟುಂಬಕ್ಕೆ ಒಂದು ಶೌಚಾಲಯಗಳನ್ನು ಮಾಡಿ ಕೊಟ್ಟರೆ ಒಳ್ಳೆಯ ದಾಗುತ್ತದೆ ಎಂದು ಹೇಳುತ್ತಿದ್ದರು. 10 ಕುಟುಂಬಕ್ಕೆ ಒಂದು ಶೌಚಾಲಯಗಳನ್ನು ಕಟ್ಟಿ ಅದನ್ನು ಗೋಬರ್ ಗ್ಯಾಸ್ ಪ್ಲಾಂಟ್‌ಗೆ ಅಟಾಚ್ ಮಾಡಿ, ಅದರಲ್ಲಿ ಸಗಣೆಯನ್ನೂ ಹಾಕಿದರೆ ಅದರಿಂದ ಹತ್ತು ಮನೆಗಳಿಗೂ ಉಪಯೋಗವಾಗುತ್ತದೆ.

5.10 ಪಿ.ಎಂ.

ಅದು ಗಾಂಧಿಯನ್ ಎಕಾನಮಿಯಲ್ಲಿ ಮನೆಗಳಿಗೆ ಗ್ಯಾಸ್ ಬಂದು ಅವರು ಅಡಿಗೆ ಮಾಡಿಕೊಳ್ಳುವುದಕ್ಕೆ, ದೀಪ ಉರಿಸುವುದಕ್ಕೆ ಅನುಕೂಲವಾಗುತ್ತದೆ ಎಂದ ಹೇಳಿ, ಇದನ್ನು ನಾನು

ಸಲಹೆ ಮಾಡುತ್ತೇನೆ. ಹಿಂದೆ ಆಶ್ರಯ ಸ್ಕೀಂಗೆ ಸಂಬಂಧಪಟ್ಟ ಹಾಗೆ ಜಿಲ್ಲಾಪರಿಷತ್ತಿನಲ್ಲಿ ಕೆಲವೆಲ್ಲ ಅನ್ಯಾಯವಾಗಿದೆ. ಆಶ್ರಯ ಯೋಜನೆ ಹೌಸಿಂಗ್ ಬೋರ್ಡ್‌ಗೆ ಬರುತ್ತದೆಂದು ಹೇಳಿದ್ದಾರೆ. ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯತ್ ಸಭೆಯಲ್ಲಿ ಸುಮಾರು ಒಂದೂವರೆ ಕೋಟಿ ರೂಪಾಯಿ ಅವ್ಯವಹಾರ ಆಗಿರುವ ಬಗ್ಗೆ ತನಿಖೆ ಮಾಡಿ ಅಲ್ಲಿ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ನನಗೆ ಇಷ್ಟು ಮಾತನಾಡಲು ಸಮಯಾವಕಾಶವನ್ನು ಕೊಟ್ಟಿದ್ದಕ್ಕಾಗಿ ಮತ್ತು ನಮ್ಮ ಸ್ನೇಹಿತರೆಲ್ಲ ಇಷ್ಟು ಹೊತ್ತು ನನಗೆ ಸಹಕಾರ ನೀಡಿದ್ದಕ್ಕಾಗಿ ಮಾನ್ಯ ಅಧ್ಯಕ್ಷರ ಮೂಲಕ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. SPEAKER : I also thank Mr. Rajanna..

ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ) : ಸನ್ಮಾನ್ಯ ಸಭಾಧ್ಯಕ್ಷರೆ,

ಅಧ್ಯಕ್ಷರು : ಶ್ರೀನಿವಾಸ್‌ರವರೆ, ನೀವು ರಾಜಣ್ಣನವರಿಗೆ ಥ್ಯಾಂಕ್ಸ್ ಹೇಳುವುದಿಲ್ಲವೇ?

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ರಾಜಣ್ಣನವರಿಗೆ ಥ್ಯಾಂಕ್ಸ್ ಹೇಳುತ್ತೇನೆ. ರಾಜಣ್ಣನವರಿಗೆ ಬಹಳ ಬಹಳ ಅಭಿನಂದನೆಗಳು.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ್‌ರವರು ಮಾತನಾಡಬೇಕೆಂದು ಹೇಳಿದರು. ಅವರು ರಿಕ್ವೆಸ್ಟ್ ಮಾಡಿಕೊಂಡಿರುವುದರಿಂದ ನಾನು ಬೇಗ ಮಾತನಾಡಿ ಮುಗಿಸಿದ್ದೇನೆ.

ಅಧ್ಯಕ್ಷರು : ಅದಕ್ಕೋಸ್ಕರ ಬಾಕಿ ಇರಬಾರದೆಂದು ಹೇಳಿ ಅವರಿಂದ ವಾಪಾಸ್ಸು ಥ್ಯಾಂಕ್ಸ್ ಹೇಳಿಸುತ್ತಿರುವುದು.

+ ಶ್ರೀ ಎಂ. ಶ್ರೀನಿವಾಸ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ಕಂದಾಯದ ಬಗ್ಗೆ ಹೇಳುವುದಾದರೆ, ಈ ಭೂ ಮಂಜೂರಾತಿ 1969ರ ಪ್ರಕಾರ ಲ್ಯಾಂಡ್ ಗ್ರಾಂಟ್ ಬಗ್ಗೆ ಫಾರಂ ನಂ. 50ನ್ನು ಹಾಕಿದಾಗ ಅವರಿಗೆ 4 ಎಕರೆ 20 ಗುಂಟೆ ಜಮೀನು ಮಂಜೂರು ಮಾಡಬೇಕೆಂದು ಇತ್ತು. ಈ ಕಾನೂನು ಆಗಿ ಸುಮಾರು 20 ವರ್ಷಗಳು ಆಯಿತು. ನನಗೆ ಗೊತ್ತಿದ್ದ ಹಾಗೆ ಟೋಲ್‌ಗೇಟ್ ಏನು ಇದೆ, ಆ ಟೋಲ್‌ಗೇಟ್‌ನಿಂದ 18 ಕಿ.ಮೀ. ಎಂದು 1969ನೇ ಇಸವಿಯಲ್ಲಿ ಎ.94:90 ರೂಲನ್ನು ತೆಗೆದುಕಂಡು ಮಾಡಿದ್ದಾರೆ. ಇದು ಆದಮೇಲೆ ಅವರು ಆವತ್ತು ಕಾರ್ಪೊರೇಷನ್ ಬಗ್ಗೆ ಏನು ಆಕ್ಟ್ ಮಾಡಿದ್ದರು ಅವತ್ತಿನಿಂದ ಇವತ್ತಿಗೆ 8 ರಿಂದ 10 ಕಿ.ಮೀ. ಮುಂದೆ ಹೋಗಿದೆ. ತಾವು ಇವತ್ತು ಲ್ಯಾಂಡ್ ಗ್ರಾಂಟ್ ಕಮಿಟಿಯ ಅಧ್ಯಕ್ಷರಾಗಿ ಶಾಸಕರನ್ನು ಮಾಡಿದ್ದೀರಿ, 30 ವರ್ಷಗಳಿಂದ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಬರತಕ್ಕಂಥವರಿಗೆ ಆ ಜಮೀನನ್ನು ಗ್ರಾಂಟ್ ಮಾಡುವುದಕ್ಕೆ ಬರುವುದಿಲ್ಲ. ಇದರ ಬಗ್ಗೆ ತಮಗೆ ನಾನು ಹೇಳಿದ್ದೆ. ಇನ್ನೊಂದು ವಿಚಾರ ಏನೆಂದರೆ ಏರೋಪ್ಲೇನ್ ಸರ್ವೆ' ಎನ್ನುವುದನ್ನು ತೋರಿಸಿದ್ದಾರೆ. ಅದು ನನಗಂತೂ ಅರ್ಥ ಆಗಲಿಲ್ಲ. ಏರೋಪ್ಲೇನ್ ಎಂದು ತೋರಿಸಿದ್ದಾರೆ, ಏರೋಪ್ಲೇನ್‌ನಿಂದ ಸರ್ವೆ ಮಾಡುತ್ತಾರೆಯೇ ಎಂದು ನಾನು ಜಿಲ್ಲಾಧಿಕಾರಿಗಳನ್ನು ಕೇಳಿದೆ. ಇಲ್ಲ, ಅದನ್ನು ತೋರಿಸಿದ್ದಾರಷ್ಟೆ ಎಂದು ಹೇಳಿದರು. ಜಮೀನು ಹೀಗೆ ಇದ್ದಾಗ, ಅವರು ಈ ಕಡೆ ಇದ್ದಾಗ

ಎಲ್ಲಿಂದ ಎಲ್ಲಿಗೆ ಅಳತೆ ಎನ್ನುವುದನ್ನು ಕೇಳುವುದಕ್ಕೆ ನಾನು ಜಿಲ್ಲಾಧಿಕಾರಿಗಳಿಗೆ ಕಾಗದ ಬರೆದೆ. ಏನು ಮಾಡುವುದು ಕಾನೂನನ್ನು ಮಾಡಿದ್ದಾರೆಂದು ಹೇಳಿದರು. ಅದನ್ನು 8 ರಿಂದ 10 ಕಿ.ಮೀ.ಗೆ ತರಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಕಂದಾಯ ಮಂತ್ರಿಗಳಲ್ಲಿ ನನ್ನ ಬೇಡಿಕೆಯಾಗಿದೆ. ಇದು ಒಂದೇ ಕಡೆಯಲ್ಲ ಎಲ್ಲಾ ಕಡೆಯಾಗಬೇಕು. ಬೆಳಗಾಂ ಆ ಕಡೆ 5 ಕಿ.ಮೀ.ಗಿಂತ ಆಚೆ ಇದೆ. ಬೇರೆ ಕಡೆ ಪುರಸಭೆಯಿಂದ 5 ಕಿ.ಮೀ. ಇದೆ. ಬೆಂಗಳೂರಿನಿಂದ 18 ಕಿ.ಮೀ. ಇದೆ ಅದನ್ನು 8 ರಿಂದ 10 ಕಿ.ಮೀ.ಗೆ ತಾವು ಮಂಜೂರು ಮಾಡಿ ಒಂದು ಕಾನೂನು ಮಾಡಿ, ಒಂದು ಆರ್ಡಿನೆನ್ಸ್ ಮಾಡಿ ಈಗ ನಡೆಯತಕ್ಕಂಥದ್ದರಲ್ಲಿ ನಾವು ಏನೂ ಅನುಕೂಲ ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ತಾವು ಒಂದು ಆರ್ಡರ್ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದ 18 ಕಿ.ಮೀ. ಆಚೆ ಇದ್ದವರಿಗೆ ಮಾತ್ರ ಕಾನೂನಿನಲ್ಲಿ ಈಗ ಅವಕಾಶವಿದೆ. ಆ ಟೈಮ್‌ನಲ್ಲಿ ಯಾವ ದೃಷ್ಟಿಕೋನವನ್ನು ಇಟ್ಟುಕೊಂಡು ಈ ಕಾನೂನನ್ನು ಮಾಡಿದರೆಂದು ನನಗೆ ಗೊತ್ತಿಲ್ಲ. ಆದರೆ ಮಾನ್ಯ ಸದಸ್ಯರು ಹೇಳಿದುದರಲ್ಲಿ ನಿಜವಾಗಿಯೂ ಸತ್ಯಾಂಶ ಇದೆ. ಬಹಳ ಜನ ಬಡವರು ಇದ್ದಾರೆ. ಬಹಳಷ್ಟು ಬಡ ಜನ ಪ್ರತಿ ದಿವಸ ಮನೆಯ ಹತ್ತಿರ ಬಂದು ನಮ್ಮ ಜಮೀನು 18 ಕಿ.ಮೀ. ಒಳಗೆ ಇದೆ ನಮಗೆ ಆ ಭೂಮಿಯನ್ನು ಮಂಜೂರು ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಆದರೆ ಕಾನೂನಿನಲ್ಲಿ ಅವಕಾಶವಿಲ್ಲ. ಮತ್ತು ಹೆಚ್ಚಿನ ಪಾಲು ಜನರು ಎಲ್ಲರೂ ಬಡವರಾಗಿದ್ದಾರೆ. ಅಲ್ಲಿ ಪರಿಶಿಷ್ಟ ಜಾತಿಗೆ ಮತ್ತು ಪಂಗಡಕ್ಕೆ ಸೇರಿದವರೂ ಸಹ ಇದ್ದಾರೆ. ಇದು ಸರಿಯಲ್ಲವೆಂದು ನನಗೆ ಕನ್‌ವಿನ್ಸ್ ಆಗಿದೆ. ಆದ್ದರಿಂದ ಇದಕ್ಕೆ ಏನು ರಿಸ್ಟ್ರಿಕ್ಷನ್ ಹಾಕಿದ್ದಾರೆ ಅದನ್ನು ತೆಗೆದುಹಾಕಿ, ಮೊದಲು ಏನು 8 ಕಿ.ಮೀ. ಇತ್ತು ಅದನ್ನು ಬೇಕಾದರೆ ಇನ್ನೂ ಸ್ವಲ್ಪ ಕಡಿಮೆ ಮಾಡೋಣ. ಸಾಧ್ಯವಾದಮಟ್ಟಿಗೆ ಬಹುಬೇಗ ಅಮೆಂಡ್‌ಮೆಂಟ್ ತಂದು ತಿದ್ದುಪಡಿಯನ್ನು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ವಿಥ್‌ಇನ್ ರೇಡಿಯಸ್ ಆಫ್ 5 ಕಿ.ಮೀ. ನಿಂದ 8 ಕಿ.ಮೀ. ವರೆಗೆ ಎಂದು ಅಮೆಂಡ್‌ಮೆಂಟ್ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. ಅದನ್ನು ಹಿಂದೆ ಮಾಡಿದಂಥ ಉದ್ದೇಶ ಏನು ಇತ್ತು ಎಂದರೆ, ಈ ಸಿಟಿ ಲಿಮಿಟ್‌ನಲ್ಲಿ ಅಥವಾ ಅದರ ಫೆರಿಫರಿಯಲ್ಲಿ ಇರತಕ್ಕಂಥ ಜಮೀನುಗಳಿಗೆ ಬೋಗಸ್ ರೆಕಾರ್ಡ್ಸ್ ಕ್ರಿಯೇಟ್ ಮಾಡಿಕೊಂಡು ಕಮಿಟಿ ಮುಂದೆ ಇಟ್ಟು ರೆಗ್ಯುಲರೈಸ್ ಮಾಡಿಕೊಳ್ಳುತ್ತಿದ್ದರು. ಅದರಿಂದ ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಬರತಕ್ಕಂಥ ಆದಾಯ ಹೋಗುತ್ತಿದೆ ಮತ್ತು ನಿಜವಾಗಿ ಯಾರು ಕಲ್ಟಿವೇಟ್ ಮಾಡುತ್ತಾರೋ ಅವರಿಗೆ ಸಿಕ್ಕತಕ್ಕಂಥದ್ದು ಆಗುತ್ತಿರಲಿಲ್ಲ. ಏಕೆಂದರೆ, ಅನೇಕ ಸಾರಿ ಈ ವಿಲೇಜ್ ಅಕೌಂಟೆಂಟ್ಸ್ ಯಾವ ರೀತಿಯಾಗಿ ತಮ್ಮ ರೆಕಾರ್ಡ್ಸ್ ಸೃಷ್ಟಿಮಾಡುತ್ತಾರೆಂದು ಹೇಳಿ ನಮಗೆ ಗೊತ್ತಿದೆ. ಹೀಗಾಗಿ ಬೆಂಗಳೂರಿಗೆ ಒಂದಕ್ಕೇ ಅಲ್ಲ ಎಲ್ಲಾ ಪಟ್ಟಣಗಳಿಗೂ ಲಿಮಿಟ್ ಹಾಕಿದ್ದೇವೆ. ಕೆಲವು ಕಡೆ 3 ಕಿ.ಮೀ. ಇನ್ನು ಕೆಲವು ಕಡೆ 5 ಕಿ.ಮೀ. ರೇಡಿಯಸ್ ಇದೆ. ಬೆಂಗಳೂರಿನಂಥ ಪಟ್ಟಣಗಳಲ್ಲಿ 18 ಕಿ. ಮೀಟರ್ಸ್ ರೇಡಿಯಸ್ ಇದೆ. ಆ ಉದ್ದೇಶದಿಂದ ಇದನ್ನು ಮಾಡಿರುವಂಥದ್ದು. ನಿಜವಾಗಿಯೂ ಅವರು ಕಲ್ಟಿವೇಟ್

ಮಾಡುತ್ತಾರೆ ಎನ್ನತಕ್ಕಂಥ ಅಭಿಪ್ರಾಯ ನಿಮಗೆ ಇದ್ದರೆ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಅದರೊಳಗೆ ತಂದು ಮಾಡಬಹುದು. ಇಲ್ಲದಿದ್ದರೆ ಮಿಸ್‌ಯೂಸ್ ಆಗಬಹುದು. ಆ ದೃಷ್ಟಿಯಿಂದ ನಾನು ಹೇಳಿದೆ.

ಶ್ರೀ ರಮೇಶ್‌ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಆಗಬಹುದು. ಒಟ್ಟಾರೆ ಯಾವುದೇ ದೃಷ್ಟಿಯಿಂದಲಾದರೂ ಬಡವರಿಗೆ ಸಹಾಯವಾಗಬೇಕು. ಅದು ಯಾವ ಕಾನೂನಿನ ಚೌಕಟ್ಟಿನಲ್ಲಿ ಬರುತ್ತದೋ ನೋಡಿಕೊಂಡು ಸಹಾಯ ಮಾಡೋಣ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಮಾನ್ಯ ಕಂದಾಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಸಂತೋಷ. ಏಕೆಂದರೆ ತಾವು ಕಂದಾಯ ಮಂತ್ರಿಗಳು ಆದಮೇಲೆ ಒಳ್ಳೆಯ ಕೆಲಸಗಳು ಆಗುತ್ತಿವೆ. ಯಾವ ರೀತಿಯಾಗಿ ಆಗುತ್ತಿದೆಯೆಂದರೆ, ನನಗೆ ಗೊತ್ತಿದ್ದ ಹಾಗೆ ಸುಮಾರು 28 ಎಕರೆ ಜಮೀನನ್ನು ಒಬ್ಬ ಮಾರ್ವಾಡಿ ಬೇರೆ ಒಬ್ಬರಿಗೆ ಕೊಟ್ಟು ಸುಮಾರು35 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಂಥ ಜಮೀನನ್ನು ತಮ್ಮ ಕಾಲದಲ್ಲಿ ಮುಟ್ಟುಗೋಲು ಹಾಕಿ ಸರ್ಕಾರಕ್ಕೆ ತೆಗೆದುಕೊಂಡಿದ್ದೀರಿ, ಅದರಲ್ಲಿ ಪ್ರಾಮಾಣಿಕವಾಗಿ ಆ ಕೆಲಸವನ್ನು ಮಾಡಿದ್ದೀರಿ. ಇನ್ನೊಂದು ವಿಚಾರ ಹೇಳುವುದಾದರೆ, ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂಥ ಸಲಹೆ ಬಹಳ ಚೆನ್ನಾಗಿದೆ. ಲ್ಯಾಂಡ್ ಗ್ರಾಂಟ್ ಕಮಿಟಿ ಇನ್ಸ್‌ಪೆಕ್ಷನ್‌ಗೆ ಹೋಗಿ ಅವರು ಕಲ್ಟಿವೇಟ್ ಮಾಡುತ್ತಿದ್ದಾರೆ ಎನ್ನುವುದನ್ನು ಡೆಫಿನೆಟ್ ಮಾಡಿಕೊಂಡು ಅವರಿಗೆ ಆ ಜಮೀನನ್ನು ಮಂಜೂರು ಮಾಡುವುದಕ್ಕೆ ಯಾವ ಕಿ.ಮೀ. ಬೇಡ ಅದೇ ರೀತಿ ನಾವು ಮಾಡುತ್ತೇವೆ ಎಂದರೂ ಬಹಳ ಸಂತೋಷ. ಮತ್ತು ಇನ್ನೊಂದು ಏನೆಂದರೆ ದಿ. ದೇವರಾಜ್ ಅರಸ್ ಅವರ ಕಾಲದಲ್ಲಿ ಉಳುವವನಿಗೇ ಭೂಮಿ ಎಂದು ಮಾಡಿದರು. ಆಗ ನಮ್ಮ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಂದಾಯ ಮಂತ್ರಿಗಳಾಗಿದ್ದರು. ಆಗ ಬಹಳ ಒಳ್ಳೆಯ ಕಾನೂನನ್ನು ತಂದರು. ಆದರೆ 1974ರಲ್ಲಿ ತಂದಂಥ ಕಾನೂನು ಏನಿದೆ ಅದು 1997 ಆದರೂ ಬದಲಾಗಿಲ್ಲ ನಾನು ಆ ಭಾಗದಲ್ಲಿದ್ದು ಸರ್ಕಾರ ನಡೆಸತಕ್ಕಂಥ ಸಂದರ್ಭದಲ್ಲಿ ಎರಡು ಸಲ ಹೇಳಿದ್ದೆ. ಅವತ್ತು ದಿ.ದೇವರಾಜ್‌ಅರಸ್ ರವರ ಕಾಲದಲ್ಲಿ ಉಳುವವನಿಗೇ ಭೂಮಿ ಎಂದು ಮಾಡಿದ ಮೇಲೆ, ಅವತ್ತು ವಕೀಲರು ಬರುತ್ತಿರಲಿಲ್ಲ. ಯಾವುದೇ ಸರ್ಕಾರ ಇರಲಿ, ನಿಮ್ಮ ಸರ್ಕಾರ ಇದ್ದಾಗ ನಿಮ್ಮ ಕಡೆಯವರು ಮೆಂಬರ್ ಆಗುತ್ತಾರೆ, ಈ ಕಡೆ ಸರ್ಕಾರ ಬಂದಾಗ ಇವರು ಮೆಂಬರ್ ಆಗುತ್ತಾರೆ. ಆದರೆ 1974ರಲ್ಲಿ ತಂದಂಥ ಒಂದು ಲ್ಯಾಂಡ್ ಟ್ರಿಬ್ಯೂನಲ್ ಕಾಯಿದೆಯಿಂದ ಬಹಳ ತೊಂದರೆಯಾಗಿದೆ. ಅವತ್ತಿನ ಜಮೀನಿನ ಕಿಮ್ಮತ್ತು ಬೇರೆ. ಇವತ್ತು ಬಿಡಿಎ.ಆಗಲಿ, ಸಹಕಾರ ಸಂಘವಾಗಲಿ ಲ್ಯಾಂಡ್ ಆಕ್ವಿಸಿಷನ್ ಮಾಡಿ ಕೋರ್ಟಿನಲ್ಲಿ ಡಿಪಾಸಿಟ್ ಕೊಟ್ಟು ಆ ರೀತಿ ಕಾನೂನು ತಂದು, ಅವತ್ತು ನೀವು ಲ್ಯಾಂಡ್ ಟ್ರಿಬ್ಯುನಲ್ ತಂದದ್ದು ಆದಮೇಲೆ ನಿಮ್ಮದೇ ಆದ ಎರಡು ಸಾರಿ ಸರ್ಕಾರಗಳು ಬಂದಮೇಲೆ, ಇವತ್ತು ನಿಮ್ಮ ಸರ್ಕಾರ ಬಂದಮೇಲೆ ನೀವು ಇಷ್ಟು ನಿಗದಿಯಾದ ಹಣ 20 ರೂಪಾಯಿ, 1,600 ರೂಪಾಯಿ ಎಂದು ಮಾಡಿದ್ದೀರಿ. ಆದರೆ ವಾಲ್ಯುಯೇಷನ್ ಹಾಕಿ ಇಷ್ಟು ಎಂದು ಮುಂಗಡ ಹಣವನ್ನು ನೀವೇ ನಿಗದಿ ಮಾಡಿ ನಿಮ್ಮ ಸರ್ಕಾರದಿಂದ ಹಣ ಅವರಿಗೆ ಕೊಟ್ಟಿರಿ. ಲ್ಯಾಂಡ್ ಟ್ರಿಬ್ಯುನಲ್ ಮೇಲೆ ಅವರು ಅಪೀಲು ಹೋಗುವ ಹಾಗೆ ಇಲ್ಲ. ಕಾನೂನು ತಂದು

ಮಾಡಲಿಲ್ಲವೆಂದರೆ 24 ವರ್ಷಗಳಾಯಿತು ಲ್ಯಾಂಡ್ ಟ್ರಿಬ್ಯುನಲ್ ಆ್ಯಕ್ಟ್ ಬಂದು. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ತೀರ್ಮಾನ ಮಾಡುತ್ತಾರೆ ಮತ್ತೆ ಹೈಕೋರ್ಟ್‌ಗೆ ಹೋಗುತ್ತಾರೆ. ಆ ರೀತಿ ಹೋಗದ ಹಾಗೆ ಒಂದು ಸಾರಿ ಏನಾದರೂ ವ್ಯವಸ್ಥೆ ಮಾಡಿ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಇದನ್ನು ಗಮನಿಸಿಕೊಂಡೇ ಸುಮಾರು ಕೇಸುಗಳು ಇವತ್ತು ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ. ಲ್ಯಾಂಡ್ ಟ್ರಿಬ್ಯುನಲ್ ಕೇಸು, ಜಿಲ್ಲಾ ಮಟ್ಟದ ಕೋರ್ಟಿನಲ್ಲಿ ಆಗಿರಬಹುದು, ತಾಲ್ಲೂಕು ಮಟ್ಟದ ಕೋರ್ಟಿನಲ್ಲಿ ಆಗಿರಬಹುದು, ಸುಮಾರು 10-12 ಸಾವಿರ ಕೇಸುಗಳು ಕೋರ್ಟಿನಲ್ಲಿ ಪೆಂಡಿಂಗ್‌ಇವೆ. ಅದನ್ನು ಅರ್ಥ ಮಾಡಿಕೊಂಡು ಇವತ್ತು ಡಿವಿಜನ್‌ಗೆ ಒಂದೊಂದರಂತೆ ರಾಜ್ಯದಲ್ಲಿ ಒಟ್ಟು 4 ಸ್ಪೆಶಲ್ ಟ್ರಿಬ್ಯುನಲ್‌ಗಳನ್ನು ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಹೈಕೋರ್ಟಿನಲ್ಲಿ ಉಳಿದಿರತಕ್ಕ ಕೇಸುಗಳನ್ನು ಇತ್ಯರ್ಥ ಮಾಡುವುದಕ್ಕೆ ವಿಭಾಗ ಮಟ್ಟದಲ್ಲಿ 4 ವಿಶೇಷ ನ್ಯಾಯಾಲಯಗಳನ್ನು, ಭೂನ್ಯಾಯ ಮಂಡಲಿಗಳನ್ನು ಮಾಡಿ ಇತ್ಯರ್ಥ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಪ್ರಕಾರ ಪ್ರಕ್ರಿಯೆ ಎಲ್ಲ ಮುಗಿದಿದೆ. ಇನ್ನು ಒಂದು ವಾರದೊಳಗೆ ಸರ್ಕಾರಿ ಆಜ್ಞೆ ಹೊರಡಿಸುತ್ತೇವೆ. ಹೈ ಕೋರ್ಟಿನವರು ಪರ್ಮಿಷನ್ ಕೊಟ್ಟಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : 4 ಟ್ರಿಬ್ಯುನಲ್‌ಗಳನ್ನು ಹೆಚ್ಚಿಗೆ ಮಾಡತಕ್ಕದ್ದು ಸಂತೋಷ. ಆದರೆ ಒಂದು ಟ್ರಿಬ್ಯುನಲ್ ಇದ್ದಾಗ ಏನು ಕಾನೂನು ಇತ್ತೋ ಅದಕ್ಕೆ ಅದೇ ಕಾನೂನನ್ನು ಅಳವಡಿಸಬೇಕು. ನಾನು ಹೇಳತಕ್ಕದ್ದು ಏನೆಂದರೆ ಇವತ್ತು ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಗೇಣಿದಾರನ ಪರವಾಗಿ ಆದತಕ್ಷಣ ಅಂತಿಮ ತೀರ್ಮಾನ ಮಾಡಿ ಎಂದು ಹೇಳತಕ್ಕದ್ದು, ನೀವು 4 ಅಲ್ಲ 8 ಲ್ಯಾಂಡ್ ಟ್ರಿಬ್ಯುನಲ್‌ಗಳು ಆದರೂ ಅದೇ ಕಾನೂನು ಇದ್ದರೆ ತಿರುಗ ಹೈಕೋರ್ಟಿಗೆ ಹೋಗತಕ್ಕದ್ದು. ತಿರುಗ ಹೈಕೋರ್ಟಿಗೆ ಹೋದಾಗ ಬಹಳಷ್ಟು ವಿಳಂಬವಾಗುತ್ತದೆ. ನಾನು ಕೂಡ ಟ್ರಿಬ್ಯುನಲ್ ಮೆಂಬರ್ ಆಗಿದ್ದೆ. ಇವತ್ತು ಈ ಲ್ಯಾಂಡ್ ಟ್ರಿಬ್ಯುನಲ್ ಆ್ಯಕ್ಟ್ ಹಾಗೂ ಈ ಜಮೀನು ವ್ಯವಹಾರಗಳಿಂದಾಗಿ ನಾನು ರಾಜಕೀಯಕ್ಕೆ ಇಳಿಯುವ ಪರಿಸ್ಥಿತಿ ಬಂತು. ನನ್ನ ಅನುಭವ ಆಧಾರದ ಮೇಲೆ ನಾನು ಇವತ್ತಿನ ದಿವಸ ತಮಗೆ ಹೇಳತಕ್ಕದ್ದು. ತಮ್ಮ ಕಾಲದಲ್ಲಿ ಯಾವುದೇ ಕೇಸುಗಳನ್ನು ತೆಗೆದುಕೊಳ್ಳಿ ಅವು ಒಂದು ಸಾರಿ ಅಲ್ಲ ಎರಡು ಸಾರಿ ಅಲ್ಲ, ಐದಾರು ಸಾರಿ ಹೈಕೋರ್ಟಿಗೆ ಬಂದವು. ಆದ್ದರಿಂದ ಈ ಬಗ್ಗೆ ಒಂದು ಅಂತಿಮ ತೀರ್ಮಾನವಾಗಬೇಕಾಗಿದೆ. ಸರ್ಕಾರವೇ ಮಧ್ಯೆ ಪ್ರವೇಶಿಸಿ ಸರ್ಕಾರದಿಂದ ಹಣ ಕೊಟ್ಟು ಗೇಣಿದಾರನಿಂದ ಹಣ ತೆಗೆದುಕೊಳ್ಳುವುದು, ಇಲ್ಲ ಅವರಿಗೆ ಕೊಡತಕ್ಕ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಮತ್ತೊಂದು ತಮಗೆ ಹೇಳುವುದಾದರೆ, ಬೆಂಗಳೂರಿನ ಸುತ್ತ ಜಮೀನು ಇದೆ. ತಾವು ಟಾಸ್ಕ್‌ಫೋರ್ಸ್ ಒಂದಕ್ಕೆ ಜಮೀನು ಕೊಟ್ಟಿದ್ದೇವೆಂದು ಹೇಳಿದಿರಿ. ಅದನ್ನು ನಾನು, ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳು ಇದ್ದಾಗ, ಶ್ರೀ ರೋಷನ್ ಬೇಗ್ ಅವರು ಗೃಹ ಮಂತ್ರಿಗಳಿದ್ದಾಗ ಅವರ ಜೊತೆಯಲ್ಲಿ ನಾನು ಹೇಳಿಕೊಂಡು ಬಂದೆ. ಈ ರೀತಿ ಒಂದು ಮಿತಿ ಹಾಕಿ ಎಂದು. ಹಿಂದೆಯೇ ಒಂದು ಪೊಲೀಸ್ ಇಲಾಖೆ ಸ್ಥಾಪನೆ ಮಾಡೋಣವೆಂದು ಮಾಡಿದ್ದಿರಿ. ಇಲ್ಲವೆಂದು ಅಲ್ಲ. ಈಗ ನೀವು ಜಮೀನನ್ನು ಯಾರು ಅರ್ಜಿ ಹಾಕಿ ಕೇಳಿದರೂ ಕೊಡುತ್ತೀರಿ. ವಿಧಾನಸೌಧದಲ್ಲಿ ಸುತ್ತಾಡಿಕೊಂಡು ಬಂದು ಯಾರೋ ಒಂದು ಅರ್ಜಿ ಹಾಕಿರುತ್ತಾರೆ. ಅವರಿಗೆ ಇಷ್ಟಬಂದ ಹಾಗೆ 10 ಎಕರೆ 20 ಎಕರೆ ಕೊಡುವುದು, 50-60 ಎಕರೆ

ಕೊಡುವುದು ಅಲ್ಲ. ಅದಕ್ಕೆ ಒಂದು ಮಿತಿ ಇದೆ. ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ, ಒಂದು ಆಸ್ಪತ್ರೆಗೆ ಕಾಮಾಕ್ಷಿ ಪಾಳ್ಯದಿಂದ ಮೇಲುಗಡೆ 60 ಎಕರೆ ಜಮೀನನ್ನು ಕೊಟ್ಟರು. ಮಾನ್ಯ ದೇವೇಗೌಡರು ಉದ್ಘಾಟನೆ ಮಾಡಿದಾಗ ನಾನು ಹೋಗಿದ್ದೆ. ಆಸ್ಪತ್ರೆಗೆ ಕೊಡಬಾರದೆಂದು ನಾನು ಹೇಳುತ್ತಿಲ್ಲ. ಯಾರಿಗೂ ಕೊಡಬಾರದೆಂದು ಹೇಳುತ್ತಿಲ್ಲ. ಇವತ್ತ ಬೆಂಗಳೂರು ನಗರದೊಳಗಡೆ ವಾಣಿವಿಲಾಸ ಆಸ್ಪತ್ರೆ, ವಿಕ್ಟೋರಿಯ ಆಸ್ಪತ್ರೆ, ಜಯದೇವ ಹೃದ್ರೋಗ ಆಸ್ಪತ್ರೆ ಇದೆ, ಇಷ್ಟೆಲ್ಲ ಆಸ್ಪತ್ರೆಗಳಿಗೆ ಇರತಕ್ಕದ್ದು 12 ಎಕರೆ ಜಾಗ. ಆದರೆ ನೀವು ಒಂದು ಖಾಸಗಿ ಸಂಸ್ಥೆಗೆ 60 ಎಕರೆ ಜಾಗ ಕೊಟ್ಟರೆ ಹೇಗೆ? ನೀವು ಕೊಟ್ಟಿರೋ ಅಥವಾ ಹಿಂದಿನ ಸರ್ಕಾರದವರು ಕೊಟ್ಟರೋ ಅದು ಬೇರೆ. ಏಕೆ ಕೊಟ್ಟಿರಿ ಎಂದು ಕೇಳುತ್ತಿಲ್ಲ. ನೀವು ಕೊಡಿ, ಆದರೆ ಅದಕ್ಕೆ ಒಂದು ಮಿತಿ ಬೇಕು. ಅದನ್ನು ನೀವು ಆ ಭಾಗದ ಶಾಸಕರಿಗೆ (ಪಕ್ಷಭೇದ ಬಿಟ್ಟು) ನೀವು ಅಲಾಟ್‌ಮೆಂಟ್ ಮಾಡಿದಾಗ ತಿಳಿಸುವ ಒಂದು ಕಾನೂನು ಮಾಡಿ. ನನ್ನ ಏರಿಯಾದಲ್ಲೇ ಜಾಸ್ತಿ ಜಮೀನು ಇರತಕ್ಕದ್ದು ಮತ್ತು ನನ್ನ ಕ್ಷೇತ್ರದಲ್ಲೇ ಕೋಟ್ಯಾಂತರ ರೂಪಾಯಿ ಜಮೀನನ್ನು ಇವತ್ತಿನ ದಿವಸ ಕಬಳಿಸುತ್ತಾ ಇರತಕ್ಕದ್ದು. ಬೆಂಗಳೂರಿಗೆ ಹತ್ತಿರ ಇರತಕ್ಕ ನಮ್ಮ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಸಾವಿರಾರು ಎಕರೆ ಜಮೀನು ಇದೆ. ಯಾವುದೋ ಒಂದು ಆಸ್ಪತ್ರೆಗೆ 60 ಎಕರೆ ಕೊಟ್ಟಿರಿ. ಶಾಲೆಗೆ ಜಮೀನು ಕೇಳುತ್ತಾರೆ. ಶಾಲೆಗೆ ಎಷ್ಟು ಜಮೀನು ಬೇಕು, ಕಾಲೇಜಿಗೆ ಎಷ್ಟು ಜಮೀನು ಬೇಕು? ಅದಕ್ಕೆ ಒಂದು ಮಿತಿ ನಿಮಗೆ ಗೊತ್ತಾಗುತ್ತದೆ, 5-6 ಎಕರೆ ಕೊಡಿ. ನೀವು ಏನು ಮಾಡುತ್ತೀರಿ? 20 ಎಕರೆ, 60 ಎಕರೆ ಕೊಡುತ್ತೀರಿ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ವೇದ ವಿಜ್ಞಾನ ಸಂಸ್ಥೆಗೆ 19 ಎಕರೆ ಜಮೀನನ್ನು ಕೊಟ್ಟರು. ತಿರುಗ ಅವರು 40 ಎಕರೆ ಕೇಳಿದರು. ಅವರಿಗೆ ಹೊರದೇಶದಿಂದ ಹಣ ಬರುತ್ತದೆ. ಎಲ್ಲ ಬರುತ್ತದೆ. ಅಂಥವರಿಗೆ ನೀವು ಏತಕ್ಕೆ ಹಣ ಕೊಡುತ್ತೀರಿ, ಸರ್ಕಾರದ ಜಮೀನನ್ನು ಏತಕ್ಕೆ ಕೊಡುತ್ತೀರಿ? ರೈತರಿಗೆ ನೀವು ಜಮೀನು ಕೊಡಬೇಕಾದರೆ ಕಾನೂನು ತರಬೇಕು, ಮತ್ತೊಂದು ತರಬೇಕು. ನನ್ನ ಕ್ಷೇತ್ರದಲ್ಲಿ 250 ಜನರಿಗೆ ಜಮೀನು ಕೊಡಬೇಕಾಗಿದೆ, ಇದುವರೆಗೆ ಕೊಡುವುದಕ್ಕಾಗಿಲ್ಲ. ಲ್ಯಾಂಡ್ ಗ್ರಾಂಟ್ ಕಮಿಟಿ ಇರಬಹುದು. ಫಾರಂ ನಂ. 7 ರಲ್ಲಿ ಗೇಣಿದಾರರು ಇರಬಹುದು. ನೀವು ಜಮೀನು ಕೊಡುತ್ತೇವೆಂದರೆ ಎಷ್ಟು ಎಕರೆ ಬೇಕು ಅವರಿಗೆ? 19 ಎಕರೆ ಸಾಲದೆ? ನಿಮ್ಮ ಡಿವಿಜನಲ್ ಕಮೀಷನರ್ ಅವರ ನಿಲುವನ್ನು ನಾನು ಸ್ವಾಗತ ಮಾಡುತ್ತೇನೆ. ಅವರು ಅಪ್ಲಿಕೇಷನ್ ರಿಜೆಕ್ಟ್ ಮಾಡಿದರು. ನಾನು ಹೇಳಿದ್ದರೆ ಮಾಡುತ್ತಿರಲಿಲ್ಲ. ಒಂದು ವಿದ್ಯಾ ಸಂಸ್ಥೆಗೆ 60 ಎಕರೆ ಏತಕ್ಕೆ ಬೇಕು? ಅಲ್ಲಿ ಎಷ್ಟು ಜನ ಮಕ್ಕಳು ಓದುತ್ತಾರೆ? 400 ಜನರಿಗೆ 60 ಎಕರೆ ಬೇಕೆ? ಆ ಜಮೀನು ಏನು ನಿಮ್ಮ ಸ್ವಂತದ್ದೇ? ಅದಕ್ಕೆ ಒಂದು ಮಿತಿ ಹಾಕಿ. ಯಾರಿಗಾದರೂ ಜಮೀನಿನ ಬಗ್ಗೆ ಸರ್ಕಾರದ ಒಂದು ಭಯ ಇರಲಿ, ನಿಮ್ಮ ಭಯ ಇರಲಿ, ಅದನ್ನು ಬಿಟ್ಟು ನೀವು ಮಾಡುವುದಕ್ಕೆ ಹೋಗಬೇಡಿ. ಯಾರು ಯಾರೋ ನಿಮ್ಮ ಮೂರನೇ ಮಹಡಿ ಸುತ್ತ ಅರ್ಜಿ ಹಿಡಿದುಕೊಂಡು ಸುತ್ತುವುದು, ಪೇಪರ್ ಹಿಡಿದುಕೊಂಡು ಸುತ್ತುವುದು, ಎಲ್ಲೆಲ್ಲೋ ಇರುವ ಸರ್ವೆ ನಂಬರ್ ತರುವುದು, ಕಾರ್ಯದರ್ಶಿಯವರಿಗೆ ಹಣ ಕೊಡುವುದು. ಬೆಳಗಾಂ, ಹುಬ್ಬಳ್ಳಿ, ಮೈಸೂರಿನಿಂದ ಹಿಡಿದು ಎಲ್ಲರೂ ಬೆಂಗಳೂರಿಗೆ ಬಂದು ಅರ್ಜಿ ಹಾಕುವುದು ಏನಿದೆ ಅದು ಬೇಡ. ಈಗ ಕೊಟ್ಟಿರತಕ್ಕದ್ದನ್ನು ತಮ್ಮ ಕಾಲದಲ್ಲಿ ಇನ್ಸ್‌ಪೆಕ್ಷನ್ ಮಾಡಿ ಅದನ್ನು ನಿಲ್ಲಿಸಿ. ಅದಾದ ಮೇಲೆ ಇವತ್ತು ಬೆಂಗಳೂರು ಸುತ್ತ ತಾವು ಕಡಿವಾಣ ಹಾಕುತ್ತಿದ್ದೀರಿ, ಅದನ್ನು ನಾನು ಒಪ್ಪುತ್ತೇನೆ. ಇವತ್ತು ನಿಮ್ಮ

ಜಮೀನು ಏನು ತಾವು ಸರ್ವೆ ಮಾಡಿದ್ದೀರಿ, ಇನ್ನೂ ಸ್ವಲ್ಪ ಮಾಡುವುದು ಇದೆ, ಸರ್ವೆಯರ್ ಇರಲಿಲ್ಲ ಆದ್ದರಿಂದ ಸರ್ವೆ ಮಾಡಿದ್ದೀರಿ, ಇನ್ನೂ ಸ್ವಲ್ಪ ಮಾಡುವುದು ಇದೆ, ಸರ್ವೆಯರ್ ಇರಲಿಲ್ಲ ಆದ್ದರಿಂದ ಸರ್ವೆ ಕೆಲಸದಲ್ಲಿ ವಿಳಂಬವಾಯಿತು. ತಾವು ಕಂದಾಯ ಮಂತ್ರಿಗಳಾದ ಮೇಲೆ ನಾನು ಜಿಲ್ಲಾಧಿಕಾರಿಗಳಿಗೆ ಪ್ರತಿ ದಿವಸ ಸುಮಾರು ಎಕರೆ ಜಮೀನಿನ ಪಟ್ಟಿಯನ್ನು ಕೊಡುತ್ತಿದ್ದೇನೆ. ಇವತ್ತು ತಾವು ಒಂದು ದರವನ್ನು ಗೊತ್ತು ಮಾಡಬೇಕು. 5 ಎಕರೆ ಜಮೀನನ್ನು ಖಾಸಗಿಯವರಿಗೆ ಕೊಡಬೇಕಾದರೆ ಒಂದು ದರವನ್ನು ಗೊತ್ತುಮಾಡಿ. ಬೆಂಗಳೂರಿನ ಹತ್ತಿರ ಇರತಕ್ಕದ್ದು ಒಂದು ಎಕರೆಗೆ 5 ಲಕ್ಷ ರೂಪಾಯಿಗಳು ಎಂದು ಗೊತ್ತು ಮಾಡಿ. ಯಾರೇ ಜಮೀನು ತೆಗೆದುಕೊಳ್ಳಲಿ ಈ ಒಂದು ದರ ಇರಲಿ. ಒಂದು ಇಂಡಸ್ಟ್ರಿ ಮಾಡಬೇಕಾದರೆ ಹಣ ಇಲ್ಲದೆ, ಲಾಭ ಇಲ್ಲದೆ ಯಾರೂ ಇಂಡಸ್ಟ್ರಿ ಮಾಡುವುದಿಲ್ಲ. ಅವನಿಗೆ ಜಮೀನಿನ ದರವನ್ನು ಗೊತ್ತುಮಾಡಿ. ನಾನು ಆ ಕಡೆ ಇದ್ದಾಗ ಮೆಡಿಕಲ್ ಕಾಲೇಜಿಗೆ ಸಪೋರ್ಟ್ ಮಾಡಿದ್ದೆ, ಇಂಜಿನಿಯರಿಂಗ್ ಕಾಲೇಜಿಗೆ ಸಪೋರ್ಟ್ ಮಾಡಿದ್ದೆ. ಇವತ್ತು ನಮಗೆ ಅಲ್ಲೇನಾದರೂ ಸೀಟುಗಳನ್ನು ಕೇಳಿದರೆ ಉಚಿತವಾಗಿ ಯಾರೂ ಕೊಡುವುದಿಲ್ಲ. ಒಂದು ಸೀಟಿಗೆ 5 ಲಕ್ಷ ಇದೆ, ನಿಮಗಾದರೆ 4 ಲಕ್ಷ, ಕೊಡಿ ಅನ್ನುತ್ತಾರೆ. ಅವರಿಗೆ ಏತಕ್ಕೆ ಸುಮ್ಮನೆ ಜಮೀನು ಕೊಡುತ್ತೀರಿ? ವಿದ್ಯಾ ಸಂಸ್ಥೆಗಳಿಗೆ, ಆಸ್ಪತ್ರೆಗಳಿಗೆ ಇಂಥ ಸಂಸ್ಥೆಗಳಿಗೆ ನೀವು ಜಮೀನನ್ನು ಕಡಿಮೆ ಬೆಲೆಗೆ ಕೊಡಿ. ಬೇರೆ ವ್ಯಾಪಾರ ಮಾಡತಕ್ಕವರಿಗೆ ವಿದೇಶದಿಂದ ಹಣ ಬರುತ್ತದೆ, ಅಂಥವರಿಗೆ 40 ಎಕರೆ ಜಮೀನು ಕೊಡುವುದಕ್ಕೆ ಹೋಗಿದ್ದೀರಿ. ಕೊನೆಗೆ ನಿಮ್ಮ ಅಧಿಕಾರಿಗಳು ಇನ್ಸ್‌ಪೆಕ್ಷನ್ ಮಾಡಿದ ಮೇಲೆ 20 ಎಕರೆ ಸಾಕು ಎಂದು ನಿಲ್ಲಿಸಿದರು. ಅದಾದಮೇಲೆ ಜಮೀನು ಕೊಡಬೇಕು, ಜಮೀನು ಕೂಡಬೇಕಾದರೆ ಎಲ್ಲಿ ಕೊಡಬೇಕೆಂದು ಗುರುತಿಸುವುದಕ್ಕೆ ಒಂದು ಕಮಿಟಿ ಮಾಡಿ. ಎಲ್ಲಿ ಕೈಗಾರಿಕೆಗಳು ಬರುತ್ತವೆ, ಎಲ್ಲಿ ಆಸ್ಪತ್ರೆಗಳು ಬರುತ್ತವೆ, ಶಾಲೆಗಳು ಎಲ್ಲಿ ಬರುತ್ತವೆ ಎಂದು ನೋಡಿಕೊಡಿ ನೀವು ಕೆರೆ ಅಂಗಳವನ್ನು ಮಂಜೂರ್‌ಮಾಡುವುದಿಲ್ಲವೆಂದು ಹೇಳುತ್ತೀರಿ. ಕೆರೆ ಅಂಗಳ ಮಂಜೂರ್‌ಮಾಡುವುದಿಲ್ಲವೆಂದು ಹಿಂದಿನ ಸರ್ಕಾರ ಕೂಡ ಹೇಳಿತ್ತು ತಾರೀಖು ಜ್ಞಾಪಕ ಇಲ್ಲ, ಬೆಂಗಳೂರಿನ ಹತ್ತಿರ 5 ಎಕರೆ ಜಮೀನನ್ನು ಕ್ಯಾನ್ಸರ್ ಸಂಸ್ಥೆಗೆ ಕೊಟ್ಟಿದೆ. ಗೋಮಾಳ, ಕೆರೆ ಅಂಗಳ, ಕೆರೆಯನ್ನು ನಾವು ಮಂಜೂರ್‌ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿ 5 ಎಕರೆ ಜಮೀನನ್ನು ಕ್ಯಾನ್ಸರ್ ಸಂಸ್ಥೆಗೆ ಕೊಟ್ಟಿರಿ. ನೀವು ಯಾವ ದರಕ್ಕೆ ಕೊಟ್ಟಿರಿ? ಇವತ್ತು ಒಂದು ಕ್ಯಾನ್ಸರ್ ಸಂಸ್ಥೆ ಮಾಡಬೇಕಾದರೆ ಅದಕ್ಕೆ ಸರ್ಕಾರದ ಹತ್ತಿರ ಹಣ ಇಲ್ಲ, ಸರಿಯಾದ ಮೆಷಿನರಿ ವ್ಯವಸ್ಥೆ ಇಲ್ಲ ಅನ್ನುವಾಗ ನೀವು ಖಾಸಗಿಯವರಿಗೆ 5 ಎಕರೆ ಜಮೀನನ್ನು ಒಂದು ಎಕರೆಗೆ 2 ಕೋಟಿ ರೂಪಾಯಿಗಳಂತೆ 10 ಕೋಟಿ ರೂಪಾಯಿಗಳಿಗೆ ಕೊಟ್ಟು ಆ ಹಣವನ್ನು ನಿಮ್ಮ ಸರ್ಕಾರ ಕ್ಯಾನ್ಸರ್ ಆಸ್ಪತ್ರೆಗೆ ಹಾಕಬಹುದಿತ್ತಲ್ಲ? ಅವರಿಗೆ ಏತಕ್ಕೆ ಕೊಟ್ಟಿರಿ, ಅವರು ಏನು ಮಾಡುತ್ತಾರೆ? ಎರಡು ಫಿಲ್ಲರ್ ಹಾಕುತ್ತಾರೆ. ಒಂದು ಷಡ್ಡನ್ನು ಕಟ್ಟುತ್ತಾರೆ, ನನಗೆ ಲಾಸ್ ಆಯಿತು ಅಂತಾರೆ. ಆಮೇಲೆ ಮಾರಾಟಕ್ಕೆ ಅರ್ಜಿಯನ್ನು ಹಾಕುತ್ತಾರೆ. ಅದನ್ನು ನೀವು ನಿಲ್ಲಿಸಿ. ಅವರು ಒಂದು ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಬೇಕೆಂದರೆ ಆ ಪ್ರಾಜೆಕ್ಟ್ ರಿಪೋರ್ಟ್ 10 ಕೋಟಿ ರೂಪಾಯಿಗಳದ್ದು ಆಗಿದ್ದರೆ, ಆ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ಅವನ ಹತ್ತಿರ ಒಂದು 6-7 ಕೋಟಿ ರೂಪಾಯಿಗಳು ಇದ್ದು, ಇನ್ನೊಂದು 2-3 ಕೋಟಿ ರೂಪಾಯಿಗಳನ್ನು ಅವನು ಬೇರೆ ಕಡೆ ಸಾಲ ಮಾಡಿ ಮಾಡಬಹುದು. ಆದರೆ ಅವರ ಹತ್ತಿರ ಏನೂ ಇಲ್ಲ. ಆ ಡಾಕ್ಟರ್ಸ್ ನನ್ನ ಹತ್ತಿರ ಬಂದಿದ್ದರು. ನಾನು

ಅವರಿಗೆ ಹೇಳಿದೆ. ಏನ್ರಿ ಇದು ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗುತ್ತದೆಯೇ? ಏಕೆ ನೀವು ಈ 5 ಎಕರೆಯನ್ನು ತೆಗೆದುಕೊಂಡ್ರಿ, ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರದ ಕಡೆಯೇ ಇದ್ದರೇ ಅವರು ಅದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಹಾಕುತ್ತಾರೆ, ಎಂದು ಹೇಳಿದ್ದೆ ಅದರಂತೆ ಅವರಿಗೆ ಈಗ ಅಲ್ಲಿ ಅದನ್ನು ನಡೆಸುವುದಕ್ಕೆ ಆಗುತ್ತಿಲ್ಲ. ಸುಮಾರು 5-6 ವರ್ಷಗಳಿಂದ ಅಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಇದ್ದಾರೆ. ಅವರಿಗೆ ಅದನ್ನು ನೀವು ಅಲಾಟ್ ಮಾಡಿದ್ದೀರಿ, ಅಲಾಟ್ ಮಾಡಿದ ಮೇಲೆ ಅದಕ್ಕೆ ತಾವು ಕನ್‌ವರ್‌ಷನ್ ಮಾಡಬೇಕು. ಹೋಗಲಿ ತಹಶೀಲ್ದಾರ್ ಮುಖೇನ ಜಿಲ್ಲಾಧಿಕಾರಿಗಳಿಗೆ ಒಂದು ವರದಿ ಬಂತು, ಆ ವರದಿಯನ್ನು ನಾನು ತಮಗೆ ಕಳುಹಿಸಿದ್ದೇನೆ. ಕಳೆದ 5-6 ವರ್ಷಗಳಿಂದ ಇಲ್ಲಿ ಮನೆಗಳು ಇದ್ದರೂ ಸಹ, ನಾವು ಇದನ್ನು ಕನ್‌ವರ್‌ಷನ್ ಮಾಡಿದ್ದೇವೆ. ಅಲ್ಲಿ ಮನೆಗಳು ಇದ್ದರೂ ಸಹ, ಸರ್ಕಾರ ಕೆರೆ ಅಂಗಳದ ಜಮೀನನ್ನು ಕೊಡದಿದ್ದರೂ ಸಹ ಗ್ರ್ಯಾಂಟ್ ಮಾಡಿ, ಮನೆಗಳು ಇದ್ದರೂ ಸಹ ಕನ್‌ವರ್‌ಷನ್ ಮಾಡಿದ್ದಾರೆ. ಮತ್ತೊಂದು ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದ್ದಂತೆ ಸರ್ಕಾರದ ಜಮೀನು ಸಾವಿರಾರು ಎಕರೆ ನಿಮ್ಮ ಹತ್ತಿರ ಇರುವಾಗ, ನಿಮ್ಮದೇ ಆದಂತಹ ಎರಡು ಸಂಸ್ಥೆಗಳು ಇವೆ. ಒಂದು ಕರ್ನಾಟಕ ಹೌಸಿಂಗ್ ಬೋರ್ಡ್ ಇದೆ. ಇನ್ನೊಂದು ಬಿ.ಡಿ.ಎ. ಇದೆ. ಈ ಎರಡೂ ಸಂಸ್ಥೆಗಳು ಬೇರೆಯವರ ಜಮೀನನ್ನು ಅಕ್ವಿಜೇಶನ್ ಮಾಡತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಿಮ್ಮದೇ ಆದ ಎರಡು ಸಂಸ್ಥೆಗಳು ಇರುವಾಗ, ಆ ಎರಡೂ ಸಂಸ್ಥೆಗಳು ಈಗ ನಷ್ಟದಲ್ಲಿ ನಡೆಯುತ್ತಿವೆ. ಬಿ.ಡಿ.ಎ.ನಲ್ಲಿ ಇರುವ ನೌಕರರಿಗೆ ಸಂಬಳ ಕೊಡಲು ಪ್ರತಿ ತಿಂಗಳು 26-27 ಲಕ್ಷ ರೂಪಾಯಿಗಳು ಆಗುತ್ತದೆ. ತಾವು ಈಗಾಗಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೀರಿ. ಅವರು ಏನೋ ಬಹಳ ಹುಮ್ಮಸ್ಸಿನಿಂದ300 ಕೋಟಿ ರೂಪಾಯಿಗಳನ್ನು ಮಾಡುತ್ತೇನೆಂದು ಹೇಳಿದ್ದಾರೆ. ಅವರು ಏನು ಮಾಡುತ್ತಾರೋ ನೋಡೋಣ. ಅವರಿಗೆ ತಾವು ಜಮೀನನ್ನು ಕೊಡಿ. ಅವರಿಗೆ ಒಂದು ಕಾಸ್ಟ್ ಫಿಕ್ಸ್ ಮಾಡಿ. ಆ ಕೆಲಸವನ್ನು ತಾವು ಮಾಡಬೇಕೆಂದು ನಾನು ಹೇಳುತ್ತಾ, ತಾವು ಈ ಜಮೀನುಗಳ ಒಂದು ಪಟ್ಟಿ ಮಾಡಿ, ಕೆರೆಗಳನ್ನು ಒಂದು ಪಟ್ಟಿ ಮಾಡಿ. ಕೆರೆಗಳ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳು ಒಂದು ಭರವಸೆಯನ್ನು ನನಗೆ ಕೊಟ್ಟಿದ್ದಾರೆ, ನಾನು ಎಲ್ಲಾ ಕಡೆ ಬೇಲಿಯನ್ನು ಹಾಕುತ್ತೇನೆ, ಗಿಡ ನೆಡುತ್ತೇನೆ, ಮತ್ತು ಅರಣ್ಯವನ್ನು ಉಳಿಸುತ್ತೇನೆಂದು ಹೇಳಿದ್ದಾರೆ. ಮತ್ತು ಕಂದಾಯ ಮಂತ್ರಿಗಳು ಹೇಳಿದ್ದಾರೆ ನನ್ನದೇನೂ ಇಲ್ಲ, ನಾನು ಎಲ್ಲಾ ಜಾಗವನ್ನು ಅರಣ್ಯ ಮಂತ್ರಿಗಳಿಗೆ ಕೊಟ್ಟಿದ್ದೇನೆ ಅದರೂ ನಾನು ಆ ಜಾಗವನ್ನು ಉಳಿಸುತ್ತೇನೆಂದು ಹೇಳಿದ್ದಾರೆ. ಇದನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಸಹ ಅಲ್ಲಿಯೇ ಇದ್ದೆ. ಆಗ ಶ್ರೀ ಲಕ್ಷ್ಮಣ್‌ರಾವ್ ಸಮಿತಿ ಅಂತ ಮಾಡಿ, ಬೆಂಗಳೂರು ನಗರದಲ್ಲಿ ಅಂತರ್ಜಲ ಕಡಿಮೆ ಆಗುತ್ತದೆ ಎಂದು ಹೇಳಿ ಆ ಅಂತರ್ಜಲವನ್ನು ಕಾಪಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ಮಾಡಿದ್ದರು. ಹಾಗೆ ಸಮಿತಿಯನ್ನು ಮಾಡಿದ ಉದ್ದೇಶ ಕೆರೆಗಳನ್ನು ಉಳಿಸಬೇಕೆನ್ನುವುದು ಮಾನ್ಯ ಅಧ್ಯಕ್ಷರೇ ತಮಗೂ ಗೊತ್ತಿರುವ ವಿಷಯ. ಆದರೆ ಇವತ್ತು ತಾವು ಏನು ಮಾಡುತ್ತಿದ್ದೀರಾ? ಕೆರೆಗಳನ್ನು ಅವರಿಗೆ ಕೊಟ್ಟಿದ್ದೀರಿ. ಸ್ವಲ್ಪ ಕೆರೆಗಳನ್ನು ನಮಗೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಮಾನ್ಯ ಅರಣ್ಯ ಮಂತ್ರಿಗಳಿಗೆ ನಾನು ಒಂದು ಪತ್ರವನ್ನು ಸಹ ಕೊಟ್ಟಿದ್ದೇನೆ. ಅದರಲ್ಲಿ ಏನು ಹೇಳಿದ್ದೇನೆ ಅಂದರೆ ಆ ಜಾಗ ಒತ್ತುವರಿಯಾಗುತ್ತಿದೆ, ತಾವು ಇದನ್ನು ಉಳಿಸಬೇಕೆಂದು.....

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ ಸುಮಾರು 81 ಕೆರೆಗಳು ಬಂದಿರುವುದೇನೋ ನಿಜ. ಅದರಲ್ಲಿ 2-3 ಕೆರೆಗಳನ್ನು ಬಹಳ ಸುಂದರವಾಗಿ ಮಾಡಿದ್ದಾರೆ. ಮಾನ್ಯ ರಾಜಣ್ಣನವರು ಹೇಳುತ್ತಿದ್ದರು ಕಸವನ್ನು ರಸ ಮಾಡಿ ಅಂತ. ಕಸವನ್ನು ರಸ ಮಾಡುವುದಕ್ಕೆ ನಾವು ಕೆಲಸ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ಶ್ರೀ ಎಂ. ಶ್ರೀನಿವಾಸ್ : ಈಗ ತಾವು ಕಸವನ್ನು ರಸವೋ ಏನೋ ಮಾಡಿಕೊಳ್ಳಿ. ನಾನು ಹೇಳತಕ್ಕಂಥಾದ್ದು ಇಷ್ಟೇ. ಸರ್ಕಾರದ ಸ್ವತ್ತನ್ನು ಉಳಿಸಬೇಕು ಎನ್ನುವುದು ನನ್ನ ವಾದ. ನಾನು ಅಲ್ಲಿ ಕುಳಿತಿದ್ದಾಗ ಅದೇ ವಾದ ಇಲ್ಲಿ ಕುಳಿತಿರುವಾಗಲೂ ಅದೇ ವಾದ. ನಾನು ಎಲ್ಲಿ ಕುಳಿತರೂ ಅದೇ ವಾದ. ಇದರ ಬಗ್ಗೆ ಮಾನ್ಯ ಅರಣ್ಯ ಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಕಂದಾಯ ಮಂತ್ರಿಗಳು ನೇರವಾಗಿ ಮಾತನಾಡುತ್ತಾರೆ. ನಾನು ಒಪ್ಪಿಕೊಳ್ಳುತ್ತೇನೆ. ಅವರು ಸುಮಾರು 8 ಕೋಟಿ ರೂಪಾಯಿಗಳ ಜಮೀನನ್ನು ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ನಾನು ಈ ಸದನದ ಮುಖಾಂತರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಅಂತಹ ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಸರ್ಕಾರದ ಜಮೀನನ್ನು ಒಬ್ಬನೂ ಕಬಳಿಸಿ, ಸರ್ಕಾರದ ಜಮೀನನ್ನು ಲೇ ಔಟ್ ಮಾಡಿ ಸರ್ಕಾರದ ಜಮೀನಿಗೆ 35 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡಿದ್ದಾನೆ. ಅವರು ಅದನ್ನು ಎಷ್ಟು ಧೈರ್ಯವಾಗಿ ತೆಗೆದುಕೊಂಡರು ಅಂದರೆ, ನಾನು ಈ ಸದನದಲ್ಲಿ ತಮಗೆ ಹೇಳಬೇಕೆಂದರೆ ಸರ್ಕಾರವನ್ನು ನಂಬದೇ ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಹಾಕಿದೆ. ನನ್ನ ಅರ್ಜಿ ಕೋರ್ಟಿನಲ್ಲಿ ರಿಜೆಕ್ಟ್ ಆಯಿತು. ಅಲ್ಲಿಯೂ ನನಗೆ ಸಹಾಯವಾಗಲಿಲ್ಲ. ಕೊನೆಗೆ ಮಾನ್ಯ ಮಂತ್ರಿಗಳು ಪ್ರಾಮಾಣಿಕವಾಗಿ ಆ ಕೆಲಸವನ್ನು ಮಾಡಿದರು ಅದಕ್ಕೆ ನಾನು ಅಭಿನಂದನೆಗಳನ್ನು ಹೇಳಿದ್ದು. ಅದನ್ನು ತಾವೆಲ್ಲರೂ ಮಾಡಿದರೆ ಒಳ್ಳೆಯದು. ತಾವು ಈ ಕೆರೆಗಳ ಅಭಿವೃದ್ಧಿ ಬಗ್ಗೆ ಹೇಳಿದ್ದೀರಿ. ಒಂದೊಂದು ಕೆರೆ ನನಗೆ ಬರಲಿಲ್ಲ ನಿನಗೆ ಬರಲಿಲ್ಲ ಅಂತ ಅಲ್ಲ. ಅದು ತಮಗೆ ಬರಲಿ ನಿಮಗೆ ಬರಲಿ ಯಾರಿಗೇ ಬರಲಿ, ಶಾಸಕರನ್ನು ತಾವು ಕರೆದು ಒಂದು ಸಭೆ ಮಾಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಆಗಿರಬಹುದು. ಮೊದಲು ಸರ್ಕಾರ ಹೇಗೆ ಇತ್ತು ಗೊತ್ತೇ? ಶಾಸಕರ ಕೆಲಸ ಆಗಬೇಕಾದರೆ, ಪ್ರತಿ ಮೂರು ತಿಂಗಳಿಗೆ ಒಂದು ಸಾರಿ ಸಭೆ ಕರೆದು, ನಾವು ಶಿಫಾರಸ್ಸು ಮಾಡಿದಂತಹ ಕೆಲಸ ಆಗದಿದ್ದರೆ, ಅದು ಕಂದಾಯ ಇಲಾಖೆ ಇರಬಹುದು, ಅರಣ್ಯ ಇಲಾಖೆ ಇರಬಹುದು, ಲೋಕೋಪಯೋಗಿ ಇಲಾಖೆಯ ಕೆಲಸ ಇರಬಹುದು, ಸಾರಿಗೆ ಇಲಾಖೆಯ ಕೆಲಸ ಇರಬಹುದು, ಕೃಷಿ ಇಲಾಖೆಯ ಕೆಲಸ ಇರಬಹುದು, ಯಾವುದೇ ಇಲಾಖೆಯ ಕೆಲಸ ಇರಬಹುದು, ಆ ಕೆಲಸ ಆಗದಿದ್ದರೆ, ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಸಭೆಯನ್ನು ಕರೆಯುತ್ತಿದ್ದರು. ಅವರು ಆ ಸಭೆಯಲ್ಲಿ ಶಾಸಕರನ್ನು ಕರೆದು ನಿಮ್ಮ ಕಷ್ಟಗಳು ಏನು? ಯಾವ ಜಮೀನಿನಲ್ಲಿ ನಿಮಗೆ ತೊಂದರೆಯಾಗುತ್ತಿದೆ, ಕಾರ್ಪೋರೇಷನ್‌ನಲ್ಲಿ ಯಾವ ಕೆಲಸ ಆಗುತ್ತಿಲ್ಲ, ಲೋಕೋಪಯೋಗಿ ಇಲಾಖೆಯಲ್ಲಿ ಯಾವ ಕೆಲಸ ಆಗುತ್ತಿಲ್ಲ, ಶಾಸಕರ ಸ್ಥಿತಿ ಏನು ಅಂತ ಕೇಳುತ್ತಿದ್ದರು. ಆದರೆ ಕಳೆದ ಒಂದೊವರೆ ವರ್ಷಗಳಿಂದ ಈ ರೀತಿಯ ಯಾವುದೇ ಕೆಲಸ ಆಗುತ್ತಿಲ್ಲ. ಈ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರವನ್ನು ಸಹ ಬರೆದೆ. ನಾನು

ಪತ್ರವನ್ನು ಬರೆದು ಕೊಟ್ಟಾಗ ಮಾನ್ಯ ಮುಖ್ಯಮಂತ್ರಿಗಳು ಹೋಗೋಣ ಎಂದು ಹೇಳಿದರು, ಕೊನೆಗೂ ಇದುವರೆಗೂ ಆ ಪ್ರಯತ್ನ ಆಗಲಿಲ್ಲ. ಅದಕ್ಕೆ ಇವತ್ತು ನಿಮ್ಮ ಸರ್ಕಾರದಲ್ಲಿ ಕೆಲಸಗಳು ಹಿಂದುಳಿದಿರತಕ್ಕಂಥಾದ್ದು. ಇನ್ನು ಮುಂದಾದರೂ ತಾವು ಈ ಕಲಸವನ್ನು ಮಾಡಿದರೆ ತಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದು ನಮಗೆ ಅಲ್ಲ. ಅದನ್ನು ತಾವು ಮಾಡಿದರೆ ಇಲಾಖೆಯ ಅಧಿಕಾರಿಗಳಿಗೆ ಭಯ ಇರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬರುತ್ತಿದ್ದಾರೆ, ಸಂಬಂಧಪಟ್ಟ ಮಂತ್ರಿಗಳು ಬರುತ್ತಿದ್ದಾರೆ, ವಾರಕ್ಕೆ ಒಂದು ದಿವಸವೋ ತಿಂಗಳಿಗೆ ಒಂದು ದಿವಸವೋ, ಆ ಕಡೆ ಪ್ರವಾಸ ಬರುತ್ತಿದ್ದಾರೆ, ಇಂತಹ ಏರಿಯಾಗೆ ಬರುತ್ತಿದ್ದಾರೆ ಅಂದರೆ ಆ ಏರಿಯಾದಲ್ಲಿ ಇರುವ ರಸ್ತೆ ರಿಪೇರಿ ಆಗಿರುತ್ತದೆ, ಲೈಟ್ ಇಲ್ಲದಿದ್ದರೆ ಆ ಲೈಟ್ ರಿಪೇರಿ ಆಗುತ್ತದೆ. ಜಮೀನು ಯಾರಾದರೂ ಕಬಳಿಸಿದ್ದರೆ ಅವನು ಅವತ್ತು ಆ ಕಾಗದವನ್ನು ಹರಿದು ಹಾಕುತ್ತಾನೆ. ಆದರೆ ಈ ಕೆಲಸವನ್ನು ತಾವು ಕಳೆದ ಒಂದೂವರೆ ವರ್ಷಗಳಿಂದ ಮಾಡಿಲ್ಲ. ನಮ್ಮ ಸಲಹೆಗಳನ್ನು ತಾವು ಸ್ವಲ್ಪ ಕೇಳಿಕೊಂಡರೆ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಸರ್ಕಾರ ನಾವು ನಡೆಸುತ್ತಿಲ್ಲ. ನೀವು ನಡೆಸುತ್ತಿರುವುದು. ವಿರೋಧ ಪಕ್ಷದವರು ಹೇಳುವುದು ಹೇಳುತ್ತಾರೆ ನಾವು ಮಾಡುವುದನ್ನು ಮಾಡೋಣ ಅಂದರೆ ಅದು ತಮ್ಮ ಇಷ್ಟ. ಇನ್ನೂ ಬೇಕಾದಷ್ಟು ಜಮೀನುಗಳ ಬಗ್ಗೆ ಒಂದು ಪಟ್ಟಿಯನ್ನು ನಾನು ತಮಗೆ ಕೊಡುತ್ತಿದ್ದೇನೆ. ನಾವು ಒಂದು ಪಟ್ಟಿಯನ್ನು ಕೊಟ್ಟ ಮೇಲೆ ಅದನ್ನು ಮುಟ್ಟುಗೋಲು ಹಾಕಿಕೊಳ್ಳಿ. ಇಲ್ಲದಿದ್ದರೆ ಏನಾಗುತ್ತದೆ ನಾವು ನಮ್ಮ ಕ್ಷೇತ್ರಗಳಿಗೆ ಹೋದಾಗ ನಮಗೆ ಗೌರವ ಬರುವುದಿಲ್ಲ. ಈಗ ನಾನು ಈ ವಿಷಯವನ್ನು ಎರಡು ಸಾರಿ ಪ್ರಸ್ತಾಪ ಮಾಡಿದೆ ಎತಕ್ಕೆ ಪ್ರಸ್ತಾಪ ಮಾಡಿದೆ? ಮತ್ತೆ ನಾನು ಈಗ ತಮ್ಮನ್ನು ಎರಡು ಸಾರಿ ಅಭಿನಂದನೆಗಳನ್ನು ಸಲ್ಲಿಸಿದೆ ಏತಕ್ಕೆ ಸಲ್ಲಿಸಿದೆ? ಸರ್ಕಾರದ ಕೋಟ್ಯಾಂತರ ರೂಪಾಯಿಗಳನ್ನು ಉಳಿಸಿದ್ದೀರಿ. ನೀವು ಈಗ ಆರಾಧನಾ ಸಮಿತಿಗಳನ್ನು ಯಾವಾಗ ಮಾಡುತ್ತೀರೋ ಮಾಡಿಕೊಳ್ಳಿ. ನಾವು ಹೇಳಿ ಹೇಳಿ ಸಾಕಾಯಿತು, ಅದು ನಿಮಗೆ ಸೇರಿದ್ದು ನೀವು ಯಾವಾಗ ಮಾಡುತ್ತೀರೋ ಮಾಡಿ. ತಾವು ಇನ್ನೊಂದು ಸಲ ಚುನಾವಣೆ ಆದ ಮೇಲೆ ಮಾಡುತ್ತೀರೋ ಏನೋ ಗೊತ್ತಿಲ್ಲ. ಇಲ್ಲಾ ವಿರೋಧಪಕ್ಷದಲ್ಲಿ ಶ್ರೀ ಶ್ರೀನಿವಾಸ್ ಅಂತಹವರು ಜೋರಾಗಿ ಒಂದು 5 ಸಾವಿರ ಸೈಟ್‌ಗಳನ್ನು ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ ಅದಕ್ಕೆ ನಿಧಾನ ಮಾಡೋಣ ಎಂದು ಮಾಡುತ್ತಿದ್ದೀರೋ ಏನೋ ಎನ್ನುವ ಒಂದು ಸಂಶಯ ನನಗೆ ಬರುತ್ತದೆ. ಅದು ಯಾವಾಗ ಮಾಡುತ್ತೀರೋ ನನಗೆ ಗೊತ್ತಿಲ್ಲ. ಏಕೆಂದರೆ ನಾನು ಮಾಡಿ ತೋರಿಸಿರತಕ್ಕಂಥವನು. ಒಂದು ಕಾಲದಲ್ಲಿ ಬಿ.ಡಿ.ಎ. ಪಾಪರ್ ಆಗಿತ್ತು. ಅವತ್ತು ಹೇಳಿದರು ಈ ಸಂಸ್ಥೆಗೆ ನೀವು ಹೋದರೆ ಏನಾದರೂ ಉದ್ದಾರ ಮಾಡುತ್ತೀರಾ ಶ್ರೀನಿವಾಸ್ ಅಂತ, ಉದ್ದಾರ ಮಾಡಿದ್ದೇವೆ. ಹೇಗೆ ಮಾಡಿದ್ದೇವೆ, ಈ ದೇಶದಲ್ಲಿ ಯೂರೂ ಮಾಡಿಲ್ಲ. ಅವತ್ತು ಒಂದು ಎಕರೆಗೆ ಒಂದು ಸೈಟನ್ನು ರೈತರಿಗೆ ಕೊಡಬೇಕೆನ್ನುವ ಘೋಷಣೆಯನ್ನು ಮಾಡಿದ್ದೆವು. ಆಗ ಬಿ.ಡಿ.ಎ.ನಲ್ಲಿ ಲಾಭ ಬರಬೇಕಾದರೆ ಅದು ಒಂದೇ ಕಾರಣ. ಸುಮ್ಮನೇ ತಾವು ನಾನು ರೈತನ ಮಗ ಅಂತ ಬೆನ್ನು ತಟ್ಟಿಕೊಳ್ಳುತ್ತೀರಿ. ಯಾವಾಗ ಚುನಾವಣೆಯಲ್ಲಿ, ಮಾಡಿ ತೋರಿಸಿದವರು ಯಾರೂ ಇಲ್ಲ. ನಾನು ಅವತ್ತು ಮಾಡಿ ತೋರಿಸಿದ್ದೇನೆ. ಅವತ್ತು ಅಂದಿನ ಮುಖ್ಯಮಂತ್ರಿಗಳು ರೈತರಿಗೆ ಸಪೋರ್ಟ್ ಕೊಟ್ಟರು. ಅವರು ಯಾವ ಪಕ್ಷಬೇಧವನ್ನು ಸಹ ಮಾಡುತ್ತಿರಲಿಲ್ಲ. ವಿರೋಧಪಕ್ಷದವರೇ ಬರಲಿ, ಯಾರೇ

ಬರಲಿ ರಾಮಕೃಷ್ಣ ಹೆಗಡೆಯವರು ಬೆನ್ನು ತಟ್ಟುತ್ತಿದ್ದರು. ಯಾವ ರೀತಿ ಅವರು ಬೆನ್ನು ತಟ್ಟುತ್ತಿದ್ದರು ಅಂದರೆ ನಿಮ್ಮ ಕ್ಯಾಬಿನೇಟ್‌ನಲ್ಲಿ ಕೊಡುವುದಕ್ಕೆ ಆಗುವುದಿಲ್ಲ ಅಂತ ತೀರ್ಮಾನ ಆಗಿತ್ತು. ಏಕೆ ಕೊಡಬೇಕು, ರೇಟ್ ಕೊಡುತ್ತೇವೆ ರೈತರಿಗೆ ಎನ್ನುವ ಮಾತನ್ನು ಹೇಳಿದರು. ಕೊನೆಗೆ ನಾವು ಆ ಜಮೀನಿನ ಬೆಲೆ...

ಶ್ರೀ ಎಂ. ಪಿ. ಪ್ರಕಾಶ್ : ಆಗ ತಾವು ನಮ್ಮ ಪಕ್ಷದ ಶಾಸಕರು ಆಗಿದ್ದಿರಿ, ಮತ್ತು ಬಿ.ಡಿ.ಎ. ಸದಸ್ಯರು ಸಹ ಆಗಿದ್ದಿರಿ. ಸರ್ಕಾರದ ಮಟ್ಟದಲ್ಲಿ ನಾವು ಈ ಒಂದು ತೀರ್ಮಾನವನ್ನು ಮಾಡುವಾಗ ಯಾರ ವಿರೋಧವೂ ಬರಲಿಲ್ಲ. ಮತ್ತು ಜೆಡಿಎಲ್‌ಪಿ ಯಲ್ಲಿ ಸಂಪೂರ್ಣವಾಗಿ ಇದಕ್ಕೆ ಒಪ್ಪಿಗೆ ಕೊಟ್ಟರು. ನಾವು ಅದಕ್ಕೆ ಆಜ್ಞೆ ಮಾಡಿದೆ. ನಾನು ಆ ಕಾಲದಲ್ಲಿ ಬಿ.ಡಿ.ಎ. ಮಂತ್ರಿಯಾಗಿದ್ದೆ.

ಶ್ರೀ ಎಂ. ಶ್ರೀನಿವಾಸ್ : ನಾನು ತಮ್ಮನ್ನು ಟೀಕೆ ಮಾಡಲಿಲ್ಲ. ತಾವು ಬಿಡಿಎ ಮಂತ್ರಿಯಾಗಿದ್ದಾಗಲೂ ಸಹ ತಾವು ಸ್ವಲ್ಪ ತೊಂದರೆ ಕೊಟ್ಟಿದ್ದೀರಿ. ನಾನು ಹೇಳುತ್ತೇನೆ. ಈಗ ತಾವು ಗ್ರಾಮೀಣ ಅಭಿವೃದ್ಧಿ ಮಂತ್ರಿಯಾಗಿ ಎಷ್ಟು ತೊಂದರೆ ಕೊಟ್ಟಿದ್ದೀರಿ ಗೊತ್ತಾ ಅದನ್ನು ನಾನು ಕೊನೆಯಲ್ಲಿ ಹೇಳುತ್ತೇನೆ. ತಾವು ಯಾವ ಖಾತೆಯಲ್ಲಿದ್ದರೂ ತೊಂದರೆಯೇ. ಮಂತ್ರಿಗಳಲ್ಲಿ ನಾನು ಕನ್‌ವರ್‌ಷನ್ ಮಾಡಿಕೊಡಿ ಎಂದು ಹೇಳುವುದಿಲ್ಲ ಮತ್ತು ಬರುವುದೂ ಇಲ್ಲ. ನಿಮ್ಮ ಕನ್‌ವರ್‌ಷನ್ ನನಗೆ ಬೇಕಾಗಿಲ್ಲ. ತಮ್ಮ ಕಡೆಯವರಿಗೆ ಯಾರಿಗಾರೂ ಬೇಕಾಗಿದ್ದರೆ ತಾವು ಮಾಡಿ ಕೊಡಬಹುದು ಅದಕ್ಕೆ ನಾನು ಏನು ಮಾಡುವುದಕ್ಕೆ ಆಗುತ್ತದೆ.

5.10 ಪಿ.ಎಂ.

ಶ್ರೀ ಸಿ. ಭೈರೇಗೌಡ : ಶ್ರೀನಿವಾಸ್ ಅವರನ್ನು ಬೆಂಗಳೂರು ಸುತ್ತಮುತ್ತ ಇರತಕ್ಕ ಜನ ಬಿ.ಡಿ.ಎ. ಕಿಂಗ್ ಎಂದು ಕರೆಯುತ್ತಾರೆ. ಇದರ ಗುಟ್ಟು ಏನೋ ನನಗಂತೂ ಕೂಡ ಗೊತ್ತಿಲ್ಲ. ಬಹಳ ಜನ ನನಗೆ ಬಂದು ಹೇಳಿದ್ದಾರೆ ಅವರನ್ನು ಶ್ರೀನಿವಾಸ್ ಎಂದು ಹೇಳುವುದಿಲ್ಲ, ಬಿ.ಡಿ.ಎ. ಕಿಂಗ್ ಎಂದು ಕರೆಯುತ್ತಾರೆ ಎಂದು.

ಶ್ರೀ ಎಂ. ಶ್ರೀನಿವಾಸ್ : ಏಕೆ ಎಂಬುದನ್ನು ನಾನು ಹೇಳುತ್ತೇನೆ, ಸಭಾಧ್ಯಕ್ಷರೆ, ಬಿ.ಡಿ.ಎ.ನಲ್ಲಿ ಕೆಲಸ ಆಗದಿದ್ದಾಗ ತಾವು ಒಂದು ದಿವಸ ನನ್ನ ಮೇಲೆ ರೇಗಿದಿರಿ, ಯಾವುದೋ ಕೆಲಸಕ್ಕೆ ಬಂದಿರಿ, ಎಂಥ ಮೆಂಬರ್‌ಗಳು ಎಂದು ರೇಗಿದಿರಿ. ನಾನಿದ್ದಾಗ ಸಭಾಧ್ಯಕ್ಷರೆ, ಒಂದು ಮಾತನ್ನು ಹೇಳಿದ್ದೆ. ಹೊಲ ಉಳುವ ರೈತರು, ಅವರು ಪಂಚೆ ಕಟ್ಟಿಕೊಂಡು, ನಿಕ್ಕರ್ ಹಾಕಿಕೊಂಡು ಹೊಲ ಉಳುವ ರೈತರನ್ನು ಕೋ-ಆಪರೇಟಿವ್ ಸೊಸೈಟಿಯವರ ತರಹ ಕಾರು ಇಟ್ಟುಕೊಂಡು ಸಫಾರಿ ಹಾಕಬೇಕು ಎಂದು ಮಾಡುವುದಕ್ಕೆ ಹೊರಟವನು ನಾನು, ಬೆಂಗಳೂರಿನವರು ಅದಕ್ಕೇ ಇವತ್ತು ಬಿ.ಡಿ.ಎ. ಶ್ರೀನಿವಾಸ್ ಎಂದು ಕರೆಯುವುದು. ಏಕೆ ಹೇಳಿ. ಅವರಿಗೆ ಎರಡು ಎಕರೆ ಜಮೀನು ಇದ್ದರೆ ಅವರಿಗೆ ಬಿಡಿಸಿಕೊಡುತ್ತಿದ್ದೆ. ಎಕರೆಗೆ ಒಂದು ಸೈಟನ್ನು ಕಾನೂನುಬದ್ಧವಾಗಿ ಕೊಡುವುದಕ್ಕಾಗದಿದ್ದರೂ ಮುಖ್ಯಮಂತ್ರಿಗಳ ಕೈಯಲ್ಲಿ ಕೊಡಿಸುವ ಹಾಗೆ ಮಾಡಿಸಿದೆ.

ಶ್ರೀ ಸಿದ್ಧರಾಮಯ್ಯ : ಯಾವಾಗ?

ಶ್ರೀ ಎಂ. ಶ್ರೀನಿವಾಸ್ : ಅಲ್ಲಿದ್ದಾಗ. ಅಲ್ಲಿದ್ದಾಗಲೇ ಮುಖ್ಯಮಂತ್ರಿಗಳಿಗೆ ಹೇಳಿ ಇನ್ನೊಂದು ಕಾನೂನು ತರುತ್ತಾ ಇದ್ದೆ.

ಶ್ರೀ ಸಿದ್ದರಾಮಯ್ಯ : ನಮ್ಮ ಜೊತೆಯಲ್ಲಿದ್ದಾಗ.

ಶ್ರೀ ಎಂ. ಶ್ರೀನಿವಾಸ್ : ಆಗ ನಿಮ್ಮ ಜೊತೆಯಲ್ಲಿಲ್ಲದೆ ಇನ್ನಾರ ಜೊತೆ ಇದ್ದೆ? ಆಗ ಸರ್ಕಾರ ನಡೆಸುತ್ತಿದ್ದೆವು. ಆ ಕಡೆ ಇದ್ದಾಗ 1983 ರಿಂದ 89ರವರೆಗೆ ಸರ್ಕಾರ ನಡೆಸಿ ಒಳ್ಳೆಯ ಹೆಸರನ್ನು ತೆಗೆದುಕೊಂಡೆವು.

ಶ್ರೀ ಸಿದ್ಧರಾಮಯ್ಯ : ನಾವೇ ಮಾಡಿದ್ದು.

ಶ್ರೀ ಎಂ. ಶ್ರೀನಿವಾಸ್ : ನಾನು ಮಾಡಿದ್ದು ಎಂದು ಹೇಳಿಕೊಳ್ಳುತ್ತಾ ಇರುವುದು, ನೀವು ಮಾಡಿದ್ದುದೆಂದು ಹೇಳುತ್ತಿಲ್ಲ. ಆದರೆ ಹೇಳುತ್ತೇನೆ ಕೇಳಿ. ಸಿದ್ಧರಾಮಯ್ಯನವರೆ, ಆವತ್ತು ಆ ಭಾಗದಲ್ಲಿ ನಿಮ್ಮ ಲೀಡರ್ ಆಗಿದ್ದರಲ್ಲ ಹೆಗಡೆಯವರು ಅವರು ಶಾಸಕರು ಹೇಳುವುದನ್ನು ಅರ್ಧ ಗಂಟೆ ಕುಳಿತುಕೊಂಡು ಕೇಳುತ್ತಿದ್ದರು. ಕಾಂಗ್ರೆಸ್‌ನವರು ಬರಲಿ ಯಾರೇ ಬರಲಿ ಹೆಗಡೆಯವರು ಅರ್ಧ ಗಂಟೆ ಕುಳಿತುಕೊಂಡು ನಿಮ್ಮ ಕಷ್ಟ ಏನು ಎಂದು ಕೇಳುತ್ತಿದ್ದರು. ನೀವೆಲ್ಲಿ ಕೇಳುತ್ತೀರಿ? ನೀವು ಕೇಳುತ್ತೀರಿ ನಾಲ್ಕೈದು ಜನರನ್ನು. ಬೇರೆ ಯಾರದೂ ಕೇಳುವುದಿಲ್ಲ. ಮಾಡಿರುವುದನ್ನು ಹೇಳುತ್ತೇನೆ ನಾನು. ಈ ಸದನದಲ್ಲಿ ಹೇಳಬೇಕಾದರೆ ನನ್ನ ರಾಜಕೀಯ ಗುರುಗಳು ರಾಮಕೃಷ್ಣ ಹೆಗಡೆಯವರು. ಅವರೇ ನನ್ನನ್ನು ರಾಜಕೀಯದಲ್ಲಿ ಮುಂದೆ ತಂದಿದ್ದು ತಮಗೆ ಹೇಳಬೇಕಾದರೆ ಅವರು ಮತ್ತು ಚಂದ್ರಶೇಖರ್. ಅವರು ಮತ್ತು ಎಂ. ಚಂದ್ರಶೇಖರ್ ಅವರಿಬ್ಬರೇ ನನ್ನ ರಾಜಕೀಯ ಗುರುಗಳು.

ಶ್ರೀ ಸಿದ್ದರಾಮಯ್ಯ : ಮತ್ತೆ ಅವರಿಬ್ಬರನ್ನು ಬಿಟ್ಟುಬಿಟ್ಟಿರಲ್ಲ.

ಶ್ರೀ ಎಂ. ಶ್ರೀನಿವಾಸ್ : ಅದನ್ನು ಹೇಳಬೇಕೆಂದರೆ ಇಲ್ಲಲ್ಲ. ಆಚೆ ಹೇಳೋಣ ಬನ್ನಿ. ನೀವೇನು ತಿಳಿದುಕೊಂಡಿರಿ ನಮ್ಮಿಂದ ಶ್ರೀನಿವಾಸ್ ಎಂದು.

ಅಧ್ಯಕ್ಷರು : ನೀವು ರಿಯಲ್ ಬಿ.ಜೆ.ಪಿ. ಎಂದು ತಿಳಿದುಕೊಂಡು ಕನ್‌ಫ್ಯೂಸ್ ಮಾಡಿಕೊಂಡು ಹೇಳುತ್ತಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ : ನನ್ನ ಕೋಳಿ ಕೂಗದಿದ್ದರೆ ಬೆಳಕೇ ಆಗುವುದಿಲ್ಲ ಅಂದರಂತೆ. ನನ್ನ ವಿಚಾರದಲ್ಲಿ ಸಿಂಧ್ಯಾ ಅವರಿಗೆ ಚೆನ್ನಾಗಿ ಗೊತ್ತು. ನೀವು ಏನು ತಿಳಿದುಕೊಂಡಿರಿ? ಕೋಳಿ ಕೂಗಿದರೆ ಮಾತ್ರ ಬೆಳಕಾಗುತ್ತದೆ ಎಂದು ತಿಳಿದುಕೊಂಡಿರಿ. ನಾವಿಲ್ಲದಿದ್ದರೆ ಶ್ರೀನಿವಾಸ್ ರಾಜಕೀಯದಲ್ಲಿ ಬರುವುದಿಲ್ಲ ಅಂದುಕೊಂಡಿದ್ದಿರಿ. ಏನಾಯಿತು ಸ್ವಾಮಿ? ಏನಾಯಿತು ಹೇಳಿ. ನಾನು ಗೆದ್ದ. ನಗರಸಭೆಗಳಲ್ಲಿ ಮೂರು ಬಿ.ಜೆ.ಪಿ.ಗೆ ನಾನು ತೆಗೆದುಕೊಂಡೆ. ನಿಮ್ಮದು ಯಾರದೂ ಬರಲಿಲ್ಲ. ಮೂರು ನಗರಸಭೆ ಛೇರ್ಮನ್ ಬಿ.ಜೆ.ಪಿ. ಉತ್ತರಹಳ್ಳಿ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ. ಕೆಂಗೇರಿ ಪುರಸಭೆ ಬಿ.ಜೆ.ಪಿ. 77 ಹೌದಾ ಸ್ವಾಮಿ? ಲೋಕಸಭಾ ಚುನಾವಣೆಯಲ್ಲಿ ಉತ್ತರಹಳ್ಳಿ ಕ್ಷೇತ್ರ ಲೀಡ್ ಗೊತ್ತಾಯಿತಾ ಶ್ರೀನಿವಾಸ್‌ದು ಏನು ಎಂದು.

ಶ್ರೀ ಜೆ.ಹೆಚ್. ಪಟೇಲ್ : ಅವರ ಅರ್ಥ ಬಿ.ಜೆ.ಪಿ.ಗೆ ಏನಾದರೂ ಮರ್ಯಾದೆ ಬಂದಿದ್ದರೆ ಅದು ನಿಮ್ಮಿಂದ ಬಂದಿದೆ ಎಂದು ಅಲ್ಲವೆ?

ಶ್ರೀ ಅರಗ ಜ್ಞಾನೇಂದ್ರ : ಅಲ್ಲಿ ದಳದ ಪರಿಸ್ಥಿತಿ ಏನು ಆಗಿದೆ ಎಂದು ಹೇಳುತ್ತಿದ್ದಾರೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಬಿ.ಜೆ.ಪಿ. ಯಲ್ಲಿ ವ್ಯಕ್ತಿ ಮುಖ್ಯ ಅಲ್ಲ. ವ್ಯಕ್ತಿಗೆ ಯಾವತ್ತೂ ಪೂಜೆ ಮಾಡುವುದಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಇವತ್ತು ಯಡಿಯೂರಪ್ಪನವರು ನನ್ನ ಗುರುಗಳು.

ಅಧ್ಯಕ್ಷರು : ಶ್ರೀನಿವಾಸ್ ಅವರು ಬಿ.ಜೆ.ಪಿ.ಗೆ ಡೆಪ್ಯುಟೇಷನ್ ಹೋದಮೇಲೆ ಆ ಪ್ರದೇಶದಲ್ಲಿ ಬಿ.ಜೆ.ಪಿ.ಗೆ ಭವಿಷ್ಯ ಚೆನ್ನಾಗಾಯಿತು ಎಂದು ಅವರು ಹೇಳಿದ್ದು. ಅದೇ ಅಲ್ಲವೊ ನೀವು ಹೇಳಿದ್ದು?

ಶ್ರೀ ಎಂ. ಶ್ರೀನಿವಾಸ್ : ಹಾಗಲ್ಲ. ನೀವು (ಆಡಳಿತ ಪಕ್ಷದವರನ್ನು ಕುರಿತು) ರಾತ್ರಿ ಹಗಲು ದುಡಿಸಿಕೊಂಡರೂ ಹಳೇ ಬಾವಿಯಲ್ಲಿ ಕೈಬಿಡುವಂಥ ಜನ. ಆದರೆ ಯಡಿಯೂರಪ್ಪನವರು ನನ್ನ ಕೈ ಹಿಡಿದರು. ಅದಕ್ಕೆ ಸಂತೋಷಪಡಬೇಕು. ಯಡಿಯೂರಪ್ಪನವರು ನನಗೆ ಕೈ ಹಿಡಿದರು. ತಿಳಿದುಕೊಳ್ಳಿ. ನಾನು ಏನು ಎನ್ನುವುದು ಅವರಿಗೆ ಗೊತ್ತಾಯಿತು.

ಶ್ರೀ ಜೆ. ಹೆಚ್. ಪಟೇಲ್ : ಹೆಗಡೆಯವರು ನನ್ನ ಗುರುಗಳು ಎಂದು ಹೇಳಿದಿರಿ. ಅವರನ್ನು ಏತಕ್ಕೆ ಕೈಬಿಟ್ಟಿರಿ?

ಶ್ರೀ ಎಂ. ಶ್ರೀನಿವಾಸ್ : ಇಲ್ಲವಲ್ಲ.

ಶ್ರೀ ಜೆ. ಹೆಚ್. ಪಟೇಲ್ : ನಾನು ಹೇಳಿದ್ದಲ್ಲ, ನೀವೇ ಹೇಳಿದ್ದುದು ಹೆಗಡೆಯವರು ನನ್ನ ಗುರುಗಳು ಎಂದು. 1989ರವರೆಗೂ ಇದ್ದೆವು ಎಂದು ಹೇಳಿದಿರಿ. ಆಮೇಲೆ ಸರ್ಕಾರ ಹೋಯಿತು ಎಂದು ಹೇಳಿದಿರಿ. ನೀವು ಹೇಳುವಾಗ ಒಂದಕ್ಕೊಂದು ಜೋಡಿಸುವುದಕ್ಕೆ ನೋಡಿದಿರಿ. ನೀವು ಮಾಡಿದ ಕೆಲಸ ಒಂದೊಂದನ್ನೇ ಹೇಳಿದರೆ ಗೊತ್ತಾಗುತ್ತದೆ, ಅದು ಹೇಗೆ ಜೋಡಿಸುತ್ತೀರೋ ಜೋಡಿಸಿ. ಅಧ್ಯಕ್ಷರೇ, ಅದು ತಮಗೇನಾದರೂ ಅರ್ಥ ಆಯಿತೋ ಇಲ್ಲವೋ ನನಗಂತೂ ಅರ್ಥವಾಗಲಿಲ್ಲ.

ಶ್ರೀ ಎಂ. ಶ್ರೀನಿವಾಸ್ : ಸನ್ಮಾನ್ಯ ಮುಖ್ಯಮಂತ್ರಿಗಳೇ, ನಿಮ್ಮ ಜನತಾ ದಳ ಹೇಗಾಯಿತು ನಾನು ಈ ಕಡೆ ಬಿ.ಜೆ.ಪಿ.ಗೆ ಬಂದಮೇಲೆ ಎಂದು ಉದಾಹರಣೆ ಹೇಳುತ್ತಾ ಇರುವುದು.

ಶ್ರೀ ಸಿದ್ಧರಾಮಯ್ಯ : ನೀವು ಹೋದಮೇಲೆ ನಾವು ಮತ್ತೆ ಅಧಿಕಾರಕ್ಕೆ ಬಂದಿದ್ದು. ನೀವು 1993ರಲ್ಲೋ 1994ರಲ್ಲೋ ಬಿ.ಜೆ.ಪಿ.ಗೆ ಹೋದಿರಿ ಟಿಕೆಟ್ ಕೊಡುವ ಟೈಮಿನಲ್ಲಿ ಐದಾರು ತಿಂಗಳಿರುವಾಗ ಟಿಕೆಟ್ ಸಿಗುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ಹೊರಟುಹೋದರು. ಇವರು ಅವರ ಗುರುಗಳಾದ ಹೆಗಡೆಯವರನ್ನು ಮತ್ತು ಚಂದ್ರಶೇಖರ್ ಅವರನ್ನು ಬಿಟ್ಟು ಅಲ್ಲಿ ಹೋದರು. ನೀವು ಆ ಕಡೆ ಹೋದಮೇಲೆ ನಮ್ಮ ಸರ್ಕಾರ ಬಂದಿದ್ದು. ಅದು ಫ್ಯಾಕ್ಟ್ ಅಲ್ಲವೆ?

ಶ್ರೀ ಎಂ. ಶ್ರೀನಿವಾಸ್ : ನಾನು ಈ ಕಡೆ ಬಂದಮೇಲೆ ನಿಮ್ಮ ಸರ್ಕಾರ ಬಂತು ಸಂತೋಷ. ನಾನು ಅಲ್ಲೇ ಇದ್ದಿದ್ದರೆ ಸರ್ಕಾರ ಬರುತ್ತಾ ಇರಲಿಲ್ಲ. ಅದನ್ನೂ ಒಪ್ಪೋಣ. ಆದರೆ ನಿಮ್ಮ ಜನತಾ ದಳ ಕೆಳಗಡೆ ಮೇಲುಗಡೆ ಸರ್ಕಾರ ಬಂದು ಆಡಳಿತ ನಿಮ್ಮ ಕೈಯಲ್ಲಿದ್ದರೂ ನನ್ನ ಭಾಗದಲ್ಲಿ ನಗರಸಭೆ ಚುನಾವಣೆಯಲ್ಲಿ ನಿಮ್ಮ ಕೈಗೆ ತೆಗೆದುಕೊಳ್ಳುವುದಕ್ಕಾಗಲಿಲ್ಲವಲ್ಲ ಏಕೆ? ನಿಮ್ಮದೇ ಆದಂಥ ಪ್ರಭಾವ ಇರತಕ್ಕಂಥವರು ಎಮ್.ಪಿ. ಎಲೆಕ್ಷನ್‌ನಲ್ಲಿ ದೊಡ್ಡ ದೊಡ್ಡ ಭಾಷಣಗಳು ಕೇಂದ್ರದಿಂದ ಬಂದವರು ಮಾಡಿದರು ಆದರೂ ಸಹ ಆಗಲಿಲ್ಲ.

ಶ್ರೀ ಸಿದ್ಧರಾಮಯ್ಯ : ಉತ್ತರಹಳ್ಳಿ ಲೋಕಸಭೆ ಚುನಾವಣೆಯಲ್ಲಿ ಗೆದ್ದರೋ ಅಥವಾ ಸೋತರೋ?

ಶ್ರೀ ಎಂ. ಶ್ರೀನಿವಾಸ್ : ನಿಮ್ಮದೆಲ್ಲಾ ಲೋಕಸಭೆ ಫೆಬ್ರವರಿಗೆ ಬರುತ್ತೀರಲ್ಲ ಬನ್ನಿ, ನೋಡುತ್ತೇನೆ. ಅದು ಈಗ ಬೇಡ. ಸಿದ್ಧರಾಮಯ್ಯನವರೆ, ಯಾರು ಕೆಲಸ ಮಾಡಿರುತ್ತಾರೆ, ಯಾರು ಪ್ರಾಮಾಣಿಕವಾಗಿರುತ್ತಾರೆ, ರಾಜಕೀಯದಲ್ಲಿ ದೇಶಕ್ಕೆ ಕೆಲಸ ಮಾಡಿ ಕಷ್ಟ ಬಿದ್ದಿದ್ದಾರೆ ಎನ್ನುವುದನ್ನು ಜನ ಗುರುತಿಸುತ್ತಾರೆ. ನಿಮ್ಮ ಹಾಗೆ ಒಳ್ಳೆ ಸಹಾಯ ಪಡೆದು ಹೆಗಡೆಯವರನ್ನು ತೆಗೆದುಬಿಟ್ಟಿರಿ. ದೇವರು ಒಳ್ಳೆಯದು ಮಾಡುತ್ತಾನಾ ನಿಮಗೆ? ಹೆಗಡೆಯವರು ಇಲ್ಲದಿದ್ದರೆ ಪ್ರಮಾಣವಾಗಿ ನಿಮ್ಮ ಸರ್ಕಾರ ಬರುತ್ತಾ ಇರಲಿಲ್ಲ.

ಶ್ರೀ ಸಿದ್ಧರಾಮಯ್ಯ : ನೀವೇ ಹೆಗಡೆಯವರಿಗೆ ಕೈ ಕೊಟ್ಟು ಹೋಗಿದ್ದೀರಿ. ಬೇರೆಯವರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ನೈತಿಕ ಹಕ್ಕಿದೆಯೇ? ನೀವೇ ಹೆಗಡೆಯವರನ್ನು ಬಿಟ್ಟುಹೋಗಿ ಹೆಗಡೆಯವರ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಯಾವ ನೈತಿಕ ಹಕ್ಕಿದೆ? ಹೆಗಡೆ 1994ರಲ್ಲಿ ನಮ್ಮ ಜೊತೆಯೇ ಇದ್ದರು ನೀವು ಬಿ.ಜೆ.ಪಿ. ಗೆ ಸೇರಿಕೊಂಡಾಗ. ಚಂದ್ರಶೇಖರ್ ನಮ್ಮ ಜೊತೆಯಲ್ಲಿಯೇ ಇದ್ದರು ನೀವು ಬಿ.ಜೆ.ಪಿ.ಗೆ ಸೇರಿಕೊಂಡಾಗ. ಅವರಿಬ್ಬರಿಗೂ ಕೈ ಕೊಟ್ಟು ಹೋಗಿ ಮತ್ತೆ ನಮಗೆ ಹೇಳುವುದಕ್ಕೆ ನಿಮಗೆ ಯಾವ ನೈತಿಕ ಹಕ್ಕಿದೆ?

ಶ್ರೀ ಎಂ. ಶ್ರೀನಿವಾಸ್ : ಇವತ್ತಿಗೂ ಸಾಯಂಕಾಲದ ಹೊತ್ತು ಹಿಂದಿನ ಬಾಗಿಲಲ್ಲಿ ಹೋಗಿ ಮಾತನಾಡಿಸಿಕೊಂಡು ಬರುತ್ತಾರೆ ಅದನ್ನು ಏತಕ್ಕೆ ಹೇಳುತ್ತೀರಿ? ಅದನ್ನು ಈಗ ಹೇಳುವುದು ಬೇಡ. ಜೆ.ಹೆಚ್. ಪಟೇಲರ ಅದೃಷ್ಟ ಚೆನ್ನಾಗಿದೆ. ತಮ್ಮ ಅದೃಷ್ಟ ಚೆನ್ನಾಗಿದೆ. ಮಳೆ ಎಲ್ಲಾ ಬಿದ್ದಿದೆಯಲ್ಲ. ಕೆಲವು ಮುಖ್ಯಮಂತ್ರಿಗಳಿದ್ದಾಗ ಬರಗಾಲ ಬರುತ್ತದೆ ಎಲ್ಲಾ ಬರುತ್ತದೆ. ತಾವು ಬಂದಾಗ ಮಳೆ ಚೆನ್ನಾಗಿ ಬಂದಿದೆ. ಅದಕ್ಕೆ ಅದೃಷ್ಟ ಚೆನ್ನಾಗಿದೆ ಎಂದು ಹೇಳಿದೆ. ಸನ್ಮಾನ್ಯ ಅಧ್ಯಕ್ಷರೇ ಈ ಜಮೀನುಗಳ ಬಗ್ಗೆ ಹೇಳಬೇಕೆಂದರೆ ತಮ್ಮ ಮುಖಾಂತರ ಹೇಳುತ್ತೇನೆ ಈ ಜಮೀನುಗಳ ಬಗ್ಗೆ ಕಡಿವಾಣ ಹಾಕಬೇಕು.

ಅಧ್ಯಕ್ಷರು : ಶ್ರೀನಿವಾಸ್ ಅವರು ಮುಖ್ಯಮಂತ್ರಿ ಜೆ.ಹೆಚ್. ಪಟೇಲರ ಅದೃಷ್ಟ ಚೆನ್ನಾಗಿದೆ ಎಂದು ಹೇಳಿದರು. ಅದಕ್ಕೆ ನಿಮ್ಮ ಹೆಲ್ತ್ ಮಿನಿಸ್ಟರ್ ಹಿಂದುಗಡೆಯಿಂದ ಪ್ರತಿಕ್ರಿಯೆ ಮಾಡಿದರು, ಅಯ್ಯೋ ಹುಟ್ಟಿದಾಗಿನಿಂದ ಅವರ ಅದೃಷ್ಟ ಚೆನ್ನಾಗಿದೆ ಎಂದು.

ಶ್ರೀ ಎಂ. ಶ್ರೀನಿವಾಸ್ : ಯಾವುದೇ ವಿದ್ಯಾಸಂಸ್ಥೆಗೆ ಐದು ಎಕರೆ, ಎರಡು ಎಕರೆ ಕೊಡಿ. ಆದರೆ ಕೇಳಿದವರಿಗೆಲ್ಲ 25 ಎಕರೆ, ಕೇಳಿದವರಿಗೆಲ್ಲ 50 ಎಕರೆ ದಾನ ಮಾಡುವುದು ಸರಿಯಲ್ಲ. ಸ್ವಂತ ಸಂಪಾದನೆ ಮಾಡಿರತಕ್ಕಂಥ ಜಮೀನು ಏನಾದರೂ ಇದ್ದರೆ ಒಂದು ಅಂಗುಲ ಕೊಡಬೇಕಾದರೂ ಎಷ್ಟು ಯೋಚನೆ ಮಾಡುತ್ತೀರಾ. ಆ ರೀತಿ ಸರ್ಕಾರದ ಸ್ವತ್ತಿನ ಬಗ್ಗೆ ಯೋಚನೆ ಮಾಡಿ, ಅದನ್ನು ರಕ್ಷಣೆ ಮಾಡಿ. ಅದನ್ನು ತೆಗೆದುಕೊಳ್ಳಿ ಎಂದು ಹೇಳುತ್ತೇನೆ ಇನ್ನು ಸ್ಟ್ಯಾಂಪ್ ಡ್ಯೂಟಿ. ಬೆಂಗಳೂರಿನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಬೆಳಕನ್ನು ಚೆಲ್ಲಬೇಕು. ಸರ್ಕಾರಕ್ಕೆ ಹಣ ಬರಬೇಕು. ಸ್ಟ್ಯಾಂಪ್ ಡ್ಯೂಟಿಯನ್ನು ನೀವು ಮಾಡಿ. ಆದರೆ ಎಷ್ಟು ಸ್ವಾಮಿ ಮಾಡಬೇಕು?

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಶ್ರೀನಿವಾಸ್‌ರವರು ನೀವು ಕೇಳಿಕೇಳಿದವರಿಗೆ50 ಎಕರೆ, 40 ಎಕರೆ ಜಮೀನು ಕೊಟ್ಟಿದ್ದೀರಿ ಎಂದು ಹೇಳಿದ್ದಾರೆ. ಪಟೇಲರು, ದೇವೇಗೌಡರು ನಮ್ಮ ಸರ್ಕಾರ ಬಂದಮೇಲೆ ನಾವು ಐವತ್ತು ಎಕರೆ ಏನೂ ಕೊಟ್ಟಿಲ್ಲ. ಎಲ್ಲೋ ಶಿಕ್ಷಣಸಂಸ್ಥೆಗಳು, ಆಸ್ಪತ್ರೆಗಳು ಕಟ್ಟಲಿಕ್ಕೆ ಕೇಳಿದರೆ ಒಂದು-ಎರಡು ಎಕರೆ ಮಾತ್ರ ಕೊಟ್ಟಿರಬಹುದೇ ವಿನಃ ನಲ್ವತ್ತು-ಐವತ್ತು ಎಕರೆ ನಾವಂತೂ ಯಾವುದೂ ಕೊಟ್ಟಿಲ್ಲ.

ಶ್ರೀ ಎಂ. ಶ್ರೀನಿವಾಸ್ : ನನ್ನ ಕ್ಷೇತ್ರದಲ್ಲಿ ಎಷ್ಟು ಕೊಟ್ಟಿದ್ದೀರಿ ಎಂಬುದು ನನಗೆ ಗೊತ್ತಿಲ್ಲದೆ ನಿಮಗೆ ಗೊತ್ತಾಗುತ್ತದಾ? ನೀವು ಮಂತ್ರಿಗಳಾದರೂ ಕೂಡ ರೆಕಾರ್ಡ್ಸ್ ತರಿಸಿಕೊಂಡರೆ ಮಾತ್ರ ಗೊತ್ತಾಗುತ್ತದೆ. ನನಗೆ ಹಾಗೇ ಗೊತ್ತಾಗುತ್ತದೆ. ನಿಮಗೆ ಅದರ ಪಟ್ಟಿಯನ್ನೇ ಕೊಡುತ್ತೇನೆ. ನಿಮ್ಮ ಸರ್ಕಾರವೇ ಆರ್ಡರ್‌ಮಾಡಿರುವುದು.

ಶ್ರೀ ಬಿ. ಎನ್. ಬಚ್ಚೇಗೌಡ : ಇಂತಹವರಿಗೆ, ಇಂತಹ ಕಡೆ ಕೊಟ್ಟಿದ್ದೀರಿ, ಹೀಗೆ ಹೀಗೆ ಆಗಿದೆ ಎಂದು ಹೇಳಿ. ಮೊಗಮ್ಮಾಗಿ ಇಟ್ಟುಕೊಂಡು 'ಹೇಳ್ತೀನಿ ಹೇಳ್ತೀನಿ' ಎಂದು ಹೇಳಿದರೆ ಹಾವು ಬುಟ್ಟಿಯಲ್ಲಿದೆ, ತೆಗೆಯುತ್ತೇನೆ ಎಂದು ಹೇಳಿದ ಹಾಗೆ ಆಯಿತು ಇದು. ಏನಿದೆ ಅನ್ನುವುದನ್ನು ನೀವು ಹೇಳಿ. ಸುಮ್ಮನೆ20 ಎಕರೆ ಐವತ್ತು ಎಕರೆ ಕೊಟ್ಟಿದ್ದೀರಿ ಎಂದು ಹೇಳಿದರೆ ಹೇಗೆ? ಕಂದಾಯ ಸಚಿವರು ಯಾವುದೂ ಕೊಟ್ಟಿಲ್ಲ ಎಂದು ಹೇಳಿದರು. ಏನಾದರೂ ಅಂಕಿಅಂಶ ಇದ್ದರೆ ಹೇಳಿ.

ಶ್ರೀ ಎಂ. ಶ್ರೀನಿವಾಸ್ : ಅಂಕಿಅಂಶಕೊಡುತ್ತೇನೆ. ಈಗ 30 ಎಕರೆ ಕೊಟ್ಟರು, ವಾಪಸ್ಸು ತೆಗೆದುಕೊಂಡರು. ಮೊನ್ನೆ ನಾನು ರೈಸ್ ಮಾಡಿದಾಗ25 ಎಕರೆಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತೇವೆ ಎಂದು ಹೇಳಿದರು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಆ ಮಾರ್ವಾಡಿಗಳು ರೆಕಾರ್ಡ್ಸ್ ತಿದ್ದಿರಲಿಲ್ವಾ? ಅಂತಹದ್ದು ತೆಗೆದುಕೊಂಡರೆ, ಅದು ನಾವು ಕೊಟ್ಟಿದ್ದಾ?

ಶ್ರೀ ಎಂ. ಶ್ರೀನಿವಾಸ್ : ನಾನು ಮಾನ್ಯ ಮಂತ್ರಿಗಳಿಗೆ ಹೇಳುವುದು ಏನೆಂದರೆ, ನೀವು ಮಾಡಿಲ್ಲ ಎಂದು ಮಾತ್ರ ಹೇಳಬೇಡಿ. ನೀವು ಮಾಡುತ್ತಾ ಇದ್ದೀರಾ, ಪ್ರಾಮಾಣಿಕವಾದ ಕೆಲಸ ಮಾಡುತ್ತಿದ್ದೀರಿ. ಅದರಲ್ಲಿ ಎರಡು ಮಾತಿಲ್ಲ. 25 ಎಕರೆ ಕೊಟ್ಟಿರತಕ್ಕಂಥ ಜಮೀನು ನಾನು ಹೇಳಬೇಕಾದರೆ ಆ ಹೆಸರುಗಳು ನನಗೆ ಬಂದಿದೆ. ಕರೆಕ್ಟ್ ಆಗಿ ಡಾಕ್ಯುಮೆಂಟ್ ನೋಡಿಲ್ಲ, ನಿಮಗೆ ಕೊಡುತ್ತೇನೆ. ಈ

ಸದನದಲ್ಲೇ ಕೊಡುತ್ತೇನೆ. ಹಾಗೆಲ್ಲಾ ನಾನು ಒಬ್ಬರ ಮೇಲೆ ಸುಳ್ಳು ಹೇಳುವುದಿಲ್ಲ. ರಾಜಕೀಯದಲ್ಲಿ ಈ ಕಡೆ ಸುಳ್ಳು ಹೇಳಿ, ಆ ಕಡೆ ಸುಳ್ಳು ಹೇಳಿ ಎತ್ತಿಕಟ್ಟುವಂಥಾದ್ದು ನನಗೆ ಬೇಕಿಲ್ಲ. ಅದನ್ನು ನೀವು ತಿಳಿದುಕೊಳ್ಳಿ. ಆ ಜಮೀನುಗಳನ್ನು ತಾವು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಹೇಳುತ್ತಾ ಇನ್ನು ಈ ಸ್ಟಾಂಪ್‌ಡ್ಯೂಟಿ, ನೀವು ಎಷ್ಟು ಪರ್ಸೆಂಟ್ ಸ್ವಾಮಿ ಮಾಡುವುದು? ಪರ್ಸೆಂಟೇಜ್ ಎಷ್ಟು ಮಾಡುವುದು ಹೇಳಿ. ಒಂದು ಲಕ್ಷ ರೂಪಾಯಿ ಸೈಟು ಇದ್ದರೆ ಅದಕ್ಕೆ 35 ಸಾವಿರ ರೂಪಾಯಿ ಸ್ಟಾಂಪ್ ಡ್ಯೂಟೀನಾ? ಎಂ.ಜಿ. ರಸ್ತೆಯಲ್ಲಿ 20 ಲಕ್ಷ ರೂಪಾಯಿ ಬ್ಲಾಕ್ ಕೊಟ್ಟು ಕೊಂಡರೆ 22 ಲಕ್ಷ ರೂಪಾಯಿ ಸ್ಟಾಂಪ್ ಡ್ಯೂಟೀನಾ ಸ್ವಾಮಿ ? 2 ಸಾವಿರ ರೂಪಾಯಿ ಚದರ ಅಡಿ ಇದ್ದರೆ, ನಾಲ್ಕು ಸಾವಿರ ರೂಪಾಯಿ ಚದರ ಅಡಿ ರೇಟಾ? ಎಷ್ಟು ನೀವು ಸ್ಟಾಂಪ್ ಡ್ಯೂಟಿ ಹಾಕಬೇಕು? 100 ರಿಂದ 750 ಪರ್ಸೆಂಟೇಜು. ಅದನ್ನೇ ನಾನು ಹೇಳುವುದು, ಅದನ್ನು ತಾವು ಕಡಿಮೆ ಮಾಡಿ. ಇವತ್ತು ಬೆಂಗಳೂರಿನಲ್ಲಿ ಏನಾಗಿದೆ? ತಲಗಟ್ಟಪುರ, ಕಗ್ಗಲಿಪುರ, ಏರುಹಳ್ಳಿ, ಬ್ಯಾಡರಹಳ್ಳಿ, ಈ ಕಡೆಯಲ್ಲಿ ನೀವು ಎಷ್ಟು ಮಾಡಿದ್ದೀರಾ ಸ್ವಾಮಿ? ಎಂಟು ಲಕ್ಷ ರೂಪಾಯಿ ಮಾಡಿದ್ದೀರಾ. ಎಂಟು ಲಕ್ಷ ರೂಪಾಯಿ ನೀವು ವ್ಯಾಲ್ಯುಯೇಶನ್ ಮಾಡಿದ್ದೀರಾ.

ಶ್ರೀ ರಮೇಶ್ ಸಿ. ಜಿಗಿಜಿಣಗಿ : ತಲಗಟ್ಟಪುರದಲ್ಲಿ ಎರಡು ವರ್ಷದ ಹಿಂದೆ ಅಲ್ಲಿ ಒಂದು ಎಕರೆಗೆ ರೇಟು ಎಷ್ಟು ಇತ್ತು?

ಶ್ರೀ ಎಂ. ಶ್ರೀನಿವಾಸ್ : ತಲಗಟ್ಟಪುರದಲ್ಲಿ 80 ಸಾವಿರ ದಿಂದ ಒಂದು ಲಕ್ಷ ರೂಪಾಯಿಗಳು ಇತ್ತು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ನಾನು ಒಂದನ್ನು ಒಪ್ಪುತ್ತೇನೆ. ಇವತ್ತಿನ ರೇಟಿಗೆ ಸ್ಟಾಂಪ್ ಡ್ಯೂಟಿ ಹೆಚ್ಚಾಗಿದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ, ಕಳೆದ ಒಂದು-ಒಂದೂವರೆ ವರ್ಷದಿಂದ ಏನು ಫಿಕ್ಸ್ ಮಾಡಿದ್ದೇವೆ, ಅದು ಕಡಿಮೆಯೇ ನಾವು ಫಿಕ್ಸ್ ಮಾಡಿದ್ದು. ಇವತ್ತು ಬೆಂಗಳೂರು ಸುತ್ತಮುತ್ತ ಎಲ್ಲಿಯಾದರೂ ಎಕರೆಗೆ ಐವತ್ತು ಲಕ್ಷ ರೂಪಾಯಿಯಂತೆ ಜಮೀನು ಸಿಗುತ್ತದಾ? ನೀವು ಹೇಳಿ ದಯವಿಟ್ಟು. ಆದರೆ, ನೀವು ಹೇಳುವುದರಲ್ಲಿ ಸ್ವಲ್ಪ ಸತ್ಯ ಇದೆ. ಇವತ್ತಿನ ರೇಟು ಮನಿಮಾರ್ಕೆಟ್‌ನಲ್ಲಿ, ಎಸ್ಟೇಟ್ ಏಜನ್ಸಿಯದ್ದು ರೇಟು ಬಿದ್ದು ಹೋಗಿದೆ, ನಾನು ಒಪ್ಪುತ್ತೇನೆ - ಈಗ ಮಾತ್ರ ಹೆಚ್ಚು ಅನ್ನಿಸಲಿಕ್ಕೆ ಹತ್ತಿದೆ. ಆದರೆ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ಅದನ್ನು ರೀಎಕ್ಸಾಮಿನ್ ಮಾಡಲಿಕ್ಕೆ ನಾವು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಶ್ರೀನಿವಾಸ್ : ನಾನು ಹೇಳುವುದು ಏನೆಂದರೆ ನೀವು ಮಾಡಿ. ಆದರೆ ಅದಕ್ಕೊಂದು ಲಿಮಿಟ್ ಇರಬೇಕು. ಒಂದು ಲಕ್ಷ ರೂಪಾಯಿ ಇದ್ದರೆ, ಲ್ಯಾಂಡ್‌ಗೆ 2 ಲಕ್ಷ ರೂಪಾಯಿ ಕಾಸ್ಟ್ ಮಾಡಿ. ಬೆಲೆ ಎರಡರಷ್ಟು ಮಾಡಿ, ಅಥವಾ ಮೂರು ಲಕ್ಷ ರೂಪಾಯಿ ಮಾಡಿ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು ಐದು ಲಕ್ಷ ರೂಪಾಯಿ ಮಾಡಿದ್ದೀರಿ. ಒಂದು ಲಕ್ಷ ರೂಪಾಯಿ ಇರತಕ್ಕಂಥ ಜಮೀನಿಗೆ ಇವತ್ತು ನೀವು ಐದು ಲಕ್ಷ ರೂಪಾಯಿ, ಎಂಟು ಲಕ್ಷ ರೂಪಾಯಿ ಮಾಡಿದ್ದೀರಾ. ನಾಲ್ಕು ಎಕರೆ ಅವನು ಜಮೀನನ್ನು ಕೊಟ್ಟ ತಕ್ಷಣ, ಅವನು ಇನ್‌ಕಮ್ ಟ್ಯಾಕ್ಸ್

ಕ್ಲಿಯರೆನ್ಸ್‌ಗೆ ಹೋಗಬೇಕು. ಆದ್ದರಿಂದ, ರೈತನಿಗೆ ನಾಲ್ಕು ಎಕರೆ ಜಮೀನು ಮಾಡುವುದಕ್ಕೆ ಆಗುವುದಿಲ್ಲ. ಇಂತಹ ಪರಿಸ್ಥಿತಿ ಇರುವಾಗ ನೀವು ಸ್ಟಾಂಪ್ ಡ್ಯೂಟಿಯನ್ನು ಸ್ವಲ್ಪ ಕಡಿಮೆ ಮಾಡುವುದನ್ನು ಏರ್ಪಾಡು ಮಾಡಿ ಅದನ್ನು ತಾವು ಐದು ಕಿಲೋಮೀಟರ್‌ಗೆ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದೀರಿ. ಅದು ಲ್ಯಾಂಡ್ ಗ್ರಾಂಟ್ ಕಮಿಟಿಯದ್ದು ಏನಿದೆಯೋ, ಅದು ಮಾಡಿದ್ದೀರಿ. ಈ ಕೆರೆ ಅಂಗಳದ್ದು ನಾನು ಆಗಲೇ ಹೇಳಿದೆ. ಇದರ ಬಗ್ಗೆ ತಾವು ಏನೋ ಪೋಲೀಸ್ ಅದು ಇದು ಏರ್ಪಾಡು ಮಾಡಿದ್ದೀರಿ. ಕೆಲವು ಕೆರೆಗಳಲ್ಲಿ ನೀರು ಇಲ್ಲ. ಅಂಥಾದ್ದರಲ್ಲಿ ಒತ್ತುವರಿಯಾಗುತ್ತಿದೆ ಮತ್ತು ತಾವು ಅದನ್ನೆಲ್ಲ ಇನ್‌ಸ್ಪೆಕ್ಷನ್ ಮಾಡಿ. ಅಂತಹ ಕೆರೆಗಳ ಬಗ್ಗೆ ನಿಮ್ಮ ಲಿಮಿಟ್ ಏನು ಇದೆಯೋ, ಆಸ್ಪತ್ರೆಗಳಿಗೆ ಮತ್ತು ಸಾರ್ವಜನಿಕರಿಗೆ ಎಷ್ಟು ಬೇಕೋ ಅಷ್ಟು ಇಟ್ಟುಕೊಂಡು ಮಿಕ್ಕ ಜಮೀನನ್ನು ನೀವು ಹರಾಜು ಹಾಕಿ. ಇದರಿಂದ ಸರ್ಕಾರಕ್ಕೆ ಸಾವಿರಾರೂ ಕೋಟಿ ರೂಪಾಯಿ ಹಣ ಬರುತ್ತದೆ. ಇಲ್ಲದಿದ್ದರೆ ಕಾಯುವುದಕ್ಕೆ ಆಗುವುದಿಲ್ಲ. ಈ ಪೋಲಿಸರನ್ನು ಇಟ್ಟುಕೊಂಡರೂ ಕಾಯುವುದಕ್ಕೆ ಆಗುವುದಿಲ್ಲ. ಏಕೆ ಆಗುವುದಿಲ್ಲ ಎಂದರೆ, ಮೊನ್ನೆ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಕಟ್ಟಿರುವ ಮನೆಯನ್ನು ನಾವು ಒಡೆಯುವುದಕ್ಕೆ ಆಗುತ್ತದಾ ಎಂದು. ಆ ಮಾತನ್ನು ಹೇಳಿದ ತಕ್ಷಣವೇ ಇನ್ನೂ ಮನೆಗಳನ್ನು ಕಟ್ಟುವುದು ಶುರುವಾಗುತ್ತದೆ. ಆವಾಗ ನಿಮಗೆ ಕೆರೆಗಳು ಎಲ್ಲಿ ಸಿಗುತ್ತವೆ? ಸಿಗುವುದಿಲ್ಲ. ಅದಕ್ಕೇ ನಾನು ಏನು ಹೇಳುವುದು ಎಂದರೆ, ಲಕ್ಷ್ಮಣರಾವ್ ಸಮಿತಿಯಲ್ಲಿ ಅಂತರ್‌ಜಲ ಬೇಕು ಎನ್ನುವುದರಲ್ಲಿ, ನೀವು ಏನು ಮಾಡಿದ್ದೀರಿ? ಇನ್ನು ಮಡಿವಾಳ ಕೆರೆ, ಎಷ್ಟು ಇದೆ? 280 ಎಕರೆ ಇದೆ. ಸಾರಕ್ಕಿ ಕೆರೆ 60 ಎಕರೆ ಇದೆ. ಇಟ್ಟುಮಡು ಆ ಕಡೆಗೆ 75 ಎಕರೆ ಇದೆ. ಈ ರೀತಿ ನೂರಾರು ಎಕರೆ ಇರತಕ್ಕಂಥಾದ್ದು, ದೊರೆ ಕೆರೆ ಅದೇನೂ ಒಂದು ಬೋಟ್ ಕ್ಲಬ್ ಎಂದು ಮಾಡಿದ್ದೀರಿ. ಮಾನ್ಯ ಅರಣ್ಯ ಮಂತ್ರಿಗಳೇ, ಅಲ್ಲಿ ಯಾರೂ ಬೋಟ್ ನೊಳಗೆ ಕುಳಿತುಕೊಳ್ಳುವುದಿಲ್ಲ. ಏಕೆ ಹೇಳಿ? ಬೆಂಗಳೂರಿನಲ್ಲಿರುವ ಸೀವರೇಜ್ ವಾಟರ್ ಎಲ್ಲ ಅಲ್ಲಿ ಬಿಟ್ಟು ಬಿಡುತ್ತಾರೆ. ನಾನು ಹೋಗಿ ಉದ್ಘಾಟನೆ ಮಾಡಿದೆ. ಮೂಗು ಮುಚ್ಚಿಕೊಳ್ಳಬೇಕು ಆದ್ದರಿಂದ ಯಾರೂ ಕೂಡ ಅಲ್ಲಿಗೆ ಹೋಗುವುದಿಲ್ಲ. ನೀವು ಬೋಟ್ ಕ್ಲಬ್ ಮಾಡಬೇಕಾದರೆ, ಸಿವರೇಜ್ ವಾಟರ್‌ಗೆ ಡ್ರೈನೇಜನ್ನು ಪಕ್ಕದಲ್ಲೇ ಮಾಡಿಸಿ ಬರುತ್ತಾರೆ. ಇಲ್ಲದಿದ್ದರೆ ಬೆಂಗಳೂರಿನ ನೀರೆಲ್ಲ ಅಲ್ಲಿ ತೆಗೆದುಕೊಂಡು ಹೋಗಿ ಬಿಟ್ಟರೆ ಆಗುವುದಿಲ್ಲ. ಆದ್ದರಿಂದ ಕಂದಾಯ ಮತ್ತು ಅರಣ್ಯ ಮಂತ್ರಿಗಳು ಅದನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ತಾವಿಬ್ಬರೂ ಒಂದು ಜಾಯಿಂಟ್ ಆಗಿ ಇನ್‌ಸ್ಪೆಕ್ಷನ್ ಮಾಡಿ. ನಮ್ಮನ್ನು ಬೇಕಾದರೆ ಕರೆಯಿರಿ, ಇಲ್ಲದಿದ್ದರೆ ಬೇಡ, ಮುಖ್ಯಮಂತ್ರಿಗಳೂ ಬರುವುದಿದ್ದರೆ ಒಂದು ದಿವಸವನ್ನು ಫಿಕ್ಸ್ ಮಾಡುತ್ತೇನೆ. ಶನಿವಾರ ಅಥವಾ ಭಾನುವಾರ ಒಂದು ದಿವಸ ಮಧ್ಯಾಹ್ನ ಅವರು ಬರಲಿ. ಅವರು ಕಣ್ಣಾರೆ ನೋಡಿ ಈ ಕೆರೆ ಬೇಕಾ ಬೇಡವಾ ಎಂದು ಹೇಳಲಿ. ಬೇಡ ಎನ್ನುವಿರಾದರೆ ಇದನ್ನು ಹರಾಜು ಹಾಕಿ. ಅದನ್ನು ನಿಮ್ಮ ಹಿಡಿತದಲ್ಲಿಟ್ಟುಕೊಂಡು ಹರಾಜು ಹಾಕಿದರೆ ಸರ್ಕಾರಕ್ಕೆ ಹಣ ಬರುತ್ತದೆ. ಈಗ 250 ಎಕರೆಯನ್ನು ಕಾಪಾಡುವುದಕ್ಕೆ ಆಗುತ್ತದಾ ಸ್ವಾಮಿ? ಅದರಲ್ಲಿ ಒಂದು 50 ಎಕರೆಯಲ್ಲಿ ಕ್ಲೀನ್‌ಆಗಿ ಕಟ್ಟಡವನ್ನು ಕಟ್ಟಿಬಿಡಿ. ಆಮೇಲೆ ಅವರು ಒತ್ತುವರಿ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಕಟ್ಟಡವನ್ನು ಸ್ವಲ್ಪ ಜಾಗದಲ್ಲಿ ಕಟ್ಟಿದ್ದಾರೆ. ಅದರೆ ಇವೊತ್ತು ಒತ್ತುವರಿ ಆಗಿಹೋಯಿತಲ್ಲ? ಇವತ್ತು ನಮಗೆ ಬಹಳಷ್ಟು ಹಣ ಬಂದಿದೆ, ನಾವು ಡೆವಲಪ್‌ಮೆಂಟ್ ಮಾಡುತ್ತೇವೆ, ನಮ್ಮ ಹತ್ತಿರ

ಬಹಳ ಹಣ ಇದೆಯೆಂದು ಅರಣ್ಯ ಮಂತ್ರಿಗಳು ಹೇಳುತ್ತಿದ್ದರು. ಅದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾ, ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ನಾನು ಇದ್ದಾಗ ಬಹಳ ಒಳ್ಳೆ ಕೆಲಸ ಮಾಡಿದ್ದರು, ಈಗ ಅವರು ಇದ್ದಾರೆ. ಈಗಲೂ ಇದ್ದಾರೆ ಬಹಳ ಒಳ್ಳೆಯ ಕೆಲಸ ಮಾಡುವವರು. ಸ್ವಾಮಿ 1962ರಲ್ಲಿ ನನಗೆ ಚಿಕ್ಕ ವಯಸ್ಸು. ನನ್ನ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಜೆ. ಶ್ರೀನಿವಾಸರೆಡ್ಡಿಯವರು ನಮ್ಮವರು ಅಲ್ಲಿಂದ ಗೆದ್ದರು. ಆವತ್ತಿನಿಂದ ಕಾಂಗ್ರೆಸ್ ಸರ್ಕಾರ ಇರುವವರೆಗೂ ಮತ್ತು ನಮ್ಮದು ಎರಡು ಸಾರಿ ಸರ್ಕಾರ ಇದ್ದಾಗಲೂ ಯಾವ್ಯಾವ ಭಾಗದಲ್ಲಿ ಸ್ಟ್ಯಾಂಪ್ ಡ್ಯೂಟಿ ಬರುತ್ತದೋ ಅದನ್ನು ಡೆವಲಪ್‌ಮೆಂಟ್‌ಗೆ ಕೊಡುತ್ತಿದ್ದರು. ಮೊದಲು ತಾಲ್ಲೂಕು ಬೋರ್ಡು ಇತ್ತು. ತಾಲ್ಲೂಕು ಪಂಚಾಯಿತಿ ಆಯ್ತು, ಸನ್ಮಾನ್ಯ ಸಿಂಧ್ಯಾ ಸಾಹೇಬರು ಈ ಕಡೆಗೆ ಮನಸ್ಸು ಮಾಡಿದರೆ ತಾವು ಆ ಕಡೆ ಇದ್ದರೂನು ಸ್ವಲ್ಪ ತಾವು ಇದಕ್ಕೆ ಒತ್ತು ಕೊಡಬೇಕು. ಮತ್ತು ನಮ್ಮ ರೂರಲ್ ಶಾಸಕರೂ ಇದ್ದಾರೆ, ಅವರಿಗೂ ಗೊತ್ತಿದೆ. ತಮ್ಮದೇ ಆದಂಥ ಶಾಸನ ಸಭೆಯಲ್ಲಿ ಮಾತನಾಡಿ ಎಂದು ಹೇಳಿದೆ. ಏಕೆ ಮಾತನಾಡಲಿಲ್ಲ. ಮಾನ್ಯ ವೈ. ರಾಮಕೃಷ್ಣ ಅವರು ಇಲ್ಲಿ ಡೆಪ್ಯುಟಿ ಲೀಡರ್ ಆಗಿದ್ದಾಗ, ನಾನು ಕೂಡ ಮಾತನಾಡಿದ್ದೆ. ಸಿಂಧ್ಯಾರವರಿಗೆ ಹೆಚ್ಚಿನ ರೀತಿ ಬೆಂಗಳೂರು ನಗರ ಜಿಲ್ಲೆ, ಈ ಕಡೆ ಬಹಳ ಚೆನ್ನಾಗಿ ಇದೆ. ಅವರ ಕ್ಷೇತ್ರ ಹೇಗೋ ಅದೇ ರೀತಿ ಅವರಿಗೆ ಎಲ್ಲ ಗೊತ್ತಿದೆ. ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಒಟು ಲೆಕ್ಕ ತೆಗೆದುಕೊಂಡರೆ 8 ಲಕ್ಷ 80 ಸಾವಿರ. ಜನಸಂಖ್ಯೆಯ ಆಧಾರದ ಮೇಲೆ ತೆಗೆದುಕೊಂಡರೆ ನನ್ನ ಕ್ಷೇತ್ರದಲ್ಲಿ 16 ಲಕ್ಷ ಬರುತ್ತದೆ. ಆನೇಕಲ್ಲು, ವರ್ತೂರು, ಮಾಗಡಿ, ಯಲಹಂಕದ ಭಾಗಗಳೂ ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಬರುತ್ತದೆ. ನಾವು ಬಳ್ಳಾರಿ, ಬೆಳಗಾಂ, ಮೈಸೂರು ಇಲ್ಲಿ ರಿಜಿಸ್ಟರ್ ಮಾಡಿದ ಹಣವನ್ನು ಕೊಡಿ ಎಂದು ಕೇಳುತ್ತಿಲ್ಲ, ತಾವು ಕೂಡ ಮನಸ್ಸು ಮಾಡಿದ್ದೀರಿ, ಬಹಳ ಯೋಚನೆ ಮಾಡಿ, ತಮ್ಮ ಕಾಲದಲ್ಲಿ ಸ್ವಲ್ಪ ಮನಸ್ಸನ್ನು ಗಟ್ಟಿ ಇಟ್ಟುಕೊಂಡು ಜನರ ಮೇಲೆ ಕರುಣೆಯನ್ನು ತೋರಿಸಿದರೆ ತಮ್ಮ ಪಕ್ಷಕ್ಕೆ ಒಳ್ಳೆಯದಾಗುತ್ತದೆ. ಇದನ್ನು ಬೆಂಗಳೂರು ರೂರಲ್ ಮತ್ತು ಅರ್ಬನ್ ಎರಡನ್ನು ಸೇರಿ ಹೇಳುತ್ತೇನೆ. ಸ್ವಾಮಿ ನನಗೆ ಯಾವುದೇ ಹಣ ಬರದೇ ಇದ್ದರೂ ಸ್ಟ್ಯಾಂಪ್ ಎಷ್ಟು ರಿಜಿಸ್ಟರ್ ಆಗುತ್ತದೆ ಅದರಲ್ಲಿ36 ಪರ್ಸೆಂಟ್ ಅಂದರೆ,6-7 ಕೋಟಿ ರೂಪಾಯಿಗಳನ್ನು ನಮ್ಮ ಕ್ಷೇತ್ರದ ಅಭಿವೃದ್ಧಿ ಕೆಲಸಕ್ಕೆ ಸರ್ಕಾರದಿಂದ ನಮಗೆ ಕೊಡುತ್ತಿದ್ದರು. ಬೋರವೆಲ್, ರಸ್ತೆಗಳು, ಓವರ್‌ಹೆಡ್ ಟ್ಯಾಂಕ್‌ಗಳಿಗೆ ಮತ್ತು ಎಸ್‌ಸಿ./ಎಸ್‌ಟಿ ಬ್ಯಾಕ್‌ವರ್ಡ್ಸ್‌ಗೆ ಸ್ಪೆಷಲ್ ಆಗಿ ಅವರಿಗೆ ಕೊಡಬೇಕಾದಂಥದ್ದು ಇದೆ. ಇಷ್ಟಕ್ಕೂ ನಮಗೆ ಹಣ ಇದೆ. ಅಂದರೆ ನಮಗೆ ಸರ್ಕಾರದಿಂದ ಹಣ ಬರದೆ ಇದ್ದರೂ ಕೆಲಸವಾಗುತ್ತಿತ್ತು. ಮಾನ್ಯ ಬಚ್ಚೇಗೌಡರು ತಾವು ನಮ್ಮ ಕ್ಷೇತ್ರದ ಕಡೆಗೆ ಬೆಳಕುಚೆಲ್ಲಬೇಕು. ಎರಡು ಮೂರು ಸಲ ತಮ್ಮ ಹತ್ತಿರ ಎಲ್ಲರೂ ಬಂದಿದ್ದಾರೆ, ತಾವು ನಮ್ಮ ಜಿಲ್ಲಾ ಮಂತ್ರಿಗಳು, 4-5 ಸಲ ಹೋಗಿದ್ದೀರಾ ತಮ್ಮ ಮಾತಿಗೆ ಅವರ ಮನಸ್ಸು ಕರಗಲಿಲ್ಲ. ಮಾನ್ಯ ಪ್ರಕಾಶ್‌ರವರೆ, ಸ್ವಾಮಿ ನಮಗೆ ಮೊದಲು ಅಂದರೆ 1962 ರಿಂದ ಬಂದಂತಹ ಸ್ಟ್ಯಾಂಪ್ ಡ್ಯೂಟಿಯನ್ನು, ಕಾಂಗ್ರೆಸ್ ಸರ್ಕಾರ ಇದ್ದಾಗ 1993ರಲ್ಲಿ ಆರ್ಡಿನನ್ಸ್ ತಂದಿದ್ದರು, 1993ರಲ್ಲಿ ಬಿಲ್ ಪಾಸು ಆಗಿತ್ತು. ಈಗ ನಾವು ಏನು ಮಾಡುವುದಕ್ಕೆ ಆಗುವುದಿಲ್ಲವೆಂದು ಅವರ ಮೇಲೆ ಒಂದು ಮಾತನ್ನು ಹೇಳಿದ್ದೀರಿ. ತಪ್ಪು ಮಾಡಿರಬಹುದು ಅದನ್ನು ನೀವು ತಿದ್ದಿ. ವರ್ತೂರು, ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರ, ಆನೇಕಲ್ಲು, ಈ ಕಡೆ ಯಲಹಂಕ,

ಈ ಕಡೆ ಮಾಗಡಿ, ಇಲ್ಲಿ ಸುಮಾರು 40 ಲಕ್ಷ ಜನ ಇರತಕ್ಕಂಥದ್ದಕ್ಕೆ ತಾವು ಆ ಸ್ಟ್ಯಾಂಪ್ ಡ್ಯೂಟಿ ಹಣವನ್ನು ಇಡೀ ರಾಜ್ಯಕ್ಕೆ ಹಂಚುವಂತಹ ಒಂದು ಆರ್ಡಿನೆನ್ಸ್ ತಾವು ಮಾಡಿದ್ದೀರಿ ಏಕೆ ಸ್ವಾಮಿ? ಈ ಹಣ ಜಾಸ್ತಿ ಇತ್ತಾ? ನೀವು ಏನು ಮಾಡಬೇಕಾಗಿತ್ತು ಎಂದರೆ, ಆರ್ಥಿಕ ಇಲಾಖೆಯವರು, ಡಿಪಾರ್ಟ್‌ಮೆಂಟ್‌ನವರು ಮತ್ತು ಇಂಜನಿಯರ್ಸ್‌ರವರನ್ನು ಕರೆಸಿ ನೀವು ಒಂದು ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಬೇಕಾಗಿತ್ತು. ಈ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ರಸ್ತೆಗಳು ಬೇಕು, ಎಷ್ಟು ಕೆರೆಗಳು ಮತ್ತು ಎಷ್ಟು ಮನೆಗಳನ್ನು ಕಟ್ಟಬೇಕು, ಎಷ್ಟು ದುಡ್ಡು ಬೇಕಾಗುತ್ತದೆ? ಈ ಸ್ಟ್ಯಾಂಪ್ ಡ್ಯೂಟಿ ಇವರಿಗೆ ಎಷ್ಟು ಹೆಚ್ಚಿಗೆ ಆಗುತ್ತದೆ? ಮಾನ್ಯ ಪ್ರಕಾಶ್‌ರವರು ತಾವು ಸೀನಿಯರ್ ತಮಗೆ ಬಹಳ ಅನುಭವವಿದೆ, ಬಹಳ ಹಠ ಹಿಡಿಯುತ್ತಿದ್ದೀರಿ, ಇವತ್ತಿಗೂ ಹಠ ಹಿಡಿಯುತ್ತಿದ್ದೀರಿ ಅದು ಬೇಡ. ಈ ಕ್ಷೇತ್ರದಿಂದ 10 ಕೋಟಿ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ಬರತಕ್ಕಂಥದ್ದು. ಇದರಲ್ಲಿ 5 ಕೋಟಿ ರೂಪಾಯಿ ಖರ್ಚಾಗುವುದು, ಉಳಿದ 5 ಕೋಟಿ ಖರ್ಚು ಆಗುವುದಿಲ್ಲವೆಂದು, ಈ 5 ಕೋಟಿ ರೂಪಾಯಿಯನ್ನು ಇಡೀ ರಾಜ್ಯಕ್ಕೆ ಹಂಚುತ್ತಿದ್ದೀರಿ, ನನಗೆ ಸಂತೋಷ. ನಾನು ಒಪ್ಪಿಕೊಳ್ಳುತ್ತೇನೆ. ನೀವು ಅದನ್ನು ಮಾಡಲಿಲ್ಲ.

ಅಧ್ಯಕ್ಷರು : ಶ್ರೀನಿವಾಸ್‌ರವರೆ, ಇನ್ನು ಎಷ್ಟು ಸಮಯ ಆಗಬಹುದು?

ಶ್ರೀ ಎಂ. ಶ್ರೀನಿವಾಸ್ : ಇನ್ನು 5-10 ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ಏಕೆಂದರೆ ನಮಗೆ ಕಾಮನ್ ವೆಲ್ತ್ ಪಾರ್ಲಿಮೆಂಟ್ ಪಾರ್ಟಿ ಅಸೋಸಿಯೇಷನ್ ಸಭೆ ಇದೆ. ಮಾನ್ಯ ಸಗೀರ್ ಅಹಮದ್‌ರವರೆ, ನಿಮ್ಮ ಚರ್ಚೆಯನ್ನು ನಾಳೆ ಇಟ್ಟುಕೊಳ್ಳೋಣ, ನಾಳೆ ಸನ್ನಿವೇಶ ಹೇಗೆ ಹೇಗೆ ಬರುತ್ತದೆ ನೋಡಿಕೊಂಡು ಚರ್ಚೆಯನ್ನು ಇಟ್ಟುಕೊಳ್ಳೋಣ. ತಾವು 5 ನಿಮಿಷದೊಳಗೆ ಮುಗಿಸಿ.

ಶ್ರೀ ಎಂ. ಶ್ರೀನಿವಾಸ್ : ಇನ್ನೂ 5 ನಿಮಿಷದಲ್ಲಿ ಮುಗಿಸುತ್ತೇನೆ. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು, ತಮಗೂ ಸಹ ಈ ಕಷ್ಟ ಗೊತ್ತಿದೆ. ತಾವು ಏಕೆ ಹಠ ಮಾಡುತ್ತಿದ್ದೀರಿ, ಅದು ಬೇಡ. ನೀವು ಇವತ್ತು ಸರ್ವೆ ಮಾಡಿ. ಈ 4 ವಿಧಾನಸಭಾ ಕ್ಷೇತ್ರಗಳಿಗೆ ಸೇರಿದ 10 ಕೋಟಿ ರೂಪಾಯಿಗಳ ಸ್ಟ್ಯಾಂಪ್ ಡ್ಯೂಟಿಯ ಹಣದಲ್ಲಿ ಇಲ್ಲಿಗೆ 5 ಕೋಟಿ ರೂಪಾಯಿ ಬೇಕಾಗಿರುವುದು. 5 ಕೋಟಿ ರೂಪಾಯಿ ಬೇಕಾಗಿಲ್ಲ ಎಂದು ತಾವು ಸರ್ವೆ ರಿಪೋರ್ಟನ್ನು ಮಾಡಿಸಿ ಹಿಂದೆ ಏನು ಒಂದು ಕಾಮಗಾರಿ ಕೆಲಸಕ್ಕೆ ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡುತ್ತಿದ್ದರು, ಅದನ್ನು ಇವತ್ತು ಮಾಡಿ ಈ ಹಣವನ್ನು ಡೈವರ್ಟ್ ಮಾಡಿಕೊಳ್ಳಿ ಸಂತೋಷ. ನೀವು ಕೊಡತಕ್ಕಂಥ ಸ್ಟ್ಯಾಂಪ್ ಡ್ಯೂಟಿ ಏನಿದೆಯೋ , ಆ ಸ್ಟ್ಯಾಂಪ್ ಡ್ಯೂಟಿ ಬರುವುದರಿಂದ ನಮ್ಮ ಕ್ಷೇತ್ರದ ಎಲ್ಲಾ ಕೆಲಸಗಳು ಆಗುತ್ತಿತ್ತು. ಮಾನ್ಯ ಸಿದ್ದರಾಮಯ್ಯನವರ ಹತ್ತಿರನೂ ಬಂದಿರಬಹುದು. ಮಾನ್ಯ ಪ್ರಕಾಶ್‌ರವರ ಹತ್ತಿರನೂ ಸಹ ಬಂದಿರಬಹುದು. ಮಾನ್ಯ ಮಂತ್ರಿಗಳಾದ ಪ್ರಕಾಶ್‌ರವರು ಇದರ ಮೇಲೆ ಮನಸ್ಸು ಮಾಡಬೇಕು. ದಯವಿಟ್ಟು ಮೊದಲು ಹೇಗೆ ಇತ್ತು ಅದೇ ರೀತಿಯಲ್ಲಿ ಮಾಡಿ. ಇದು ರಾಜ್ಯದ ಎಲ್ಲಾ ಕಡೆಯೂ ಇಲ್ಲ, ನಮ್ಮ ಕ್ಷೇತ್ರಕ್ಕೆ ಮಾತ್ರ ಹಾಗೆ ಮಾಡಿರುವುದು. ಇದನ್ನು ಗ್ರಾಮೀಣಾಭಿವೃದ್ಧಿ ಮಂತ್ರಿಗಳು ದಯವಿಟ್ಟು ನಮಗೆ ಮೊದಲು ಏನಿದೆ ಆ ರೀತಿ ನಮಗೆ ಸ್ಟ್ಯಾಂಪ್ ಡ್ಯೂಟಿಯ ಹಣವನ್ನು ಕೊಡಿ. ಇಲ್ಲ ಅಂದರೆ, ನಾನು ಈ ಸದನದಲ್ಲಿ ಒಂದು

ಮಾತನ್ನು ಹೇಳುವುದೇನೆಂದರೆ, ನಿಮ್ಮ ಗುಂಪಿನಲ್ಲಿ ಗೆದ್ದಿರತಕ್ಕಂಥವರು ಒಬ್ಬರೂ ಇರುವುದಿಲ್ಲ. ನಾನು ಇವತ್ತು ಈ ಸದನದಲ್ಲಿ ಸಭಾಧ್ಯಕ್ಷರ ಮುಖಾಂತರವಾಗಿ ತಮಗೆ ಮನವರಿಕೆ ಮಾಡಿಕೊಂಡು ತಿಳಿಸುತ್ತೇನೆ. ತಮ್ಮ ಶಾಸಕಾಂಗ ಸಭೆಯಲ್ಲಿ ತಮ್ಮವರೆ, ಆದಂತಹ ಎಂ.ಎಲ್.ಎಗಳು ಇದ್ದಾರೆ. ನಾನು ಏನು ಹೇಳಿದ್ದೇನೆ, ಅದು ನಿಜವೇ ಎಂದು ಅವರನ್ನು ಕೇಳಿಕೊಳ್ಳಿ, ನಿಮ್ಮವರು ಬೇಡ ಅಂದರೆ ಬೇಡ. ಇವತ್ತು 3-4-5 ಕೋಟಿ ರೂಪಾಯಿಗಳಿಂದ ಯಾವ ಕೆಲಸವೂ ನಡೆಯುತ್ತಾ ಇಲ್ಲ ಮತ್ತು ಯಾವ ಬಿಲ್ಲುಗಳನ್ನು ಕೊಟ್ಟಿಲ್ಲ, ಕೆಲಸಗಳು ನಡೆಯುತ್ತಾ ಇಲ್ಲ. ಆದ್ದರಿಂದ 1989-90ರಲ್ಲಿ ಏನ ಸ್ಟ್ಯಾಂಪ್ ಡ್ಯೂಟಿ ಇತ್ತು, ಅದನ್ನು ಮೊನ್ನೆವರೆಗೂ ಕೊಟ್ಟಿದ್ದಾರೆ. ಈಗ ಬಿಲ್ಲುಗಳು ಪೆಂಡಿಂಗ್‌ನಲ್ಲಿವೆ ಮೊದಲು ನಮಗೆ ಏನು ಸ್ಟ್ಯಾಂಪ್ ಡ್ಯೂಟಿ ಬರುತ್ತಿತ್ತು, ಅದು ಆಯಾ ಏರಿಯಾಗಳಿಗೆ ಖರ್ಚು ಆಗಬೇಕಾಗಿತ್ತು, ಹಿಂದೆ ಎಲ್ಲಾ ಹಾಗೆ ಇತ್ತು. ಈಗ ಅದನ್ನು ಜಿಲ್ಲಾಪಂಚಾಯತ್ ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರುಗಳು ಕಿತ್ತಾಡಿ, ಮಾನ್ಯ ಸಿದ್ದರಾಮಯ್ಯನವರೇ ತಾವು ಫೈನಾನ್ಸ್ ಮಿನಿಸ್ಟರ್ ತಮಗೆ ಹೇಳುತ್ತಿದ್ದೇನೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಹಾಗೂ ಅಲ್ಲಿರತಕ್ಕಂಥ ಅಧಿಕಾರಿಗಳು ಕಿತ್ತಾಡಿ, ಈ ಹಣದಿಂದ ಅವರೇ ಮಜಾ ಮಾಡುತ್ತಾರೆ. ಆ ರಿಪೋರ್ಟ್‌ಗಳ ಬಗ್ಗೆ ಮಂತ್ರಿಗಳಿಗೆ ಒಂದಕ್ಕೆರಡು ಹೇಳಿ, ಅಮೆಂಡ್‌ಮೆಂಟ್ ಪಾಸು ಮಾಡಿಕೊಂಡು ಈಗ ದುಡ್ಡು ಕೊಡವುದಕ್ಕೆ ಹೋಗಬೇಡಿ ಎಂದು ಹೇಳುತ್ತಾರೆ. ಅದನ್ನು ಈಗ ಬಿಡಿ. ದಯವಿಟ್ಟು ಮೊದಲು ಇದ್ದ ಹಾಗೆ ಮಾಡಿ. ಇಲ್ಲದಿದ್ದರೆ ನಿಮ್ಮ ಕ್ಷೇತ್ರಕ್ಕೆ ಆಗುವುದಿಲ್ಲ. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ಸ್ಲಂ ಬೋರ್ಡ್ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಕಾರ್ಪೊರೇಷನ್ ನಗರಸಭೆ, ಪುರಸಭೆ ಇವುಗಳಿಗೆ ಯಾರು ಯಜಮಾನರು ಇಲ್ಲ. ಅಂತ ಜಾಗ ಇಲ್ಲಿ ಇದೆ. ನಮಗೆ ಹಣ ಇದ್ದರೆ ಮಾತ್ರ ಖರ್ಚಾಗುವುದು ಇಲ್ಲದಿದ್ದರೆ ಯಾವುದೂ ಆಗುವುದಿಲ್ಲ. ಆದುದರಿಂದ, ತಾವು ಈ ಹಣವನ್ನು ಮೊದಲು ಹೇಗೆ ಇತ್ತು ಹಾಗೆ ಮಾಡಿಕೊಡಬೇಕು. ತಾವು ಬಹಳ ಹಠ ಹಿಡಿಯುತ್ತಿದ್ದೀರಿ. ಕೊಡುತ್ತೀನಿ ಅಂತೀರಾ. ಆಗಲ್ಲ ಅಂತೀರಿ, ಆದರೂ ಈಗ ಕೊಟ್ಟಿಲ್ಲ. ದಯವಿಟ್ಟು ತಾಲ್ಲೂಕು ಪಂಚಾಯಿತಿಯ ಸ್ಟ್ಯಾಂಪ್ ಡ್ಯೂಟಿಯ ಹಣವನ್ನು ಮೊದಲು ಇದ್ದಹಾಗೆ ಕೊಡಿ. ತಮಗೆ ಒಂದು ರಿಪೋರ್ಟನ್ನು ನಾನು ಕೊಟ್ಟೆ. ತಾಲ್ಲೂಕು ಪಂಚಾಯಿತಿ ನಾರ್ತ್ ತಾಲ್ಲೂಕಿನ ಬಗ್ಗೆ ರೆಸಲ್ಯೂಷನ್ ಮಾಡಿಕೊಟ್ಟರು, ಏನು ಕೊಟ್ಟರು ಸ್ವಾಮಿ? ರೈಟ್ ಹ್ಯಾಂಡ್ ಆಗಿ ಕೊಟ್ಟರು. ಅವನು ಮಾಡಿರತಕ್ಕಂಥ 32 ಲಕ್ಷ ರೂಪಾಯಿ ಎಸ್ ಸಿ/ಎಸ್‌ಟಿ ಬ್ಯಾಕ್‌ವರ್ಡ್ ಸೀಟ್ ತಂದರು. ಡಿಲಿವರಿ ಕೊಡಲಿಲ್ಲ, ಬಿಲ್ಲು ಬಂತು, ಅದನ್ನು ತೆಗೆದುಕೊಂಡು ಪುನಃ ವಾಪಸ್ಸು ಕೊಟ್ಟರು. ಬಾಗಿಲುಗಳು ಮತ್ತು ಕಿಟಕಿಗಳು ಬಂತು, ಮತ್ತೆ ಇಲ್ಲಿ ಬಂತು, ಅದನ್ನು ವಾಪಸ್ಸು ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟು ದುಡ್ಡು ತೆಗೆದುಕೊಂಡು, ಈಗ 36 ಲಕ್ಷ ರೂಪಾಯಿಗಳ ಆಪಾದನೆ ಅವನ ಮೇಲೆ ಇದೆ. ಏಕೆ ಸ್ವಾಮಿ ಅಂಥವರನ್ನು ಇನ್ನು ಇಟ್ಟುಕೊಂಡಿದ್ದೀರಾ? ತಮ್ಮ ವಿಚಾರದಲ್ಲಿ ನಮಗೆ ಅಪಾರ ಗೌರವ ಇದೆ. ತಾವು ಏಕೆ ಅವರನ್ನು ಇಟ್ಟುಕೊಂಡಿದ್ದೀರಿ? ಅವರಿಂದ ಏನು ಬರುವುದಿಲ್ಲ. ಅವನು ಹೋದರೆ ಇನ್ನೊಬ್ಬ ಬರುತ್ತಾನೆ. ಅವನಿಂದ ಅಪಕೀರ್ತಿ ನಿಮಗೆ ಅಷ್ಟೆ. ಸಿದ್ದರಾಮಯ್ಯನವರ ಮೇಲೆ ಹೇಳುತ್ತಾರೆ. ಅವನ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಆಪಾದನೆಗಳು ಬಂದ ಮೇಲೆ ಆತನ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ವರದಿ ಬಂದ ಮೇಲೆ ಆ ಅಧಿಕಾರಿ ಅಮಾನತ್ತಿನಲ್ಲಿದ್ದಾರೆ. ವಿಚಾರಣೆ ಬಾಕಿ ಇದೆ, ಕ್ರಮ ಕೈಗೊಂಡಿಲ್ಲ, ಅಂದರೆ ಆ ಮಾತು ಬೇರೆ, ಕ್ರಮ ಕೈಗೊಂಡಿದ್ದೇವೆ.

ಶ್ರೀ ಎಂ. ಶ್ರೀನಿವಾಸ್ : ಅಮಾನತ್ತಿನಲ್ಲಿಟ್ಟಿರುವುದು ನನಗೆ ಗೊತ್ತಿರಲಿಲ್ಲ. ತಾವು ಮಾಡಿರತಕ್ಕಂಥದ್ದಕ್ಕೆ ಬಹಳ ಸಂತೋಷ. ಸನ್ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಇದ್ದಾರೆ, ತಾವು ಏನು 30 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಸನ್ಮಾನ್ಯ ಮಂತ್ರಿಗಳು ಎಕ್ಸಿಕ್ಯುಟೀವ್ ಇಂಜನಿಯರ್‌ಗಳಿಗೆ ಕರೆದು ಹೇಳಿದ್ದರು. ನಮ್ಮ ಕ್ಷೇತ್ರದಲ್ಲಿ 10 ಕಿ.ಮೀ. ರಸ್ತೆಯೂ ಆಗಿಲ್ಲ. ತಾವು ಸೈನ್ ಹಾಕಿ ಕೊಟ್ಟಿದ್ದೀರಿ, ಬರೆದುಕೊಟ್ಟಿದ್ದೀರಿ. ಇದನ್ನು ಕೊಡಲೇ ತೆಗೆದು ಕೊಳ್ಳಬೇಕೆಂದು ಹೇಳಿದ್ದೀರಿ. ಬನಶಂಕರಿಯಿಂದ, ಉತ್ತರಹಳ್ಳಿ ನನ್ನ ಸ್ವಂತ ಊರು. ಅಲ್ಲಿಂದ 8 ಕಿಲೋಮೀಟರ್ ಇರತಕ್ಕಂಥಾದ್ದರಲ್ಲಿ,6 ಕಿಲೋಮೀಟರನ್ನು ಕಾರ್ಪೊರೇಶನ್‌ಗೆ ಸೇರಿಸಿ, 36 ಲಕ್ಷ ರೂಪಾಯಿಗಳಿಗೆ ಈಗಾಗಲೇ ಟೆಂಡರ್ ಕರೆದಿದ್ದಾರೆ. ಇನ್ನು ಎರಡು ಕಿಲೋಮೀಟರ್ ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರ ಸೌತ್ ಇಂಡಿಯಾದೊಳಗೇ ದೊಡ್ಡದಾದಂಥ ಕ್ಷೇತ್ರದ ನನ್ನ ಸ್ವಂತ ಊರಿನೊಳಗೆ 2 ಕಿಲೋಮೀಟರ್ ಕೆಲಸವನ್ನು ಇದುವರೆಗೂ ನಾನು ಮಾಡಿಸುವುದಕ್ಕಾಗಿಲ್ಲ. ತಮ್ಮ 30 ಲಕ್ಷ ರೂಪಾಯಿಗಳ ಗ್ರಾಂಟ್ ಎಲ್ಲಿ ಹೋಯಿತು? ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಬಹಳ ಉತ್ಸಾಹಿಗಳು. ಏನೇ ಆಗಲೀ, ಅವರು ಹೇಳಿದಹಾಗೆ ಕೆಲಸ ಮಾಡುತ್ತಾರೆಂದು ಅಂದುಕೊಂಡಿದ್ದೆ. 2-3 ಕೆಲಸಗಳನ್ನು ತಮ್ಮವರು ಮಾಡಲಿಲ್ಲ. ಅರ್ಧಂಬರ್ಧ ಮಾಡಿ ಬಿಟ್ಟಿದ್ದಾರೆ. ಅದನ್ನು ದಯವಿಟ್ಟು ಬೇಗ ಮಾಡಬೇಕು. ಇನ್ನು ಎ.ಪಿ.ಎಂ.ಸಿ. ಬಗ್ಗೆ ಹೇಳುವುದಾದರೆ ತಮ್ಮಲ್ಲಿ ಹಣ ಇಲ್ಲ. ಎಪಿಎಂಸಿ ಮಂತ್ರಿಗಳು ತಪ್ಪು ತಿಳಿದುಕೊಳ್ಳಬಾರದು. ತಮ್ಮದೇ ಸರ್ಕಾರ ನಿಜವಾಗಿಯೂ ಎ.ಪಿ.ಎಂ.ಸಿ. ಅವರಿಗೆ ರೋಡು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತೇನೆ. ನಿಮ್ಮ ಹತ್ತಿರ ಅದಕ್ಕೆ ಇಂಜಿನಿಯರ್ ಇಲ್ಲ, ಮಿಷನರಿ ಇಲ್ಲ. ಟಾರ್ ರೋಡ್ ಹಾಕಿದರೂ ಒಂದು ತಿಂಗಳಲ್ಲೇ ಹೋಗುತ್ತದೆ. ಆ ಭಾಗದ ಸೀನಿಯರ್ ಲೀಡರ್ ಶ್ರೀನಿವಾಸ ರೆಡ್ಡಿಯವ ಮುತ್ತು ಅಶ್ವತ್ಥನಾರಾಯಣ ರೆಡ್ಡಿಯವರಿಗೂ ಫೋನ್ ಮಾಡಿ ಹೇಳಲಾಯಿತು. ಒಂದೇ ತಿಂಗಳಲ್ಲಿ ಹಾಳಾಗಿ ಬಿಟ್ಟಿತು. ನೀವು ಈಗ 25 ಕಿಲೋಮೀಟರ್ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೀರಿ, ಬಹಳ ಸಂತೋಷ. ನಿಮ್ಮ ಹತ್ತಿರ ಹಣ ಇಲ್ಲ. ಆ ಕೆಲಸವನ್ನು ನೀವು ಎಂ.ಪಿ.ಡಿ.ಗೋ ಅಥವಾ ಪಿ.ಡಬ್ಲ್ಯೂ.ಡಿ ಗೋ ಕೊಡಿ.

ಶ್ರೀ ಹೆಚ್. ನಾಗಪ್ಪ : ಈಗ ಪಿ.ಡಬ್ಲ್ಯೂ.ಡಿ. ಮತ್ತು ಪಿ.ಹೆಚ್.ಇ.ಗೆ ವಹಿಸುತ್ತಾ ಇದ್ದೇವೆ.

ಶ್ರೀ ಎಂ. ಶ್ರೀನಿವಾಸ್ : ನೀವು 25 ಕಿಲೋಮೀಟರ್ ಕೊಡುತ್ತಾ ಇದ್ದೀರಿ, ನನಗೆ ಬಹಳ ಸಂತೋಷ. ಎರಡೂವರೆ ವರ್ಷದಿಂದ ನಾನು 25 ಕಿಲೋಮೀಟರ್ ಮಾಡಿಸುವುದಕ್ಕಾಗಲಿಲ್ಲ. ಎ.ಪಿ.ಎಂ.ಸಿ. ಯಿಂದ 25 ಕಿಲೋಮೀಟರ್ ಟಾರ್ ರೋಡ್ ಆಗುತ್ತಾ ಇದೆಯೆಂದರೆ ಬಹಳ ಸಂತೋಷ. ನಿಮ್ಮ ಹತ್ತಿರ ಮಿಷಿನರಿ, ಇಂಜಿನಿಯರ್ಸ್ ಇಲ್ಲ. ಆದರೆ, ನಿಮ್ಮದೇ ಆದಂಥ ಸರ್ಕಾರ ಇರಬೇಕಾದರೆ, ಪಿ.ಡಬ್ಲ್ಯೂ.ಡಿ ಗೋ ಅಥವಾ ಎಂ.ಪಿ.ಡಿ.ಗೋ ಕೊಡಿ. ಅವರ ಹತ್ತಿರ ಇಂಜಿನಿಯರ್ಸ್ ಇದ್ದಾರೆ, ಅವರ ಹತ್ತಿರ ಸಬಾರ್ಡಿನೇಟ್ಸ್ ಇದ್ದಾರೆ, ಅವರಿಗೆ ಕೊಟ್ಟು ಮಾಡಿಸಿಕೊಡಬೇಕೆಂದು ಈ

ಸಂದರ್ಭದಲ್ಲಿ ಹೇಳುತ್ತೇನೆ. ಸಭಾಧ್ಯಕ್ಷರೆ, ಈ ಒಂದು ಸಂದರ್ಭದಲ್ಲಿ ನನಗೆ ಇಷ್ಟು ಹೊತ್ತು ಅವಕಾಶ ಮಾಡಿಕೊಟ್ಟಿದ್ದೀರಿ. ಈ ಬೇಡಿಕೆಗಳ ಬಗ್ಗೆ ಕಂದಾಯ ಮಂತ್ರಿಗಳು ಮತ್ತು ಗ್ರಾಮಾಭಿವೃದ್ಧಿ ಮಂತ್ರಿಗಳು ಗಮನ ಕೊಟ್ಟು, ಏನು ನಾನು ಈ ಬೇಡಿಕೆಗಳ ಬಗ್ಗೆ ತಮ್ಮ ಮುಖಾಂತರ ಹೇಳಿದ್ದೇನೋ ಅದನ್ನು ಒಪ್ಪಿಕೊಂಡು ಸಹಾಯ ಮಾಡುತ್ತಾರೆಂದು ಈ ಸಂದರ್ಭದಲ್ಲಿ ಹೇಳುತ್ತಾ, ತಾವು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಲಾಗಿದೆ, ಪುನಃ ನಾಳೆ ಬೆಳಿಗ್ಗೆ 10 ಗಂಟೆಗೆ ಸಭೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : 28ನೇ ಆಗಸ್ಟ್ ಮಾಹೆ 1997ರ ಗುರುವಾರ ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)